ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢ ಶಾಲಾ
# ಶೈಕ್ಷಣಿಕ ಮಾರ್ಗದರ್ಶಿ
## 2011-12



## ಸಂಚಿಕೆ-6

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ

# 2011–12

ಸಂಚಿಕೆ – 6

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ

ಮತ್ತು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು

http://www.schooleducation.kar.nic.in/

### ಶೈಕ್ಷಣಿಕ ಅವಧಿ

| | |
|---|---|
| ದಿನಾಂಕ 30–05–2011 ರಿಂದ 04–10–2011 | ಮೊದಲನೇ ಅವಧಿ |
| ದಿನಾಂಕ 28–10–2011 ರಿಂದ 10–04–2012 | ಎರಡನೇ ಅವಧಿ |

### ರಜಾ ಅವಧಿ

| | |
|---|---|
| ದಿನಾಂಕ 05–10–2011 ರಿಂದ 27–10–2011 | ಮಧ್ಯಂತರ ರಜೆ |
| ದಿನಾಂಕ 11–04–2012 ರಿಂದ 27–05–2012 | ಬೇಸಿಗೆ ರಜೆ |

### ಸಮುದಾಯದತ್ತ ಶಾಲಾ ಕಾರ್ಯಕ್ರಮ

| ತಿಂಗಳು | ಪ್ರೌಢಶಾಲೆ | |
|---|---|---|
| ಅಕ್ಟೋಬರ್ 2011 | ಶನಿವಾರ | 01–10–2011 |
| ಏಪ್ರಿಲ್ 2012 | ಶನಿವಾರ | 10–04–2012 |

### 2011–2011ನೇ ಶೈಕ್ಷಣಿಕ ಸಾಲಿನ ರಜೆ ಹಾಗೂ ಬೋಧನಾ ದಿನಗಳು

| ಕ್ರ ಸಂ | ತಿಂಗಳು | ಶೈಕ್ಷಣಿಕ ವರ್ಷದ ಒಟ್ಟು ದಿನಗಳು | ಒಟ್ಟು ರಜೆಗಳು | ಲಭ್ಯವಿರುವ ಶಾಲಾ ದಿನಗಳು |
|---|---|---|---|---|
| 1. | ಮೇ 2011 | 02 | 00 | 02 |
| 2. | ಜೂನ್ 2011 | 30 | 04 | 26 |
| 3. | ಜುಲೈ 2011 | 31 | 05 | 26 |
| 4. | ಆಗಸ್ಟ್ 2011 | 31 | 05 | 26 |
| 5. | ಸೆಪ್ಟೆಂಬರ್ 2011 | 30 | 06 | 24 |
| 6. | ಅಕ್ಟೋಬರ್ 2011 | 31 | 24 | 07 |
| 7. | ನವೆಂಬರ್ 2011 | 30 | 06 | 24 |
| 8. | ಡಿಸೆಂಬರ್ 2011 | 31 | 05 | 26 |
| 9. | ಜನವರಿ 2012 | 31 | 06 | 25 |
| 10. | ಫೆಬ್ರವರಿ 2012 | 28 | 05 | 23 |
| 11. | ಮಾರ್ಚ್ 2012 | 31 | 05 | 26 |
| 12. | ಏಪ್ರಿಲ್ 2012 | 10 | 02 | 08 |
| ಒಟ್ಟು | | 316 | 73 | 243 |
| ವಿವೇಚನಾ ರಜೆಗಳು | | | | 04 |
| ಒಟ್ಟು ಬೋಧನಾ ದಿನಗಳು | | | | 239 |

ಸೂಚನೆ:– ರಾಷ್ಟ್ರೀಯ ಹಬ್ಬಗಳು ಹಾಗೂ ಪರೀಕ್ಷಾ ದಿನಗಳನ್ನು ಕೂಡಾ ಶಾಲಾ ದಿನಗಳೆಂದು ಪರಿಗಣಿಸಿದೆ.

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

# ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ

# 2011–12

ಸಂಚಿಕೆ – 6

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ

ಮತ್ತು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು

http://www.schooleducation.kar.nic.in/

1. ಪುಸ್ತಕದ ಹೆಸರು: ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ಸಂಚಿಕೆ–6 2011–12

2. ಮುದ್ರಣ ವರ್ಷ : 2011

3. ಪ್ರತಿಗಳು : 10,000

4. ಮುದ್ರಣಕ್ಕೆ ಬಳಸಿದ ಹಾಳೆಗಳು : 70 ಜಿ.ಎಸ್.ಎಂ.ಮ್ಯಾಪ್ಲಿತೊ

5. ಮುದ್ರಣ ಸ್ಥಳ : ಸರ್ಕಾರಿ ಮುದ್ರಣಾಲಯ, ಬೆಂಗಳೂರು



ಕರ್ನಾಟಕ ಸರ್ಕಾರ

**ಸಂದೇಶ**


# 330, 3ನೇ ಮಹಡಿ,
ವಿಧಾನಸೌಧ, ಬೆಂಗಳೂರು–01.
ದೂರವಾಣಿ: 22258489
22033405

ವಿಶ್ವೇಶ್ವರ ಹೆಗಡೆ, ಕಾಗೇರಿ
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಹಾಗೂ
ಉತ್ತರ ಕನ್ನಡ ಜಿಲ್ಲೆ ಉಸ್ತುವಾರಿ ಸಚಿವರು


ಸಂ.ಪ್ರಾ.ಪ್ರೌ.ಶಿ.ಸ/186/2011 ದಿನಾಂಕ: 14.03.2011

ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ 2011–12 ಸಂಚಿಕೆ–6 ನ್ನು ಪ್ರಕಟಿಸುತ್ತಿರುವ ವಿಚಾರ ತಿಳಿದು ತುಂಬಾ ಸಂತೋಷವಾಯಿತು. ಅಧ್ಯಾಪಕರಿಗೆ ಮಾರ್ಗದರ್ಶಿ ಕೈಪಿಡಿಯಾಗಿರುವ ಈ ಹೊತ್ತಿಗೆ ಸರ್ವೋಪಯೋಗಿಯಾಗಿದೆ. ತಿಂಗಳಿನ ಶೈಕ್ಷಣಿಕ ಚಟುವಟಿಕೆ, ಪ್ರೌಢಶಾಲೆಗಳ ಶುಲ್ಕದ ವಿವರ, ಅಕ್ಷರ ದಾಸೋಹ ಕಾರ್ಯಕ್ರಮ, ಸಮುದಾಯದತ್ತ ಶಾಲೆ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಕ್ರಿಯಾ ಶಿಕ್ಷಣ, ಸಮನ್ವಯ ಶಿಕ್ಷಣ, ಶೈಕ್ಷಣಿಕ ಯೋಜನೆ, ಸೇತುಬಂಧ, ಪೂರಕ ಬೋಧನೆ, ಪರಿಹಾರ ಬೋಧನೆ, ಮೌಲ್ಯಮಾಪನ, ಮುಖ್ಯಶಿಕ್ಷಕರ ಕರ್ತವ್ಯ, ಶಾಲಾ ಸಂಘ ಹಾಗೂ ಶಿಕ್ಷಣಕ್ಕೆ ಸಂಬಂಧಪಟ್ಟ ಸರ್ಕಾರಿ ಸುತ್ತೋಲೆಗಳನ್ನು ಈ ಮಾರ್ಗದರ್ಶಿ ಕೈಪಿಡಿ ಹೊಂದಿದೆ. ಶಿಕ್ಷಕರಿಗೆ ಯಾವಾಗ ಶೈಕ್ಷಣಿಕ ವಿಚಾರದಲ್ಲಿ ಅನುಮಾನ ಬಂದರೂ ಈ ಹೊತ್ತಿಗೆಯನ್ನು ತೆರೆದು ನೋಡಿದರೆ ಅವರಿಗೆ ಪರಿಹಾರ ದೊರೆಯುವುದರಲ್ಲಿ ಸಂಶಯವಿಲ್ಲ. ನಮ್ಮ ಸರ್ಕಾರ ಮೂಲಭೂತ ಸೌಕರ್ಯಗಳ ಸೃಷ್ಠಿಗೆ ಕೊಟ್ಟ ಮಹತ್ವವನ್ನೇ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಉನ್ನತೀಕರಿಸಲು ಕೂಡ ನೀಡಿದೆ. ಮಾನವ ಸಂಪನ್ಮೂಲದ ಹೆಚ್ಚಳಕ್ಕೆ ಯಾವುದೇ ಸರ್ಕಾರ ಕೊಡಬೇಕಾದ ಆದ್ಯತೆಯನ್ನು ನಮ್ಮ ಸರ್ಕಾರ ನೀಡಿರುತ್ತದೆಂದೂ ಹೇಳುವುದರಲ್ಲಿ ನನಗಂತೂ ಹೆಮ್ಮೆಯಾಗಿದೆ. ಶಿಕ್ಷಣ ಇಲಾಖೆ ಹೆಚ್ಚು ಹೆಚ್ಚು ಪಾರದರ್ಶಕವಾಗುವಲ್ಲಿ ದಾಪುಗಾಲು ಇಡುತ್ತಿದೆ. ಶಿಕ್ಷಕರು ತಮ್ಮ ಶೈಕ್ಷಣಿಕ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದರ ಮೂಲಕ ಸರ್ಕಾರದ ಆಶಯಗಳಿಗೆ ಪೂರಕವಾಗಿ ಸ್ಪಂದಿಸಬೇಕು. ಮಾನವ ಸಂಪನ್ಮೂಲದ ಹೆಚ್ಚಳಕ್ಕೆ ಕಾರಣೀಭೂತರಾಗಿ ರಾಷ್ಟ್ರಸೇವೆಯಲ್ಲಿ ತಮ್ಮನ್ನು ಅರ್ಪಿಸಿಕೊಳ್ಳಬೇಕೆಂದು ಆಶಿಸಿ ಅವರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

(ವಿಶ್ವೇಶ್ವರ ಹೆಗಡೆ, ಕಾಗೇರಿ)



ಕರ್ನಾಟಕ ಸರ್ಕಾರ

#641, 6ನೇ ಮಹಡಿ,
ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು – 560001.
ದೂರವಾಣಿ: 080–22257334
ಫ್ಯಾಕ್ಸ್: 080–22385545

# ಸಂದೇಶ

ಜಿ.ಕುಮಾರ ನಾಯಕ, ಭಾ.ಆ.ಸೇ,
ಸರ್ಕಾರದ ಕಾರ್ಯದರ್ಶಿ
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)

ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಶಾಲೆಗಳ ಸಮಗ್ರ ಬೆಳವಣಿಗೆಗೆ ಪೂರಕವಾದಂತಹ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ **ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ 2011–12 ಸಂಚಿಕೆ–6** ನ್ನು ಹೊರತರಲು ಉದ್ದೇಶಿಸಿರುವುದು ಹೆಮ್ಮೆಯ ಸಂಗತಿ. ಈ ಮಾರ್ಗದರ್ಶಿಯಲ್ಲಿ ಒಳಗೊಂಡಿರುವ ನಿಗದಿತ ಅವಧಿಯಲ್ಲಿ ಶಾಲೆಗಳಲ್ಲಿ ಹಮ್ಮಿಕೊಳ್ಳಬೇಕಾದ ವಿಶೇಷ ಕಾರ್ಯಕ್ರಮಗಳು ಮತ್ತು ಪೂರಕ ಚಟುವಟಿಕೆಗಳನ್ನು ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಅಧ್ಯಸಿಕೊಂಡು ಬದ್ಧತೆ ಮತ್ತು ಅರ್ಪಣಾ ಮನೋಭಾವನೆಯಿಂದ ಕ್ರಿಯಾಶೀಲರಾಗಿ ಅವುಗಳನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ತಲುಪಿಸಲು ಪ್ರಮುಖ ಪಾತ್ರವನ್ನು ವಹಿಸುವುದರೊಂದಿಗೆ ಶಿಕ್ಷಣ ಕ್ಷೇತ್ರವನ್ನು ಇನ್ನೂ ಹೆಚ್ಚು–ಹೆಚ್ಚು ಬೆಳಗಿಸುವುದು ಅತ್ಯವಶ್ಯವಿದೆ.

ಶಿಕ್ಷಣ ಕ್ಷೇತ್ರದ ವ್ಯಾಪ್ತಿಯು ಆಗಿಂದಾಗ್ಗೆ ಹೆಚ್ಚುತ್ತಿರುವಂತೆಯೇ ಸವಾಲುಗಳೂ ಸಹ ಅದರೊಂದಿಗೆ ಬರುತ್ತಲೇ ಇರುವುದರಿಂದ, ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಹಂತ–ಹಂತವಾಗಿ ಗುಣಾತ್ಮಕ–ಸುಧಾರಣೆಗಳನ್ನು ತರುವ ಸಲುವಾಗಿ ಸರ್ಕಾರವು ಹಲವಾರು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ವಿಷಯಗಳನ್ನು ಮೈಗೂಡಿಸಿಕೊಂಡು ಸ್ಪರ್ಧಾತ್ಮಕ ಮತ್ತು ಶಿಸ್ತಿನ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳಲು ಅನುವಾಗುವುದರೊಂದಿಗೆ ಅವರುಗಳನ್ನು ಸೃಜನಶೀಲ, ಪ್ರತಿಭಾವಂತ ಮತ್ತು ರಾಷ್ಟ್ರದ ರೂವಾರಿಗಳನ್ನಾಗಿ ರೂಪಿಸುವಲ್ಲಿ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಇನ್ನೂ ಹೆಚ್ಚಿನ ಆಸ್ಥೆಯನ್ನು ವಹಿಸಿ ಅವರೆಲ್ಲದ ಪ್ರೇರಣಾ ಶಕ್ತಿಯಾಗಿ ಸಕಾರಾತ್ಮಕವಾಗಿ ಸ್ಪಂದಿಸುವರೆಂಬ ನಂಬಿಕೆ ನನಗಿದೆ.

ಈ ಶುಭ ಸಂದರ್ಭದಲ್ಲಿ, ಹೊರತರಲಿರುವ ಮಾರ್ಗದರ್ಶಿ ಸಂಚಿಕೆಯು ಉಪಯುಕ್ತ ಮಾಹಿತಿಗಳೊಂದಿಗೆ ಮನೋಜ್ಞವಾಗಿ ಮೂಡಿಬರುವಂತಾಗಲೆಂದು ಹಾಗೂ ಅದರ ಉದ್ದೇಶವು ಶೈಕ್ಷಣಿಕ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಸಫಲವಾಗುವಂತಾಗಲೆಂದು ಹಾರೈಸುತ್ತೇನೆ.

(ಜಿ.ಕುಮಾರ ನಾಯಕ, ಭಾ.ಆ.ಸೇ,)




ಕರ್ನಾಟಕ ಸರ್ಕಾರ

ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ,
ಬೆಂಗಳೂರು – 560001.
ದೂರವಾಣಿ: 080–22214350


# ಮುನ್ನುಡಿ


**ಕೆ.ಆರ್.ಶಶಿಧರ, ಭಾ.ಆ.ಸೇ,**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.**


ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ದೊರಕಿಸುವುದು ನಮ್ಮ ಬದ್ಧತೆಯಾಗಿದೆ. ಸಾರ್ವತ್ರಿಕ ದಾಖಲಾತಿ, ಹಾಜರಾತಿ ಹಾಗೂ ವಿದ್ಯಾರ್ಥಿಗಳ ಗುಣಾತ್ಮಕ ಕಲಿಕೆ ನಮ್ಮ ಆದ್ಯತೆಗಳಾಗಿವೆ. ನಮ್ಮ ಶಾಲೆಗಳು ಆಕರ್ಷಕವಾಗಿದ್ದು, ಉತ್ತಮ ಕಲಿಕಾ ಕೇಂದ್ರಗಳಾಗಬೇಕಾಗಿವೆ. ಈ ನಿಟ್ಟಿನಲ್ಲಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯಶಿಕ್ಷಕರು ಹಾಗೂ ವಿಶೇಷ ಶಿಕ್ಷಕರಿಗೆ ಮಾಹಿತಿ, ಮಾರ್ಗದರ್ಶನ ನೀಡುವ ಉದ್ದೇಶದಿಂದ ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿಯನ್ನು ಶಾಲೆಗಳಿಗೆ ತಲುಪಿಸಲಾಗುತ್ತಿದೆ. ಈ ಸಾಲಿನ ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ನಿಮ್ಮ ಕೈಯಲ್ಲಿದೆ. ಇದು 6ನೇ ಸಂಚಿಕೆಯಾಗಿದೆ.

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸುವಲ್ಲಿ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ವಿಶೇಷ ಪರಿಶ್ರಮ ವಹಿಸಬೇಕಾಗಿದೆ. ಇಲಾಖೆಯ ಆಶಯಗಳಿಗೆ ತಕ್ಕಂತೆ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಕಲಿಕಾ ಸಾಮರ್ಥ್ಯಗಳನ್ನು ಬೆಳೆಸಲು ಯೋಜನೆಗಳನ್ನು ಸಿದ್ಧಪಡಿಸಿ, ಅನುಷ್ಠಾನಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಈ ಸಂಚಿಕೆಯನ್ನು ಸಿದ್ಧಪಡಿಸಲಾಗಿದೆ.

ಶಾಲೆಗಳಲ್ಲಿ ಪ್ರತಿ ತಿಂಗಳು ಹಮ್ಮಿಕೊಳ್ಳಬೇಕಾದ ಶೈಕ್ಷಣಿಕ ಚಟುವಟಿಕೆಗಳನ್ನು ತಿಂಗಳ ತಿರುಳಿನಲ್ಲಿ ನೀಡಲಾಗಿದೆ. ಮುಖ್ಯಶಿಕ್ಷಕರಿಗೆ ನೆರವಾಗಲು ಶಾಲಾ ಶೈಕ್ಷಣಿಕ ಯೋಜನೆ, ಶುಲ್ಕದ ವಿವರ, ಸಮುದಾಯದತ್ತ ಶಾಲಾ ಕಾರ್ಯಕ್ರಮ, ಅಕ್ಷರ ದಾಸೋಹ ಕಾರ್ಯಕ್ರಮ, ಸರ್ಕಾರ/ಇಲಾಖೆಯ ವಿವಿಧ ಸುತ್ತೋಲೆಗಳನ್ನು ನೀಡಲಾಗಿದೆ. ಶಿಕ್ಷಕರ ಪುನರ್ಬಲನದ ದೃಷ್ಟಿಯಿಂದ ಕ್ರಿಯಾ ಸಂಶೋಧನೆ, ತರಗತಿ ಪ್ರಕ್ರಿಯೆ, ಸೇತುಬಂಧ, ಪೂರಕ ಬೋಧನೆ, ಪರಿಹಾರ ಬೋಧನೆ, ಸಮನ್ವಯ ಶಿಕ್ಷಣ, ಶೈಕ್ಷಣಿಕ ಮೌಲ್ಯಮಾಪನ ಅಧ್ಯಾಯಗಳನ್ನು ಅಳವಡಿಸಲಾಗಿದೆ. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳನ್ನು ಮಾಹಿತಿಗಾಗಿ ನೀಡಿದೆ. ಪರಿವೀಕ್ಷಕರ ಅನುಕೂಲಕ್ಕಾಗಿ ಶಾಲಾ ಸಂದರ್ಶನದ ಮಾದರಿ ನಮೂನೆಯನ್ನು ನೀಡಲಾಗಿದೆ. ಒಟ್ಟಿನಲ್ಲಿ ಶಾಲೆಯ ಸಮಗ್ರ ಬೆಳವಣಿಗೆಗೆ ಅನುಕೂಲವಾಗುವಂತೆ ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿಯನ್ನು ಸಿದ್ಧಪಡಿಸಲಾಗಿದೆ.

ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿಯಲ್ಲಿರುವ ಅಂಶಗಳನ್ನು ಮನವರಿಕೆ ಮಾಡಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ಔಪಚಾರಿಕವಾಗಿ ಮುಗಿಸುವ ಬದಲು ಗುಣಾತ್ಮಕವಾಗಿ ನಿರ್ವಹಿಸಿ, ನಿಮ್ಮ ಶಾಲೆಯ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದಲ್ಲಿ ನಮ್ಮ ಶ್ರಮ ಸಾರ್ಥಕವಾಗುತ್ತದೆ.

**(ಕೆ.ಆರ್.ಶಶಿಧರ)**

**ಪುಟ ತಿರುವಿದಾಗ...**

| ಪುಟ | ವಿಷಯ |
| --- | --- |
| 1 | ತಿಂಗಳ ತಿರುಳು |
| 3 | ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು |
| 12 | ಪ್ರೌಢಶಾಲಾ ಶುಲ್ಕದ ವಿವರ |
| 13 | ಅಕ್ಷರ ದಾಸೋಹ ಕಾರ್ಯಕ್ರಮ: ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ |
| 20 | ಸಮುದಾಯದತ್ತ ಶಾಲಾ ಕಾರ್ಯಕ್ರಮ |
| 22 | ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ |
| 26 | ಸಮನ್ವಯ ಶಿಕ್ಷಣ |
| 30 | ಕ್ರಿಯಾ ಸಂಶೋಧನೆ |
| 33 | ಶಾಲಾ ಶೈಕ್ಷಣಿಕ ಯೋಜನೆ |
| 38 | ಸೇತುಬಂಧ, ಪೂರಕ ಬೋಧನೆ, ಪರಿಹಾರ ಬೋಧನೆ |
| 43 | ಮುಖ್ಯ ಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು |
| 50 | ತರಗತಿ ಪ್ರಕ್ರಿಯೆ |
| 54 | ಮೌಲ್ಯಮಾಪನ |
| 60 | ಶಾಲಾ ಸಂಘಗಳು |
| 70 | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾಥಿಗಳ ಕ್ಷೇಮಾಭಿವೃದ್ಧಿ ನಿಧಿ |
|  | **ಅನುಬಂಧಗಳು** |
| 76 | ಶೈಕ್ಷಣಿಕ ತಪಾಸಣೆ ಹಾಗೂ ಅನುಬಂಧಗಳು ಮಾರ್ಗದರ್ಶನ–ಅಧಿಕಾರಿಗಳಿಗೆ ನಿಗದಿತ ಗುರಿ |
| 78 | ವಿವಿಧ ಹಂತದಲ್ಲಿ ಅಧಿಕಾರಿಗಳು ಸಾರ್ವತ್ರಿಕವಾಗಿ ಗಮನಿಸಬೇಕಾದ ಪ್ರಮುಖ ಅಂಶಗಳು |
| 80 | ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆ–ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕಾಲಾವಕಾಶ |
| 81 | ಶಾಲೆಗಳಲ್ಲಿ ಮೊಬೈಲ್ ಬಳಕೆ ನಿಷೇಧ |
| 82 | ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಮಕ್ಕಳ ಹಾಜರಾತಿ ನಿರ್ವಹಣೆ |
| 83 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಿನ್ಸಿಪಾಲರ/ಉಪ ಪ್ರಿನ್ಸಿಪಾಲರ ಕಾರ್ಯ ಹಂಚಿಕೆ |
| 91 | ಸರ್ಕಾರಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ದಂಡನೆಗಳು |
| 94 | ಮಹಿಳೆಯರ/ಬಾಲಕಿಯರ ಮೇಲೆ ಲೈಂಗಿಕ ಕಿರುಕುಳವನ್ನು ತಡೆಗಟ್ಟುವುದು |
| 96 | ಶಾಲಾ ಕಟ್ಟಡಗಳ ಸುರಕ್ಷತೆ |
| 98 | ಪರಿಣಾಮಕಾರಿ ಬೋಧನೆ ಹಾಗೂ ಮಾರ್ಗದರ್ಶನ ಪ್ರಕ್ರಿಯೆ |
| 102 | ಐ.ಇ.ಡಿ.ಎಸ್.ಎಸ್ ಮಾರ್ಗಸೂಚಿ |
| 112 | ಡಿಸ್‌ಲೆಕ್ಷಿಯಾ ಇರುವ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ. |
| 115 | ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲ ಮಕ್ಕಳಿಗೆ ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ. |
| 116 | ಶಾಲಾ ಸಂದರ್ಶದ ಮಾದರಿ ನಮೂನೆ |

# 1. ತಿಂಗಳ ತಿರುಳು

| | |
|---|---|
| ಮೇ 2011 | • 30ನೇ ಮೇ : ಶಾಲಾ ಪ್ರಾರಂಭ.<br>• ಸಮಗ್ರ ವಾರ್ಷಿಕ ಯೋಜನೆ ತಯಾರಿ : ವೇಳಾ ಪಟ್ಟಿ, ಕಾರ್ಯ ಹಂಚಿಕೆ ಇತ್ಯಾದಿ.<br>• ಪ್ರಥಮ ಎಸ್.ಡಿ.ಎಂ.ಸಿ ಸಭೆ.<br>• 30-05-2011 : ಶಾಲಾ ಪ್ರಾರಂಭೋತ್ಸವ. |
| ಜೂನ್ 2011 | • ದಾಖಲಾತಿ ಪ್ರಕ್ರಿಯೆ ದಿ:30-05-2011 ರಿಂದ 30-06-2011<br>• ಬೋಧನಾ ಕಾರ್ಯಕ್ರಮ ವಾರ್ಷಿಕ ಯೋಜನೆಯಂತೆ ಪ್ರಾರಂಭ<br>• ಸೇತುಬಂಧ ಕಾರ್ಯಕ್ರಮ ದಿ;01-06-2011 ರಿಂದ 15-06-2011.<br>• ಶಾಲಾ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಗಳ ಆಯೋಜನೆ |
| ಜುಲೈ 2011 | • ಹೋಬಳಿ ಮಟ್ಟದಲ್ಲಿ ಕ್ರೀಡಾ ಕೂಟಗಳ ಆಯೋಜನೆ<br>• ಮೊದಲನೇ ಕಿರು ಪರೀಕ್ಷೆ |
| ಆಗಸ್ಟ್ 2011 | • ಸ್ವಾತಂತ್ರ್ಯೋತ್ಸವ ದಿನಾಚರಣೆ ಪೂರ್ವ ಸಿದ್ಧತೆ/ಆಚರಣೆ<br>• ತಾಲ್ಲೂಕು/ಜಿಲ್ಲಾ ಮಟ್ಟದ ಕ್ರೀಡಾ ಕೂಟಗಳ ಆಯೋಜನೆ<br>• ಎರಡನೇ ಕಿರು ಪರೀಕ್ಷೆ |
| ಸೆಪ್ಟೆಂಬರ್ 2011 | • ಶಿಕ್ಷಕರ ದಿನಾಚರಣೆ<br>• ಮಧ್ಯವಾರ್ಷಿಕ ಪರೀಕ್ಷೆಗಳು |
| ಅಕ್ಟೋಬರ್ 2011 | • ಗಾಂಧಿ ಜಯಂತಿ ಆಚರಣೆ<br>• ವಿಭಾಗ ಮಟ್ಟದ ಕ್ರೀಡಾ ಕೂಟಗಳ ಆಯೋಜನೆ.<br>• ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮ |
| ನವೆಂಬರ್ 2011 | • ಕನ್ನಡ ರಾಜ್ಯೋತ್ಸವ ಆಚರಣೆ<br>• ರಾಜ್ಯ ಮಟ್ಟದ ಕ್ರೀಡಾ ಕೂಟಗಳ ಆಯೋಜನೆ.<br>• ಶಾಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳ ಆಯೋಜನೆ<br>• ಮಕ್ಕಳ ದಿನಾಚರಣೆ<br>• ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ<br>• ಬ್ಲಾಕ್ ಹಾಗೂ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ |
| ಡಿಸೆಂಬರ್ 2011 | • ಅಂಗವಿಕಲ ದಿನಾಚರಣೆ<br>• ಮಾನವ ಹಕ್ಕುಗಳ ದಿನಾಚರಣೆ<br>• ಮೂರನೇ ಕಿರು ಪರೀಕ್ಷೆ<br>• ಬ್ಲಾಕ್, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಗಳ ಆಯೋಜನೆ<br>• ಶೈಕ್ಷಣಿಕ ಪ್ರವಾಸ (8,9,10 ನೇ ಇಯತ್ತೆಯವರಿಗೆ) |

| | |
|---|---|
| ಜನವರಿ 2011 | • ಶಾಲಾ ವಾರ್ಷಿಕೋತ್ಸವ ಹಾಗೂ ಶಾಲಾ ಸಂಚಿಕೆ<br>• ಗಣರಾಜ್ಯೋತ್ಸವ ಆಚರಣಾ ಪೂರ್ವ ಸಿದ್ಧತೆ/ಆಚರಣೆ |
| ಫೆಬ್ರವರಿ 2011 | • ಕಲಿಕೆಯ ದೃಢೀಕರಣ<br>• ನಾಲ್ಕನೇ ಕಿರು ಪರೀಕ್ಷೆ<br>• ರಾಷ್ಟ್ರೀಯ ವಿಜ್ಞಾನ ದಿನಾಚರಣೆ |
| ಮಾರ್ಚ್ 2011 | • ವಾರ್ಷಿಕ ಪರೀಕ್ಷೆಗಳು |
| ಏಪ್ರಿಲ್ 2011 | • ಎರಡನೇ ಸಮುದಾಯದತ್ತ ಶಾಲೆ ಕಾರ್ಯಕ್ರಮ<br>• ಡಾ//ಬಿ.ಆರ್.ಅಂಬೇಡ್ಕರ್ ಜಯಂತಿ |

**ರಜೆಯಲ್ಲಿ ನಾವೇನು ಮಾಡಬಹುದು**

- ಬೇಸಿಗೆ ಶಿಬಿರ :– ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಣೆ ನೀಡುವ ಚಟುವಟಿಕೆಗಳನ್ನು ಬೇಸಿಗೆ ಶಿಬಿರದಲ್ಲಿ ಹಮ್ಮಿಕೊಳ್ಳುವುದು.
- ತಮ್ಮ ಬಂಧುಗಳೊಂದಿಗೆ ಪ್ರವಾಸ/ಚಾರಣಗಳನ್ನು ಕೈಗೊಳ್ಳುವುದು.
- ವಿದ್ಯಾರ್ಥಿಗಳು ದಿನಕ್ಕೊಂದು ಉತ್ತಮ ಕಾರ್ಯ ಮಾಡಲಿ. ನಿರ್ವಹಿಸಿದ ಉತ್ತಮ ಕಾರ್ಯದ ಬಗ್ಗೆ ಲಿಖಿತವಾಗಿ ಅಭಿವ್ಯಕ್ತಿಸಲಿ.
- ಸಾರ್ವಜನಿಕ ಗ್ರಂಥಾಲಯದ ಉಪಯೋಗ ಮಾಡಿಕೊಳ್ಳುವುದು.
- ಇದು ಬಿಡುವಿನ ಸಮಯ–ತಮಗೆ ಆಸಕ್ತಿಯಿರುವ ಅಧ್ಯಯನ ಮಾಡಲು ಸಕಾಲ.
- ಕಥೆ ಕಟ್ಟು:– ಅಜ್ಜ – ಅಜ್ಜಿಯವರಿಂದ ಕೇಳಿದ ಕಥೆಗಳನ್ನು ಅವರ ಭಾಷೆಯಲ್ಲಿ ಬರೆದು ಸಾದರಪಡಿಸಲಿ.
- ಕಲಿಕೆ– ಗಣಕ ಶಿಕ್ಷಣ, ಸಂಗೀತ, ನೃತ್ಯ, ಚಿತ್ರಕಲೆ, ಇಂಗ್ಲಿಷ್ ಕಲಿಕೆಯಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು.
- ಒಂದೇ ಒಂದು ಪ್ರಬಂಧ – ವಿದ್ಯಾರ್ಥಿಗಳಿಗೆ ಪ್ರಿಯವಾದ ಒಂದು ವಿಷಯದ ಬಗ್ಗೆ ವಿವರವಾದ ಒಂದು ಪ್ರಬಂಧ ಸಿದ್ಧಪಡಿಸಲಿ.
- ಈ ದಿಶೆಯಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಪೂರಕ ಚಟುವಟಿಕೆಗಳನ್ನು ನೀಡುವುದು ಮತ್ತು ಅಗತ್ಯ ಮಾರ್ಗದರ್ಶನ ಮಾಡುವುದು.

# 2. ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು

| ಅವಧಿ | ಶಾಲೆಯಲ್ಲಿ ಹಮ್ಮಿಕೊಳ್ಳಬೇಕಾದ ವಿಶೇಷ ಕಾರ್ಯಕ್ರಮಗಳು | ಪೂರಕ ಚಟುವಟಿಕೆಗಳು |
|---|---|---|
| **ಮೇ – 2011**<br>30–05–2011 | ಶಾಲೆ ಪ್ರಾರಂಭ ಎಸ್.ಡಿ.ಎಂ.ಸಿ ಪ್ರಥಮ ಸಭೆ. ಸಿದ್ಧಪಡಿಸಿರುವ ಸಂಸ್ಥಾ ಯೋಜನೆ/ವಾರ್ಷಿಕ ಯೋಜನೆ/ಶೈಕ್ಷಣಿಕ ಯೋಜನೆ ಕುರಿತು ಚರ್ಚಿಸಿ ಅನುಮೋದಿಸುವುದು. | • ವಿದ್ಯಾರ್ಥಿಗಳ ದಾಖಲಾತಿ ಪ್ರಾರಂಭಿಸುವುದು.<br>• ಶಾಲಾ ವಾರ್ಷಿಕ ಕಾರ್ಯಸೂಚಿ ಮತ್ತು ಪಾಠಗಳ ಹಂಚಿಕೆಯನ್ನು ಸಿದ್ಧಪಡಿಸುವುದು<br>• ತರಗತಿವಾರು ಮತ್ತು ಶಿಕ್ಷಕವಾರು ವೇಳಾಪಟ್ಟಿಯನ್ನು ಸಿದ್ದಪಡಿಸುವುದು<br>• ಎಸ್.ಡಿ.ಎಂ.ಸಿ ಸಭೆಯಲ್ಲಿ ಶಾಲೆಯ ಮೂಲಭೂತ ಸೌಕರ್ಯ / ವಿದ್ಯಾರ್ಥಿ ದಾಖಲಾತಿ / ಶೈಕ್ಷಣಿಕ ಸೌಲಭ್ಯ ಹಾಗೂ ಸದರಿ ವರ್ಷದಲ್ಲಿ ಕೈಗೊಳ್ಳಬೇಕಾದ ದೂರಗಾಮಿ ಯೋಜನೆಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು. |
| 31–05–2011 | ಶಾಲಾ ಪ್ರಾರಂಭೋತ್ಸವ | • ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯದ ಮುಖಂಡರು ಮತ್ತು ಪೋಷಕರನ್ನು ಶಾಲಾ ಪ್ರಾರಂಭೋತ್ಸವದಲ್ಲಿ ತೊಡಗಿಸಿಕೊಳ್ಳುವುದು.<br>• ತಳಿರು ತೋರಣಗಳಿಂದ ಅಲಂಕರಿಸಿ ಶಾಲೆಗೆ ಮಕ್ಕಳನ್ನು ಸ್ವಾಗತಿಸಿ, ಸಿಹಿ ಹಂಚುವುದು.<br>• ಉಚಿತ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರ ವಿತರಣೆ<br>• ಪೂರ್ಣ ಪ್ರಮಾಣದಲ್ಲಿ ತರಗತಿಯ ಬೋಧನೆ ಪ್ರಾರಂಭ<br>• ಮಧ್ಯಾಹ್ನದ ಉಪಾಹಾರ ಯೋಜನೆ ಪ್ರಾರಂಭಿಸುವುದು. |
| **ಜೂನ್ – 2011**<br>31–05–2011<br>ರಿಂದ<br>15–06–2011 | ಸೇತು ಬಂಧ ಶಿಕ್ಷಣ | • ಪೂರ್ವ ಪರೀಕ್ಷೆ<br>• ವಿದ್ಯಾರ್ಥಿವಾರು, ವಿಷಯವಾರು ಸಾಮರ್ಥ್ಯ ಗುರ್ತಿಸುವಿಕೆ<br>• ಫಲಿತಾಂಶದ ವಿಶ್ಲೇಷಣೆ<br>• ಪರಿಹಾರ ಬೋಧನೆ<br>• ಸಾಫಲ್ಯ ಪರೀಕ್ಷೆ<br>• ಅನುಪಾಲನಾ ಚಟುವಟಿಕೆಗಳು |

| | | |
|---|---|---|
| 05-06-2011 | ವಿಶ್ವ ಪರಿಸರ ದಿನಾಚರಣೆ | • ಶಾಲಾ ಕೈತೋಟ ನಿರ್ವಹಣೆ<br>• ಶಾಲೆಯ ಆವರಣದಲ್ಲಿ ನುಗ್ಗೆ, ಪಪ್ಪಾಯಿ, ಬಳ್ಳಿತರಕಾರಿ, ಗಿಡಗಳನ್ನು ನೆಡುವುದು<br>• ಹೊಸದಾಗಿ ಶಾಲೆಗೆ ದಾಖಲಾದ ಪ್ರತಿ ಮಗುವಿನಿಂದ ತಲಾ ಒಂದು ಗಿಡವನ್ನು ಶಾಲಾ ಪ್ರದೇಶದಲ್ಲಿ ನೆಡೆಸುವುದು ಮತ್ತು ಪ್ರತಿ ಗಿಡವನ್ನು ಮಕ್ಕಳು, ಶಿಕ್ಷಕರು, ಪೋಷಕರು ದತ್ತು ತೆಗೆದುಕೊಂಡು ಬೆಳೆಸುವುದು. ದತ್ತು ತೆಗೆದುಕೊಂಡವರ ಹೆಸರುಗಳನ್ನು ಆಯಾ ಗಿಡಗಳಲ್ಲಿ ಪ್ರದರ್ಶಿಸುವುದು<br>• ಶಾಲಾ ಆವರಣವನ್ನು ಸುಂದರವಾಗಿಡಲು ಹೂ ಗಿಡಗಳನ್ನು ಬೆಳೆಸುವುದು.<br>• ಶಾಲೆಗಳಲ್ಲಿಯ ಇಕೋ-ಕ್ಲಬ್ ಮೂಲಕ ಕಾರ್ಯಕ್ರಮ ಅನುಷ್ಠಾನಗೊಳಿಸುವುದು |
| 12-06-2011 | ಬಾಲಕಾರ್ಮಿಕ ಪದ್ದತಿ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು | • ಬಾಲಕಾರ್ಮಿಕ ಪದ್ದತಿ ಕುರಿತು ಸಮುದಾಯದಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 15-06-2011 ರಿಂದ 30-06-2011 | ಶಾಲಾ ಹಂತದ ಕ್ರೀಡಾ ಸ್ಪರ್ಧೆಗಳ ಆಯೋಜನೆ | • ಶಾಲಾ ಹಂತದಲ್ಲಿ ಕ್ರೀಡಾ ತಂಡಗಳ ಆಯ್ಕೆ |
| 30-06-2011 | ವಿಶೇಷ ದಾಖಲಾತಿ ಆಂದೋಲನ | • 29-06-2011 ರವರೆಗೆ ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಕರೆತರುವುದು.<br>• ದಾಖಲಾತಿ ಶೇಕಡಾ 100 ರಷ್ಟು ಇರುವ ಶಾಲೆಗೆ ಈ ಸೂಚನೆ ಅನ್ವಯಿಸುವುದಿಲ್ಲ.<br>• ಶಾಲೆಗೆ ಬರದಿರುವ ಮಕ್ಕಳ ಭಾವ ಚಿತ್ರ ತೆಗೆಸುವುದು ಮತ್ತು ಪೋಷಕರ ವಿಳಾಸ ಇನ್ನಿತರ ವಿವರಗಳನ್ನು ಸಂಗ್ರಹಿಸಿ ದಾಖಲಿಸುವುದು.<br>• ಇಂತಹ ಮಕ್ಕಳ ಪೋಷಕರಿಗೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸಮುದಾಯದ ಮುಖಂಡರಿಂದ ಪತ್ರ ಕಳುಹಿಸುವುದು.<br>• ತಹಶೀಲ್ದಾರ್ ಸೇರಿದಂತೆ ಸ್ಥಳೀಯ ಅಧಿಕಾರಿಗಳಿಂದ ಪೋಷಕರನ್ನು ಭೇಟಿ ಮಾಡಿಸಿ, ತಿಳುವಳಿಕೆ ಮೂಡಿಸುವುದು. |
| **ಜುಲೈ 2011**<br>01-07-2011 ರಿಂದ | ಸೇತುಬಂಧ ಶಿಕ್ಷಣದ ಸಾಫಲ್ಯ ಪರೀಕ್ಷೆಯ ಅನುಪಾಲನೆ | • ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವೈಯಕ್ತಿಕ ಗಮನ ನೀಡುವುದು. |

| | | |
|---|---|---|
| 02–07–2011 ರಿಂದ 10–07–2011 | ಶಾಲಾ ಮಟ್ಟದ ಕ್ರೀಡಾಕೂಟಗಳು | • ಶಾಲೆಯಲ್ಲಿ ಎಲ್ಲಾ ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು. ವಿಜೇತರನ್ನು ತಾಲ್ಲೂಕು ಮಟ್ಟದ ಸ್ಪರ್ಧೆಗಳಿಗೆ ಆಯ್ಕೆ ಮಾಡುವುದು. |
| 11–07–2011 | ವಿಶ್ವ ಜನ ಸಂಖ್ಯಾ ದಿನಾಚರಣೆ | • ಜನಸಂಖ್ಯಾ ಸ್ಫೋಟ ಪರಿಣಾಮದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು. |
| 15–07–2011 ರಿಂದ 16–07–2011 | ಮೊದಲನೇ ಕಿರುಪರೀಕ್ಷೆ | • ವಿಷಯವಾರು ಹಾಗೂ ತರಗತಿವಾರು ಒಂದು ಅವಧಿಗೆ ಸೀಮಿತಗೊಂಡಂತೆ ಕಿರು ಪರೀಕ್ಷೆ ನಡೆಸುವುದು. |
| **ಆಗಸ್ಟ್ 2011**<br>03–08–2011 ಹಾಗೂ 04–08–2011 | ಬ್ಲಾಕ್ ಮಟ್ಟದ ಕ್ರೀಡಾಕೂಟಗಳು | • ತಾಲ್ಲೂಕು ಮಟ್ಟದ ಕ್ರೀಡೆಗಳಲ್ಲಿ ಎಲ್ಲಾ ಶಾಲೆಯ ವಿಜೇತ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕಲ್ಪಿಸುವುದು. ವಿಜೇತರನ್ನು ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆ ಮಾಡುವುದು |
| 13–08–2011 ರಿಂದ 14–08–2011 | ಸ್ವಾತಂತ್ರ್ಯ ದಿನಾಚರಣೆಯ ಪೂರ್ವ ಸಿದ್ಧತೆ | • ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಿಸಿದಂತೆ ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು. |
| 15–08–2011 | ಸ್ವಾತಂತ್ರ್ಯ ದಿನಾಚರಣೆ | • ಮಕ್ಕಳು ಪೋಷಕರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗೆ ಸ್ವಾತಂತ್ರ್ಯ ದಿನಾಚರಣೆ ಆಚರಿಸುವುದು. |
| 16–08–2011 ರಿಂದ 17–08–2011<br>29–08–2011 | ಜಿಲ್ಲಾ ಮಟ್ಟದ ಕ್ರೀಡಾಕೂಟ<br>ರಾಷ್ಟ್ರೀಯ ಕ್ರೀಡಾ ದಿನ | • ಇಲಾಖೆಯ ಸೂಚನೆಗಳಿಗನುಗುಣವಾಗಿ ಜಿಲ್ಲಾ ಹಂತದ ಕ್ರೀಡಾಕೂಟವನ್ನು ಏರ್ಪಡಿಸುವುದು. ವಿಭಾಗ ಮಟ್ಟಕ್ಕೆ ಅಗತ್ಯ ಸಿದ್ಧತೆ<br>• ರಾಷ್ಟ್ರಮಟ್ಟದ ಕ್ರೀಡೆಗಳು ಹಾಗೂ ಪುರಸ್ಕಾರಗಳ ಬಗ್ಗೆ ತಿಳುವಳಿಕೆ ನೀಡುವುದು<br>• ನಾನು ಮೆಚ್ಚುವ ಆಟ ಎಂಬ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದು |
| 19–08–2011 ರಿಂದ 27–08–2011 | ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ | • ಆರೋಗ್ಯ ಇಲಾಖೆಯ ಸಹಯೋಗ ದೊಂದಿಗೆ ಶಾಲೆ ಹಂತದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದು |
| 30–08–2011 ಮತ್ತು 31–08–2011 | ಎರಡನೇ ಕಿರುಪರೀಕ್ಷೆ | • ಶಾಲಾ ಹಂತದಲ್ಲಿ ತರಗತಿವಾರು, ವಿಷಯವಾರು ಎರಡನೇ ಕಿರುಪರೀಕ್ಷೆ ನಡೆಸುವುದು. |
| **ಸೆಪ್ಟಂಬರ್ 2011**<br>04–09–2011 | ಶಿಕ್ಷಕರ ದಿನಾಚರಣೆ ಪೂರ್ವ ತಯಾರಿ | • ಶಿಕ್ಷಕರ ದಿನಾಚರಣೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು<br>• ಬಾವುಟಗಳ ವಿತರಣೆ ಮತ್ತು ವಂತಿಗೆ ಸಂಗ್ರಹಣೆ |

| | | |
|---|---|---|
| 05–09–2011 | ಶಿಕ್ಷಕರ ದಿನಾಚರಣೆ | • ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದು |
| 08–09–2011 | ಅಂತರ ರಾಷ್ಟ್ರೀಯ ಸಾಕ್ಷರತಾ ದಿನಾಚರಣೆ | • ಸಾಕ್ಷರತೆಯ ಮಹತ್ತ್ವವನ್ನು ಕುರಿತು ಮಕ್ಕಳಿಗೆ ಆಶುಭಾಷಣ, ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ ಇತ್ಯಾದಿ ಏರ್ಪಡಿಸುವ ಮೂಲಕ ಮನವರಿಕೆ ಮಾಡುವುದು |
| 15–09–2011 | ಸರ್.ಎಂ.ವಿಶ್ವೇಶ್ವರಯ್ಯನವರ ದಿನಾಚರಣೆ | • ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.<br>• ಮಕ್ಕಳಿಗೆ ಭಾಷಣ, ಪ್ರಬಂಧ ಸ್ಪರ್ಧೆ ಏರ್ಪಡಿಸುವುದು. |
| 21–09–2011 | ಅಂತರಾಷ್ಟೀಯ ಶಾಂತಿ ಮತ್ತು ಅಹಿಂಸಾ ದಿನಾಚರಣೆ | • ಶಾಂತಿ ಮತ್ತು ಅಂಹಿಸೆಯ ಮಹತ್ವದ ಬಗ್ಗೆ ಮನವರಿಕೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| 19–09–2011 ರಿಂದ 20–10–2011 | ಮೊದಲನೇ ಸೆಮಿಸ್ಟರ್ ಪರೀಕ್ಷೆ ಪೂರ್ವ ತಯಾರಿ | • ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು |
| 21–09–2011 ರಿಂದ 30–09–2011 | ಮೊದಲನೇ ಸೆಮಿಸ್ಟರ್ ಪರೀಕ್ಷೆಗಳು | • 2011–11ನೇ ಶೈಕ್ಷಣಿಕ ಸಾಲಿನ ಮೊದಲನೇ ಸೆಮಿಸ್ಟರ್ ಪರೀಕ್ಷೆಯನ್ನು ಅಗತ್ಯ ಪೂರ್ವ ಸಿದ್ಧತೆಯೊಂದಿಗೆ ನಡೆಸುವುದು. |
| **ಅಕ್ಟೋಬರ್ 2011**<br>01–10–2011 | ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮ | • ಪ್ರೌಢ ಶಾಲೆಗಳಲ್ಲಿ ಮಕ್ಕಳ ಫಲಿತಾಂಶ/ ಕಲಿಕಾ ಸಾಮರ್ಥ್ಯಗಳ ವಿಶ್ಲೇಷಣೆ ಮಾಡಿ ಪೋಷಕರೊಂದಿಗೆ ಸಂವಾದ<br>• ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯ ಮತ್ತು ಪೋಷಕರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳವುದು<br>• ಮಕ್ಕಳ ನಿರಂತರ ಹಾಜರಾತಿ ಮತ್ತು ಕಲಿಕೆಗೆ ಇರುವ ಸಂಬಂಧವನ್ನು ಪೋಷಕರಿಗೆ ಮನವರಿಕೆ ಮಾಡಿಕೊಡುವುದು.<br>• ಮಕ್ಕಳ ಕಲಿಕೆಯನ್ನು ಸಮುದಾಯಕ್ಕೆ ಪ್ರಸ್ತುತ ಪಡಿಸುವುದು<br>• ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸುವುದು. |
| 02–10–2011 | ಗಾಂಧಿ ಜಯಂತಿ | • ಗಾಂಧೀಜಿ ಜೀವನ ಚರಿತ್ರೆ ಮಕ್ಕಳಿಗೆ ಪರಿಚಯಿಸುವುದು<br>• ಶಾಂತಿ, ಅಹಿಂಸೆ, ಸತ್ಯಾಗ್ರಹ ತತ್ವಗಳ ಕುರಿತು ಮಕ್ಕಳಿಗೆ ಮನದಟ್ಟು ಮಾಡಿಕೊಡುವುದು<br>• ಗಾಂಧೀಜಿ ಕುರಿತ ಪುಸ್ತಕಗಳ ಅಧ್ಯಯನ. |

| 05–10–2011 ರಿಂದ 27–10–2011 : ಮಧ್ಯಂತರ ರಜೆ | | |
|---|---|---|
| 31.10.2011 | ರಾಷ್ಟ್ರೀಯ ಸಂಕಲ್ಪ ದಿನ<br>ಎಸ್‌ಡಿಎಂಸಿ ಸಭೆ | • ರಾಷ್ಟ್ರೀಯ ಭಾವೈಕ್ಯತೆ ಗೀತೆ ಹಾಡಿಸುವುದು<br>• ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು<br>• ಕನ್ನಡ ರಾಜ್ಯೋತ್ಸವಕ್ಕೆ ಪೂರ್ವಸಿದ್ದತೆ |
| **ನವೆಂಬರ್ 2011**<br>01.11.2011 | ಕನ್ನಡ ರಾಜ್ಯೋತ್ಸವ | • ಕನ್ನಡ ರಾಜ್ಯೋತ್ಸವ ಆಚರಿಸುವುದು<br>• ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಚಟುವಟಿಕೆಗಳು, ಸ್ಪರ್ಧೆಗಳನ್ನು ನಡೆಸುವುದು |
| 02.11.2011 ರಿಂದ 05.11.2011 | ವಿಭಾಗ ಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಂತೆ ವಿಭಾಗೀಯ ಕ್ರೀಡಾಕೂಟಗಳನ್ನು ಆಯೋಜಿಸುವುದು. |
| 08–11–2011 ರಿಂದ 09–11–2011 | ಶಾಲಾ ಹಂತದಲ್ಲಿ ಪ್ರತಿಭಾ ಕಾರಂಜಿ | • ಶಾಲಾ ಹಂತದಲ್ಲಿ ಇಲಾಖೆ ನೀಡುವ ಸೂಚನೆಗಳಿಗೆ ಅನುಗುಣವಾಗಿ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸುವುದು. |
| 14.11.2011 | ಮಕ್ಕಳ ದಿನಾಚರಣೆ | • ಮಕ್ಕಳ ಹಕ್ಕುಗಳ ಕ್ಲಬ್‌ನಿಂದ ಕಾರ್ಯಕ್ರಮ ನಡೆಸುವುದು<br>• ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರ ಸಮ್ಮುಖದಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲವೂ ಮಕ್ಕಳಿಂದ ವೇದಿಕೆಯಲ್ಲಿ ಕಾರ್ಯಕ್ರಮ ನಡೆಸುವುದು |
| 15.11.2011 ಮತ್ತು 16.11.2011 | ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಂತೆ ಅಥ್ಲೆಟಿಕ್ ಕ್ರೀಡಾಕೂಟದ ಆಯೋಜನೆ |
| 19.11.2011 ರಿಂದ 25.11.2011 | ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ | • ಭಾವೈಕ್ಯತಾ ಗೀತ ಗಾಯನ ಸ್ಪರ್ಧೆ, ಚರ್ಚಾ ಸ್ಪರ್ಧೆ, ಕೋಮು ಸೌಹಾರ್ದತೆಯ ಬಗ್ಗೆ ಪ್ರಬಂಧ ಹಾಗೂ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 21.11.2011 ರಿಂದ 23.11.2011 | ಹೋಬಳಿ ಮಟ್ಟದ ಪ್ರತಿಭಾ ಕಾರಂಜಿ | • ಶಾಲಾ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹೋಬಳಿ ಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |
| 29–11–2011 ಮತ್ತು 30–11–2011 | ಬ್ಲಾಕ್ ಹಂತದ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಬ್ಲಾಕ್ ಹಂತದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸುವುದು. |
| **ಡಿಸೆಂಬರ್ 2011**<br>01–12–2011 | ಏಡ್ಸ್ ದಿನಾಚರಣೆ | • ಏಡ್ಸ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| 02–12–2011 | ರಾಷ್ಟೀಯ ಮಾಲಿನ್ಯ ದಿನಾಚರಣೆ | • ವಿವಿಧ ಬಗೆಯ ಮಾಲಿನ್ಯಗಳ ಬಗ್ಗೆ ಹಾಗೂ ಅವುಗಳ ತಡೆಗಟ್ಟುವಿಕೆಯ ಅಗತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |

| | | |
|---|---|---|
| 03–12–2011 | ಅಂಗವಿಕಲ ದಿನಾಚರಣೆ. | • ವಿಕಲಚೇತನ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸುವುದು.<br>• ವಿವಿಧ ಬಗ್ಗೆಯ ಅಂಗವೈಕಲ್ಯತೆ ತಡೆಗಟ್ಟಲು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.<br>• ಶಾಲೆಗಳಲ್ಲಿ ದೃಷ್ಟಿದೋಷ, ಶ್ರವಣದೋಷ, ಮುಂತಾದ ನ್ಯೂನತೆಯುಳ್ಳ ಮಕ್ಕಳಿಗೆ ಅಗತ್ಯ ಉಪಕರಣಗಳನ್ನು ಒದಗಿಸುವುದು. |
| 02–12–2011 ಮತ್ತು 03–12–2011 | ಬ್ಲಾಕ್ ಮಟ್ಟದ ಪ್ರತಿಭಾ ಕಾರಂಜಿ | • ಹೋಬಳಿ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |
| 10.12.2011 | ಮಾನವ ಹಕ್ಕುಗಳ ದಿನಾಚರಣೆ | • ಮಾನವ ಹಕ್ಕುಗಳ ಕುರಿತು ಉಪನ್ಯಾಸ, ಪ್ರಬಂಧ ಸ್ಪರ್ದೆ ಚರ್ಚಾ ಸ್ಪರ್ದೆ ರಶಪ್ರಶ್ನೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು. |
| 08–12–2011 ರಿಂದ 09–12–2011 | ಮೂರನೇ ಕಿರು ಪರೀಕ್ಷೆ | • ತರಗತಿವಾರು ಹಾಗೂ ವಿಷಯವಾರು |
| 13–12–2011 ರಿಂದ 14–12–2011 | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ | • ತಾಲ್ಲೂಕು ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |
| 01–12–2011 ರಿಂದ 31–12–2011 | ಶೈಕ್ಷಣಿಕ ಪ್ರವಾಸ | • ಶಾಲೆಗೆ ಸಮೀಪವಿರುವ ಪ್ರಸಿದ್ಧ ಸ್ಥಳಗಳಿಗೆ ಹೊರಸಂಚಾರ<br>• ಪಠ್ಯವಸ್ತುವಿಗೆ ಪೂರಕವಾದ ಸ್ಥಳಗಳಿಗೆ ಪ್ರವಾಸ ಕೈಗೊಂಡು ಭಾರತೀಯ ಸಂಸ್ಕೃತಿ, ವಿಜ್ಞಾನ, ಶಿಕ್ಷಣ, ಪರಂಪರೆ, ಇತಿಹಾಸದ ಪರಿಚಯ ಮಾಡಿಸುವುದು.<br>• ವಿದ್ಯಾರ್ಥಿಗಳಿಂದ ಪ್ರವಾಸದ ಅನುಭವ ಕುರಿತು ಪ್ರಬಂಧ/ಕಥೆ/ಕವನ ಬರೆಸಿ ಮಕ್ಕಳ ಪ್ರವಾಸ ಕಥನ ಪುಸ್ತಿಕೆ ಸಿದ್ಧಪಡಿಸುವುದು. (ಟಿಪ್ಪಣಿ: 8,9 ನೇ ಇಯತ್ತೆಯವರು 20.01.2012 ರವರೆಗೆ ಪ್ರವಾಸ ಮಾಡಬಹುದು). |
| 07–12–2011 ರಿಂದ 31–12–2011 | ಶಾಲಾ ವಾರ್ಷಿಕೋತ್ಸವ ಹಾಗೂ ಶಾಲಾ ಸಂಚಿಕೆ (ಶಾಲಾ ಮಕ್ಕಳ ಕೈಬರಹದ ಪತ್ರಿಕೆ) | • ಶಾಲಾ ವಾರ್ಷಿಕೋತ್ಸವಗಳನ್ನು ನಡೆಸಿ ಪೋಷಕರಿಗೆ ಮಕ್ಕಳ ಕಲಿಕೆಯನ್ನು ಪಠ್ಯ ಮತ್ತು ಸಹಪಠ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಸ್ತುತ ಪಡಿಸುವುದು. |

| | | |
|---|---|---|
| | | • ಪ್ರತಿ ಶಾಲೆಯಲ್ಲಿ ಮಕ್ಕಳಿಂದಲೇ ಬರೆಸಿದ ಚುಟುಕ, ಲೇಖನ, ಸಂಗ್ರಹ, ಚಿತ್ರಗಳು, ಶುಭಾಷಿತ ಇತ್ಯಾದಿ ಒಳಗೊಂಡ ಶಾಲಾ ಸಂಚಿಕೆ ಬಿಡುಗಡೆ ಮಾಡಿಸುವುದು. |
| 20–12–2011 ರಿಂದ 22–12–2011 | ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ನಡೆಸುವುದು. |
| 23–12–2011 | ವಿಶ್ವ ರೈತರ ದಿನ | • ಪೋಷಕರು ಹಾಗೂ ಸ್ಥಳೀಯ ರೈತರಿಗೆ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಜಾಗತೀಕರಣದ ಪ್ರಭಾವದ ಬಗ್ಗೆ ಮಾಹಿತಿ ನೀಡುವುದು ಸ್ಥಳೀಯ ಬೆಳೆಗಳು, ಬೆಳೆಗಳಲ್ಲಿ ಕಂಡುಬರುವ ರೋಗಗಳ ಬಗ್ಗೆ, ಅಂತರ್ಜಲ, ಮಳೆ ನೀರು ಕೊಯ್ಲು, ಮಾರುಕಟ್ಟೆ ಇತ್ಯಾದಿ ವಿಚಾರಗಳ ಬಗ್ಗೆ ಸಂವಾದ ಏರ್ಪಡಿಸುವುದು. |
| 24–12–2011 | ಗ್ರಾಹಕರ ದಿನಾಚರಣೆ | • ಶಾಲಾ ಗ್ರಾಹಕ ಸಂಘಗಳು, ಗ್ರಾಹಕ ಹಕ್ಕುಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು. |
| 29–12–2011 ರಿಂದ 31–12–2011 | ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ | • ಇಲಾಖೆ ಸೂಚನೆಗಳಿಗುಣವಾಗಿ ರಾಜ್ಯ ಮಟ್ಟದಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| **ಜನವರಿ 2012** 12–01–2012 | ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ | • ಸ್ವಾಮಿ ವಿವೇಕಾನಂದರ ಜೀವನ ಆದರ್ಶ ಕುರಿತು ಉಪನ್ಯಾಸ<br>• ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಭಾರತದ ಚಿತ್ರಣದ ಬಗ್ಗೆ ಸ್ಥಳೀಯ ಯುವಕರೊಂದಿಗೆ ಸಂವಾದ |
| 23–01–2012 | ನೇತಾಜಿ ಸುಭಾಷ್ ಚಂದ್ರ ಬೋಸ್ ಜನ್ಮ ದಿನಾಚರಣೆ | • ನೇತಾಜಿ ಸುಭಾಷ್ ಚಂದ್ರಬೋಸ್ ರವರ ಬಗ್ಗೆ ನೆನಪಿಸುವ ಕಾರ್ಯಕ್ರಮಗಳ ಆಯೋಜನೆ |
| 26–01–2012 | ಗಣರಾಜ್ಯೋತ್ಸವ ದಿನಾಚರಣೆ | • ಹೆಚ್ಚಿನ ಸಂಖ್ಯೆಯ ಪೋಷಕರು ಹಾಗೂ ಸಮುದಾಯದ ಗಣ್ಯರ ಹಾಜರಿಯಲ್ಲಿ ಗಣರಾಜ್ಯೋತ್ಸವ ಆಚರಿಸುವುದು |
| 30–01–2012 | ಹುತಾತ್ಮರ ದಿನಾಚರಣೆ | • ಮಹಾತ್ಮ ಗಾಂಧೀಜಿಯವರ ಮೌಲ್ಯಗಳನ್ನು ಮಕ್ಕಳಿಗೆ ಮನನ ಮಾಡಿಕೊಡುವುದು.<br>• ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮ ರಾದವರನ್ನು ನೆನಪಿಸಿಕೊಳ್ಳುವುದು.<br>• ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮ ಹಮ್ಮಿಕೊಳ್ಳುವುದು |

| | | |
|---|---|---|
| **ಫೆಬ್ರವರಿ 2012**<br>23–02–2012 ರಿಂದ<br>24–02–2012 | ನಾಲ್ಕನೇ ಕಿರು ಪರೀಕ್ಷೆ | • ವಿಷಯವಾರು ತರಗತಿವಾರು ಕಟ್ಟುನಿಟ್ಟಾಗಿ ನಡೆಸುವುದು. |
| 28–02–2012 | ರಾಷ್ಟ್ರೀಯ ವಿಜ್ಞಾನ ದಿನಾಚರಣೆ | • ವಿಜ್ಞಾನ ದಿನಾಚರಣೆಯ ಮಹತ್ವದ ಬಗ್ಗೆ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಬಗ್ಗೆ ಅರಿವು ಮೂಡಿಸುವುದು.<br>• ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡುವುದು.<br>• ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಮುದಾಯ ವೀಕ್ಷಿಸಲು ಅನುವು ಮಾಡಿಕೊಡುವುದು.<br>• ವಿಜ್ಞಾನದ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸುವುದು. |
| **ಮಾರ್ಚ್ 2012**<br>08–03–2012 | ವಿಶ್ವ ಮಹಿಳಾ ದಿನಾಚರಣೆ | • ಮಹಿಳಾ ಸಬಲೀಕರಣದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.<br>• ಲಿಂಗತಾರತಮ್ಯ ನಿವಾರಣೆಗೆ ಪೋಷಕರಿಗೆ ಹಾಗೂ ಮಕ್ಕಳಿಗೆ ತಿಳುವಳಿಕೆ<br>• ಬಾಲ್ಯ ವಿವಾಹದ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸುವುದು. |
| 18–03–2012 | ಎರಡನೇ ಸೆಮಿಸ್ಟರ್ ಪರೀಕ್ಷೆಗೆ ಪೂರ್ವಸಿದ್ಧತೆ | • ತರಗತಿವಾರು ಹಾಗೂ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಕೊಳ್ಳುವುದು.<br>• ಪರೀಕ್ಷೆಗೆ ಆಸನ ವ್ಯವಸ್ಥೆ ಮಾಡಿಕೊಳ್ಳುವುದು. |
| 21.03.2012<br>ರಿಂದ 26.03.2012 | ಎರಡನೇ ಸೆಮಿಸ್ಟರ್ ಪರೀಕ್ಷೆ | • ಎರಡನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವುದು.<br>(ಟಿಪ್ಪಣಿ: ಎಸ್.ಎಸ್.ಎಲ್.ಸಿ ಪರೀಕ್ಷಾ ವೇಳಾಪಟ್ಟಿಯಂತೆ ಪ್ರಸ್ತುತ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವ ಸಮಯ ಪಲ್ಲಟವಾಗಬಹುದು) |
| **ಏಪ್ರಿಲ್ 2012**<br>02.04.2012 ರಿಂದ<br>05.04.2012 | ಮುಂಬರುವ ವರ್ಷಕ್ಕೆ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿಕೊಳ್ಳುವುದು | • ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು<br>• ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು<br>• ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದೊಂದು ಎಸ್,ಡಿ.ಎಂ.ಸಿ.ಸಭೆಯಲ್ಲಿ ಶಾಲಾ ಶೈಕ್ಷಣಿಕ ಯೋಜನೆ ಮಂಡಿಸಿ, ಒಪ್ಪಿಗೆ ಪಡೆಯುವುದು. |

| | | |
|---|---|---|
| 05–04–2012 ರಿಂದ 07–04–2012 | ಉತ್ತರ ಪತ್ರಿಕೆಗಳ ಮೌಲ್ಯಮಾಪನ | • 2ನೇ ಸೆಮಿಸ್ಟರ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ<br>• ಅಂಕಗಳ ಕ್ರೋಡೀಕರಣ<br>• ಪ್ರಗತಿ ಪತ್ರಗಳಲ್ಲಿ ಅಂಕಗಳ ನಮೂದಿಸುವಿಕೆ |
| 07–04–2012 | ವಿಶ್ವ ಆರೋಗ್ಯ ದಿನಾಚರಣೆ | • ವಿದ್ಯಾರ್ಥಿಗಳಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಪ್ರಾಮುಖ್ಯತೆ ಬಗ್ಗೆ ವಿವಿಧ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಮೂಲಕ ಮನವರಿಕೆ ಮಾಡುವುದು. |
| 10.04.2012 | ಎರಡನೇ ಸಮುದಾಯದತ್ತ ಶಾಲೆ | • ಜೂನ್ 2011 ರಿಂದ ಶಾಲೆಯಲ್ಲಿ ಸಿದ್ಧಪಡಿಸಿದ ಶಾಲಾ ಶೈಕ್ಷಣಿಕ ಯೋಜನೆ ಹಾಗೂ ಶಾಲಾಭಿವೃದ್ಧಿ ಯೋಜನೆಯ ಅನ್ವಯ ಆಗಿರುವ ಪರಿಶೀಲನೆ<br>• ಮಕ್ಕಳ ಕಲಿಕೆಯನ್ನು ಪೋಷಕರಿಗೆ ಪ್ರಸ್ತುತ ಪಡಿಸುವುದು.<br>• ಉತ್ತರ ಪತ್ರಿಕೆಗಳನ್ನು ಪೋಷಕರಿಗೆ ತೋರಿಸಿ ಮಗುವಿನ ಕಲಿಕೆಯ ಪ್ರಗತಿಯ ಬಗ್ಗೆ ವಿವರಣೆ ನೀಡುವುದು.<br>• ಪ್ರಗತಿ ಪತ್ರದನ್ವಯ ಮಕ್ಕಳ ಕಲಿಕೆಯು ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.<br>• ಪ್ರತಿಭಾ ಪ್ರದರ್ಶನ<br>• ಫಲಿತಾಂಶ ಪ್ರಕಟಣೆ |
| 11–04–2012 | ಬೇಸಿಗೆ ರಜೆ ಆರಂಭ | • 11–04–2011 ರಿಂದ ಬೇಸಿಗೆ ರಜೆ. |

**ಟಿಪ್ಪಣಿ:** ರಾಷ್ಟ್ರೀಯ ದಿನಾಚರಣೆಗಳಲ್ಲದೆ ಶಾಲೆಯಲ್ಲಿ, ಅನೇಕ ಮಹನೀಯರ ಕುರಿತು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವೆನಿಸುವ ಇನ್ನೂ ಕೆಲವು ದಿನಾಚರಣೆಗಳನ್ನು ಆಚರಿಸಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಆಚರಣೆಯ ಔಚಿತ್ಯ ಮತ್ತು ಮಹತ್ವದ ಅರಿವು ಬೆಳೆಯುತ್ತದೆ. ಇಂತಹ ಆಚರಣೆಗಳಲ್ಲಿಯೇ ಸಮಯ ಕಳೆದರೆ ಪಾಠ ಮಾಡಲಿಕ್ಕೆ ಸಮಯ ಎಲ್ಲಿ ಎಂಬ ಆಲೋಚನೆ ಹಲವರದು. ಅದು ಸಹಜ ಕೂಡಾ. ಶಾಲೆಯ ಮುಖ್ಯಸ್ಥರು ಈ ಎರಡೂ ವಿಚಾರಗಳ ಧಾಟಿಯನ್ನು ಗಮನಿಸಿ–ದಿನಾಚರಣೆಗಳನ್ನು ಆಯೋಜಿಸಲು ಕ್ರಮ ಮಾಡುವುದು. ಉದಾಹರಣೆಗೆ ಕೆಲವು ಕಾರ್ಯಕ್ರಮಗಳ ಮಹತ್ವ ಕುರಿತು ಪ್ರಾರ್ಥನಾ ವೇಳೆಯಲ್ಲಿ 5–10 ನಿಮಿಷಗಳ ಪರಿಚಯಾತ್ಮಕ ಭಾಷಣವನ್ನು ವಿದ್ಯಾರ್ಥಿಗಳು ಅಥವಾ ಶಿಕ್ಷಕರು ನೀಡುವುದು ಅಥವಾ 40–50 ನಿಮಿಷಗಳ ಕಾರ್ಯಕ್ರಮವನ್ನು ಶಾಲೇತರ ಅವಧಿಯಲ್ಲಿ ಸಂಯೋಜಿಸುವುದರಿಂದ ಸಮಯ ಹೊಂದಾಣಿಕೆ ಮಾಡಿಕೊಳ್ಳಬಹುದು.

# 3. ಪ್ರೌಢಶಾಲಾ ಶುಲ್ಕದ ವಿವರ

**(ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳಲ್ಲಿ 2011–12 ನೇ ಸಾಲಿನಲ್ಲಿ ನಿಗದಿಪಡಿಸಿರುವ ಶುಲ್ಕ ವಿವರ)**

| ಕ್ರ ಸಂ | ಶುಲ್ಕದ ವಿವರಗಳು | 8 ರಿಂದ 10ನೇ ತರಗತಿ |
|---|---|---|
| 1 | ದಾಖಲಾತಿ ಶುಲ್ಕ | 10.00 |
| 2 | ಕ್ರೀಡಾ ಶುಲ್ಕ | 25.00 |
| 3 | ರೀಡಿಂಗ್ ರೂಂ ಶುಲ್ಕ | 20.00 |
| 4 | ಪ್ರಯೋಗಾಲಯ ಶುಲ್ಕ | 20.00 |
| 5 | ದೃಕ್ ಶ್ರವಣ [ಎವಿಇ] ಶುಲ್ಕ | 10.00 |
| 6 | ಡ್ರಾಯಿಂಗ್ ಶುಲ್ಕ | 10.00 |
| 7 | ವೈದ್ಯಕೀಯ ಶುಲ್ಕ | 05.00 |
| 8 | ವೃತ್ತಿ ಶಿಕ್ಷಣ ಶುಲ್ಕ | 10.00 |
| 9 | ಶಾಲಾ ಸ್ವಚ್ಛತಾ ಶುಲ್ಕ | 15.00 |
| 10 | ವಿದ್ಯಾರ್ಥಿ ಕ್ರೀಡಾ ನಿಧಿ | 15.00 |
| 11 | ವಿದ್ಯಾರ್ಥಿ ಕಲ್ಯಾಣ [ಟಿಡಬ್ಲ್ಯೂಎಫ್] ನಿಧಿ | 10.00 |
| 12 | ಶಿಕ್ಷಕರ ಕಲ್ಯಾಣ ನಿಧಿ [ಎಸ್‌ಡಬ್ಲ್ಯೂಎಫ್] | 10.00 |
| 13 | ಶಾಲಾಭಿವೃದ್ಧಿ ಶುಲ್ಕ | 20.00 |
| 14 | ಶಿಕ್ಷಕರ ದಿನಾಚರಣೆಯ ಬಾವುಟ | 05.00 |
| ಒಟ್ಟು | | 185.00 |

**ಶುಲ್ಕ ರಿಯಾಯಿತಿ:**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಗುಂಪು–1ರ ಅಡಿಯಲ್ಲಿ ಬರುವ ಎಲ್ಲಾ ವಿದ್ಯಾರ್ಥಿಗಳಿಗೆ
2. ಎಲ್ಲಾ ವಿದ್ಯಾರ್ಥಿನಿಯರಿಗೆ
3. ರೂ.11,000/– ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ

**ವಿಶೇಷ ಸೂಚನೆ:**

1. ಸೇವಾದಳ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಇರುವ ಶಾಲೆಗಳಲ್ಲಿ ಪ್ರತಿ ಘಟಕಕ್ಕೆ ತಲಾ 5.00 ರೂ ಸಂಗ್ರಹಿಸುವುದು.
2. ಕ್ರಮ ಸಂಖ್ಯೆ: 10, 11 ಮತ್ತು 12 ಈ ನಿಧಿಗಳಿಗೆ ಶುಲ್ಕ ರಿಯಾಯಿತಿ ಇರುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳು ನಿಧಿ ಪಾವತಿಸುವುದು ಕಡ್ಡಾಯವಾಗಿದೆ.

# 4. ಅಕ್ಷರ ದಾಸೋಹ ಕಾರ್ಯಕ್ರಮ

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ವಿಶ್ವಸಂಸ್ಥೆ ಘೋಷಿಸಿದಂತೆ ಹಸಿವಿನಿಂದ ಬಳಲುವ ಪ್ರತಿ ಮಗುವಿಗೆ ಆಹಾರ ನೀಡಬೇಕು. ಮಕ್ಕಳು ಸಧೃಡವಾಗಿ ಬೆಳೆಯಲು ಅವಕಾಶವಿರಬೇಕು ಎಂಬ ಬದ್ಧತೆಯಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯಲು ಬರುವ ಮಕ್ಕಳಿಗೆ ಹಸಿವು ನೀಗಿಸಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಅಕ್ಷರ ದಾಸೋಹ ಕಾರ್ಯಕ್ರಮ ಒಂದು ಪ್ರತಿಷ್ಠಿತ ಮಹತ್ತರ ಯೋಜನೆಯಾಗಿದೆ.

## ಅಕ್ಷರ ದಾಸೋಹ ನಡೆದು ಬಂದ ದಾರಿ:

2002–03ರವರೆವಿಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ತಲಾ 3 ಕೆ.ಜಿ. ಅಕ್ಕಿಯನ್ನು ಪ್ರತಿ ತಿಂಗಳು ನೀಡಲಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ 2002–03ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ 1 ರಿಂದ 5ನೇ ತರಗತಿಗಳ ವಿದ್ಯಾರ್ಥಿಗಳಿಗೆ ಬಿಸಿಊಟ ಪ್ರಾರಂಭಿಸಲಾಯಿತು. 2003–04 ನೇ ಸಾಲಿನಿಂದ ಉಳಿದ 20 ಜಿಲ್ಲೆಗಳಿಗೂ ದಿನಾಂಕ:01.09.2004ರಿಂದ ಅನುದಾನಿತ ಪ್ರಾಥಮಿಕ ಶಾಲೆಗಳಿಗೂ ದಿನಾಂಕ:01.01.2004ರಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಿದೆ. 2007–08ನೇ ಸಾಲಿನಿಂದ ಯೋಜನೆಯನ್ನು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು.

## ಕಾರ್ಯಕ್ರಮದ ಮುಖ್ಯ ಉದ್ದೇಶಗಳು:

i. ದಾಖಲಾತಿ, ಹಾಜರಾತಿಯನ್ನು ಉತ್ತಮಪಡಿಸುವುದು.
ii. ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು.
iii. ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
iv. ಕಲಿಕಾ ಸಾಮರ್ಥ್ಯ ಮಟ್ಟವನ್ನು ಹೆಚ್ಚಿಸುವುದು.
v. ಮಕ್ಕಳಲ್ಲಿ ಸಮಾನತೆಯ ಮನೋಭಾವವನ್ನು ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದು.

## 2010–11ನೇ ಸಾಲಿನಲ್ಲಿ ಪ್ರಯೋಜನ ಪಡೆಯುತ್ತಿರುವ ಶಾಲೆಗಳ ಸಂಖ್ಯೆ

| ಶಾಲೆಗಳು | ಸರ್ಕಾರಿ | ಅನುದಾನಿತ | ಒಟ್ಟು |
|---|---|---|---|
| ಪ್ರಾಥಮಿಕ | 23121 | 239 | 23360 |
| ಹಿರಿಯ ಪ್ರಾಥಮಿಕ ಶಾಲೆ | 22409 | 2272 | 24681 |
| ಪ್ರೌಢ | 4521 | 3513 | 8034 |
| ಎ.ಐ.ಇ. ಸೆಂಟರ್ | | | 253 |
| ಮದರಸಾ | | | 58 |
| ಒಟ್ಟು | 50051 | 6024 | 56386 |

## 2010–11ನೇ ಸಾಲಿನಲ್ಲಿ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ

| ತರಗತಿ | ದಾಖಲಾತಿ | ಹಾಜರಾತಿ | ಫಲಾನುಭವಿಗಳು |
|---|---|---|---|
| 1 ರಿಂದ 5 | 37.46 | 35.46 | 33.87 |
| 6 ರಿಂದ 8 | 23.52 | 22.42 | 21.21 |
| 9 ರಿಂದ 10 | 13.11 | 12.50 | 11.60 |
| ಒಟ್ಟು | 74.09 | 70.38 | 66.68 |

## ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ ಧಾನ್ಯ ಮತ್ತು ಪರಿವರ್ತನಾ ವೆಚ್ಚದ ವಿವರ (ಪ್ರತಿ ವಿದ್ಯಾರ್ಥಿಗೆ/ಪ್ರತಿ ದಿನಕ್ಕೆ)

| ಆಹಾರ ಪದಾರ್ಥ | 1 ರಿಂದ 5 | | 6 ರಿಂದ 8 | | 9 ರಿಂದ 10 | |
|---|---|---|---|---|---|---|
| | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ ರೂ.5.65 ಪ್ರತಿ ಕೆ.ಜಿ. | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ ರೂ.5.65 ಪ್ರತಿ ಕೆ.ಜಿ. | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ ರೂ.9.25 ಪ್ರತಿ ಕೆ.ಜಿ. |
| ಅಕ್ಕಿ | 100 | ಉಚಿತ | 150 | ಉಚಿತ | 150 * | 1.40 |
| ಬೇಳೆ | 20 | 1.22 | 30 | 1.83 | 30 | 1.83 |
| ಎಣ್ಣೆ | 05 | 0.27 | 7.5 | 0.41 | 7.5 | 0.41 |
| ಡಿ.ಎಫ್. ಉಪ್ಪು | 02 | 0.02 | 03 | 0.04 | 03 | 0.04 |
| ತರಕಾರಿ | 50 | 0.65 | 75 | 0.97 | 75 | 0.97 |
| ಸಾಗಾಣಿಕಾ ವೆಚ್ಚ | | 0.01 | | 0.01 | | 0.01 |
| ಇಂಧನ | | 0.52 | | 0.77 | | 0.77 |
| **ಒಟ್ಟು** | | **2.69** | | **4.03** | | **5.43** |

* ರಾಜ್ಯ ಸರ್ಕಾರವು ಎ.ಪಿ.ಎಲ್ ದರದಲ್ಲಿ ಅಕ್ಕಿಯನ್ನು ನೀಡುತ್ತಿದೆ.

# ಕೇಂದ್ರ ಸರ್ಕಾರವು ಉಚಿತವಾಗಿ ನೀಡುತ್ತಿದೆ.

## ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ವಿವರ:–

| ತರಗತಿ | ರಾಜ್ಯ | ಕೇಂದ್ರ | ಒಟ್ಟು | ಸಾಗಾಣಿಕಾ ವೆಚ್ಚ | |
|---|---|---|---|---|---|
| | | | | ರಾಜ್ಯ | ಕೇಂದ್ರ |
| | ರೂ. ಪೈ. | ರೂ. ಪೈ. | ರೂ. ಪೈ. | ಪ್ರತಿ ಕ್ವಿಂಟಾಲ್‌ಗೆ | |
| 1 – 5 | 0.67 | 2.02 | 2.69 | – | 75 |
| 6 – 8 | 1.01 | 3.02 | 4.03 | – | 75 |
| 9 – 10 | 5.43 | – | 5.43 | 75 | – |

## ಸೂಚಿತ ಆಹಾರ ಪಟ್ಟಿ:–

ವಿದ್ಯಾರ್ಥಿಗಳಿಗೆ ವಾರದಲ್ಲಿ ಈ ಕೆಳಕಂಡಂತೆ ಆಹಾರವನ್ನು ತಯಾರಿಸಿ ನೀಡಲು ಸೂಚಿಸಲಾಗಿದೆ

| ವಾರಗಳು | ನೀಡುತ್ತಿರುವ ಆಹಾರ |
|---|---|
| ಸೋಮವಾರ | ತೊಗರಿಬೇಳೆ/ಕಡಲೆಕಾಳು/ಹೆಸರುಕಾಳು/ಅಲಸಂದೆಕಾಳು ಮತ್ತು ಹುರುಳಿಕಾಳು ಹಾಗೂ ತರಕಾರಿ ಬಳಸಿಕೊಂಡು ಅನ್ನ ಮತ್ತು ಸಾಂಬಾರು ತಯಾರಿಸಿ ನೀಡುವುದು. |
| ಮಂಗಳವಾರ | |
| ಬುಧವಾರ | |
| ಗುರುವಾರ | |
| ಶುಕ್ರವಾರ | ಬಿಸಿಬೇಳೆ ಬಾತ್ |
| ಶನಿವಾರ | ತರಕಾರಿ ಉಪ್ಪಿಟ್ಟು/ಸಿಹಿ ಪೊಂಗಲ್ |

## ಪೌಷ್ಠಿಕಾಂಶದ ವಿವರ:–

ಬಿಸಿಊಟ ನೀಡುವುದರಿಂದ ಪ್ರತಿ ಪ್ರಾಥಮಿಕ ಶಾಲಾ ಮಗುವಿಗೆ ದಿವಸಕ್ಕೆ 490 ಕ್ಯಾಲರಿಯಷ್ಟು ಪೌಷ್ಠಿಕಾಂಶ ಹಾಗೂ 13.8 ಗ್ರಾಂನಷ್ಟು ಪ್ರೋಟೀನ್ ದೊರೆಯುತ್ತಿದೆ. ಪ್ರತಿ ಪ್ರೌಢಶಾಲಾ ವಿದ್ಯಾರ್ಥಿಗೆ 728.35 ಕ್ಯಾಲರಿಗಳು ಹಾಗೂ 20.7 ಗ್ರಾಂನಷ್ಟು ಪ್ರೋಟೀನ್ ದೊರೆಯುತ್ತಿದೆ. ಈ ವಿಷಯವನ್ನು ಸಾರ್ವಜನಿಕರ ಗಮನಕ್ಕಾಗಿ ತರಲು ಶಾಲಾ ಗೋಡೆ ಅಥವಾ ಅಡುಗೆ ಕೋಣೆಯ ಗೋಡೆಗಳ ಮೇಲೆ ಬಿಸಿಊಟಕ್ಕೆ ವೆಚ್ಚವಾಗುವ ವಿವರಗಳು ಹಾಗೂ ಪ್ರತಿ ದಿನದ ವಿದ್ಯಾರ್ಥಿಗಳ ಅಂಕಿ ಅಂಶಗಳು, ಶುಚಿತ್ವ, ಸುರಕ್ಷತೆ, ಮಿತವ್ಯಯ, ಹೆಚ್ಚುವರಿ ಪೌಷ್ಠಿಕಾಂಶ ಮಾತ್ರೆಗಳ ಬಗ್ಗೆ ಮಾಹಿತಿಯನ್ನು ಬರೆಸಲಾಗಿದೆ.

## ಮಾತ್ರೆಗಳ ಸರಬರಾಜು ವಿವರ:–

20010–11ನೇ ಸಾಲಿಗೆ 3 ವಿಧದ ಪೌಷ್ಠಿಕಾಂಶ ಮಾತ್ರೆಗಳು ಎಲ್ಲಾ ಶಾಲೆಗಳಿಗೂ ಈಗಾಗಲೇ ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ & ವೇರ್ ಹೌಸಿಂಗ ಸೊಸೈಟಿ, ಬೆಂಗಳೂರು ರವರು ಸರಬರಾಜು ಮಾಡಿರುತ್ತಾರೆ.

**ಮಾತ್ರೆಗಳ ವಿವರ:–**

| ಮಾತ್ರೆಗಳು | | ಪ್ರಮಾಣ |
|---|---|---|
| ವಿಟಮಿನ್ ಎ | 2 ಲಕ್ಷ ಐ.ಯು | ವರ್ಷಕ್ಕೆ 2 ಮಾತ್ರೆಗಳು |
| ಕಬ್ಬಿಣಾಂಶ ಮಾತ್ರೆ | 20 ಎಂ.ಜಿ | ವಾರಕ್ಕೆ 3 ರಂತೆ 36 ವಾರಗಳಿಗೆ– 108 ಮಾತ್ರೆಗಳು |
| ಆಲ್‌ಬೆಂಡಜೋಲ್ (ಜಂತು ನಿವಾರಕ ಮಾತ್ರೆಗಳು) | 400 ಎಂ.ಜಿ | ವರ್ಷಕ್ಕೆ 2 ಮಾತ್ರೆಗಳು |

ಮೇಲ್ಕಂಡ ಮಾತ್ರೆಗಳನ್ನು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 7ನೇ ತರಗತಿ ಮಕ್ಕಳಿಗೆ ನೀಡಲಾಗುತ್ತಿದೆ.

**ಅಡುಗೆ ಕೇಂದ್ರಗಳ ವಿವರ:–**

ರಾಜ್ಯದಲ್ಲಿ ಒಟ್ಟು 46414 ಅಡುಗೆ ಕೇಂದ್ರಗಳಿದ್ದು, ಈ ಕೆಳಕಂಡಂತೆ ಅಡುಗೆ ಕೇಂದ್ರಗಳನ್ನು ವರ್ಗೀಕರಿಸಲಾಗಿದೆ.

| ಕ್ರ.ಸಂ | ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ವಿಭಾಗ | | |
|---|---|---|---|
| | ಮಕ್ಕಳ ಸಂಖ್ಯೆ | ಕೇಂದ್ರದ ಮಾದರಿ | ಅಡುಗೆಯವರ ಸಂಖ್ಯೆ |
| 1 | 1 ರಿಂದ 25ರವರೆಗೆ | ಎ | 1 |
| 2 | 26 ರಿಂದ 100ರವರೆಗೆ | ಬಿ | 2 |
| 3 | 101 ರಿಂದ 200ರವರೆಗೆ | ಸಿ | 3 |
| 4 | 201 ರಿಂದ 300ರವರೆಗೆ | ಡಿ | 4 |
| 5 | 301 ರಿಂದ 500ರವರೆಗೆ | ಇ | 5 |
| 6 | 501 ರಿಂದ 800ರವರೆಗೆ | ಎಫ್ | 6 |
| 7 | 801 ರಿಂದ 1100ರವರೆಗೆ | ಜಿ | 7 |
| 8 | 1101 ರಿಂದ 1400ರವರೆಗೆ | ಹೆಚ್ | 8 |
| 9 | 1400 ರಿಂದ 1700ರವರೆಗೆ | ಐ | 9 |
| 10 | 1701 ರಿಂದ ಮೇಲ್ಪಟ್ಟು | ಜೆ | 10 |

i. 46414 ಅಡುಗೆ ಕೇಂದ್ರಗಳಿಂದ 48284 ಪ್ರಾಥಮಿಕ ಹಾಗೂ 7485 ಪ್ರೌಢಶಾಲೆಗಳ ಒಟ್ಟು 65.55 ಲಕ್ಷ ಮಕ್ಕಳಿಗೆ ಬಿಸಿಯೂಟ ನೀಡಲಾಗುತ್ತಿದೆ.

ii. 2010–11ರಲ್ಲಿ ಒಟ್ಟು 100 ಸ್ವಯಂಸೇವಾ ಸಂಸ್ಥೆಗಳು ಒಟ್ಟು 5577 ಶಾಲೆಗಳ 10.98 ಲಕ್ಷ ಮಕ್ಕಳಿಗೆ ಬಿಸಿಯೂಟ ನೀಡುತ್ತಿವೆ.

iii. ಕೇಂದ್ರ ಸರ್ಕಾರ 2007–08ನೇ ಸಾಲಿನಲ್ಲಿ ನೀಡಿರುವ ರೂ.10944.60 ಲಕ್ಷಗಳಲ್ಲಿ 18241 ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಲು ಯೋಜಿಸಿದೆ

## ಪಾತ್ರೆ ಪರಿಕರಗಳ ಖರೀದಿ ಬಗ್ಗೆ:–

2009–10ನೇ ಸಾಲಿನಲ್ಲಿ ನೀಡಿರುವ 5.49 ಲಕ್ಷಗಳಲ್ಲಿ ಅಡುಗೆ ಕೇಂದ್ರಗಳಿಗೆ ಗ್ಯಾಸ್ ಸ್ಟೌವ್ ಖರೀದಿ ಮಾಡಲು ಹಣ ಮಂಜೂರಾತಿ ನೀಡಿದೆ.

## ಶಾಲಾ ಕೈತೋಟ:–

ಮಕ್ಕಳಿಗೆ ನೀಡುವ ಆಹಾರ ಪೌಷ್ಠಿಕಾಂಶತೆ ಹೆಚ್ಚಿಸಲು ರಾಜ್ಯ ಸರ್ಕಾರ ರೂ.3500/–ರಂತೆ ಒಟ್ಟು 19375 ಶಾಲೆಗಳಲ್ಲಿ ಶಾಲಾ ಕೈತೋಟಗಳನ್ನು ಬೆಳೆಸಲು ಕ್ರಮವಹಿಸಿದೆ. ಶಾಲಾ ಕೈತೋಟಗಳಲ್ಲಿ ಮಕ್ಕಳು ಬೆಳೆಸಿದ ತರಕಾರಿಗಳಾದ ನುಗ್ಗೆಕಾಯಿ, ಪಪ್ಪಾಯಿ, ಕರಿಬೇವು ಹಾಗೂ ಸೊಪ್ಪು ಮತ್ತು ತರಕಾರಿಗಳನ್ನು ಉಪಯೋಗಿಸಿ ಅಡುಗೆ ಮಾಡಲು ತಿಳಿಸಿದೆ.

ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಯವರಿಗೆ ಗೌರವಧನವನ್ನು ಕೇಂದ್ರ ಸರ್ಕಾರವು ದಿನಾಂಕ:01–12–2009 ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದೆ.

| | |
|---|---|
| ಮುಖ್ಯ ಅಡುಗೆಯವರು | ರೂ.1100–00 |
| ಅಡುಗೆಯವರು | ರೂ.1000–00 |
| ಸಹಾಯಕ ಅಡುಗೆಯವರು | ರೂ.1000–00 |
| ಸಹಾಯಕರು | ರೂ.1000–00 |

**ತಾಯಂದಿರ ಸಮಿತಿ:**

ಎಲ್ಲಾ ಶಾಲೆಗಳಲ್ಲೂ ಮಕ್ಕಳಿಗೆ ಬಿಸಿಯೂಟ ಮಾಡುವಾಗ ಮನೆಯ ವಾತಾವರಣ ಕಲ್ಪಿಸುವ ಸಲುವಾಗಿ ತಾಯಂದಿರ ಸಮಿತಿ ರಚಿಸಿ ಸಕ್ರಿಯಗೊಳಿಸಲಾಗಿದೆ. ತಾಯಂದಿರು ಶಾಲೆಯಲ್ಲಿ ಆಹಾರ ಗುಣಮಟ್ಟ ಪರಿಶೀಲಿಸಿ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ.

ಅಕ್ಷರ ದಾಸೋಹ ಕಾರ್ಯಕ್ರಮಕ್ಕಾಗಿ 2010–11ನೇ ಸಾಲಿನಲ್ಲಿ ಈ ಕೆಳಕಂಡಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಆಯವ್ಯಯವನ್ನು ಬಿಡುಗಡೆ ಮಾಡಿರುತ್ತದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | | ಬಿಡುಗಡೆಯಾದ ಅನುದಾನ | |
|---|---|---|---|---|
| | ಕೇಂದ್ರ | ರಾಜ್ಯ | ಕೇಂದ್ರ | ರಾಜ್ಯ |
| 2010–11 | 46251.54 | 28876.21 | 46251.54 | 12533.75 |

**ಮೌಲ್ಯಮಾಪನ:**

ಅಕ್ಷರ ದಾಸೋಹ ಕಾರ್ಯಕ್ರಮದ 2008–09ನೇ ಸಾಲಿನಲ್ಲಿ ಮೌಲ್ಯಮಾಪನ ಅಧ್ಯಯನವನ್ನು ಮೆ॥ ಪ್ರೈಸ್ ವಾಟರ್ ಹೌಸ್ ಕೂಪರ್ಸ್, ಬೆಂಗಳೂರು ಅವರಿಗೆ ವಹಿಸಲಾಗಿದ್ದು, ಅಧ್ಯಯನ ಇಲಾಖೆಯ ಒಡಂಬಡಿಕೆಯೊಂದಿಗೆ ಸಂಸ್ಥೆಯವರು ಅಧ್ಯಯನ ಕಾರ್ಯಕ್ರಮವನ್ನು ಪೂರ್ಣಗೊಳಿಸಿ ವರದಿಯನ್ನು ನೀಡಿದ್ದಾರೆ.

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.)ಯ ಪಾತ್ರ.**

i. ಗ್ರಾಮ ಪಂಚಾಯಿತಿ/ನಗರಸಭೆ/ಮುನಿಸಿಪಾಲಿಟಿಯೊಂದಿಗೆ ಯೋಜನೆಯ ಅನುಷ್ಠಾನದಲ್ಲಿ ಸಹಕರಿಸುವುದು.
ii. ಅಡುಗೆಯವರ ಸಿಬ್ಬಂದಿ ಆಯ್ಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
iii. ಅಡುಗೆ ಕೋಣೆ ನಿರ್ಮಾಣದ ಮೇಲುಸ್ತುವಾರಿ ವಹಿಸುವುದು.
iv. ಬಿಸಿ ಊಟ ತಯಾರಿಕೆಯಲ್ಲಿ ಮೇಲುಸ್ತುವಾರಿ ವಹಿಸುವುದು.
v. ಉತ್ತಮ ಗುಣಮಟ್ಟದ ಆಹಾರ ಧಾನ್ಯಗಳ ಸರಬರಾಜಿನ ಬಗ್ಗೆ ಖಾತರಿ ವಹಿಸುವುದು.
vi. ಉತ್ತಮ ಗುಣಮಟ್ಟದ ಆಹಾರದ ತಯಾರಿಕೆ ಹಾಗೂ ವ್ಯವಸ್ಥಿತ ವಿತರಣೆ ನೋಡಿಕೊಳ್ಳುವುದು.
vii. ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಅಡಿಗೆ ತಯಾರಿಕೆಯಲ್ಲಿ ಭಾಗವಹಿಸದಂತೆ ನೋಡಿಕೊಳ್ಳುವುದು.
viii. ಆಹಾರ ಹಂಚಿಕೆ ಮೊದಲು ಶಿಕ್ಷಕರಿಬ್ಬರು ರುಚಿ ನೋಡುವ ವ್ಯವಸ್ಥೆ ಮಾಡುವುದು.
ix. ಕಲಿಕಾ ಸಮಯವನ್ನು ಯಾವುದೇ ಕಾರಣಕ್ಕಾಗಿ ಅಡುಗೆ ತಯಾರಿಕೆಗೆ ವಿನಿಯೋಗವಾಗದಂತೆ ಶಿಕ್ಷಕರು ಕಟ್ಟೆಚ್ಚರ ವಹಿಸುವಂತೆ ನೋಡಿಕೊಳ್ಳುವುದು.

**ಶಾಲಾ ಮುಖ್ಯೋಪಾಧ್ಯಾಯರ ಜವಾಬ್ದಾರಿಗಳು:–**

i. ಶಾಲಾ ಮಕ್ಕಳ ದೈನಂದಿನ ಹಾಜರಾತಿಯನ್ನು ಆಹಾರದ ಬೇಡಿಕೆಯನ್ನು ಮುಖ್ಯ ಅಡುಗೆಯವರಿಗೆ ನೀಡುವುದು.
ii. 1 ರಿಂದ 10ನೇ ತರಗತಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ನೀಡುವಂತೆ ನೋಡಿಕೊಳ್ಳುವುದು.
iii. ಮಕ್ಕಳಿಗೆ ಸ್ವಚ್ಛತೆ ಬಗ್ಗೆ ತಿಳುವಳಿಕೆ ನೀಡುವುದು.
iv. ಮಕ್ಕಳಿಗೆ ದೈನಂದಿನ ಬಿಸಿ ಊಟಕ್ಕೆ ಬಳಕೆ ಮಾಡಿದ ತರಕಾರಿಗಳ ಪೌಷ್ಠಿಕತೆ ಮಹತ್ವ ತಿಳಿಸುವುದು.
v. ಮಕ್ಕಳು ತಟ್ಟೆ ತೊಳೆದುಕೊಂಡು ಸ್ವಚ್ಛವಾಗಿಟ್ಟುಕೊಳ್ಳುವಂತೆ ನೋಡಿಕೊಳ್ಳುವುದು.
vi. ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಮಕ್ಕಳಿಗೆ ಕೊಡಿಸುವುದು.
vii. ಶಾಲಾ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಅಡುಗೆಯವರು ಅಹಾರ ಪದಾರ್ಥವನ್ನು ಸುರಕ್ಷಿತವಾಗಿ ನೋಡಿಕೊಳ್ಳುವಂತೆ ಉಸ್ತುವಾರಿ ಮಾಡುವುದು.
viii. ಬಿಸಿಯೂಟ ಕಾರ್ಯಕ್ರಮದಲ್ಲಿ ಯಾವುದೇ ಸಂದರ್ಭದಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು.
ix. ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಠಿಕಾಂಶ ಮಾತ್ರೆಗಳನ್ನು ವಿತರಿಸುವಾಗ ಮಾತ್ರೆಗಳ ಇಥಥಿಡಿಥಿ ಜಚಿಣಜ ನೋಡಿಕೊಂಡು ವಿತರಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

x. ಶಾಲೆಗಳಲ್ಲಿ ಎಲ್ಲಾ ಮಕ್ಕಳು ಒಟ್ಟಾಗಿ ಕುಳಿತು ಊಟ ಮಾಡುವಂತೆ ನೋಡಿಕೊಳ್ಳುವುದು. ಇದರಿಂದ ಸಾಮಾಜಿಕ ಸಮಾನತೆಯನ್ನು ಪ್ರೋತ್ಸಾಹಿಸುವುದು.

**ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ:–**

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮವನ್ನು 2006–07ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. 2010–11ನೇ ಸಾಲಿನಲ್ಲಿ ಆಗಸ್ಟ್ ತಿಂಗಳಿನಲ್ಲಿ ಕಾರ್ಯಕ್ರಮವ್ನು ಹಮ್ಮಿಕೊಂಡು ಮುಕ್ತಾಯಗೊಳಿಸಿದೆ. ಸರ್ವ ಶಿಕ್ಷಣ ಅಭಿಯಾನ ಮತ್ತು ಎನ್.ಆರ್.ಹೆಚ್.ಎಂ. ವತಿಯಿಂದ ಹೆಲ್ತ್ ಕಾರ್ಡ್‌ಗಳನ್ನು ಮುದ್ರಿಸಿ ಶಾಲೆಗಳಿಗೆ ವಿತರಿಸಿದೆ. ಇಂಧನ ವೆಚ್ಚಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ.50,000/ದಂತೆ ರೂ.96.10 ಲಕ್ಷಗಳನ್ನು ಮಧ್ಯಾಹ್ನ ಉಪಹಾರ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸಲಾಗಿದೆ.

ಕಾರ್ಯಕ್ರಮದ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಆದ್ಯಕ್ಷರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಾಧ್ಯಕ್ಷರಾಗಿರುವ ಸಮಿತಿಯನ್ನು ರಚಿಸಿದ್ದು, ಜಿಲ್ಲೆಯ ಆರೋಗ್ಯಾಧಿಕಾರಿಗಳು ಮತ್ತು ಉಪನಿರ್ದೇಶಕರು ಮತ್ತಿತರ ಅಧಿಕಾರಿಗಳು ಸದಸ್ಯರಿರುತ್ತಾರೆ.

2010–11ನೇ ಸಾಲಿನಲ್ಲಿ ತಪಾಸಣೆಗೊಳಪಟ್ಟ ವಿದ್ಯಾರ್ಥಿಗಳ ಸಂಖ್ಯೆ 84.54.218 (91.66%) ಇದರಲ್ಲಿ 2160 ವಿದ್ಯಾರ್ಥಿಗಳಿಗೆ ತೀವ್ರತರವಾದ ಖಾಯಿಲೆಗಳಿಗೆ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಚಿಕಿತ್ಸೆ ನೀಡಲಾಗಿದೆ. ಇದಕ್ಕೆ ತಗಲುವ ಪೂರ್ಣ ವೆಚ್ಚವನ್ನು ಎನ್.ಆರ್.ಹೆಚ್.ಎಂ. ವತಿಯಿಂದ ರೂ.584.81 ಲಕ್ಷ ಖರ್ಚು ಭರಿಸಲಾಗಿದೆ.

2010–11ನೇ ಸಾಲಿಗೆ ಸುವರ್ಣ ಆರೋಗ್ಯ ಮಾಸಾಚರಣೆ ಎಂದು ದಿನಾಂಕ: 01.08.10 ರಿಂದ 30.08.20010 ರವರೆಗೆ ಹಮ್ಮಿಕೊಳ್ಳಲಾಗಿತ್ತು.

## 2010–11ನೇ ಸಾಲಿನ ಪಿ.ಎ.ಬಿ. ಅನುಮೋದನೆ ವಿವರಗಳು:

| ತರಗತಿ | ಪಿ.ಎ.ಬಿ. ಅನುಮೋದನೆ | |
|---|---|---|
| | ದಿನಗಳು | ಫಲಾನುಭವಿಗಳು |
| 1–5 (ಪ್ರಾಥಮಿಕ) | 220 | 3462488 |
| 6–8 (ಮಾಧ್ಯಮಿಕ ಶಾಲೆಗಳು) | 220 | 1969053 |
| 9–10 (ಪ್ರೌಢ ಶಾಲೆಗಳು) | 220 | 1112189 |

# 5. ಸಮುದಾಯದತ್ತ ಶಾಲಾ ಕಾರ್ಯಕ್ರಮ

ಮಾನವ ಸಂಪತ್ತು ಸದೃಢವಾಗಿರಬೇಕು. ಅದಕ್ಕಾಗಿ ಬೇಕು ಸರ್ವರಿಗೂ ಶಿಕ್ಷಣ, ಸಕಲ ಸಮಸ್ಯೆಗಳಿಗೂ ಸಿದ್ಧೌಷಧ ಶಿಕ್ಷಣ. ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಮತ್ತು ನಿಗದಿತ ಕಲಿಕಾ ಸಾಮರ್ಥ್ಯಗಳನ್ನು ಹೊಂದಿರಬೇಕು. ಪ್ರತಿ ಶಿಕ್ಷಕರು ಕಲಿಸುವ ಅಗತ್ಯ ಸಾಮರ್ಥ್ಯಗಳನ್ನು ಹೊಂದಿ ಕಲಿಸುವುದರಲ್ಲಿ ತೊಡಗಬೇಕು ಮತ್ತು ಶಿಕ್ಷಣವು ಒಂದು ಜನಾಂದೋಲನವಾಗಬೇಕು. ಶಿಕ್ಷಣ ಸಾರ್ವತ್ರೀಕರಣಗೊಳಿಸಲು ಶಾಲೆ ಸರ್ವತೋಮುಖ ಬೆಳವಣಿಗೆಯಾಗಿಸಲು, ಶಿಕ್ಷಣದ ಪ್ರಕ್ರಿಯೆಯಲ್ಲಿ ಪೋಷಕರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು, ಶೈಕ್ಷಣಿಕ ಚಟುವಟಿಕೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಲು ಕರ್ನಾಟಕ ಸರ್ಕಾರ ಶಿಕ್ಷಣ ಇಲಾಖೆಯಲ್ಲಿ ಹಮ್ಮಿಕೊಂಡಿರುವ ಒಂದು ವಿನೂತನ ಕಾರ್ಯಕ್ರಮ ಸಮುದಾಯದತ್ತ ಶಾಲೆ.

- **ಕಾರ್ಯಕ್ರಮದ ವ್ಯಾಪ್ತಿ:-**

"ಸಮುದಾಯದತ್ತ ಶಾಲೆ" ಕಾರ್ಯಕ್ರಮದನ್ವಯ ನಿಗದಿತ ದಿನಾಂಕಗಳಂದು ಪ್ರತಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಲ್ಲಾ ಪಾಲಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರು ಭಾಗವಹಿಸುವಂತೆ ಎಲ್ಲಾ ಕ್ರಮಗಳನ್ನು ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ತೆಗೆದುಕೊಳ್ಳಬೇಕು. ಈ ದಿನಾಂಕದಂದು, ಮಾರ್ಗದರ್ಶಕರು, ಶಿಕ್ಷಕರು, ಕಡ್ಡಾಯವಾಗಿ ಭಾಗವಹಿಸಿ ನಿಯೋಜಿತ ಕಾರ್ಯವನ್ನು ನಿರ್ವಹಿಸುವುದು.

- **ಮಾರ್ಗದರ್ಶಕರು:-**

ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ಬೋಧಕ ಸಿಬ್ಬಂದಿ ಸಮುದಾಯದತ್ತ ಶಾಲಾ ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಿ ಭಾಗವಹಿಸತಕ್ಕದ್ದು.

ಅನುಪಾಲನೆ ದೃಷ್ಠಿಯಿಂದ ಒಂದು ಶಾಲೆಗೆ ನಿಗದಿಪಡಿಸಿದ ಮಾರ್ಗದರ್ಶಕರ ಮುಂದೆ ನಡೆಯುವ ಎಲ್ಲಾ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಲೆಯ ಪ್ರಗತಿಗೆ ನೆರವಾಗುವುದು.

- **ಅಧಿಕಾರಿಗಳ ಭಾಗವಹಿಸುವಿಕೆ:-**

ಸಮುದಾಯದತ್ತ ಶಾಲೆ ಕಾರ್ಯಕ್ರಮದ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು, ಶಿಕ್ಷಣ ಸಂಯೋಜಕರು, ಬಿಆರ್‌ಸಿ ಹಾಗೂ ಸಿಆರ್‌ಸಿ ಸಿಬ್ಬಂದಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಒಂದೊಂದು ಶಾಲೆಯನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದು. ಈ ರೀತಿ ಆಯ್ಕೆ ಮಾಡಿಕೊಂಡ ಶಾಲೆಗೆ ಕಾರ್ಯಕ್ರಮದ ದಿನದಂದು ಭೇಟಿ ನೀಡಿ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ವರದಿ ಮಾಡಲು ತಿಳಿಸಿದೆ.

ಕಾರ್ಯಕ್ರಮ ನಡೆಯುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು, ಸಹನಿರ್ದೇಶಕರು ಹಾಗೂ ನಿರ್ದೇಶಕರು ಕಾರ್ಯಕ್ರಮದ ದಿನದಂದು ಅವರವರ ವ್ಯಾಪ್ತಿಯಲ್ಲಿ ಪ್ರವಾಸ ಮಾಡಿ ದಿನದ ಕೊನೆಯಲ್ಲಿ ಯಾವುದಾದರೂ ಒಂದು ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದು.

## ➢ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ . . .

| ಸಮಯ | ನಿರ್ವಹಿಸಬೇಕಾದ ಕಾರ್ಯಕ್ರಮಗಳು |
|---|---|
| ಶಾಲೆಯ ಸಮಯದಲ್ಲಿ ಬೆಳಿಗ್ಗೆ 10.00 ರಿಂದ 10.30 | ಶಿಕ್ಷಕರ ಕಲಿಸುವಿಕೆಯ ಹಾಗೂ ಮಕ್ಕಳ ಕಲಿಕೆಯ ಅವಲೋಕನ ಮೌಲ್ಯಮಾಪನ ದಾಖಲೆಗಳ ಪರಿಶೀಲನೆ, ಶಿಕ್ಷಕರೊಡನೆ ಸಮಾಲೋಚನೆ. |
| ಮಧ್ಯಾಹ್ನ 2.30 ರಿಂದ 3.30 | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ಮಕ್ಕಳ ಪ್ರಗತಿ ಕುರಿತಾಗಿ ಪೋಷಕರೊಡನೆ ಮೌಲ್ಯಮಾಪನ ದಾಖಲಾತಿ ಉತ್ತರ ಪತ್ರಿಕೆ ಮತ್ತು ಪ್ರಗತಿ ಪತ್ರಗಳ ಸಮೇತ ಸಮಾಲೋಚನೆ, ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರೊಡನೆ ಸಮಾಲೋಚನೆ ನಂತರ ಮಕ್ಕಳ ಪ್ರತಿಭೆಗಳಿಗೆ ಅವಕಾಶ ನೀಡುವ ಮನರಂಜನಾ ಕಾರ್ಯಕ್ರಮ |

## ➢ ಕಾರ್ಯಕ್ರಮ ನಡೆಸಬೇಕಾದ ದಿನಾಂಕಗಳು

| ಕ್ರ ಸಂ | ಪ್ರೌಢಶಾಲೆಗಳಿಗೆ |
|---|---|
| 1. | 01–10–2011 |
| 2. | 10–04–2012 |

**ವಿಶೇಷ ಸೂಚನೆ:–** ಮೇಲೆ ನಿಗದಿಪಡಿಸಿದ ದಿನಗಳಲ್ಲಿ ಅನಿವಾರ್ಯ ಕಾರ್ಯಗಳಿಂದ ರಜೆ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನದಂದು ಕಾರ್ಯಕ್ರಮ ನಡೆಸತಕ್ಕದ್ದು.

## ➢ ವರದಿ ಮತ್ತು ಅನುಪಾಲನೆ

ಪ್ರತಿ ಸಮುದಾಯದತ್ತ ಶಾಲೆ ಕಾರ್ಯಕ್ರಮ ನಡೆದ ನಂತರ ವರದಿಯನ್ನು ತಯಾರಿಸಿ ಮಾರ್ಗದರ್ಶಕರು ಹಾಗೂ ಅಧಿಕಾರಿಗಳು ತಕ್ಷಣ ಮೇಲಾಧಿಕಾರಿಗಳಿಗೆ/ಶಿಕ್ಷಣ ಸಂಯೋಜಕರಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡತಕ್ಕದ್ದು.

ಕಾರ್ಯಕ್ರಮ ನಡೆದ ಎಂಟು ದಿನಗಳೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ಮಟ್ಟದಲ್ಲಿ ವರದಿಗಳನ್ನು ಕ್ರೋಡೀಕರಿಸಿ ವಿಶ್ಲೇಷಿಸಿ ಅವರ ಹಂತದಲ್ಲಿ ಕೈಗೊಳ್ಳಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಂಡು ಕ್ರೋಡೀಕೃತ ವರದಿಯನ್ನು ಜಿಲ್ಲಾ ಉಪನಿರ್ದೇಶಕರು[ಆಡಳಿತ] ಮತ್ತು ಉಪನಿರ್ದೇಶಕರು [ಅಭಿವೃದ್ಧಿ] ಇವರಿಗೆ ಕಳುಹಿಸತಕ್ಕದ್ದು.

ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು[ಅಭಿವೃದ್ಧಿ] ರವರು ಕ್ರೋಡೀಕರಿಸಿ ಅವರವರ ವ್ಯಾಪ್ತಿಗೆ ಬರುವ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಂಡು ಕ್ರೋಢೀಕೃತ ಜಿಲ್ಲಾ ವರದಿಯನ್ನು ಆಯುಕ್ತರಿಗೆ ಕಳುಹಿಸತಕ್ಕದ್ದು.

## ➢ ವರದಿಯಲ್ಲಿರಬೇಕಾದ ಮುಖ್ಯಾಂಶಗಳು

ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಕಾರ್ಯಕ್ರಮ ಜರುಗಿತೆ? ಇಲ್ಲವಾದರೆ ಯಾವ ಶಾಲೆಯಲ್ಲಿ ನಡೆಯಲಿಲ್ಲ? ಕಾರಣಗಳು ಮತ್ತು ಕೈಗೊಂಡ ಪರ್ಯಾಯ ಕ್ರಮಗಳೇನು? ಈ ದಿನದಂದು ಶಾಲೆಗೆ ಹಾಜರಾದ ಪೋಷಕರ ಸರಾಸರಿ (%). ಸಮುದಾಯದತ್ತ ಶಾಲೆ ಕಾರ್‍ಯಕ್ರಮದಲ್ಲಿ ನಡೆದ ಪ್ರಮುಖ ಚಟುವಟಿಕೆಗಳು. ಮೂಡಿ ಬಂದ ಪ್ರಮುಖ ಸಮಸ್ಯೆಗಳು(Issues), ಈ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮ, ಈ ಕಛೇರಿ ಕೈಗೊಳ್ಳಬೇಕಾದ ಕ್ರಮಗಳು.

# 6. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಜಾಗತೀಕರಣದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಸಬಲೀಕರಿಸುವ ನಿಟ್ಟಿನಲ್ಲಿ, ಪ್ರೌಢಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಇದುವರೆವಿಗೂ 1 ರಿಂದ 8 ನೇ ತರಗತಿಯವರೆಗೆ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳು ಅನುಷ್ಠಾನಗೊಂಡಿದ್ದು ಈಗ ಶಾಲಾ ಸಾರ್ವತ್ರೀಕರಣ ಸಾಧಿಸುವ ಉದ್ದೇಶದಿಂದ 9 ಮತ್ತು 10 ನೇ ತರಗತಿಗಳೊಂದಿಗೆ ಪ್ರೌಢಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದೆ.

**ಕಾರ್ಯಕ್ರಮದ ಉದ್ದೇಶಗಳು**

- 5 ಕಿ.ಮೀ ವ್ಯಾಪ್ತಿಯಲ್ಲಿ ಸ್ಥಳೀಯ ನಿರ್ದಿಷ್ಠತೆಗಳಿಗನುಗುಣವಾಗಿ ಪ್ರೌಢ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು. (ಶಾಲೆ ಪ್ರಾಂಭಿಸುವುದು, ಪ್ರಯಾಣ ಸೌಲಭ್ಯ ಕಲ್ಪಿಸುವುದು, ವಸತಿ ಶಾಲೆಗಳು........ಇತ್ಯಾದಿ)
- ಯಾವುದೇ ವಿದ್ಯಾರ್ಥಿ ಪ್ರೌಢ ಶಿಕ್ಷಣದಿಂದ ವಂಚಿತರಾಗದಂತೆ ಕ್ರಮವಹಿಸುವುದು.
- ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಪರಿಣಾಮಕಾರಿ ಶಿಕ್ಷಣ ನೀಡಲು ಪೂರಕವಾಗುವ ಭೌತಿಕ ಸೌಲಭ್ಯಗಳನ್ನು ಒದಗಿಸುವುದು.
- ಎಲ್ಲಾ ವಿದ್ಯಾರ್ಥಿಗಳು ನಿರೀಕ್ಷಿತ ಮಟ್ಟದ ಗುಣಮಟ್ಟ ಶಿಕ್ಷಣವನ್ನು ಪಡೆಯುವಂತೆ ಪೂರಕ ಕಾರ್ಯಕ್ರಮಗಳನ್ನು ಆಯೋಜಿಸುವುದು.

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಆಯೋಜಿಸಲಾಗುತ್ತಿರುವ ಕಾರ್ಯಕ್ರಮಗಳು:**

**ಆವರ್ತಕವಲ್ಲದ (ನಾನ್ ರಿಕರಿಂಗ್) ಕಾರ್ಯಕ್ರಮಗಳು**

- 40 ವಿದ್ಯಾರ್ಥಿಗಳಿಗೆ ಒಂದು ಕೊಠಡಿಯಂತೆ ಹೆಚ್ಚುವರಿ ಕೊಠಡಿಗಳನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಒಂದು ಶಾಲೆಗೆ 4 ಕೊಠಡಿಗಳನ್ನು ನೀಡಬಹುದು.
- ಅಸ್ಥಿತ್ವದಲ್ಲಿರುವ ಪ್ರೌಢಶಾಲೆಗಳ ಬಲವರ್ಧನೆಗಾಗಿ ಪ್ರಯೋಗಾಲಯ, ಗ್ರಂಥಾಲಯ, ಆರ್ಟ್ ಮತ್ತು ಕ್ರಾಫ್ಟ್ ಕೊಠಡಿ, ಹೆಣ್ಣು ಮಕ್ಕಳ ಚಟುವಟಿಕಾ ಕೊಠಡಿ, ಶೌಚಾಲಯ ಮತ್ತು ನೀರಿನ ಸೌಲಭ್ಯಗಳನ್ನು ಅವಶ್ಯಕತೆಗಳಿಗನುಗುಣವಾಗಿ ನೀಡುವುದು.
- ಹೊಸದಾಗಿ 9 ನೇ ತರಗತಿ ಪ್ರಾರಂಭಿಸುವ ಶಾಲೆಗಳಿಗೆ ಅವಶ್ಯ ಮೂಲಭೂತ ಸೌಕರ್ಯಗಳು.

**ಆವರ್ತಿತ (ರಿಕರಿಂಗ್) ಕಾರ್ಯಕ್ರಮಗಳು**

- ಪ್ರತಿ ಸರ್ಕಾರಿ ಶಾಲೆಗಳ ಕಾರ್ಯ ಚಟುವಟಿಕೆಗಳ ನಿರ್ವಹಣೆಗಾಗಿ
  [ಗ್ರಂಥಾಲಯ, ಪ್ರಯೋಗಾಲಯ, ಕಾರ್ಯಾಲಯ, ತರಗತಿ, ಇತರೆ ಕಾರ್ಯಕ್ರಮಗಳು]
  ರೂ, 50,000/- ಶಾಲಾ ಅನುದಾನ.
- ಶಾಲಾ ಕಟ್ಟಡ ನಿರ್ವಹಣಾ ಅನುದಾನ - ಸ್ವಂತ ಕಟ್ಟಡ ಹೊಂದಿರುವ ಪ್ರತೀ ಸರ್ಕಾರಿ ಶಾಲೆಗೆ ರೂ, 25,000/- ವರೆಗೆ ವಾರ್ಷಿಕ ಅನುದಾನ.
- ಶಾಲೆಯ ಅವಶ್ಯಕತೆಗನುಗುಣವಾಗಿ ಶಿಕ್ಷಕರನ್ನು ನೀಡಲಾಗುವುದು.

- ಎಲ್ಲಾ ಸರ್ಕಾರಿ ಶಾಲಾ ಶಿಕ್ಷಕರಿಗೆ ವಾರ್ಷಿಕ 5 ದಿನಗಳ ಸೇವಾನಿರತ ಶಿಕ್ಷಕರ ತರಬೇತಿ.

ಪ್ರತಿ ವರ್ಷ ಶಾಲಾ ಹಂತದಲ್ಲಿ ಯೋಜನೆ ಸಿದ್ದಪಡಿಸಿ ಆರ್.ಎಂ.ಎಸ್.ಎ. ಫ್ರೇಂವರ್ಕ್‌ನ (RMSA Frame work)ನಿಯಮಗಳಂತೆ ಅಗತ್ಯ ಕಾರ್ಯಕ್ರಮಗಳನ್ನು ಮುಖ್ಯ ಶಿಕ್ಷಕರು ಆಯೋಜಿಸಬೇಕಾಗಿದೆ.

ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು ರಾಜ್ಯ ಯೋಜನಾ ಕಛೇರಿಯಿಂದ ನೀಡುವ ಮಾರ್ಗಸೂಚಿಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ವರದಿ ನೀಡಬೇಕಾಗಿರುತ್ತದೆ.

ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಕಛೇರಿಯ ಸೂಚನೆಯಂತೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಬೇಕಾಗಿದ್ದು, ಅನುದಾನದ ಬಳಕೆ ಬಗ್ಗೆ ಮಾರ್ಗಸೂಚಿ ಹಾಗೂ ತರಬೇತಿ ನೀಡಲಾಗುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದೊಂದಿಗೆ ಕಾರ್ಯಕ್ರಮ ಅನುಷ್ಟಾನಗೊಳಿಸುತ್ತಿದ್ದು ಲೆಕ್ಕ ಪತ್ರಗಳ ನಿರ್ವಹಣೆಯನ್ನು ಪ್ರತ್ಯೇಕವಾಗಿ ನಿರ್ವಹಿಸಿ ಕಾಲಕಾಲಕ್ಕೆ ನಡೆಯುವ ಸಿ.ಎ ಆಡಿಟ್, ಎ.ಜಿ ಆಡಿಟ್, ಇಂಟರ್ನಲ್ ಆಡಿಟ್, ಕೇಂದ್ರ ಸರ್ಕಾರದ ಆಡಿಟ್‌ಗಳಿಗೆ ನೀಡಬೇಕಾಗುತ್ತದೆ.

ಎಲ್ಲಾ ಮುಖ್ಯ ಶಿಕ್ಷಕರು ಈಗಾಗಲೇ ಜಿಲ್ಲಾ ಕಛೇರಿಯಿಂದ ನೀಡಿರುವ ನಮೂನೆಯಲ್ಲಿ ಶಾಲೆಯ ಅಭಿವೃದ್ಧಿ ಯೋಜನೆಯನ್ನು 2016–17 ರವರೆಗೆ ಆರ್.ಎಂ.ಎಸ್.ಎ. ಫ್ರೇಂವರ್ಕ್ (RMSA Frame work)ಅನುಸಾರವಾಗಿ ಸಿದ್ದಪಡಿಸಿ ಪ್ರತಿ ವರ್ಷ ಅದರಂತೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಕ್ರಮವಹಿಸುವುದು.

ಪ್ರತಿ ವರ್ಷ SEMIS ನಲ್ಲಿ ಶಾಲಾ ಮಾಹಿತಿಗಳನ್ನು Online ನಲ್ಲಿ ತುಂಬಬೇಕಿದ್ದು ಈ ಬಗ್ಗೆ ಕಾಲಕಾಲಕ್ಕೆ ರಾಜ್ಯ ಹಾಗೂ ಜಿಲ್ಲಾ ಕಛೇರಿಗಳಿಂದ ನೀಡುವ ಮಾರ್ಗಸೂಚಿ ಅನುಸರಿಸುವುದು. RMSA ಗೆ ಸಂಬಂಧಿಸಿದ ಎಲ್ಲಾ ಯೋಜನೆಗಳು, ಕಾರ್ಯಕ್ರಮಗಳು, ವಿವರಗಳು www.education.nic.ಯಲ್ಲಿ ಲಭ್ಯವಿದ್ದು ಎಲ್ಲಾ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಈ ವೆಬ್‌ಸೈಟ್‌ನ ಉಪಯೋಗ ಪಡೆದು ಕೊಳ್ಳುವುದು.

ಒಟ್ಟಾರೆ ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವ ಕಾರ್ಯಕ್ರಮವಾಗಿದ್ದು ಸಮುದಾಯದ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಂಡು ಎಲ್ಲಾ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ಈ ಕಾರ್ಯಕ್ರಮಕ್ಕೆ ಅಳವಡಿಸಿರುವ ಇತರೆ ಯೋಜನೆಗಳು:–**

1) ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕುಗಳಲ್ಲಿ "ಮಾದರಿ ಶಾಲೆಗಳು"(ಆದರ್ಶ ವಿದ್ಯಾಲಯಗಳು) ಪ್ರಾರಂಭವಾಗಿದ್ದು, ಈ ಶಾಲೆಗಳು ಆಂಗ್ಲ ಮಾಧ್ಯಮದಲ್ಲಿದ್ದು ರಾಜ್ಯ ಪಠ್ಯಕ್ರಮದಲ್ಲಿ ನಡೆಸಲಾಗುತ್ತಿದೆ. ಪ್ರಥಮ ಭಾಷೆ ಇಂಗ್ಲೀಷ್ ಆಗಿರುತ್ತದೆ.

2) ಶೈಕ್ಷಣಿಕವಾಗಿ ಹಿಂದುಳಿದ 62 ಬ್ಲಾಕುಗಳಲ್ಲಿ ಕೇಂದ್ರ ಪುರಸ್ಕೃತ "ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯ"

ಶೈಕ್ಷಣಿಕವಾಗಿ ಹಿಂದುಳಿದ 62 ಬ್ಲಾಕುಗಳಲ್ಲಿ 14 ರಿಂದ 18 ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗೆ ಪ್ರೌಢಶಾಲಾ ವಿದ್ಯಾಭ್ಯಾಸ ಮುಂದುವರೆಸುವ ಉದ್ದೇಶದಿಂದ ಪ್ರೌಢಶಾಲಾ ಹಂತದ ವಿದ್ಯಾರ್ಥಿನಿಯರಿಗೆ 2009–10ನೇ ಸಾಲಿನಲ್ಲಿ 62 ಬ್ಲಾಕ್‌ಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಯನ್ನು 2010–11ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗೆ ಒಳಪಡುವ ವಿದ್ಯಾರ್ಥಿನಿಯರೆಂದರೆ ಪ.ಜಾ/ಪ.ಪಂ/ಓ.ಬಿ.ಸಿ/

ಅಲ್ಪಸಂಖ್ಯಾತರು ಹಾಗೂ ಕೆ.ಜಿ.ಬಿ.ವಿಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ರೋಸ್ಟರ್ ನಿಯಮಾನುಸಾರ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ. ಈ ಯೋಜನೆಯ ಅನುಷ್ಠಾನದಿಂದ ಪ್ರೌಢಶಾಲಾ ಹಂತದಲ್ಲಿ ಶಾಲೆಯಿಂದ ಹೊರಗುಳಿಯುವ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. 2010–11ನೇ ಸಾಲಿನಲ್ಲಿ 1370 ವಿದ್ಯಾರ್ಥಿನಿಯರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಈ ವಸತಿ ನಿಲಯಗಳನ್ನು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಮೀಪದಲ್ಲಿ ಸುಮಾರು 42.50 ಲಕ್ಷ ರೂಗಳ ವೆಚ್ಚದಲ್ಲಿ ಶಾಶ್ವತ ಉತ್ತಮ ಸೌಲಭ್ಯಗಳನ್ನು ಒಳಗೊಂಡ ಕಟ್ಟಡ ನಿರ್ಮಿಸಲಾಗುತ್ತಿದೆ. ಈ ಯೋಜನೆಯಲ್ಲಿ 9 ರಿಂದ 12ನೇ ತರಗತಿಯ ವಿದ್ಯಾರ್ಥಿನಿಯರ ದಾಖಲಾತಿಗೆ ಎಂ.ಹೆಚ್.ಆರ್.ಡಿ.ಯ ನಿಯಮಾನುಸಾರ ಅವಕಾಶವಿರುತ್ತದೆ. ಈ ಯೋಜನೆಯ ಸದಾವಕಾಸವನ್ನು ಅಹ್ ಫಲಾನುಭವಿಗಳು ಪಡೆಯಬಹುದಾಗಿರುತ್ತದೆ.

## ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 9 ನೇ ತರಗತಿ ಓದುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹಕ ವಿದ್ಯಾರ್ಥಿ ವೇತನ.

ಈ ಯೋಜನೆಯು ಸಂಪೂರ್ಣ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು 2008–09ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯ ಫಲಾನುಭವಿಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತಾರೆ.

- 16 ವರ್ಷ ಮೇಲ್ಪಟಟು 9ನೇ ತರಗತಿಗೆ ದಾಖಲಾಗಿರಬಾರದು.
- 10ನೇ ತರಗತಿಯನ್ನು ಯಶಸ್ವಿಯಾಗಿ ಪೂರೈಸಿ, ವಿದ್ಯಾಭ್ಯಾಸವನ್ನು ಮುಂದುವರೆಸಿರಬೇಕು.
- 18 ವರ್ಷದೊಳಗೆ ವಿವಾಹವಾಗಿರಬಾರದು.
- 18 ವರ್ಷ ಪೂರ್ಣಗೊಂಡ ನಂತರ ಪ್ರೋತ್ಸಾಹಧನ ಪಡೆಯಲು ಅರ್ಹರಿರುತ್ತಾರೆ.

2008–09ನೇ ಸಾಲಿನಲ್ಲಿ 34 ಜಿಲ್ಲೆಗಳಿಂದ 73109 ವಿದ್ಯಾರ್ಥಿನಿಯರ ಪಟ್ಟಿಯನ್ನು ಪರಿಷ್ಕರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಕೇಂದ್ರ ಸರ್ಕಾರದಿಂಧ ಈಗಾಗಲೇ ವಿದ್ಯಾರ್ಥಿ ವೇತನಕ್ಕಾಗಿ ರೂ.24,35,70,000/– ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಎಸ್.ಬಿ.ಐ. ನವದೆಹಲಿ ಇಲ್ಲಿಗೆ ಕಳುಹಿಸಲಾಗಿದ್ದು, ಸಂಬಂಧಿಸಿದ ಬ್ಯಾಂಕಿನ ಮುಖಾಂತರ ವಿದ್ಯಾರ್ಥಿನಿಯರಿಗೆ ಎಫ್.ಡಿ.ಆರ್ ಅಥವಾ ಪಾಸ್ ಬುಕ್ ಮುಖಾಂತರ ಹಂಚಿಕೆಯಾಗಬೇಕಾಗಿರುತ್ತದೆ.

2009–10ನೇ ಸಾಲಿನ ಹೆಣ್ಣು ಮಕ್ಕಳ ಪ್ರೋತ್ಸಾಹಕ ವಿದ್ಯಾರ್ಥಿ ವೇತನಕ್ಕೆ 81,348 ವಿದ್ಯಾರ್ಥಿನಿಯರ ಪಟ್ಟಿಯನ್ನು ಪಡೆಯಲಾಗಿತ್ತು. ಅದರಲ್ಲಿ 16 ವರ್ಷ ಮೇಲ್ಪಟ್ಟು 9ನೇ ತರಗತಿಗೆ ದಾಖಲಾದವರ ಹೆಸರುಗಳನ್ನು ಕೈಬಿಟ್ಟು 81348 ಹೆಸರನ್ನು ಅಂತಿಮಗೊಳಿಸಿ ಸಾಫ್ಟ್ ಮತ್ತು ಹಾರ್ಡ್ ಕಾಪಿಯನ್ನು ಪ್ರಸ್ತಾವನೆಯೊಂದಿಗೆ ಎಂ.ಹೆಚ್.ಆರ್.ಡಿಗೆ ಸಲ್ಲಿಸಲಾಗಿದೆ.

2010–11ನೇ ಸಾಲಿನ ಹೆಣ್ಣು ಮಕ್ಕಳ ಪ್ರೋತ್ಸಾಹಕ ವಿದ್ಯಾರ್ಥಿ ವೇತನದ ಮಾಹಿತಿಯನ್ನು 34 ಜಿಲ್ಲೆಗಳಿಂದ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ.

## 2011–12 ನೇ ಸಾಲಿನ ಶಾಲೆಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು:

- ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರ್ತಿಸಿ ಅವಶ್ಯ ಸಂಪನ್ಮೂಲಗಳನ್ನು ಪಟ್ಟಿಮಾಡಿ ಯೋಜನೆಗೆ ಅಳವಡಿಸುವುದು.
- ಶಾಲೆಯಲ್ಲಿ ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್ ಕೊಠಡಿಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯೋಜನೆ ಸಿದ್ಧಪಡಿಸುವುದು.
- ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳ ಪಟ್ಟಿಯನ್ನು RMSA ಚೌಕಟ್ಟಿನ ಅನುಸಾರವಾಗಿ ಸಿದ್ಧಪಡಿಸಿ ವಾರ್ಷಿಕ ಯೋಜನೆಯಲ್ಲಿ ಸೇರಿಸಲು ಹಾಗೂ ಸಮುದಾಯದ ಭಾಗವಹಿಸುವಿಕೆಯ ಮೂಲಕ ಉತ್ತಮ ಪಡಿಸಲು ಯೋಜನೆ ಸಿದ್ಧಪಡಿಸುವುದು.
- ವಿಷಯವಾರು ಶಿಕ್ಷಕರ ಸೇವಾನಿರತ ತರಬೇತಿಯ ಅವಶ್ಯಕತೆಗಳನ್ನು ಗುರ್ತಿಸಿ ಅಗತ್ಯ ತರಬೇತಿ ದೊರಕುವಂತೆ ಕ್ರಮ ವಹಿಸುವುದು.
- ತಮ್ಮ ವ್ಯಾಪ್ತಿಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ 7ನೇ ತರಗತಿ ಮಕ್ಕಳು 8ನೇ ತರಗತಿಗೆ ದಾಖಲಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಯಾವುದಾದರು ಮಕ್ಕಳು ಶಾಲೆಗೆ ದಾಖಲಾಗದಿದ್ದಲ್ಲಿ ಅವರನ್ನು ಶಾಲೆಗೆ ದಾಖಲಿಸುವ ಹಾಗೂ ಅವರು ಶಿಕ್ಷಣವನ್ನು ಮುಂದುವರೆಸುವ ರೀತಿ ಕ್ರಮವಹಿಸುವುದು.
- 2010–11ನೇ ಸಾಲಿನಲ್ಲಿ ಗುರ್ತಿಸಿರುವ ಶಾಲೆಯಿಂದ ಹೊರಗುಳಿದಿರುವ 15 ಮತ್ತು 16ನೇ ವಯಸ್ಸಿನ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಕ್ರಮವಹಿಸುವುದು.
- RMSA Frame work ಅನುಸಾರವಾಗಿ ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳಿಗೆ ಪೂರಕ ನಿವೇಶನ ಲಭ್ಯವಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ Whole school planning ಪ್ರಕಾರ ನಿವೇಶನ ನಕ್ಷೆಯನ್ನು ಸಿದ್ಧಪಡಿಸುವುದು ಹಾಗೂ ಜಿಲ್ಲಾ ಕಛೇರಿಗೆ ನೀಡಿ ಸೌಲಭ್ಯ ಪಡೆಯಲು ಕ್ರಮ ವಹಿಸುವುದು.
- ಶಾಲೆಗೆ ಲಭ್ಯವಾಗುವ ಶಾಲಾ ಅನುದಾನ, ಸಣ್ಣಪ್ರಮಾಣದ ದುರಸ್ಥಿ ಅನುದಾನಗಳ ಬಳಕೆ ಬಗ್ಗೆ ಯೋಜನೆ ಸಿದ್ಧಪಡಿಸಿ ಅವಶ್ಯ ಅನುಮೋದನೆಗಳನ್ನು ಪಡೆದು ಅನುಷ್ಠಾನ ಪಡಿಸುವುದು.

# 7. ಸಮನ್ವಯ ಶಿಕ್ಷಣ

ಸಮನ್ವಯ ಶಿಕ್ಷಣವು ಎಲ್ಲಾ ಮಕ್ಕಳಿಗೂ ಅವರವರ ಅಗತ್ಯಗಳನ್ನು ಆಧರಿಸಿ ನೀಡುವ ಸಮಾನವಾದ ಶಿಕ್ಷಣವಾಗಿದೆ. ಇಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳೊಡನೆ ಸಮಾನ ಶೈಕ್ಷಣಿಕ ಅವಕಾಶ ಪಡೆಯುವಂತಹ ವಾತಾವರಣವಿರುತ್ತದೆ. ವಿಶೇಷ ಅಗತ್ಯವುಳ್ಳ ಶೈಕ್ಷಣಿಕ ಅಗತ್ಯಗಳನ್ನು ಸಾಮಾನ್ಯ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕ/ಶಿಕ್ಷಕಿಯರಿಂದಲೇ ಪೂರೈಸುವುದರ ಮೂಲಕ ಸರ್ವರಿಗೂ ಶಿಕ್ಷಣ ಅವಕಾಶ ನೀಡುವುದಾಗಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿ, 1990ರ ಲ್ಲಿ ಮಂಡಿಸಿದ 'ಸರ್ವರಿಗೂ ಶಿಕ್ಷಣ', 1995ರ ಅಂಗವಿಕಲ ವ್ಯಕ್ತಿಗಳ ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ವಿಕಾಸಕಾಯ್ದೆಯು: ಅಂಗವಿಕಲ ಮಕ್ಕಳು ಸಾಮಾನ್ಯ ಶಾಲೆಯಲ್ಲಿ ಶಿಕ್ಷಣ ಪಡೆಯುವ ಅವಕಾಶ ಹೊಂದಿ ಅಂತಹ ಮಕ್ಕಳು ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಜೀವನವನ್ನು ಎದುರಿಸಬೇಕು ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯಬೇಕು ಎಂದು ತಿಳಿಸುತ್ತದೆ.

### ಸಮನ್ವಯ ಶಿಕ್ಷಣದ ಉದ್ದೇಶಗಳು

- ವಿಶೇಷ ಅಗತ್ಯವುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಕಲಿಯಲು ಅವಕಾಶ ಕಲ್ಪಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಇತರ ಮಕ್ಕಳೊಂದಿಗೆ ಸಾಮಾಜಿಕ ಸಂಬಂಧ ಏರ್ಪಡಿಸುವುದು
- ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಹಾಗೂ ಇತರರಲ್ಲಿರುವ ಋಣಾತ್ಮಕ ಭಾವನೆ ಹೋಗಲಾಡಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಕಲಿಕಾ ಸಾಮಗ್ರಿಗಳು ಹಾಗೂ ಬೋಧಕರಿಗೆ ಬೋಧನಾ
- ಸಾಮಗ್ರಿಗಳನ್ನು ಒದಗಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಇರುವ ಅವರ ಹಕ್ಕುಗಳನ್ನು ಭದ್ರಪಡಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬಿ ಸ್ವಾವಲಂಬನ ಜೀವನಕ್ಕೆ ಅಣಿಗೊಳಿಸುವುದು.

### ದೋಷಗಳು ಮತ್ತು ಅವುಗಳ ವರ್ಗೀಕರಣ

1. ಶ್ರವಣ ದೋಷ(ಕೇಳಿಸಿಕೊಳ್ಳುವಲ್ಲಿ ತೊಂದರೆ)
2. ದೃಷ್ಟಿದೋಷ(ನೋಡಲು ತೊಂದರೆ)
3. ಬುದ್ಧಿ ದೋಷ(ಮಿತಿಯುಳ್ಳ ಬುದ್ಧಿಶಕ್ತಿ)
4. ಕಲಿಕಾದೋಷ(ಕಲಿಕೆಯಲ್ಲಿ ತೊಂದರೆ)
5. ದೈಹಿಕ ದೋಷ(ಚಲನೆಯಲ್ಲಿ ತೊಂದರೆ)

### 1. ಶ್ರವಣ ದೋಷ:

- ಕೇಳಿಸಿಕೊಳ್ಳುವ ಕ್ರಿಯೆಯಲ್ಲಿ ಆದ ಹಾನಿ.
- ಮಾತು ಮತ್ತು ಭಾಷಾ ಬೆಳವಣಿಗೆಯಲ್ಲಿ ತೊಂದರೆ

**ಶ್ರವಣ ದೋಷದಿಂದಾಗುವ ತೊಡಕುಗಳು**

- ಕೇಳಿಸಿಕೊಳ್ಳಲಾಗದ ಮತ್ತು ಮಾತನಾಡಲಾಗದ ಸ್ಥಿತಿ
- ಭಾಷಾ ಬೆಳವಣಿಗೆ ಕುಂಠಿತವಾಗುವುದು.
- ಮಾನಸಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿಯುವುದು.

**ಶ್ರವಣ ಶಕ್ತಿ ತೊಂದರೆಯಿರುವ ಮಕ್ಕಳನ್ನು ಶಿಕ್ಷಕರು ಗುರುತಿಸುವುದು.**

- ಕಿವಿ, ಮೂಗು, ಕಿವಿ ಸೋರುವಿಕೆಯಿಂದ ನರಳುತ್ತಿರುವುದು.
- ಮಾತನಾಡುವಾಗ ಕೆಲವು ಶಬ್ಧಗಳನ್ನು ಬಿಟ್ಟುಬಿಡುವುದು.
- ಪ್ರಶ್ನೆ ಕೇಳಿದಾಗ ಅರ್ಥವಾಗದೇ ಪದೇ ಪದೇ ಹೇಳುವಂತೆ ಕೇಳುವುದು.
- ಮಾತನಾಡುವಾಗ ಮುಖವನ್ನು ಗಮನಿಸುವುದು.
- ಅತಿ ಗಟ್ಟಿಯಾಗಿ ಅಥವಾ ಮೆಲ್ಲನೆ ಮಾತನಾಡುವುದು
- ಮಾತನಾಡುವ ಧ್ವನಿ ಎಲ್ಲಿಂದ ಬಂತು ಎಂದು ತಿಳಿಯದೆ ಸುತ್ತಮುತ್ತ ನೋಡುವುದು.

**ಶಿಕ್ಷಕರು ಗಮನಿಸಬೇಕಾದುದು:**

- ಪಾಠ ಮಾಡುವಾಗ ತರಗತಿಯ ಕಡೆ ಮುಖ ಮಾಡಿ ಮಾತನಾಡಿ ಕಪ್ಪು ಹಲಗೆಯ ಮೇಲೆ ಬರೆಯುವಾಗ ಮಾತನಾಡುವುದನ್ನು ತಪ್ಪಿಸಿ.
- ಆದಷ್ಟು ಬೆಳಕು ಶಿಕ್ಷಕರ ಮುಖದ ಮೇಲೆ ಬೀಳುವಂತೆ ನೋಡಿಕೊಳ್ಳಬೇಕು. ಇದರಿಂದ ಮಕ್ಕಳು ಶಿಕ್ಷಕರ ತುಟಿಗಳ ಚಲನೆ ಮತ್ತು ಮುಖಭಾವಗಳನ್ನು ಗಮನಿಸಲು ಅನುಕೂಲವಾಗುವುದು.
- ಕಿಟಕಿಗೆ ಬೆನ್ನು ಮಾಡಿಕೊಂಡು ನಿಲ್ಲುವುದಾಗಲೀ ಅಥವಾ ಯಾವುದೇ ಬೆಳಕು ಬರುವ ಜಾಗದಲ್ಲಿ ಅಡ್ಡವಾಗಿ ನಿಲ್ಲುವುದಾಗಲೀ ತಪ್ಪಿಸಿ.
- ಮಾತನಾಡುವಾಗ ಅತ್ತಿಂದತ್ತ ಸುತ್ತಾಡುತ್ತಾ ಮಾತನಾಡಬೇಡಿ. ಅಬ್ಬರಿಸಿ ಮಾತನಾಡಬೇಡಿ.

**2) ದೃಷ್ಟಿನಷ್ಟ ಅಥವಾ ದೃಷ್ಟಿಯಲ್ಲಿ ತೊಂದರೆ**

**ದೃಷ್ಟಿ ದೋಷ ಹೊಂದಿರುವ ಮಕ್ಕಳ ಲಕ್ಷಣಗಳು**

- ಕಣ್ಣುಗಳು ಕೆಂಪಾಗಿ ಕಣ್ಣೀರು ಬರುವುದು.
- ವಿಪರೀತವಾಗಿ ಕಣ್ಣನ್ನು ಉಜ್ಜುವುದು.
- ಒಂದು ಅಥವಾ ಎರಡೂ ಕಣ್ಣಿನ ಪಾಪೆ ಬೂದು ಅಥವಾ ಬೆಳ್ಳಗಿರುವುದು
- ರೂಢಿ ಇಲ್ಲದ ಸ್ಥಳಗಳಲ್ಲಿ ಎಡವುದು ಅಥವಾ ಬೀಳುವುದು
- ತಲೆಯನ್ನು ಒಂದು ಪಕ್ಕಕ್ಕೆ ಅಥವಾ ಮುಂದಕ್ಕೆ ಬಾಗಿಸುವುದು.
- ಕಣ್ಣನ್ನು ಪದೇ ಪದೇ ಮಿಟಿಕಿಸುವುದು.
- ವಸ್ತುಗಳನ್ನು ನೋಡುವಾಗ ಹುಬ್ಬು ಗಂಟಿಕ್ಕುವುದು ಅಥವಾ ಮೆಳ್ಳೆಗಣ್ಣು ಇರುವುದು.
- ಪುಸ್ತಕವನ್ನು ಹತ್ತಿರ ಮತ್ತು ದೂರ ಹಿಡಿದು ಓದುವುದು.
- ಕಪ್ಪುಹಲಗೆ ಸಮೀಪವೇ ಕುಳಿತುಕೊಳ್ಳುವುದು. ಕಾಣಿಸುವುದಿಲ್ಲ ಎಂದು ಹೇಳುವುದು.
- ದೂರದೃಷ್ಟಿ ದೋಷ ಹೊಂದಿರುವವರು ನಿರ್ದಿಷ್ಟ ವಿಷಯದತ್ತ ಕೇಂದ್ರೀಕರಿಸಿರುವುದಿಲ್ಲ.
- ಇರುಳುಗಣ್ಣಿನ ದೋಷ.

**ದೃಷ್ಟಿ ದೋಷವಿರುವ ಮಕ್ಕಳಿಗೆ ವಿಶೇಷ ಅಥವಾ ಅಧಿಕ ಪಠ್ಯಕ್ರಮ**

ದೃಷ್ಟಿ ದೋಷವುಳ್ಳ ಮಕ್ಕಳಿಗೆ ದೃಷ್ಟಿನಷ್ಟಕ್ಕೆ ಪರಿಹಾರವಾಗಿ ಕಲಿಸಬೇಕಾದ ಮೂಲಭೂತ ಕೌಶಲಗಳು. ಇವು ಸಾಮಾನ್ಯ ವಿದ್ಯಾಭ್ಯಾಸದ ಕೌಶಲಗಳನ್ನು ರೂಪಿಸಲು ಸಹಾಯವಾಗುತ್ತದೆ. ಈ ಕೌಶಲಗಳು ದೃಷ್ಠಿದೋಷವುಳ್ಳ ಮಕ್ಕಳಿಗೆ ಮಾತ್ರ ಬೇಕಾಗುತ್ತದೆ.

1. ಬ್ರೈಲ್ (ಓದಲು ಮತ್ತು ಬರೆಯಲು).
2. ಚಲನವಲನ ತರಬೇತಿ
3. ಅಬಾಕಸ್, ಟೇಲರ್ ಫ್ರೇಮ್ ಮತ್ತು ಬ್ರೈಲರ್‌ಗಳ ಬಳಕೆ

ಈ ವಿಶೇಷ ಪಠ್ಯಕ್ರಮವನ್ನು ಮಗುವಿಗೆ ವೈಯಕ್ತಿಕವಾಗಿ, ಸಂಪನ್ಮೂಲ ಕೊಠಡಿಯಲ್ಲಿ ಅಥವಾ ತರಗತಿ ಕೊಠಡಿಯ ಹೊರಗೆ ಸಂಪನ್ಮೂಲ ಶಿಕ್ಷಕ ಶಿಕ್ಷಕಿಯರು ಕಲಿಸಬೇಕಾಗುತ್ತದೆ.

**3. ಬುದ್ಧಿ ಮಾಂದ್ಯತೆ**

**ಬುದ್ಧಿ ಮಾಂದ್ಯ ಮಕ್ಕಳ ಲಕ್ಷಣಗಳು:**

- ಮಿತಿಯುಳ್ಳ ಬುದ್ಧಿಶಕ್ತಿ ಹೊಂದಿರುವುದು.
- ಜ್ಞಾಪಕ ಶಕ್ತಿ ಏಕಾಗ್ರತೆ ಶಕ್ತಿ ಕಡಿಮೆ
- ವಿಳಂಬವಾದ ಬೆಳವಣಿಗೆ.

**ತರಗತಿಯಲ್ಲಿ ಬುದ್ಧಿಮಾಂದ್ಯ ಮಕ್ಕಳ ನಿರ್ವಹಣೆ:**

- ಹೆಚ್ಚು ಮೂರ್ತ/ನೈಜ ವಸ್ತುಗಳನ್ನೇ ಉಪಯೋಗಿಸುವುದು.
- ವಿಷಯವನ್ನು ಸರಳತೆಯಿಂದ ಸಂಕೀರ್ಣದೆಡೆಗೆ ಕೊಂಡೊಯ್ಯಬೇಕು.
- ಸುಲಭದಿಂದ ಕಠಿಣದೆಡೆಗೆ.
- ಚಿಕ್ಕದರಿಂದ ದೊಡ್ಡದಕ್ಕೆ.
- ಚಟುವಟಿಕೆ ವಿಭಜನೆ–ಹಂತ ಹಂತವಾಗಿ ಬೋಧಿಸಬೇಕು.
- ಪ್ರಚೋದನೆ ನೀಡುವಂತಹ ಚಟುವಟಿಕೆಗಳನ್ನು ಉಪಯೋಗಿಸಬೇಕು.
- ಉತ್ತೇಜಕಗಳನ್ನು ಉಪಯೋಗಿಸಬೇಕು.
- ಮಗುವಿಗೆ ಕೊಡುವ ಚಟುವಟಿಕೆಗಳನ್ನು ಶಿಕ್ಷಕರೇ ಪೂರ್ಣವಾಗಿ ಮಾಡಬಾರದು. ಮಗುವಿಗೆ ಪೂರ್ಣಗೊಳಿಸಲು ಅವಕಾಶ ನೀಡಬೇಕು.

**ಮಗುವಿನ ಕಲಿಕೆಯ ಪ್ರಚೋದನೆಗಾಗಿ ಚಟುವಟಿಕೆಗಳು:**

- ನಿಯತಕಾಲಿಕವಾಗಿರಬೇಕು.
- ಪುನರಾವರ್ತನೆ ಮಾಡಬೇಕು. ಮಧ್ಯೆ ಮಧ್ಯೆ ವಿಶ್ರಾಂತಿಗೆ ಅವಕಾಶವಿರಬೇಕು.
- ಬೋಧನಾ ಮಾರ್ಗವು ಸಾಮ್ಯತೆಯಿಂದ ಕೂಡಿರಬೇಕು.

**4) ಕಲಿಕಾ ದೋಷ**

**ಕಲಿಕಾ ದೋಷವಿರುವ ಮಕ್ಕಳ ಲಕ್ಷಣಗಳು:**

- ಕಲಿಕಾ ದೋಷವುಳ್ಳ ಮಕ್ಕಳಿಗೆ ನಿರ್ದಿಷ್ಟ ಕಲಿಕಾ ಕ್ರಿಯೆಯಲ್ಲಿ ತೊಂದರೆಯಿರುತ್ತದೆ. ಉದಾ:ಓದು–ಬರಹ, ಕಾಗುಣಿತ, ಲೆಕ್ಕ ಇತ್ಯಾದಿ.
- ಇವರಿಗೆ ಸಮಯ, ದಿನ, ತಿಂಗಳು, ಋತು ಮತ್ತು ಮಗ್ಗಿಯನ್ನು ಕ್ರಮವಾಗಿ ಹೇಳುವಾಗ ತೊಂದರೆ.

- ಎಡ–ಬಲ, ಮುಂದೆ–ಹಿಂದೆ, ಮೇಲೆ–ಕೆಳಗೆ ಇವುಗಳ ಬಗ್ಗೆ ಗೊಂದಲ.
- ಸೂಚನೆಗಳನ್ನು ಪಾಲಿಸುವಂತೆ ಹೇಳಿದಾಗ ಮತ್ತೊಮ್ಮೆ ಹೇಳುವಂತೆ ಕೇಳುವುದು.
- ಶೈಕ್ಷಣಿಕ ವಿಷಯಗಳಲ್ಲಿ ತೊಂದರೆ ಕೆಲವೊಮ್ಮೆ ಒಂದು ವಿಷಯದಲ್ಲಿರಬಹುದು ಅಥವಾ ಎರಡು ಮೂರು ವಿಷಯಗಳಲ್ಲಿರಬಹುದು.
- ಏಕಾಗ್ರತೆ ಕಡಿಮೆ.

**ತರಗತಿಯಲ್ಲಿ ಕಲಿಕಾ ದೋಷವಿರುವ ಮಕ್ಕಳ ನಿರ್ವಹಣೆ:**

- ಕಲಿಕಾ ದೋಷವುಳ್ಳ ಮಕ್ಕಳನ್ನು ಕಲಿಕೆಯಲ್ಲಿ ಆಸಕ್ತಿ ಮೂಡಿಸಲು ಕಲಿಕೆಯ ಕ್ರಿಯೆಯಲ್ಲಿ ಚಟುವಟಿಕೆಯಿಂದ ಪಾಲ್ಗೊಳ್ಳವಂತೆ ಮಾಡಬೇಕು.
- ಕಲಿಕೆಯನ್ನು ಚಿಕ್ಕ ಭಾಗಗಳನ್ನಾಗಿ ಮಾಡಿ ಕಲಿಕೆಗೆ ಅವಕಾಶ ಮಾಡಿಕೊಡಬೇಕು.
- ಬಹು ಇಂದ್ರಿಯ ಕಲಿಕಾ ಅನುಭವಗಳನ್ನು ಒದಗಿಸುವುದು.
- ಸಮ ವಯಸ್ಕರ ಬೋಧನಾ ವಿಧಾನ ಅನುಸರಿಸುವುದು.

**5) ದೈಹಿಕ ದೋಷ**

- ಅಂಗಾಂಗ ಮತ್ತು ಮಾತಿನ ಬೆಳವಣಿಗೆ ಕುಂಠಿತವಾಗುವುದು.
- ಓಡಾಡಲು ತೊಂದರೆ.
- ಸ್ನಾಯುಗಳ ಬಿಗಿತ.
- ಅನೈಚ್ಛಿಕ ಚಲನೆಗಳು.
- ಅನಿಯಂತ್ರಿತ ಚಲನೆಗಳು.
- ಇವುಗಳಲ್ಲಿನ ಒಂದಕ್ಕಿಂತ ಹೆಚ್ಚ ಲಕ್ಷಣಗಳು ಒಟ್ಟಿಗೆ ಇರುವುದು.

**ದೈಹಿಕ ದೋಷವಿರುವ ಮಕ್ಕಳಿಗೆ ಸಾಮಾನ್ಯ ಶಿಕ್ಷಕ/ಶಿಕ್ಷಕಿಯರು ಮಾಡಬಹುದಾದ ಸಹಾಯ:**

- ಭೌತಿಕ ಪರಿಸರದಲ್ಲಿ ಹೊಂದಾಣಿಕೆ(ಇಳಿಜಾರು ಮಾರ್ಗಗಳು ಹಿಡಿಕಂಬಿಗಳು ಇತ್ಯಾದಿ).
- ಆಸನದ ವ್ಯವಸ್ಥೆ.
- ಶಾಲೆಯಲ್ಲಿ ಸ್ವತಂತ್ರರಾಗಿ ಓಡಾಡಲು ಸಾಧನೋಪಕರಣಗಳನ್ನು ಒದಗಿಸುವುದು.
- ಕ್ರೀಡೆ, ಚಿತ್ರಕಲೆಯಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಈ ಮಕ್ಕಳೂ ಪಾಲ್ಗೊಳ್ಳುವಂತೆ ಭೌತಿಕ ಪರಿಸರದಲ್ಲಿ ಹೊಂದಾಣಿಕೆ ಮಾಡುವುದು.
- ಚಿಕ್ಕವಯಸ್ಸಿನಲ್ಲಿ ಮಕ್ಕಳು ಬೇಗ ಬೆಳೆಯುವುದರಿಂದ ಸಾಧನೋಪಕರಣಗಳನ್ನು ಆಗಾಗ್ಗೆ ಬದಲಾಯಿಸುವಂತೆ ಶಿಕ್ಷಕ/ಶಿಕ್ಷಕಿಯರು ನೋಡಿಕೊಳ್ಳಬೇಕು.

# 8. ಕ್ರಿಯಾ ಸಂಶೋಧನೆ

ಶಿಕ್ಷಣದ ಪ್ರಮುಖ ಉದ್ದೇಶ ಮಗುವಿನ ಸರ್ವಾಂಗೀಣ ಬೆಳವಣಿಗೆ ಮತ್ತು ಉತ್ತಮ ರಾಷ್ಟ್ರ ನಿರ್ಮಾಣ, ಈ ಕಾರ್ಯದಲ್ಲಿ ನಿರತವಾಗಿರುವ ಶಿಕ್ಷಣ ಕ್ಷೇತ್ರ ಬಹಳ ವಿಶಾಲ ಹಾಗೂ ಸಂಕೀರ್ಣವಾದುದು. ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತವೆ. ದಿನನಿತ್ಯ ಎದುರಾಗುವ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಅಥವಾ ಬಗೆಹರಿಸದಿದ್ದರೆ, ಗುರಿ ತಲುಪುವಲ್ಲಿ ಸಮಸ್ಯೆಗಳು ಅಡ್ಡಿಯಾಗುತ್ತವೆ. ಸಮಸ್ಯೆಗಳನ್ನು ಬಗೆಹರಿಸಲು ಕಂಡುಕೊಂಡ ವಿಧಾನ ಸಂಶೋಧನಾ ವಿಧಾನ, ಸಂಶೋಧನೆಗಳಲ್ಲಿ ಹಲವು ವಿಧ. ಅವುಗಳಲ್ಲಿ ಒಂದು "ಕ್ರಿಯಾ ಸಂಶೋಧನೆ."

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು, ಮೇಲ್ವಿಚಾರಕರು, ಆಡಳಿತಗಾರರು ಮುಂತಾದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಒಂದು ಸೀಮಿತ ಚೌಕಟ್ಟಿನಲ್ಲಿ ಅಧ್ಯಯನ ನಡೆಸಿ ಸಮಸ್ಯೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ಕಂಡುಕೊಳ್ಳುವುದಕ್ಕೆ ಕ್ರಿಯಾತ್ಮಕ ಸಂಶೋಧನೆ ಎನ್ನುತ್ತೇವೆ.

**ಕ್ರಿಯಾ ಸಂಶೋಧನೆಯ ವ್ಯಾಪ್ತಿ:**

ಕ್ರಿಯಾ ಸಂಶೋಧನೆಯ ವ್ಯಾಪ್ತಿಯು ವಿಶಾಲವಾದುದಾಗಿದೆ. ಶಿಕ್ಷಕರು ದಿನ ನಿತ್ಯ ಕರ್ತವ್ಯವನ್ನು ನಿರ್ವಹಿಸುವಾಗ ಎದುರಾಗುವ ಯಾವುದೇ ರೀತಿಯ ಸಮಸ್ಯೆಗಳನ್ನು ಕ್ರಿಯಾ ಸಂಶೋಧನೆಯ ವ್ಯಾಪ್ತಿಯಲ್ಲಿ ಸೇರಿಸಬಹುದಾಗಿದೆ.

ಉದಾಹರಣೆಗೆ:

- ವಿದ್ಯಾರ್ಥಿಗಳ ಕಲಿಕೆ.
- ಶಿಕ್ಷಕರ ಬೋಧನೆ
- ಸಹಪಠ್ಯ ಚಟುವಟಿಕೆಗಳು
- ಪರೀಕ್ಷೆ ಮತ್ತು ಮೌಲ್ಯಮಾಪನ
- ಶಾಲಾ ಸಂಘಟನೆ
- ಶಾಲಾ ಆಡಳಿತ
- ವಿದ್ಯಾರ್ಥಿಗಳ ಆಸಕ್ತಿಗಳು ಮತ್ತು ಮನೋಭಾವ
- ವಿದ್ಯಾರ್ಥಿಗಳ ವರ್ತನೆ, ಇತ್ಯಾದಿ

**ಕ್ರಿಯಾ ಸಂಶೋಧನೆಯ ಉದ್ದೇಶಗಳು:**

- ಅಧ್ಯಾಪಕರ ಕರ್ತವ್ಯದ ವಿಷಯದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು.
- ಶೈಕ್ಷಣಿಕ ಕ್ಷೇತ್ರದಲ್ಲಿ ಅಪೇಕ್ಷಿತ ಬದಲಾವಣೆ ತರಲು ಸಹಾಯಕ.
- ಶೈಕ್ಷಣಿಕ ಕಾರ್ಯಕರ್ತರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು.

- ಶಿಕ್ಷಕರ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸಲು.
- ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಸಮರ್ಥಗೊಳಿಸಲು.
- ಶೈಕ್ಷಣಿಕ ಆಡಳಿತ, ತರಗತಿ ನಿರ್ವಹಣೆ, ಮೌಲ್ಯಮಾಪನ ಮುಂತಾದವುಗಳಲ್ಲಿ ಸುಧಾರಣೆಯನ್ನು ತರಲು

**ಕ್ರಿಯಾ ಸಂಶೋಧನೆಯ ಹಂತಗಳು:**

- ಕ್ರಿಯಾ ಸಂಶೋಧನೆಯ ಉದ್ದೇಶ ತರಗತಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರ ಕಂಡುಕೊಳ್ಳುವುದಾಗಿದೆ. ಕ್ರಿಯಾ ಸಂಶೋಧನೆಯಲ್ಲಿಯೂ ಕೂಡ ವೈಜ್ಞಾನಿಕ ಹಂತಗಳನ್ನು ಕ್ರಮ ಬದ್ಧವಾಗಿ ಅನುಸರಿಸಬೇಕಾಗುತ್ತದೆ.

**ಅವುಗಳೆಂದರೆ:**

- ಸಮಸ್ಯೆಯನ್ನು ಗುರುತಿಸುವುದು.
- ಸಮಸ್ಯೆಯನ್ನು ನಿರ್ಧಿಷ್ಟಗೊಳಿಸುವುದು.
- ಸಮಸ್ಯೆಗಳಿಗೆ ಕಾರಣಗಳನ್ನು ಪಟ್ಟಿ ಮಾಡುವುದು.
- ಪ್ರಾಕಲ್ಪನೆಗಳನ್ನು ರೂಪಿಸುವುದು.
- ಕ್ರಿಯಾಯೋಜನೆಯ ಅನುಷ್ಠಾನ
- ದತ್ತಾಂಶಗಳ ವಿಶ್ಲೇಷಣೆ.
- ತೀರ್ಮಾನ ಮತ್ತು ಅರ್ಥೈಸುವಿಕೆ.
- ಅನುಸರಣೆ/ಪರಿಹಾರ.

ಈ ಹಂತಗಳನ್ನು ಆಧರಿಸಿ ಶಿಕ್ಷಕ ತನ್ನ ಕಾರ್ಯದಲ್ಲಿ ಎದುರಾದ ತೊಡಕುಗಳನ್ನು ಸಮರ್ಥವಾಗಿ ಪರಿಹರಿಸಿಕೊಳ್ಳಬಹುದು. ತಾನು ಕಂಡುಕೊಂಡ ಪರಿಹಾರವನ್ನು ದಾಖಲಿಸಿದರೆ, ಅದು ಇತರರಿಗೆ ಮಾರ್ಗದರ್ಶನವಾಗಬಲ್ಲದು. ಆದುದರಿಂದ ಕ್ರಿಯಾ ಸಂಶೋಧನಾ ವರದಿಯನ್ನು ತಯಾರಿಸುವುದು ಅವಶ್ಯ.

**ವರದಿ ತಯಾರಿಕೆ**

**1. ಪೀಠಿಕಾ ಭಾಗ**

- ಮುಖಪುಟ
- ಮುನ್ನುಡಿ
- ಪರಿವಿಡಿ

**2. ವರದಿಯ ಮುಖ್ಯಭಾಗ**

- ಸಮಸ್ಯೆಯ ನಿರೂಪಣೆ
- ಅಧ್ಯಯನದ ಉದ್ದೇಶಗಳು
- ಕ್ರಿಯಾ ಪ್ರಾಕಲ್ಪನೆ

- ಅಧ್ಯಯನದ ವಿನ್ಯಾಸ
- ಸಂಶೋಧನಾ ಸಾಧನಗಳು/ದತ್ತಾಂಶಗಳ ಆಧಾರಗಳು
- ಮಾಹಿತಿ ಸಂಗ್ರಹಣೆಯ ತಂತ್ರಗಳು
- ದತ್ತಾಂಶಗಳ ವರ್ಗೀಕರಣ ಮತ್ತು ವಿಶ್ಲೇಷಣೆ
- ನಕಾಶೆಗಳ ವ್ಯಾಖ್ಯಾನ
- ಉಪಸಂಹಾರ
- ಫಲಿತಾಂಶಗಳು
- ಮುಖ್ಯ ಪರಿಹಾರಗಳು

### 3. ಉಲ್ಲೇಖ ಭಾಗ

- ಗ್ರಂಥ ಋಣ

ಕ್ರಿಯಾ ಸಂಶೋಧನೆ ನಿರಂತರ ಪ್ರಕ್ರಿಯೆ. ಏಕೆಂದರೆ ಪರಿವರ್ತನೆ ಮತ್ತು ವಿಕಾಸಗಳಿಗೆ ಅಂತ್ಯವೇ ಇಲ್ಲ. ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲರೂ ತಮ್ಮ ತಮ್ಮ ಕ್ಷೇತ್ರದ ಸಮಸ್ಯಾ ನಿವಾರಣೆಗಾಗಿ ಕ್ರಿಯಾ ಸಂಶೋಧನೆಗಳನ್ನು ಕೈಗೊಳ್ಳಬೇಕಾಗಿದೆ.

**ಕೈಗೊಳ್ಳಬೇಕಾದ ಚಟುವಟಿಕೆಗಳು:**

- ಮಾರ್ಗದರ್ಶನ ಅಗತ್ಯವಿದ್ದರೆ ಡಯಟ್ ಸಂಸ್ಥೆಗಳನ್ನು ಸಂಪರ್ಕಿಸಿ
- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಅಧ್ಯಾಪಕರು ಒಂದಾದರೂ ಕ್ರಿಯಾ ಸಂಶೋಧನೆ ಮಾಡಿ ಶಾಲಾ ಹಂತದಲ್ಲಿ ಎಲ್ಲಾ ಅಧ್ಯಾಪಕರೊಂದಿಗೆ ತಮ್ಮ ಅನುಭವ ಹಂಚಿಕೊಳ್ಳಬೇಕು.
- ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ನಡೆಯುವ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಪ್ರಕಟಣೆಗಳಿಗೆ ಲೇಖನ ಬರೆಯುವ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಕ್ರಮ ಮಾಡಿ. ಈ ಕುರಿತು ನಿಕಟ ಮೇಲಧಿಕಾರಿಗಳನ್ನು ಸಂಪರ್ಕಿಸಿ.

# 9. ಶಾಲಾ ಶೈಕ್ಷಣಿಕ ಯೋಜನೆ

ರಾಜ್ಯದಲ್ಲಿ ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇವುಗಳ ಮುಖ್ಯ ಉದ್ದೇಶ, "ಶಾಲಾ ವಯಸ್ಸಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಾಲೆಗೆ ದಾಖಲಾಗಬೇಕು, ಶಾಲೆಗೆ ನಿಯಮಿತವಾಗಿ ಹಾಜರಿರಬೇಕು ಮತ್ತು ತೃಪ್ತಿಕರ ಕಲಿಕೆಯನ್ನು ಪಡೆಯಬೇಕು" ಎಂಬುದೇ ಆಗಿದೆ. ಆದರೆ ಬಹಳಷ್ಟು ಕಾರ್ಯಕ್ರಮಗಳು ಕೇವಲ ಆರ್ಥಿಕ ಮತ್ತು ಭೌತಿಕ ಅಂಶಗಳು ಹಾಗೂ ಅವುಗಳ ಪ್ರಗತಿಯ ಕಡೆಗೇ ಪ್ರಾಮುಖ್ಯತೆ ಕೊಡುವ ಕಾರಣ, ಶೈಕ್ಷಣಿಕ ಪ್ರಗತಿಯ ಕಡೆ ಹೆಚ್ಚು ಗಮನ ಹರಿಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಶಾಲಾ ಹಂತದಲ್ಲಿ ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಅಭಿವೃದ್ಧಿಗಾಗಿ ಯೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಉದ್ದೇಶದಿಂದ 2008-09ರಿಂದ ಶಾಲಾ ಶೈಕ್ಷಣಿಕ ಯೋಜನೆಯನ್ನು ಜಾರಿಗೆ ತರಲಾಗಿದೆ.

### ಅ) 2008–09 ನೇ ಸಾಲಿನಲ್ಲಿ ನೀಡಿರುವ ಶಾಲಾ ಶೈಕ್ಷಣಿಕ ಯೋಜನೆ ನಮೂನೆಗಳು:

ಶಾಲಾ ಶೈಕ್ಷಣಿಕ ಯೋಜನೆಯಲ್ಲಿ ಹಲವು ನಮೂನೆಗಳಿವೆ. ಅವುಗಳ ಉದ್ದೇಶ ಈ ಕೆಳಕಂಡಂತಿದೆ.

#### ನಮೂನೆ 1 : ಶಾಲೆಯ ಸಾಮಾನ್ಯ ಮಾಹಿತಿ

ಇದರಲ್ಲಿ ಶಾಲೆಯ ಮಾದರಿ, ಭೌತಿಕ ಸವಲತ್ತು ಹಾಗೂ ಕಲಿಕೋಪಕರಣಗಳ ಮಾಹಿತಿ ಭರ್ತಿ ಮಾಡಬಹುದಾಗಿದ್ದು, ಇದರಿಂದ ಶಾಲೆಯ ಸ್ಥಿತಿಯ ಬಗ್ಗೆ ಪೂರ್ಣ ಮಾಹಿತಿ ದೊರೆಯುತ್ತದೆ.

#### ನಮೂನೆ 2 ಎ ಮತ್ತು ಬಿ: ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಮಾಹಿತಿ:

ಈ ನಮೂನೆಯ ಸಹಾಯದಿಂದ ಶಾಲೆಯಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರು ಮತ್ತು ಅವರ ವಿದ್ಯಾರ್ಹತೆ, ಸೇವೆ ಹಾಗೂ ಪಡೆದ ತರಬೇತಿಗಳ ಮಾಹಿತಿ ದೊರಕುವುದರಿಂದ ಶಿಕ್ಷಕರ ಸಂಪೂರ್ಣ ಮಾಹಿತಿ ಸಿಗುತ್ತದೆ.

#### ನಮೂನೆ 3 : ಅತೀ ಅಗತ್ಯ/ಬುನಾದಿ ಸಾಮರ್ಥ್ಯ/ಕಲಿಕಾಂಶಗಳ ಪಟ್ಟಿ:

ಈ ನಮೂನೆಯಲ್ಲಿ 1ನೇ ತರಗತಿಯಿಂದ 9ನೇ ತರಗತಿಯ ವರೆಗೆ ಅತೀ ಅಗತ್ಯ/ಬುನಾದಿ ವಿಷಯವಾರು ಪಟ್ಟಿಮಾಡಿ ಸಾಮರ್ಥ್ಯ/ಕಲಿಕಾಂಶಗಳನ್ನು ಒದಗಿಸಲಾಗಿದೆ. ಇವುಗಳ ಸಹಾಯದಿಂದ ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಯು ಕಲಿತಿರಬೇಕಾದ ಕಲಿಕಾಂಶಗಳನ್ನು ಗುರುತಿಸುವುದರೊಂದಿಗೆ ಅವುಗಳು ಪ್ರತಿ ವಿದ್ಯಾರ್ಥಿಯಲ್ಲಿ ಎಷ್ಟರ ಮಟ್ಟಿಗೆ ಕಲಿಕೆಯಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತದೆ.

## ನಮೂನೆ 4ಎ ಮತ್ತು ಬಿ: ನೈದಾನಿಕ ಪರೀಕ್ಷೆ ಮತ್ತು ಸೇತುಬಂಧ ಕಾರ್ಯದ ಪ್ರಗತಿಯ ದಾಖಲೆ:

ಈ ನಮೂನೆಯ ಸಹಾಯದಿಂದ ಮೊದಲ ಹಂತದ ನೈದಾನಿಕ ಪರೀಕ್ಷೆಯಲ್ಲಿ ಯಾವ ವಿದ್ಯಾರ್ಥಿ ಯಾವ ವಿಷಯದ ಯಾವ ಸಾಮರ್ಥ್ಯ/ಕಲಿಕಾಂಶದಲ್ಲಿ ಕಲಿಕೆ ಸಾಧಿಸಿದ್ದಾನೆ ಅಥವಾ ಇಲ್ಲ ಎಂಬ ಮಾಹಿತಿಯನ್ನು ದಾಖಲಿಸಬಹುದಾಗಿದೆ. ಅಲ್ಲದೆ ನಂತರದ ಸೇತುಬಂಧ ಕಾರ್ಯದಲ್ಲಿನ ಪ್ರಗತಿಯನ್ನು ಸಹ ದಾಖಲಿಸಿ ಎರಡರ ನಡುವಿನ ವ್ಯತ್ಯಾಸ ಅಥವಾ ಸಾಧನೆಯನ್ನು ಗಮನಿಸಬಹುದಾಗಿದೆ. ಅಂತ್ಯದಲ್ಲಿ ಯಾವ ವಿದ್ಯಾರ್ಥಿಗೆ ಯಾವ ವಿಷಯದಲ್ಲಿ ಯಾವ ಸಾಮರ್ಥ್ಯಕ್ಕೆ ಹೆಚ್ಚಿನ ಗಮನಹರಿಸಬೇಕು, ವಿಶೇಷ ತರಗತಿ ನಡೆಸಬೇಕು ಎಂದು ಗುರುತಿಸಬಹುದಾಗಿದೆ.

## ನಮೂನೆ 5ಎ ಮತ್ತು ಬಿ: ಪರಿಹಾರಬೋಧನೆ/ವಿಶೇಷ ತರಗತಿಗೆ ಒಳಪಡುವ ಮಕ್ಕಳ ವಿವರ ಹಾಗೂ ಕಾರ್ಯಯೋಜನೆ:

ಈ ನಮೂನೆಯಲ್ಲಿ ಪ್ರತಿ ವಿದ್ಯಾರ್ಥಿಯ ಹೆಸರು, ಕಲಿಕೆಯಲ್ಲಿ ಹಿಂದುಳಿದಿರುವ ವಿಷಯ ಹಾಗೂ ಕಲಿಕಾಂಶವನ್ನು ಗುರುತಿಸುವುದರೊಂದಿಗೆ ಅದನ್ನು ಕಲಿಸಲು ಬಳಸುವ ಚಟುವಟಿಕೆಯ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಯ ಸಾಧನೆಯನ್ನು ನಮೂದಿಸಬಹುದಾಗಿದೆ. ಇದರ ಸಹಾಯದಿಂದ ಶಿಕ್ಷಕರು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ರೂಪಿಸಲು ಹಾಗೂ ಪ್ರತಿ ವಿದ್ಯಾರ್ಥಿಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾತ್ರವಲ್ಲದೆ ಶಿಕ್ಷಕರು ತಾವು ಯೋಜಿಸಿರುವ ಕ್ರಮ ಸೂಕ್ತವೆ? ಅಲ್ಲವೆ? ಎಂದು ತಿಳಿಯಲು ಹಾಗೂ ಬದಲಾವಣೆ ಮಾಡಿಕೊಳ್ಳಲು ಅವಕಾಶ ಒದಗುತ್ತದೆ.

## ನಮೂನೆ 6: ಸಹಪಠ್ಯ ಚಟುವಟಿಕೆಗಳ ಕ್ರಿಯಾಯೋಜನೆ.

ಕೇವಲ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಮಾತ್ರ ಪರಿಗಣಿಸದೆ, ಅವರ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿಯಾಗುವ ಸಹಪಠ್ಯ ಚಟುವಟಿಕೆಗಳನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಹಮ್ಮಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಈ ನಮೂನೆಯನ್ನು ಸಿದ್ಧಪಡಿಸಲಾಗಿದೆ.

ಈ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ, ಗುಂಪು ಚಟುವಟಿಕೆ, ನಾಯಕತ್ವ, ಸಹಕಾರ ಮನೋಭಾವನೆ ಬೆಳೆಯುವುದಲ್ಲದೆ, ಓದುವ ಹವ್ಯಾಸ ಸಹ ಮೂಡಲು ಸಾಧ್ಯವಾಗುತ್ತದೆ. ಇವುಗಳ ಮೂಲಕ ಪರೋಕ್ಷವಾಗಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಬಹುದು.

ಶಾಲಾ ಶೈಕ್ಷಣಿಕ ಯೋಜನೆಯನ್ನುಮೇಲೆ ತಿಳಿಸಿದ ಬುನಾದಿ ಸಾಮರ್ಥ್ಯಗಳ ಗಳಿಸುವಿಕೆಗೆ ಮತ್ತು ಸಹಪಠ್ಯ ಚಟುವಟಿಕೆಗಳ ಆಯೋಜನೆಯ ವ್ಯಾಪ್ತಿಯಾಚೆಗೂ ಈ ಬಾರಿ ವಿಸ್ತರಿಸೋಣ. ಶಾಲಾ ಶೈಕ್ಷಣಿಕ ಯೋಜನೆಯ ಹರವು

ವಿದ್ಯಾರ್ಥಿಗಳ ಕಲಿಕೆಯ ಅಭಿವೃದ್ಧಿಯನ್ನು ಕೇಂದ್ರವಾಗಿರಿಸಿಕೊಂಡಿರುವ ಕಾರಣ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಮುಖ್ಯೋಪಾಧ್ಯಾಯರು ಸಹ ಅಧ್ಯಾಪಕರ ನೆರವಿನಿಂದ ಹಮ್ಮಿಕೊಳ್ಳುವುದು.

### ಆ) ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಲು ಕಾರ್ಯಕ್ರಮ.

- ✓ ಅಧ್ಯಾಯ 15ರಲ್ಲಿ ಶಾಲಾ ಸಂಘಗಳ ಅಡಿಯಲ್ಲಿ ಅನೇಕ ಸಂಘಗಳ ಚಟುವಟಿಕೆಯನ್ನು ಪ್ರಸ್ತಾಪಿಸಿದೆ. ಇಲ್ಲಿನ ಚಟುವಟಿಕೆಗಳು ಪರೋಕ್ಷವಾಗಿ ನಾಯಕತ್ವ ಗುಣವನ್ನು ಆಯಾ ಕ್ಷೇತ್ರದಲ್ಲಿ ಬೆಳೆಸಲು ಸಹಕಾರಿಯಾಗಿವೆ. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಈ ಚಟುವಟಿಕೆಗಳನ್ನು ನಿರ್ವಹಿಸಲು ವಿವಿಧ ಸಂಘಗಳಿಗೆ ಅಧ್ಯಾಪಕರು ಸಲಹೆಗಾರರು/ಸಂಚಾಲಕರಾಗಿರುವಂತೆ ವ್ಯವಸ್ಥೆಗೊಳಿಸುವುದು.

  ಪ್ರತಿ ಸಂಘದ ಸಲಹೆಗಾರರು/ಸಂಚಾಲಕರು ತಮ್ಮ ವ್ಯಾಪ್ತಿಯ ಸಂಘದ ಕಾರ್ಯಯೋಜನೆಯನ್ನು ಮುಖ್ಯೋಪಾಧ್ಯಾಯರಿಗೆ ನೀಡುತ್ತಾರೆ. ಈ ಯೋಜನೆಯಂತೆ ಮಾಸಿಕ ಸಭೆಯಲ್ಲಿ ಪ್ರಗತಿ ಪರಿಶೀಲಿಸಿ ಮುಖ್ಯೋಪಾಧ್ಯಾಯರು ಹಿಮ್ಮಾಹಿತಿ (feed back) ನೀಡುವುದು.

- ✓ NCC ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ ಘಟಕಗಳ ಸ್ಥಾಪನೆ ಮಾಡುವುದು. ಪ್ರತಿ ಶಾಲೆಯು ಇಂತಹ ಒಂದೊಂದು ಘಟಕವನ್ನು ತೆರೆದು ಚಟುವಟಿಕೆಗಳನ್ನು ಆರಂಭಿಸುವುದು. ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು ಸವಾಲೆನಿಸುವ ಕೆಲಸಗಳನ್ನು ಕೈಗೊಳ್ಳಲು ಮುಂದಾಗುವುದು ಸ್ವಾಭಾವಿಕ. ಈ ಪ್ರಚನ್ನ ಶಕ್ತಿ ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ಮಾಡಲು ಮೇಲೆ ಸೂಚಿಸಿದ ಮತ್ತು ಸಂವಾದಿಯಾದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಶಾಲೆ ಮಾಡಬೇಕಾಗಿದೆ.

- ✓ ವೇಗದ ಯುಗದಲ್ಲಿ ವಿಕಸಿಸುತ್ತಿರುವ ಇಂದಿನ ತಲೆಮಾರಿಗೆ ಸ್ಥಳೀಯ ಸಂಗತಿಗಳ ಕುರಿತು, ಅಲ್ಲಿನ ವಿಶೇಷತೆಗಳ ಕುರಿತು ಇರುವ ಜ್ಞಾನ ಅತ್ಯಲ್ಪ. ಈ ಕೊರತೆಯನ್ನು ಸ್ವಲ್ಪವಾದರೂ ತಗ್ಗಿಸಲು ಯೋಜನಾ ಕಾರ್ಯವನ್ನು ವ್ಯವಸ್ಥಿತವಾಗಿ ದುಡಿಸಿಕೊಳ್ಳಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

  ಗತಿಸಿದ ಸ್ಥಳೀಯ ಸ್ವಾತಂತ್ರ ಹೋರಾಟಗಾರರೂ, ಕಲಿಗಳೂ, ಸಾಹಸಿಗರು–ಇಂತಹ ವ್ಯಕ್ತಿಗಳ ಕುರಿತು ಮಾಹಿತಿ ಸಂಗ್ರಹಿಸಿ ವರದಿ ಮಾಡಲು ವಿದ್ಯಾರ್ಥಿಗಳ ಗುಂಪಿಗೆ ಯೋಜನಾ ಕಾರ್ಯವನ್ನು ನೀಡಬಹುದು.

- ✓ ಚಾರಣ, ಸಾಹಸ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ವಿದ್ಯಾರ್ಥಿಗಳನ್ನು ತೊಡಗಿಸಬಹುದು.

### ಇ) ವಿದ್ಯಾರ್ಥಿಗಳಲ್ಲಿ ಧನಾತ್ಮಕ ಚಿಂತನೆ ಬೆಳೆಸಲು ಕಾರ್ಯಕ್ರಮಗಳು.

ಬದುಕನ್ನು ಧೈರ್ಯದಿಂದ ಎದುರಿಸುತ್ತೇನೆ ಎಂಬ ಭಾವವನ್ನು ಕೌಮಾರ್ಯ ಅವಧಿಯಲ್ಲಿ ಸಾಗುತ್ತಿರುವ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ನೀಡಬೇಕಾದ ಅನಿವಾರ್ಯತೆ ಇಂದು ಹೆಚ್ಚಾಗಿದೆ. ಇದಕ್ಕೆ ಕಾರಣ ವಿಭಕ್ತ ಕುಟುಂಬ, ವೇಗದ ಜೀವನ, ಪೋಷಕರಿಗೆ ದೊರೆಯುವ ಅಲ್ಪ ವಿರಾಮ,ಅತಿ ಮುದ್ದು (ಇವುಗಳಗೆ ಅಪವಾದಗಳೂ ಇರಬಹುದು) ಇತ್ಯಾದಿ. ಸರಿಯಾದ ಮಾರ್ಗದರ್ಶನ ಅನೇಕ ಮಕ್ಕಳಿಗೆ ದೊರೆಯುತ್ತಿಲ್ಲ. ಶಾಲಾ ಪಠ್ಯಕ್ರಮ ಇಂತಹ ಸಂಗತಿಗಳ ಕುರಿತು ಗಮನಹರಿಸಲು ಕ್ರಮಕೈಗೊಳ್ಳಬೇಕಾಗುತ್ತದೆ – ವ್ಯವಸ್ಥಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

- ✓ ದೈಹಿಕ ಶಿಕ್ಷಕರ ನೆರವಿನಿಂದ ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಬೆಳಗಿನ ಅವಧಿಯಲ್ಲಿ ನಿರಂತರವಾಗಿ 20 ನಿಮಿಷಗಳವರೆಗೆ ಸರಳ ಯೋಗಾಸನ ಮತ್ತು ಪ್ರಾಣಾಯಾಮವನ್ನು ಮಾಡುವಂತೆ ನಿಗಾ ವಹಿಸಲು ಕಾರ್ಯಕ್ರಮ ಯೋಜಿಸುವುದು.
- ✓ ತರಗತಿ ವೇಳೆಯಲ್ಲಿ – ವಿದ್ಯಾರ್ಥಿಗಳು ಕುಳಿತಲ್ಲೇ ಕೆಲವು ಸರಳ ಪ್ರಾಣಾಯಾಮದ ಕ್ರಮಗಳನ್ನು ಅನುಸರಿಸಲು ಎಲ್ಲಾ ಶಿಕ್ಷಕರು ಕ್ರಮ ಮಾಡುವಂತೆ ಸೂಚಿಸುವುದು. ಈ ಚಟುವಟಿಕೆ ಪ್ರತಿ ಪೀರಿಯಡ್ ಅಥವ ಪ್ರತಿ 02 ಪೀರಿಯಡ್ ಅವಧಿಯಲ್ಲಿ ಒಂದೂವರೆ ನಿಮಿಷ ಮೀರಕೂಡದು. (ಧೀರ್ಘ ಉಸಿರಾಟ, ಭ್ರಮರಿ, ಶೀಥಲಿ, ನಾಡಿಶೋಧನ, ಸೂರ್ಯಬೋಧನ, ಚಂದ್ರಬೋಧನ, ಸೂರ್ಯಾನುಲೋಮ, ಚಂದ್ರಾನುಲೋಮ ಇತ್ಯಾದಿ)
- ✓ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ಭಾಷಣ ಮತ್ತು ಕೌನ್ಸಿಲಿಂಗ್ ಕಾರ್ಯಕ್ರಮ ಏರ್ಪಡಿಸುವುದು.
- ✓ ಲಿಂಗ/ಜಾತಿ/ಧರ್ಮ/ವರ್ಣ/ದೈಹಿಕ/ ಇತ್ಯಾದಿ ವಿಭಿನ್ನತೆಯನ್ನು ಆಧರಿಸಿ ವಿದ್ಯಾರ್ಥಿಗೆ ಘಾಸಿಯಾಗದಂತೆ ನಡೆದುಕೊಳ್ಳುವೆ ಎಂದು ಪ್ರತಿ ಅಧ್ಯಾಪಕರು ಭಾವಿಸುವುದು. ಹಾಗೆಯೇ ವಿದ್ಯಾರ್ಥಿಗಳೊಂದಿಗೆ ನಡೆದುಕೊಳ್ಳುವುದು. ಈ ಅಂಶವನ್ನು ಶಾಲಾ ಮುಖ್ಯಸ್ಥರು ಅಧ್ಯಾಪಕರಿಗೆ ಆಗಾಗ್ಗೆ ನೆನಪಿಸುವುದು ಮತ್ತು ಅಂತಹ ಪ್ರಸಂಗಗಳು ಎದುರಾದಲ್ಲಿ ಪ್ರತಿ ಮಾಹೆಯ ಸಭೆಯಲ್ಲಿ ಚರ್ಚಿಸಿ ಹಿಮ್ಮಾಹಿತಿ ನೀಡತಕ್ಕದ್ದು.

**ಈ) ಪೂರಕ ಬೋಧನೆ:**

ಹಲವಾರು ಮಕ್ಕಳು ಕಲಿಕೆಯ ಪ್ರಾಥಮಿಕ ಕೌಶಲ್ಯಗಳನ್ನು ಸಮರ್ಥವಾಗಿ ರೂಢಿಸಿಕೊಂಡಿಲ್ಲದಿರುವುದು ಪ್ರೌಢಶಾಲಾ ಹಂತದಲ್ಲಿ ಕಾಣಸಿಗುತ್ತವೆ. ಇವುಗಳ ಸಂಖ್ಯೆ ವಿರಳ. ಆದಾಗ್ಯೂ ಇಂತಹ ವಿದ್ಯಾರ್ಥಿಗಳು ಕೂಡಾ ಇತರ ವಿದ್ಯಾರ್ಥಿಗಳೊಂದಿಗೆ ಹೊಯ್‌ಕೈಯ್ಯಾಗಿ ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡಬೇಕಾಗಿದೆ.

ಹಿಂದೆ ತಿಳಿಸಿದ ಶೈಕ್ಷಣಿಕ ಯೋಜನೆಯಲ್ಲಿ ಬುನಾದಿ ಸಾಮರ್ಥ್ಯಗಳನ್ನು ಕುರಿತು ತಿಳಿಸಲಾಗಿದೆ. ಈಗ ಪ್ರಸ್ತಾಪಿಸುತ್ತಿರುವ ವಿದ್ಯಾರ್ಥಿಗಳು ಈ ಮಟ್ಟಕ್ಕಿಂತ ಕಡಿಮೆ ಇರುತ್ತಾರೆ. ಇವರಿಗಾಗಿ ಓದು–ಬರಹ–ಲೆಕ್ಕ ಕುರಿತಂತೆ ಭಾಷೆ ಮತ್ತು ಗಣಿತ ಶಿಕ್ಷಕರು ವಿಶೇಷ ಅಸ್ಥೆ ವಹಿಸಬೇಕಾದ ಅಗತ್ಯವಿದೆ. ಇಂತಹ ಮಕ್ಕಳಿಗೆ 50 ರಿಂದ 60 ದಿನಗಳವರೆಗೆ ವರ್ಷದ ಪ್ರಾರಂಭದಲ್ಲಿ ವಿಶೇಷ ತರಗತಿಗಳನ್ನು ನಡೆಸುವುದು. ಅಂತಹ ಮಕ್ಕಳು ಶಾಲೆಯಲ್ಲಿ ಇದ್ದಲ್ಲಿ ಒಂದು ಕಾರ್ಯಯೋಜನೆ ರೂಪಿಸಿ ಅನುಷ್ಠಾನ ಮಾಡುವುದು.

**ಉ) SSLC ಪರೀಕ್ಷೆ ಫಲಿತಾಂಶ ಹೆಚ್ಚಳಕ್ಕೆ ಕಾರ್ಯಕ್ರಮ:** ಶಿಕ್ಷಣದ ಮೇಲಿನ ಹೂಡಿಕೆ (Investment) ಶಿಕ್ಷಣ ಪ್ರಕ್ರಿಯೆಯ ಫಲಿತಾಂಶವನ್ನು ಅದು ಉತ್ತಮವೂ ಇರಬೇಕೆಂದು ಆಶಿಸುತ್ತದೆ. ಪರೀಕ್ಷೆಯ ಭಯ, ಪರೀಕ್ಷೆಯಲ್ಲಿ ಹೇಗೆ ಉತ್ತರಿಸಬೇಕು ಎಂಬ ಅನುಭವದ ಕೊರತೆ ಹಲವು ವಿದ್ಯಾರ್ಥಿಗಳನ್ನು ಕಾಡುತ್ತದೆ. ಇದಕ್ಕಾಗಿ ಜಿಲ್ಲೆಯ ಉಪನಿರ್ದೇಶಕರು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ನಾಲ್ಕೈದು ಜಿಲ್ಲೆಯ ಉಪನಿರ್ದೇಶಕರು ಈ ನಿಟ್ಟಿನಲ್ಲಿ ಸ್ತುತ್ಯಕಾರ್ಯವನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಯವರು ತಾವು ಮಾಡಿದ ಕಾರ್ಯ ಯೋಜನೆಯನ್ನು ಇತರ DDPI ಗಳೊಂದಿಗೆ ಹಂಚಿಕೊಳ್ಳಬೇಕೆಂದು ಸೂಚಿಸಿದೆ.

- ✓ DDPI/BEO ಗಳು ಒಂದು ಕಾರ್ಯಯೋಜನೆಯನ್ನು ರೂಪಿಸಿ ಮುಖ್ಯೋಪಾಧ್ಯಾಯರೊಂದಿಗೆ ಹಂಚಿಕೊಳ್ಳುವುದು ಹಾಗೂ ಅದನ್ನು ಅನುಪಾಲನೆ ಮಾಡುವುದು. ಶಾಲಾ ಹಂತದಲ್ಲಿ–ಈ ನಿಟ್ಟಿನಲ್ಲಿ–ಗುಂಪು ಚಟುವಟಿಕೆ; ಸಂವಾದ, ಸಂದರ್ಶನ, ಕ್ವಿಜ್, ಸೆಮಿನಾರ್, ಗುಂಪು ಬೋಧನೆ, ಗಳಂತಹ ಕಲಿಕೆ–ಬೋಧನಾ

ವಿಧಾನಗಳನ್ನು ಅಳವಡಿಸಿಕೊಳ್ಳುವುದು. ಘಟಕ ಪರೀಕ್ಷೆ–ಪರಿಹಾರ ಬೋಧನೆಯನ್ನು ವ್ಯವಸ್ಥಿತವಾಗಿ ನಡೆಸುವುದು. ಪರೀಕ್ಷೆ ಪ್ರಾರಂಭವಾಗುವ ಮುನ್ನ ಪೂರ್ವ ತಯಾರಿ ಪರೀಕ್ಷೆಗಳನ್ನು ನಡೆಸುವುದು.

ಈ ನೇರದಲ್ಲಿ ಪ್ರತಿ ಶಾಲೆಯವರು ಒಂದು ಶೈಕ್ಷಣಿಕ ಯೋಜನೆಯನ್ನು ರೂಪಿಸಿಕೊಂಡು– ಅನುಷ್ಠಾನಗೊಳಿಸುವುದು.

**ಗೃಹಪಾಠ:**

- ✓ ತರಗತಿಯಲ್ಲಿ ಜರುಗಿದ ಕಲಿಕೆಯ ದೃಢೀಕರಣದ ಮತ್ತೊಂದು ಹಂತ ಗೃಹ ಪಾಠವಾಗಿದೆ. ಗೃಹಪಾಠ ಕೇವಲ ಬರವಣಿಗೆಗೆ ಮಾತ್ರ ಸೀಮಿತವಾಗಿರದೆ ಕಲಿಕಾಂಶಗಳ ನೇರದಲ್ಲಿ ವಿದ್ಯಾರ್ಥಿಯು ಚಟುವಟಿಕೆಯಲ್ಲಿ ಭಾಗವಹಿಸಿ ವಿಷಯ ವಸ್ತುವನ್ನು ದೃಢೀಕರಿಸಿಕೊಳ್ಳಲು ಅವಕಾಶ ಮಾಡಿಕೊಡುವಂತಿರಬೇಕು.
- ✓ ವಿಷಯವಾರು ಗೃಹಪಾಠಗಳನ್ನು ಆಯಾ ಶಿಕ್ಷಕರು ನಿಯಮಿತವಾಗಿ ಪರಿಶೀಲಿಸಿ ಅನುಪಾಲನೆಯನ್ನು ದಾಖಲಿಸಬೇಕು.
- ✓ ಮುಖ್ಯಗುರುಗಳು ಪ್ರತಿಯೊಬ್ಬ ಶಿಕ್ಷಕರ ವಿಷಯವಾರು ಕನಿಷ್ಠ ಎರಡು ಪ್ರತಿಶತ ಗೃಹಪಾಠಗಳನ್ನು ತಿದ್ದಿ ಅವುಗಳ ಮೇಲೆ ಪುನಃ ಲಿಖಿತ ಸಲಹೆ ಸೂಚನೆಗಳನ್ನು ಕೊಡಬೇಕು. ಮುಖ್ಯ ಗುರುಗಳು ಕೆಳಕಂಡ ನಮೂನೆಯಂತೆ ಅನುಪಾಲನೆಯ ಘೋಷ್ವಾರೆಯನ್ನು ರೂಢಿಸುವುದು.

| ಕ್ರ ಸಂ | ತರಗತಿ | ಪ್ರತಿಯೊಬ್ಬ ಶಿಕ್ಷಕರು ಪ್ರತಿ ವಾರಕ್ಕೆ ಕೊಡಬೇಕಾದ ವಿಷಯವಾರು ಗೃಹ ಪಾಠಗಳು | ಒಟ್ಟು ಗೃಹ ಪಾಠಗಳ ಅಂದಾಜು | ಶಿಕ್ಷಕರು ಬೋಧಿಸುವ ತರಗತಿಯಲ್ಲಿ ಹಾಜರಿದ್ದ ಒಟ್ಟು ಮಕ್ಕಳು | ಒಟ್ಟು ಗೃಹ ಪಾಠಗಳು | ಮುಖ್ಯ ಗುರುಗಳು ಪರಿಶೀಲಿಸಿದ 2% ಗೃಹ ಪಾಠಗಳು | ಷರಾ |
|---|---|---|---|---|---|---|---|
| 1 | 8 | 3 – 4 | 18 –24 | | | | |
| 2 | 9 | 3 – 4 | 18 –24 | | | | |
| 3 | 10 | 3 – 4 | 18 –24 | | | | |

# 10. ಸೇತುಬಂಧ ಕಾರ್ಯಕ್ರಮ, ಪೂರಕ ಬೋಧನೆ, ಪರಿಹಾರ ಬೋಧನೆ

## ಅ) ಸೇತುಬಂಧ ಕಾರ್ಯಕ್ರಮ:

ಹಿಂದಿನ ತರಗತಿಯಿಂದ ಉತ್ತೀರ್ಣಳಾ/ನಾಗಿ ಬಂದ ವಿದ್ಯಾರ್ಥಿಯಲ್ಲಿ ಈಗಿನ ತರಗತಿಯ ಕಲಿಕೆಗೆ ಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ದೃಢಪಡಿಸಿಕೊಳ್ಳುವ ಚಟುವಟಿಕೆಯ ಜೊತೆಗೆ ಈಗ ಕಲಿಯುತ್ತಿರುವ ತರಗತಿಗೆ  ಬೇಕಾದ ಸಾಮರ್ಥ್ಯ/ ಕಲಿಕಾಂಶಗಳನ್ನು ಗಳಿಸಲು ವಿದ್ಯಾರ್ಥಿಯನ್ನು ಸಿದ್ಧಗೊಳಿಸುವ ಚಟುವಟಿಕೆಯೇ ಸೇತುಬಂಧ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಜೂನ್ 15 ರವರೆಗೆ ನಡೆಸುವುದು.

ಹಿಂದಿನ ತರಗತಿಯಲ್ಲಿ ವಿದ್ಯಾರ್ಥಿಯ ಕಲಿಕೆ ಪ್ರಭುತ್ವಮಟ್ಟದಲ್ಲಿ ಆಗದಿದ್ದರೆ ಪ್ರಸಕ್ತ ತರಗತಿಯಲ್ಲಿನ ಕಲಿಕೆಯಲ್ಲಿ ತೊಡಗಿಕೊಳ್ಳುವುದು ಕಷ್ಟಕರ. ಉದಾಹರಣೆಗೆ ಅಕ್ಷರ ಜ್ಞಾನವಿಲ್ಲದ ವಿದ್ಯಾರ್ಥಿ ಓದುವ, ಬರೆಯುವ, ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತದೆ.  ಗಣಿತದ ಮೂಲಕ್ರಿಯೆಗಳನ್ನು ಪ್ರಭುತ್ವ ಮಟ್ಟದಲ್ಲಿ ಕಲಿಯದಿರುವ ವಿದ್ಯಾರ್ಥಿ ಮುಂದಿನ ಹಂತಗಳನ್ನು ಯಶಸ್ವಿಯಾಗಿ ಕಲಿಯಲಾರಳು/ನು.  ಆ ದಿಸೆಯಲ್ಲಿ ಸೇತುಬಂಧ ಕಾರ್ಯಕ್ರಮವು ವಿದ್ಯಾರ್ಥಿಗೆ ತಾನು ಕಲಿಯುತ್ತಿರುವ ತರಗತಿಗೆ ಬೇಕಾದ ಕನಿಷ್ಠ ಸಾಮರ್ಥ್ಯ/ಕಲಿಕಾಂಶಗಳನ್ನು ಗಳಿಸಲು ಸಹಕಾರಿಯಾಗುತ್ತದೆ.  ಈ ಸೇತುಬಂಧ ಕಾರ್ಯಕ್ರಮವು ನೈದಾನಿಕ ಪರೀಕ್ಷೆ/ಪೂರ್ವ ಪರೀಕ್ಷೆ, ದೋಷನಿದಾನ, ಪರಿಹಾರ ಬೋಧನೆ ಮತ್ತು ಸಾಫಲ್ಯ ಪರೀಕ್ಷೆ ಎಂಬ ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ.

### ನೈದಾನಿಕ ಪರೀಕ್ಷೆ / ಪೂರ್ವ ಪರೀಕ್ಷೆ

ವಿದ್ಯಾರ್ಥಿಯು ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ತರಗತಿಯ ಕಲಿಕೆಗೆ ಅವಶ್ಯವಾಗಿ ಬೇಕಾದ ಸಾಮರ್ಥ್ಯ / ಕಲಿಕಾಂಶಗಳು ವಿದ್ಯಾರ್ಥಿಯಲ್ಲಿ ಎಷ್ಟರಮಟ್ಟಿಗೆ ಸಾಧನೆಯಾಗಿವೆ ಎಂಬುದನ್ನು ಪತ್ತೆಹಚ್ಚುವ ಹಂತವಿದು.

### ನೈದಾನಿಕ ಪರೀಕ್ಷೆಗೆ ಮಾಡಿಕೊಳ್ಳಬೇಕಾದ  ತಯಾರಿ:

- ಪ್ರಸಕ್ತ ತರಗತಿಯ ಕಲಿಕೆಗೆ ಪೂರಕವಾಗಿ ವಿದ್ಯಾರ್ಥಿ ಗಳಿಸಿರಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳ ಪಟ್ಟಿ.
- ಈ ಸಾಮರ್ಥ್ಯಗಳ ಗಳಿಕೆಯನ್ನು ಪರೀಕ್ಷಿಸಲು ಬೇಕಾದ ಒಂದು ಪ್ರಶ್ನೆಪತ್ರಿಕೆಯ ರಚನೆ.
- ಮೌಖಿಕ ಪರೀಕ್ಷೆಗೂ ಅವಕಾಶದ ವ್ಯವಸ್ಥೆ.
- ಇಂತಿಷ್ಟೇ ಪ್ರಶ್ನೆಗಳು ಇರಬೇಕೆಂಬ ನಿರ್ಬಂಧವಿಲ್ಲ. ಆದರೆ ನಿಸ್ಸಂದೇಹವಾಗಿ–ಪರೀಕ್ಷಾ ಪ್ರಶ್ನೆ ಪತ್ರಿಕೆಗಿಂತ ಕನಿಷ್ಠ 02/03 ಪಟ್ಟು ದೊಡ್ಡದಿರುತ್ತದೆ. [ಪ್ರತಿಯೊಂದು ಕಲಿಕಾಂಶದ ಮೇಲೆ ನೈದಾನಿಕ ಪರೀಕ್ಷೆ ನಡೆಸುವುದು ಅಪೇಕ್ಷಣೀಯ]
- ಪ್ರಶ್ನೆಪತ್ರಿಕೆಯು ಅಂಕಗಳ ಆಧಾರದಿಂದ ರಚನೆಯಾಗಿರುವುದಿಲ್ಲ.
- ನೈದಾನಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ರಚಿಸುವಾಗಲೇ ಅದೇ ಮಟ್ಟದ ಬೇರೆ ಪ್ರಶ್ನೆಗಳನ್ನು ಒಳಗೊಂಡ ಇನ್ನೊಂದು ಪ್ರಶ್ನೆಪತ್ರಿಕೆಯನ್ನು ರಚಿಸಿಕೊಳ್ಳಬೇಕು.

**ಉತ್ತರಗಳ ವಿಶ್ಲೇಷಣೆ:**

- ಲಿಖಿತ ಮತ್ತು ಮೌಖಿಕವಾಗಿ ನಡೆಸಿದ ನೈದಾನಿಕ ಪರೀಕ್ಷೆಗಳ ಮೌಲ್ಯಮಾಪನ ಮಾಡಿದ ಬಳಿಕ ಉತ್ತರಗಳ ವಿಶ್ಲೇಷಣೆ ಮಾಡಬೇಕು.
- ವಿಶ್ಲೇಷಣೆಯಲ್ಲಿ ಪ್ರತಿ ವಿದ್ಯಾರ್ಥಿಯ ಸರಿ ಉತ್ತರವೆಷ್ಟು, ತಪ್ಪು ಉತ್ತರವೆಷ್ಟು ಎಂಬುದನ್ನು ದಾಖಲಿಸಬೇಕು.
- ವಿಶ್ಲೇಷಣೆಯಲ್ಲಿ ಸರಿ ಉತ್ತರಗಳಿಗೆ **ಎ** ಎಂದು ತಪ್ಪು ಉತ್ತರಗಳಿಗೆ **ಬಿ** ಎಂದೂ ಪ್ರಶ್ನೆಗಳ ಸಂಖ್ಯೆ ಕೆಳಗೆ ನಮೂದಿಸಬೇಕು.

**<u>ನಮೂನೆ</u>**

**<u>ನೈದಾನಿಕ / ಸಾಫಲ್ಯ ಪರೀಕ್ಷೆ</u>**

| ತರಗತಿ | ಉತ್ತರ ವಿಶ್ಲೇಷಣೆ | ವಿಷಯ | | | | | | | |
|---|---|---|---|---|---|---|---|---|---|
| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ಪ್ರಶ್ನೆಗಳ ಸಂಖ್ಯೆ | | | | | | ಒಟ್ಟು ಸರಿ | ಒಟ್ಟು ತಪ್ಪು |
| | | 1 | 2 | 3 | – | – | – | ಎ | ಬಿ |
| 1. | | | | | | | | | |
| 2 | | | | | | | | | |
| ಒಟ್ಟು ಸರಿ ಉತ್ತರಗಳು | | | | | | | | | |
| ಒಟ್ಟು ತಪ್ಪು ಉತ್ತರಗಳು | | | | | | | | | |

ಮುಖ್ಯ ಶಿಕ್ಷಕರ ಸಹಿ ವಿಷಯ ಶಿಕ್ಷಕರ ಸಹಿ

**ದೋಷನಿದಾನ**

ಉತ್ತರಗಳ ವಿಶ್ಲೇಷಣೆಯ ಆಧಾರದಿಂದ ದೋಷನಿದಾನ ಮಾಡುವುದಕ್ಕೆ ಸಾಧ್ಯವಿದೆ, ಯಾವ ವಿದ್ಯಾರ್ಥಿಯು ಯಾವ ಸಾಮರ್ಥ್ಯ/ಕಲಿಕಾಂಶಗಳನ್ನು ಗಳಿಸಿದ್ದಾನೆ/ಳೆ/ಗಳಿಸಿಲ್ಲ ಎಂಬ ವಿಶ್ಲೇಷಣೆ ಮಾಡಿದ ಬಳಿಕ ಪ್ರತಿ ವಿದ್ಯಾರ್ಥಿಯ ಕಲಿಕಾ ದೋಷಗಳನ್ನು ಅಥವಾ ಕಲಿಕೆಯಲ್ಲಿರುವ ಕೊರತೆಗಳನ್ನು ಪತ್ತೆಹಚ್ಚುವ ಹಂತವೇ ದೋಷನಿದಾನ.

**ಪರಿಹಾರ ಬೋಧನೆ**

ದೋಷ ನಿದಾನದಲ್ಲಿ ದೊರಕಿದ ಮಾಹಿತಿಗನುಸಾರವಾಗಿ ವಿದ್ಯಾರ್ಥಿಗಳಲ್ಲಿರುವ ಕಲಿಕಾಕೊರತೆಯನ್ನು ನೀಗಿಸುವ ಪ್ರಕ್ರಿಯೆಯೇ ಪರಿಹಾರ ಬೋಧನೆ. ಈ ಪರಿಹಾರ ಬೋಧನೆ ಮರು ಬೋಧನೆಯಾಗಬಾರದು. ಇದುವರೆವಿಗೂ ಬಳಸಿದ ಬೋಧನಾ ತಂತ್ರಗಳು ಮಗುವಿನಲ್ಲಿ ಕಲಿಕೆಯನ್ನು ಉಂಟುಮಾಡಿಲ್ಲ. ಆದ್ದರಿಂದ ಬೋಧನಾ ತಂತ್ರಗಳ/ಟಿಎಲ್ಎಂ ಬಳಕೆಯಲ್ಲಿ ಸುಧಾರಣೆ/ಬದಲಾವಣೆ ಇರುತ್ತದೆ. ಉದಾಹರಣೆಗೆ ಸಂಕಲನ ಮಾಡಲು ಮಗುವಿಗೆ ಬಿಡಿ ಮತ್ತು ದಶಕದ ಪರಿಕಲ್ಪನೆ ಇರಬೇಕು. ದಶಕದ ಪರಿಕಲ್ಪನೆ ಇರದ ಮಗು ಸಂಕಲನ ಕಲಿಯುವುದಾದರೂ ಹೇಗೆ?

ಹಾಗಾಗಿ ದಶಕ ಪರಿಕಲ್ಪನೆ ಮೂಡಿಸುವಿಕೆ ಪರಿಹಾರ ಬೋಧನೆಯಲ್ಲಿ ನಡೆಯಬೇಕಾದ ಕಾರ್ಯ ತದನಂತರ ಸಂಕಲನ. ಪರಿಹಾರ ಬೋಧನೆ ವಿದ್ಯಾರ್ಥಿಗಳ ಕಲಿಕಾ ಕೊರತೆಯನ್ನು ನಿವಾರಿಸುವ ಮಟ್ಟಿಗೆ ಸೀಮಿತವಾಗಿರುತ್ತದೆಯೇ ಹೊರತು ಇಡೀ ವಿಷಯವನ್ನು ಮರುಬೋಧನೆ ಮಾಡಬೇಕಾಗಿಲ್ಲ. ಸಾಮರ್ಥ್ಯ/ಕಲಿಕಾಂಶವನ್ನು ಗಳಿಸಿರುವ ವಿದ್ಯಾರ್ಥಿಗಳನ್ನು ಈ ಹಂತದಲ್ಲಿ ಬಳಸಿಕೊಳ್ಳಬಹುದು. ಇದರಿಂದ ತರಗತಿಯ ನಿರ್ವಹಣೆಯೂ ಸುಲಭವಾಗುತ್ತದೆ. ತಮ್ಮ ಸಹಪಾಠಿಗಳನ್ನು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳ ಕಲಿಕೆಯೂ ಇದರಿಂದ ಪ್ರಭುತ್ವ ಪಡೆಯುತ್ತದೆ.

**ಸಾಫಲ್ಯ ಪರೀಕ್ಷೆ**

ವಿದ್ಯಾರ್ಥಿಗಳ ಕಲಿಕಾ ಕೊರತೆಗಳ ನಿವಾರಣೆಗೆ ಮಾಡಿದ ಪರಿಹಾರ ಬೋಧನೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತಿಳಿಯುವ ಹಂತವೇ ಸಾಫಲ್ಯ ಪರೀಕ್ಷೆ. ಇದನ್ನು ಈ ರೀತಿ ಯೋಜಿಸಬಹುದು.

- ನೈದಾನಿಕ ಪರೀಕ್ಷೆಗಾಗಿ ಪ್ರಶ್ನೆಪತ್ರಿಕೆ ತಯಾರಿಸುವಾಗ ರಚಿಸಿಕೊಂಡಿರುವ ಇನ್ನೊಂದು ಪ್ರಶ್ನೆ ಪತ್ರಿಕೆಯನ್ನು ಇಲ್ಲಿ ಬಳಸಿಕೊಳ್ಳಬಹುದು.
- ಹೀಗೆ ಬಳಸಿಕೊಳ್ಳುವಾಗ ನೈದಾನಿಕ ಪರೀಕ್ಷೆಯಲ್ಲಿ ಕಲಿಕಾ ಕೊರತೆಯಿರುವ ಅಂಶಗಳ ಮೇಲೆ ಈ ಪರೀಕ್ಷೆ ನಡೆಸಬೇಕು.
- ಗಳಿಸಿರುವ ಸಾಮರ್ಥ್ಯ / ಕಲಿಕಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಬಿಡಬೇಕು.
- ಕಲಿಕಾ ಕೊರತೆಯಿಲ್ಲದ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ಮಾಡಬಾರದು.
- ಹೆಚ್ಚುವರಿ ಪ್ರಶ್ನೆಪತ್ರಿಕೆಯನ್ನು ತಯಾರಿಸಿಲ್ಲವೆಂದಾದರೆ ಈಗ ಒಂದು ಪ್ರಶ್ನೆಪತ್ರಿಕೆಯನ್ನು ತಯಾರಿಸಿಕೊಳ್ಳಬೇಕು.
- ಈಗ ತಯಾರಿಸುವ ಪ್ರಶ್ನೆಪತ್ರಿಕೆಯು ಮಾದರಿ ಮತ್ತು ಕ್ಲಿಷ್ಟತೆಯ ಮಟ್ಟದಲ್ಲಿ ಸೇತುಬಂಧದ ಆರಂಭದಲ್ಲಿ ಮಾಡಿರುವ ನೈದಾನಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗೆ ಸಮಾನವಾಗಿರಬೇಕು.
- ಇಷ್ಟೆಲ್ಲಾ ಮಾಡಿದ ಮೇಲೆಯೂ ಕೆಲವು ಮಕ್ಕಳು ನಿರೀಕ್ಷಿತ ಮಟ್ಟ ತಲುಪದೇ ಇರುವ ಸಾಧ್ಯತೆ ಇದೆ. ಅಂತಹ ಮಕ್ಕಳನ್ನು ಗುರುತಿಸಿ ದೈನಂದಿನ ಕಲಿಕಾ ಚಟುವಟಿಕೆಗಳಲ್ಲಿ ಅವರಿಗೆ ವಿಶೇಷ ಗಮನ ನೀಡಬೇಕು. ಅದಕ್ಕಾಗಿ ಇಲ್ಲಿ ಕೆಲವು ಸೂಚನೆಗಳನ್ನು ನೀಡಲಾಗಿದೆ.

**ಆ) ಸಾಫಲ್ಯ ಪರೀಕ್ಷೆ ನಂತರದ ಬೋಧನೆ:–**

- ಅಂತಹ ಮಕ್ಕಳಿಗೆ ವಿಶೇಷ ತರಗತಿಗಳ ಏರ್ಪಾಡು ಮಾಡುವುದು.
- ಕಲಿಕೆಯ ದೋಷಗಳ ನಿವಾರಣೆಗೆ ಸಹಾಯಕವಾದ ಮತ್ತು ವಿದ್ಯಾರ್ಥಿಗಳಿಗೆ ಇಷ್ಟವಾದ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಬಹುದು.
- ಪ್ರಭುತ್ವ ಮಟ್ಟದ ಕಲಿಕೆ ಹೊಂದಿರುವ ವಿದ್ಯಾರ್ಥಿಗಳೊಂದಿಗೆ ಈ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಲ್ಲಿ ಬೆರೆಯುವಂತೆ ಮಾಡಬಹುದು.
- ಕಲಿಕಾ ಕೊರತೆಯಿರುವ ವಿದ್ಯಾರ್ಥಿಗಳಲ್ಲಿ ಇರಬಹುದಾದ ಕೀಳರಿಮೆಯನ್ನು ಹೋಗಲಾಡಿಸಿ ಅವರಲ್ಲಿ ಅತ್ಮವಿಶ್ವಾಸ ತುಂಬುವುದು ಅವಶ್ಯಕ.

## ಇ) ಪರಿಹಾರ ಬೋಧನೆ

ಮೇಲೆ ವಿವರಿಸಲಾದ "ಬೋಧನೆ"ಯ ಕಾರ್ಯವನ್ನು ಮಾತ್ರ ಮಾಡಬೇಕೆಂಬ ತಪ್ಪುಕಲ್ಪನೆ ಕೆಲವರಲ್ಲಿ ಇದೆ. ಪ್ರಸ್ತುತ ಬೋಧನೆ ಬುನಾದಿ ಕೌಶಲಗಳನ್ನು ಕಲಿಯದ ಮಕ್ಕಳಿಗೆ ರೂಢಿಸಿರುವ ಕಾರ್ಯಕ್ರಮ, ಪರಿಹಾರ ಬೋಧನೆ ಪ್ರತಿ ಅಧ್ಯಾಯದ ಅಥವಾ ಘಟಕ ಬೋಧನೆಯ ತರುವಾಯ ಪರೀಕ್ಷೆ/ವೀಕ್ಷಣೆ/ಯೋಜನೆಕಾರ್ಯ ವರದಿ ತಯಾರಿಕೆಯಂತಹ ಕಾರ್ಯಗಳನ್ನು ನಡೆಸಿ ಮಕ್ಕಳ ಕಲಿಕೆಯ ಕೊರತೆಯನ್ನು ಗುರುತಿಸಿ ಪರಿಹಾರಾತ್ಮಕ ಚಟುವಟಿಕೆಯನ್ನು ಕೈಗೊಳ್ಳುವುದಾಗಿದೆ. ಇದು ರೂಢಿಯಲ್ಲಿರುವ ಪರಿಹಾರ ಬೋಧನೆಯ ಪರಿಕಲ್ಪನೆ. ಈ ಕುರಿತು ಸೌರಭ ಪುಸ್ತಕದಲ್ಲಿ ವಿವರಿಸಿದೆ. ಇದು ಅಬಾಧಿತವಾಗಿ ಮುಂದುವರೆಯುತ್ತದೆ. ಘಟಕ ಪರೀಕ್ಷೆ ಮತ್ತು ಪರಿಹಾರ ಬೋಧನೆಯು ಒಟ್ಟಿಗೆ ಬರುವ ಪರಿಕಲ್ಪನೆಗಳು–ಈ ಪರೀಕ್ಷೆಯಿಂದ ವಿದ್ಯಾರ್ಥಿಗೆ ತನ್ನ ಸಾಮರ್ಥ್ಯ ಮತ್ತು ಕೊರತೆಗಳ ಅರಿವು ಮೂಡುತ್ತದೆ. ಪರಿಹಾರ ಬೋಧನೆಯ ಮೂಲಕ ಆ ಕೊರತೆಗಳನ್ನು ಪರಿಹರಿಸಿಕೊಳ್ಳುತ್ತಾನೆ.

## ಈ) ಪೂರಕ ಓದು

ಪಠ್ಯವಿಷಯಕ್ಕೆ ಮಾತ್ರ ಮಕ್ಕಳ ಓದುವಿಕೆ ಸೀಮಿತವಾಗಬಾರದು. ಕಥೆ, ಕವನ, ಪ್ರಪಂಚದ ಅದ್ಭುತಗಳು, ಮಹಾ ಪುರುಷರು, ಇತಿಹಾಸ, ವಿಜ್ಞಾನ, ಸಂಶೋಧನೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಮಕ್ಕಳು ವಿಷಯವನ್ನು ಸಂಗ್ರಹಿಸಬೇಕು. ವ್ಯಾಪಕ ಓದು ಇಂತಹ ಸಾಮರ್ಥ್ಯಗಳನ್ನು ಮಗುವಿನಲ್ಲಿ ತರುತ್ತದೆ. ವಿಸ್ತಾರವಾಗಿ ಓದಿಕೊಂಡ ವ್ಯಕ್ತಿಯ ಚಿಂತನೆ, ಆಲೋಚನಾ ಕ್ರಮಗಳಲ್ಲಿ ಸುಧಾರಣೆಯನ್ನು ಕಾಣುತ್ತೇವೆ. ಅಂತಹವರ ವ್ಯಕ್ತಿತ್ವ ಸಾಮಾನ್ಯವಾಗಿ ಉತ್ತಮವೇ ಆಗಿರುತ್ತದೆ. ಇದಕ್ಕಾಗಿ ಎಳವೆಯಲ್ಲಿ ಓದುವ ಹವ್ಯಾಸವನ್ನು ಬೆಳೆಸಬೇಕು.

## ಶಾಲೆಗಳು ಕೈಗೊಳ್ಳಬೇಕಾದ ಕ್ರಮಗಳು:–

- ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಿಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಗಳು, ಕಥೆಗಳ ಪುಸ್ತಕಗಳು, ಚಿತ್ರಕಥೆಗಳು ಮುಂತಾದ ಸಾಮಗ್ರಿಯನ್ನು ಶಾಲೆಗೆ ನಿಯತವಾಗಿ ತರಿಸುವುದು ಹಾಗೂ ಮಕ್ಕಳು ಒಂದೆಡೆ ಕುಳಿತು ಓದಲು ಅವಕಾಶ ಮಾಡಿಕೊಡುವುದು. ವರ್ಷಕ್ಕೆ ಸುಮಾರು ರೂ.2000/– ದಿಂದ ರೂ.3000/– ರೂಗಳವರೆಗೆ ಶಾಲೆ ಅನುದಾನ ಭರಿಸುವುದು ಅಪೇಕ್ಷಣೀಯ. ಇದನ್ನು ಶಾಲಾ ಅನುದಾನದಿಂದ ಭರಿಸಬಹುದು.
- ಗ್ರಂಥಭಂಡಾರದ ಪುಸ್ತಕಗಳನ್ನು ಓರಣವಾಗಿ ಜೋಡಿಸಿ ಮಕ್ಕಳಿಗೆ ಎಟುಕುವಂತೆ ಇಡುವುದು.
- ವಿದ್ಯಾರ್ಥಿಗಳು ತಾವು ಓದಿದ ಕಥೆಗಳ ಸಾರಾಂಶವನ್ನು ಕೈ ಬರಹ ಹೊತ್ತಿಗೆ ರೂಪದಲ್ಲಿ ಪ್ರಕಟಿಸುವುದು.
- ಗೋಡೆಪತ್ರಿಕೆಗಳನ್ನು ಮಕ್ಕಳಿಗೆ ಅನುಕೂಲವಾಗುವಂತೆ ನೇತುಹಾಕಿ ಓದಲು ಅವಕಾಶ ಮಾಡಿಕೊಡುವುದು ಹಾಗೂ ಅಲ್ಲಿನ ವಿಷಯಗಳ ಕುರಿತು ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದು.

## ಉ) ತರಗತಿಗೊಂದು ಫ್ಲಾನಲ್ ಬೋರ್ಡ್:–

ಪ್ರತಿ ತರಗತಿ ಕೋಣೆಯಲ್ಲಿ 4 X 4 1/2 ಅಡಿಯ ಅಥವಾ ಆಯಾ ತರಗತಿಗೆ ಅನುಕೂಲವೆನಿಸುವ ಅಳತೆಯ ಫ್ಲಾನಲ್ ಬೋರ್ಡ್ ಅನ್ನು ಅಳವಡಿಸಿ – ವಿದ್ಯಾರ್ಥಿಗಳು ಬರೆಯುವ ಕಥೆ–ಕವನ ಲೇಖನ ಸಂಗ್ರಹಿಸುವ ಚಿತ್ರ–ಲೇಖನಗಳನ್ನು ಇಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳು ಓದುವಂತೆ ವ್ಯವಸ್ಥೆ ಮಾಡುವುದು. ಉತ್ತಮವಾದ ಪ್ರದರ್ಶಿಕೆಗಳನ್ನು ಒಂದೆಡೆ ಸಂಗ್ರಹಿಸಿ ತರಗತಿಗೊಂದು ಹಸ್ತಪ್ರತಿಯನ್ನು ಹೊರತರುವುದು. ಫ್ಲಾನಲ್ ಬೋರ್ಡ್ ತಯಾರಿಕೆಗೆ ಥರ್ಮಾಕೋಲ್ ಬಳಸಿ ಕಡಿಮೆ ಖರ್ಚಿನಲ್ಲಿ ವ್ಯವಸ್ಥೆಗೊಳಿಸಬಹುದು. ಇದಕ್ಕಾಗಿ ಶಾಲಾ ಅನುದಾನವನ್ನು ಬಳಸಬಹುದು.

- ಈ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಲು ಅಧ್ಯಾಪಕರು ಶಾಲೆಯ ಅವಧಿಯ ಮುನ್ನ ಮತ್ತು ನಂತರದ ಅವಧಿಯಲ್ಲಿ ಮತ್ತು ಬಿಡುವಿನ ವೇಳೆಯಲ್ಲಿ ಗ್ರಂಥಭಂಡಾರವನ್ನು ತೆರೆದಿಡುವ ಕೆಲಸವನ್ನು ಅನೂಚಾನವಾಗಿ ಮಾಡುವುದು.

# 11. ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು

ಶೈಕ್ಷಣಿಕ ವ್ಯವಸ್ಥೆಯ, ಮೊದಲನೆಯ ಉಸ್ತುವಾರಿದಾರ ಶಾಲೆಯ/ಸಂಸ್ಥೆಯ ಮುಖ್ಯಸ್ಥ. ಗುಣಾತ್ಮಕ ಶಿಕ್ಷಣದ ಬಹುಪಾಲು ಆಯಾಮಗಳು, ಆಶಯಗಳು ಈಡೇರುವುದು, ಆಯಾ ಶಾಲೆಯ/ಸಂಸ್ಥೆಯ ಮುಖ್ಯಸ್ಥರ ಕಾಳಜಿ, ಬದ್ಧತೆ ಮತ್ತು ಕಾರ್ಯಶೈಲಿಯಿಂದ. ಬೋಧನಾ ಕಲಿಕಾ ಚಟುವಟಿಕೆಯ ಸಮರ್ಥತೆ ಮುಖ್ಯಶಿಕ್ಷಕರ ಉಪಸ್ಥಿತಿ, ಅವರ ಕಾರ್ಯಯೋಜನೆ, ಪೂರ್ವಸಿದ್ಧತೆ, ಕಲಿಸುವ ಪದ್ಧತಿ, ಮೌಲ್ಯಮಾಪನದ ಕಾರ್ಯತಂತ್ರಗಳ ಬಳಕೆ, ಎಲ್ಲಾ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ, ಕಲಿಕಾ ವಾತಾವರಣ ಕಲ್ಪಿಸುವ ಸಾಮರ್ಥ್ಯ, ಪಠ್ಯವಿಷಯ ಜ್ಞಾನ, ವ್ಯಕ್ತಿತ್ವ, ಇತ್ಯಾದಿ ಅಂಶಗಳು ಯುಕ್ತವಾಗಿ ಬಳಕೆ ಮಾಡಿಕೊಂಡಾಗ. ಇವುಗಳನ್ನು ಮುಖ್ಯಶಿಕ್ಷಕರು [ಇತರ ಶಿಕ್ಷಕರು] ಸಮರ್ಪಕವಾಗಿ ನಿರ್ವಹಿಸಿದರೆ ನಿರೀಕ್ಷಿತ ಗುಣಮಟ್ಟವನ್ನು ಸಾಧಿಸಲು ಸಾಧ್ಯವಾಗುತ್ತದೆ.

ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಥಮ ಮೇಲ್ವಿಚಾರಕ ಮತ್ತು ಪ್ರತಿದಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅತಿ ಹತ್ತಿರದಿಂದ ಗಮನಿಸಿ ಮಾರ್ಗದರ್ಶನ ನೀಡಬಹುದಾದ ತತ್‌ಕ್ಷಣದ ಅಧಿಕಾರಿ ಮುಖ್ಯಶಿಕ್ಷಕರಾಗಿರುತ್ತಾರೆ. ಇವರು ಶಾಲಾ ಚಟುವಟಿಕೆಯ ಮೂಲ ಸೆಲೆ. "ಮುಖ್ಯಶಿಕ್ಷಕರಿದ್ದಂತೆ ಶಾಲೆ" ಎಂಬ ಮಾತು ಅತಿಶಯೋಕ್ತಿಯಲ್ಲ. ಮುಖ್ಯಶಿಕ್ಷಕರು ಶಾಲಾ ಆಡಳಿತದಲ್ಲಿ ಮತ್ತು ಶೈಕ್ಷಣಿಕ ಮೇಲ್ವಿಚಾರಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾ ಶಿಕ್ಷಕರಾಗಿ, ಸಲಹೆಗಾರರಾಗಿ, ಮಾರ್ಗದರ್ಶಕರಾಗಿ, ಸಂಯೋಜಕರಾಗಿ, ಸ್ನೇಹಿತರಾಗಿ ಕಾರ್ಯನಿರ್ವಹಿಸಿ ಶಿಕ್ಷಣದ ಗುರಿ ಮುಟ್ಟುವುದು ಅಪೇಕ್ಷಣೀಯ.

"ಶಾಲೆಗಳಲ್ಲಿ ಶೈಕ್ಷಣಿಕ ನಾಯಕತ್ವ" ವಹಿಸುವಲ್ಲಿ ಮುಖ್ಯಶಿಕ್ಷಕರ ಪಾತ್ರ ಇನ್ನೂ ಮನನಗೊಂಡಿಲ್ಲ. ಶಾಲೆಯ ಮತ್ತು ಶಿಕ್ಷಕರ ಶೈಕ್ಷಣಿಕ ಅಗತ್ಯಗಳನ್ನು ಅರಿತು ಮೇಲ್ಮಟ್ಟದ ಸಂಪನ್ಮೂಲ ಸಿಬ್ಬಂದಿಯಿಂದ ನಿರ್ದಿಷ್ಟ ಶೈಕ್ಷಣಿಕ ನೆರವನ್ನು ಪಡೆಯುವ ಸಾಮರ್ಥ್ಯ ಹೊಂದಬೇಕಿದೆ. ಮೇಲ್ವಿಚಾರಣೆ ಮತ್ತು ಪ್ರಗತಿ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಮುಖ್ಯಶಿಕ್ಷಕರ ಸಾಮರ್ಥ್ಯ ವರ್ಧನೆಗೆ ಹೆಚ್ಚಿನ ಗಮನ ಹರಿಸಬೇಕಿದೆ". (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005)

**ಮುಖ್ಯಶಿಕ್ಷಕರ ಕರ್ತವ್ಯಗಳು:**

ಮುಖ್ಯಶಿಕ್ಷಕರು ಹಲವು ಆಡಳಿತಾತ್ಮಕ ಕಾರ್ಯಗಳನ್ನು ಮತ್ತು ಶಾಲಾ ಕ್ರಿಯಾಯೋಜನೆಯನ್ವಯ ಹಲವು ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಮುಖ್ಯಶಿಕ್ಷಕರು ಪ್ರಥಮವಾಗಿ ಶಿಕ್ಷಕರಾಗಿದ್ದು ಮೂಲತಃ ತರಗತಿ ಬೋಧನೆ ಮಾಡಬೇಕು. ಆದರೆ ಕೆಲವೊಮ್ಮೆ ಶೈಕ್ಷಣಿಕ ಮೇಲ್ವಿಚಾರಣೆಯನ್ನು ಮಾತ್ರ ಪ್ರಧಾನ ಅಂಶವಾಗಿ ಪ್ರಸ್ತಾಪಿಸಲ್ಪಡುತ್ತಿದೆ. ಅದು ಪ್ರಮಾದ.

- ತರಗತಿ ಬೋಧನೆ ಮಾಡುವುದು.
- ಯೋಜನೆಗಳ ತಯಾರಿ/ಅವಲೋಕನ.
- ಶಿಕ್ಷಕರ ಪೂರ್ವಸಿದ್ಧತೆಯ ಅವಲೋಕನ
- ಶಿಕ್ಷಕರ ಬೋಧನೆಯ ಅವಲೋಕನ ಮತ್ತು ಹಿಮ್ಮಾಹಿತಿ – ತರಗತಿಯ ಮೇಲ್ವಿಚಾರಣೆ

- ತರಗತಿಯ ಭೇಟಿ ಮತ್ತು ಕಲಿಕೆಯ ಪ್ರಗತಿ ಪರಿಶೀಲನೆ, ಮೇಲ್ವಿಚಾರಣೆ
- ಮೌಲ್ಯಮಾಪನ ಕಾರ್ಯದ ಅವಲೋಕನ ಮತ್ತು ಹಿಮ್ಮಾಹಿತಿ
- ಬೋಧಕವರ್ಗದ ಸಭೆ ನಡೆಸುವಿಕೆ
- ಎಸ್‌ಡಿಎಂಸಿ ಸಭೆಗಳು
- ಸಹಪಠ್ಯ ಚಟುವಟಿಕೆಗಳ ಸಂಘಟನೆ

**ವಾರ್ಷಿಕ ಯೋಜನೆಗಳ ತಯಾರಿ/ಅವಲೋಕನ**

ಮುಖ್ಯಶಿಕ್ಷಕರು ಅವರ ಸಹೋದ್ಯೋಗಿಗಳ ಸಹಭಾಗಿತ್ವದಲ್ಲಿ ವಿವಿಧ ಶೈಕ್ಷಣಿಕ ಯೋಜನೆಗಳನ್ನು ಶೈಕ್ಷಣಿಕ ವರ್ಷಾಂತ್ಯದಿಂದ ಪ್ರಾರಂಭಿಸಿ ಮೇ ಅಂತ್ಯದೊಳಗೆ ತಯಾರಿಸುವುದು ಅಪೇಕ್ಷಣೀಯ. ವರ್ಷವಿಡೀ ದೊರೆಯುವ ಕೆಲಸದ ದಿನ, ಅವಧಿಗಳು, ರಜೆಗಳು ಇತ್ಯಾದಿಗಳನ್ನು ಗಮನಿಸಿ ಇಲಾಖಾ ಮಾರ್ಗಸೂಚಿಯನ್ನು ಅನುಸರಿಸಿ ಶಿಕ್ಷಕರಿಗೆ ತರಗತಿ, ವಿಷಯಗಳನ್ನು ಹಂಚಿ ವಾರ್ಷಿಕ ಶೈಕ್ಷಣಿಕ ಯೋಜನೆಯನ್ನು ಅವರವರ ತರಗತಿ / ವಿಷಯಗಳಲ್ಲಿ ರಚಿಸಲು ಕ್ರಮವಹಿಸುವುದು ಮುಖ್ಯ ಶಿಕ್ಷಕರ ಜವಾಬ್ದಾರಿ ಆಗಿರುತ್ತದೆ. ಜೂನ್ ಮೊದಲನೆ ದಿನ ಮೊದಲ ಅವಧಿಯಿಂದಲೇ ಕ್ರಮಬದ್ಧವಾಗಿ ತರಗತಿಗಳನ್ನು ನಡೆಯಲು ಅವಕಾಶ ಮಾಡಿಕೊಡಬೇಕು.

ವಾರ್ಷಿಕ ಶೈಕ್ಷಣಿಕ ಯೋಜನೆಯನ್ನು ಪ್ರತಿನಿತ್ಯ ಜಾರಿಗೆ ತರಲು ವೇಳಾಪಟ್ಟಿಯನ್ನು ರಚಿಸಬೇಕು. ಇದನ್ನು ರಚಿಸುವಾಗ ವಿಷಯಗಳು, ಪಠ್ಯವಸ್ತುವಿನ ಅನುಸಾರ ಬಂದಿರುವ ಅವಧಿಗಳ ಹಂಚಿಕೆ, ಮನೋವೈಜ್ಞಾನಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರ ಸಹಭಾಗಿತ್ವದೊಡನೆ ವೇಳಾಪಟ್ಟಿಯನ್ನು ರಚಿಸುವುದು.

ಮೇಲ್ಕಂಡಂತೆ ಶಿಕ್ಷಕರು ಮತ್ತು ಅವರವರಿಗೆ ದೊರೆತಿರುವ ವಿಷಯಗಳ ಪಠ್ಯಕ್ರಮವನ್ನು ಅಧ್ಯಯನ ಮಾಡಿ ಇದಕ್ಕೆ ಅನುಗುಣವಾಗಿ ವಾರ್ಷಿಕ / ಮಾಸಿಕ ಪಠ್ಯಯೋಜನೆಯನ್ನು ತಯಾರಿಸುವುದು.

| ಕ್ರ ಸಂ | ಯೋಜನೆಯ ಹೆಸರು | ಗಡುವು | ತಯಾರಿಕೆಯಲ್ಲಿ ಪಾಲ್ಗೊಳ್ಳುವವರು | ಅವಲೋಕನ ಮಾಡುವವರು | ಷರಾ |
|---|---|---|---|---|---|
| 1) | ಶಾಲೆಯ ವಾರ್ಷಿಕ ಯೋಜನೆ/ ಮಾರ್ಗದರ್ಶಿ [ಶಾಲಾ ಪಂಚಾಂಗ] ಶಾಲಾ ಶೈಕ್ಷಣಿಕ ಯೋಜನೆ | 31–05–2011 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು ಎಸ್‌ಡಿಎಂಸಿ | ಮುಖ್ಯೋಪಾಧ್ಯಾಯರು ಎಸ್‌ಡಿಎಂಸಿ | |
| 2) | ಶಾಲೆಯ ದೀರ್ಘಕಾಲಿಕ ಯೋಜನೆ [ಸಂಸ್ಥಾ ಯೋಜನೆ] | 30–06–2011 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು ಎಸ್‌ಡಿಎಂಸಿ | ಮುಖ್ಯೋಪಾಧ್ಯಾಯರು ಎಸ್‌ಡಿಎಂಸಿ | 2, 3 ಅಥವಾ 5 ವರ್ಷಗಳ ಅವಧಿಗೆ ಯೋಜಿಸಬಹುದು |
| 3) | ವಾರ್ಷಿಕ ಕ್ರಿಯಾ ಯೋಜನೆ | 31–05–2011 | ಆಯಾ ಶಿಕ್ಷಕರು | ಮುಖ್ಯೋಪಾಧ್ಯಾಯರು | |
| 4) | ವೇಳಾಪಟ್ಟಿ | 31–05–2011 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು | ಮುಖ್ಯೋಪಾಧ್ಯಾಯರು | |

**ಶಿಕ್ಷಕರ ಪೂರ್ವಸಿದ್ಧತೆಯ ಅವಲೋಕನ:**

ಶಿಕ್ಷಕರು ತರಗತಿಗೆ ಹೋಗುವ ಮುನ್ನ ನಡೆಸಿರುವ ಸಿದ್ಧತೆ ಅರ್ಥಾತ್ ಪಾಠಯೋಜನೆ ಮತ್ತು ಬೋಧನೋಪಕರಣ ಇತ್ಯಾದಿಗಳನ್ನು ನಿಯಮಿತವಾಗಿ [ವಾರಕ್ಕೊಮ್ಮೆ] ಪರಿಶೀಲಿಸಿ ಸಲಹೆಗಳನ್ನು ನೀಡಬೇಕು.

ಅಧ್ಯಾಪಕರ ಸೂಕ್ತ ಪೂರ್ವಸಿದ್ಧತೆ ಲಭ್ಯ ಅವಧಿಯಲ್ಲಿ ಗರಿಷ್ಠಮಿತಿಯ ಮಾರ್ಗದರ್ಶನವನ್ನು ಮಗುವಿಗೆ ನೀಡಲು ಸಾಧ್ಯವಾಗುತ್ತದೆ. ಪಾಠಯೋಜನೆ – ಏಕೆ? ಏನನ್ನು? ಹೇಗೆ? ಕಲಿಸಬೇಕೆಂಬ ಅಂಶಗಳನ್ನು ಹೊಂದಿರುತ್ತದೆ. ಮಕ್ಕಳಿಗೆ ಹೊರೆಯಾಗದ, ಚಟುವಟಿಕೆಯುಕ್ತ ಗೃಹಪಾಠ, ಕಲಿಕೆಯ ವಿಧಾನಗಳ ಅಳವಡಿಕೆ ಬೋಧನಾ ಕಲಿಕಾ ಸಾಮಗ್ರಿಗಳ ಬಳಕೆ, ಇತ್ಯಾದಿಗಳ ಪೂರ್ವಸಿದ್ಧತೆಯ ಕುರಿತು ಮುಖ್ಯಶಿಕ್ಷಕರ ಪರಿಶೀಲನೆ ಅಗತ್ಯವಾಗಿದೆ.

**ತರಗತಿಯಲ್ಲಿ ಶಿಕ್ಷಕರ ಬೋಧನೆಯ ಅವಲೋಕನ ಮತ್ತು ಹಿಮ್ಮಾಹಿತಿ:**

ಶಿಕ್ಷಕರ ಬೋಧನಾ ಸಾಮರ್ಥ್ಯ, ವಿಷಯದ ಪ್ರಭುತ್ವ, ಬೋಧನೋಪಕರಣಗಳ ಬಳಕೆ, ಕಲಿಸುವ ತಂತ್ರಗಳು ಎಲ್ಲಾ ಮಕ್ಕಳಿಗೂ ಕಲ್ಪಿಸಲಾಗುವ ಅವಕಾಶ, ಗೃಹಪಾಠ ನೀಡಿಕೆ, ಕಪ್ಪುಹಲಗೆ ಉಪಯೋಗ, ಕಲಿಕಾ ಫಲಗಳನ್ನು ಮೌಲ್ಯಮಾಪನ ಮಾಡುವ ತಂತ್ರಗಾರಿಕೆ, ಪ್ರತಿ ಬೋಧನೆಯ ಉತ್ತಮ ಅಂಶಗಳು, ಕೊರತೆಯ ಅಂಶಗಳು ಮತ್ತು ಅವುಗಳನ್ನು ಹೇಗೆ ತಿದ್ದಿಕೊಳ್ಳಬೇಕು ಎಂಬ ಕುರಿತು ಖಚಿತ ಮಾರ್ಗದರ್ಶನ ನೀಡುವುದು. ಶಿಕ್ಷಕರ ಪಾಠ ವೀಕ್ಷಿಸಿ ನಿರ್ದಿಷ್ಟ ಸಲಹೆ, ಸೂಚನೆ ನೀಡುವುದು.

**ಮೌಲ್ಯಮಾಪನ ಕಾರ್ಯದ ಅವಲೋಕನ ಮತ್ತು ಹಿಮ್ಮಾಹಿತಿ:**

ಘಟಕ ಪರೀಕ್ಷೆ, ಸೆಮಿಸ್ಟರ್ ಪರೀಕ್ಷೆಗಳನ್ನು ಇಲಾಖೆ ನೀಡಿರುವ ಸೂಚನೆಗಳಂತೆ ನಡೆಸಿ ಮಕ್ಕಳ ಕಲಿಕೆಯನ್ನು ದೃಢೀಕರಣಗೊಳಿಸಲು ಶಿಕ್ಷಕರು ಅನುಸರಿಸುತ್ತಿರುವ ಕ್ರಮಗಳನ್ನು ಕೆಳಕಂಡಂತೆ ಮುಖ್ಯಶಿಕ್ಷಕರು ಖಚಿತಪಡಿಸಿಕೊಳ್ಳಬೇಕು. [ಪ್ರಾತಿನಿಧಿಕವಾಗಿ ಪಾಟೀಸವಾಲು(cross examination) ಮಾಡಿ ತಿಳಿಯಬಹುದು].

- ಪ್ರಶ್ನೆಪತ್ರಿಕೆ ತಯಾರಿಕೆಯು ನೀಲ ನಕಾಶೆಯನ್ವಯ ಇದೆಯೇ?
- ಮೌಲ್ಯಮಾಪನವನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ
- ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಪೋಷಕರಿಗೆ ನೀಡಲಾಗಿದೆಯೇ?
- ವೈಯಕ್ತಿಕ ಅಂಕಪುಸ್ತಕ [ಶ್ರೇಣಿ] ಮತ್ತು ಕ್ರೋಡೀಕೃತ ಅಂಕಪುಸ್ತಕಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿದ್ದಾರೆಯೇ?
- ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಲಾಗಿದೆಯೇ? ಅವರಿಗೆ ಪರಿಹಾರ ಬೋಧನೆ ಮಾಡಲಾಗಿದೆಯೇ?
- ಪ್ರಗತಿಪತ್ರಗಳನ್ನು ಭರ್ತಿ ಮಾಡಿ ಪೋಷಕರಿಗೆ ನೀಡಲಾಗುತ್ತಿದೆಯೇ?
- ಪ್ರಗತಿಪತ್ರಗಳಲ್ಲಿ ಭರ್ತಿ ಮಾಡಿರುವ ಸಾಮರ್ಥ್ಯವನ್ನು ಮಗು ವಾಸ್ತವವಾಗಿ ಗಳಿಸಿದೆಯೇ?

**ಬೋಧಕರ ಸಭೆ ನಡೆಸುವಿಕೆ:**

ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸಲು ಶಾಲಾ ಹಂತದಲ್ಲಿ ತಿಂಗಳಿಗೊಮ್ಮೆ ಶಿಕ್ಷಕರ ಸಭೆ ನಡೆಸುವುದು. ನಡೆದ ಶೈಕ್ಷಣಿಕ ಚಟುವಟಿಕೆಗಳ ಅವಲೋಕನ–ಸಲಹೆ ನೀಡುವಿಕೆ, ಮುಂದಿನ ತಿಂಗಳಿನಲ್ಲಿ ನಡೆಯುವ ಕಾರ್ಯಗಳ ಹಂಚಿಕೆ –

ನಿರ್ವಹಣೆಯ ಕುರಿತು ಸಲಹೆ ಸೂಚನೆಗಳು ಈ ಸಭೆಯಲ್ಲಿ ಚರ್ಚಿತವಾಗುವ ಮುಖ್ಯ ಅಂಶಗಳಾಗಬೇಕು. ಮುಂದಿನ ಅಂಶಗಳು ಕೇವಲ ಸಲಹಾತ್ಮಕ – ಈ ನೇರದಲ್ಲಿ ವಿಷಯಗಳ ಚರ್ಚೆ/ಕ್ರಮಕ್ಕೆ ಯೋಜಿಸಿಕೊಳ್ಳಬಹುದು.

- ಬೋಧನಾ ಕಲಿಕಾ ತಂತ್ರಗಳ ಕುರಿತು ವಿಚಾರ ವಿನಿಮಯ
- ಮೌಲ್ಯಮಾಪನದ ವಿಶ್ಲೇಷಣೆ ಮತ್ತು ಹಿಂದುಳಿದ ಮಕ್ಕಳ ಕಲಿಕೆಗೆ ಕ್ರಮ.
- ಮಕ್ಕಳ ಹಾಜರಾತಿ, ಗೈರುಹಾಜರಿ ಮಕ್ಕಳ ಬಗ್ಗೆ ಕೈಗೊಳ್ಳಬೇಕಾದ ಕ್ರಮ.
- ಮುಖ್ಯಶಿಕ್ಷಕರು ಅಥವಾ ಶಿಕ್ಷಕರು ಹಿಂದಿನ ತಿಂಗಳಲ್ಲಿ ಹೋಗಿದ್ದ ತರಬೇತಿ/ಕಾನ್ಫರೆನ್ಸ್/ಸಭೆಗಳ ಮುಖ್ಯಾಂಶಗಳನ್ನು ಹಂಚಿಕೊಳ್ಳುವುದು.
- ಅಳವಡಿಸಿಕೊಂಡ ನಾವೀನ್ಯ ತಂತ್ರ/ತರಬೇತಿಯ ಮುಖ್ಯಾಂಶಗಳಿಂದಾದ ಪರಿಣಾಮಗಳ ಬಗ್ಗೆ ವಿಚಾರ ವಿನಿಯಮ.
- ಬದಲಾದ ಪದ್ಧತಿಯಿಂದ ನಕಾರಾತಾತ್ಮಕ ಪರಿಣಾಮಗಳಾಗಿದ್ದರೆ, ಆ ಬಗ್ಗೆ ಮೇಲಧಿಕಾರಿಗಳಿಗೆ ನಿಖರ ಮಾಹಿತಿಯ ವರದಿ ಸಲ್ಲಿಕೆ.
- ಹೊಸ ಪುಸ್ತಕಗಳ ಪರಾಮರ್ಶೆ [Book Review]
- ಗ್ರಂಥಾಲಯ, ಇಂಟರ್‌ನೆಟ್, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ವರದಿಯಾಗುವ ಬೋಧನಾ ವಿಧಾನದ ಹೊಸ ಅವಿಷ್ಕಾರಗಳ ಬಗ್ಗೆ ಚರ್ಚೆ.

**ತರಗತಿಯ ಭೇಟಿ**

- **ಮಕ್ಕಳ ಕಲಿಕೆಯ ಪ್ರಗತಿ ಪರಿಶೀಲನೆ**

ಸತತವಾಗಿ ತರಗತಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿಯನ್ನು ಪರಿಶೀಲಿಸುವುದು. ಶಿಕ್ಷಣ ಹಕ್ಕು ಕಾಯ್ದೆ ಆಶಯದಂತೆ ಮಕ್ಕಳು ಕಲಿಕೆಯಲ್ಲಿ ಸಂತಸದಿಂದ ಭಾಗವಹಿಸುತ್ತಿರುವರೇ; ಶಿಕ್ಷಕರು, ಮಕ್ಕಳನ್ನು ತಾರತಮ್ಯದಿಂದ ಕಾಣುವ ಪ್ರಕರಣ ಇವೆಯೇ; ಲಿಂಗ, ಜಾತಿ, ವರ್ಣ, ವರ್ಗ ಮಗುವಿನ ನೈಸರ್ಗಿಕ ಮಿತಿ ಇತ್ಯಾದಿ ಅಂಶಗಳನ್ನು ಆಧರಿಸಿ ಮಗುವನ್ನು ಹೀಯಾಳಿಸುವಿಕೆ, ದೈಹಿಕ – ಮಾನಸಿಕ ಹಿಂಸೆಯನ್ನು ನೀಡುತ್ತಿರುವರೇ, ವಿಕಲಚೇತನ ಮಕ್ಕಳನ್ನು ಸರಿಯಾಗಿ ನಡೆಸಿಕೊಳ್ಳಲಾಗುತ್ತಿದೆಯೇ–ಕಲಿಕೆಗೆ ಪೂರಕವಾದ ವಾತಾವರಣ ತರಗತಿಯಲ್ಲಿ ಇದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

**ಎಸ್‌ಡಿಎಂಸಿ ಸಭೆಗಳು:**

ಎಸ್‌ಡಿಎಂಸಿ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸುವುದು. ಕಲಿಕೆಗೆ ಪೂರಕ ವಾತಾವರಣ ನಿರ್ಮಾಣ, ಕಲಿಕೆಯ ಪ್ರಗತಿ, ಸಹಪಠ್ಯ ಚಟುವಟಿಕೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಹಾಜರಾತಿ, ಮಕ್ಕಳ ಗೈರುಹಾಜರಿಯನ್ನು ನಿಯಂತ್ರಿಸುವುದು, ಬಿಸಿಯೂಟ ಮುಂತಾದ ಶೈಕ್ಷಣಿಕ ವಿಷಯಗಳನ್ನು ಚರ್ಚಿಸಿ ಅನುಪಾಲನೆ ಮಾಡುವುದು.

**ಸಹಪಠ್ಯ ಚಟುವಟಿಕೆಗಳು:**

ಪಠ್ಯ ಚಟುವಟಿಕೆಯಂತೆ ಸಹಪಠ್ಯ ಚಟುವಟಿಕೆಗಳು ಮಕ್ಕಳ ಬೌದ್ಧಿಕ, ಭೌತಿಕ ಬೆಳವಣಿಗೆ ಮತ್ತು ಸರ್ವಾಂಗೀಣ ಪ್ರಗತಿಗೆ ಸಹಕಾರಿ. ಪ್ರತಿ ವಾರದಲ್ಲಿ 80 ನಿಮಿಷಗಳ ಅವಧಿಯನ್ನು ಇದಕ್ಕಾಗಿ ಮೀಸಲಿಡುವುದು. ವಾರದ ಬೇರೆ ಬೇರೆ ದಿನಗಳಲ್ಲಿ ಮತ್ತು ಬೇರೆ ಬೇರೆ ಅವಧಿಗಳಲ್ಲಿ ನಡೆಸುವುದರಿಂದ ವಿಷಯ ಬೋಧನೆಗೆ ಅವಧಿಗಳು ಕೊರತೆಯಾಗುವುದನ್ನು ತಪ್ಪಿಸಬಹುದು. ಈ ವೇದಿಕೆಯಲ್ಲಿ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸಿ, ಕೆಲವರಿಗೆ

ಮಾತ್ರ ಅವಕಾಶ ನೀಡುವ ಕ್ರಮ ಅಕ್ಷಮ್ಯ. ಅದು ಇತರ ಮಕ್ಕಳ ಅಭಿವೃದ್ಧಿಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಮಕ್ಕಳಲ್ಲಿ ಹುದುಗಿರುವ ವಿವಿಧ ಸಾಮರ್ಥ್ಯಗಳ ಅಭಿವ್ಯಕ್ತಿಗೆ ಇದು ವೇದಿಕೆಯಾಗಬೇಕು.

**ಮುಖ್ಯಶಿಕ್ಷಕರ ಆಡಳಿತಾತ್ಮಕ ಕರ್ತವ್ಯಗಳು:**

ದಿನಾಂಕ:–02–03–2009 ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಕರ್ತವ್ಯಗಳ ಜೊತೆ ಈ ಕೆಳಕಾಣಿಸಿದ ಕರ್ತವ್ಯಗಳನ್ನು ನಿರ್ವಹಿಸುವುದು

- ಮಧ್ಯಾಹ್ನ ಉಪಾಹಾರ ಯೋಜನೆಯ ಮೇಲ್ವಿಚಾರಣೆ
- RMSA ವತಿಯಿಂದ ಬರುವ ಅನುದಾನದ ಸದ್ಬಳಕೆ
- ನಿರ್ಮಾಣ ಕಾರ್ಯದ ಗುಣಮಟ್ಟ ಅವಲೋಕನ

**ಸರ್ಕಾರಿ ಆದೇಶ ಸಂಖ್ಯೆ:–ಇಡಿ 93 ಎಲ್‌ಐಬಿ 2008 ದಿನಾಂಕ:–02–03–2009 ರ ಅನುಬಂಧ "ಅ" ನಲ್ಲಿ ನಮೂದಿಸಿರುವಂತೆ ಸರ್ಕಾರಿ ಸಂಯುಕ್ತ ಪ್ರೌಢಶಾಲೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರ ಕಾರ್ಯ ವ್ಯಾಪ್ತಿಗಳು**

1) ಪ್ರಾಥಮಿಕ ಶಾಲಾ ಶಿಕ್ಷಕರ ಸಾಂದರ್ಭಿಕ ರಜೆ ಮತ್ತು ನಿರ್ಬಂಧಿತ ರಜೆ ಮಂಜೂರು ಮಾಡಲು ಅಧಿಕಾರ ಹೊಂದಿರುತ್ತಾರೆ.
2) ಈ ವಿಭಾಗದ ವೇಳಾಪಟ್ಟಿ ಸಿದ್ಧಪಡಿಸುವುದು.
3) ಈ ವಿಭಾಗದ ಮುಖ್ಯಸ್ಥರು ಶಿಕ್ಷಕರ ಬೋಧನೆ, ಪರಿಹಾರ ಬೋಧನೆ, ನಲಿ–ಕಲಿ ಹಾಗೂ ಇನ್ನಿತರೆ ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾರ್ಗದರ್ಶನ ನಿಯಮಿತವಾಗಿ ಮಾಡುವ ಅಧಿಕಾರ ಹೊಂದಿರುತ್ತಾರೆ.
4) ಸರ್ಕಾರಿ ಸರ್ಕಾರೇತರ ಖರೀದಿ ಪುಸ್ತಕ ನಿರ್ವಹಣೆ ಇವರದ್ದಾಗಿರುತ್ತದೆ.
5) ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ರಚನೆಯಂತೆ, ಮುಖ್ಯಗುರುಗಳು ಎಸ್.ಡಿ.ಎಂ.ಸಿ ಕಾರ್ಯದರ್ಶಿಯಾಗಿರುವುದರಿಂದ ತತ್ಪರಿಣಾಮವಾದ/ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿರುತ್ತಾರೆ.
6) ಪ್ರತಿ ವಾರಕ್ಕೆ ಕನಿಷ್ಠ ಇಬ್ಬರು ಶಿಕ್ಷಕರ ಪಾಠ ಬೋಧನಾ ಟಿಪ್ಪಣಿಯಂತೆ ಮೇಲ್ವಿಚಾರಣೆ ಮಾಡಿ ಮಾರ್ಗದರ್ಶನ ನೀಡುವುದು. ಈ ಅಂಶವನ್ನು ಮೇಲ್ವಿಚಾರಣೆ ವಹಿಯಲ್ಲಿ ದಾಖಲಿಸುವುದು.
7) ವಾರಕ್ಕೆ ನಿಗದಿತ 25 ಅವಧಿಗಳಂತೆ ಪ್ರಾಥಮಿಕ ಮುಖ್ಯಶಿಕ್ಷಕರ ನಿಗದಿತ ಬೋಧನಾ ಅವಧಿಯಂತೆ ಬೋಧನಾ ವಿಷಯಗಳನ್ನು ಬೋಧಿಸುವುದು ಕಡ್ಡಾಯವಾಗಿರುತ್ತದೆ.
8) ಇಲಾಖೆಯಿಂದ ದೊರೆಯುವ ಪ್ರೋತ್ಸಾಹದಾಯಕ ಸೌಕರ್ಯಗಳಾದ ವಿದ್ಯಾರ್ಥಿವೇತನ, ಸಮವಸ್ತ್ರ, ಪಠ್ಯಪುಸ್ತಕ, ಶಾಲಾಬ್ಯಾಗು, ನೋಟ್‌ಪುಸ್ತಕ, ಜ್ಯಾಮಿಟ್ರಿ ಬಾಕ್ಸ್ ಇತ್ಯಾದಿಗಳನ್ನು ಗುರುತಿಸಲ್ಪಟ್ಟ ಫಲಾನುಭವಿ ವಿದ್ಯಾರ್ಥಿಗಳಿಗೆ ನೀಡಿ ದಾಖಲೆ ನಿರ್ವಹಿಸುವುದು.
9) ಎಸ್‌ಡಿಎಂಸಿ ರಚನೆಯಂತೆ ಪ್ರದತ್ತವಾದ ಅಧಿಕಾರದಂತೆ ಶಾಲೆಯಲ್ಲಿನ ಅನುಪಯುಕ್ತ ವಸ್ತುಗಳನ್ನು ವಿಲೇ ಮಾಡಿ ಬಂದ ಹಣವನ್ನು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಬಳಸಿಕೊಳ್ಳುವುದು.
10) ಮಕ್ಕಳಿಗೆ ನೀಡಿದ ಗೃಹಪಾಠವನ್ನು ಮುಖ್ಯಗುರುಗಳು ಆಯಾ ತರಗತಿಯ ವಿಷಯ ಬೋಧಕ ಶಿಕ್ಷಕರುಗಳ ಕನಿಷ್ಠ ಒಂದು ಪ್ರತಿಶತ ಪುನರ್‌ಪರಿಶೀಲನೆ ಮಾಡುವುದು ಹಾಗೂ ದಾಖಲೀಕರಿಸುವುದು.
11) ಮಕ್ಕಳ ಕಲಿಕಾ ಪ್ರಗತಿಗೆ ಉತ್ತರದಾಯಿತ್ವ ಹೊಂದಿರುತ್ತಾರೆ.

**ಸಹಶಿಕ್ಷಕರ ಕಾರ್ಯನಿರ್ವಹಣೆ**

- ಎಲ್ಲಾ ಶಿಕ್ಷಕರು ವಿವಿಧ ತರಬೇತಿಗಳಲ್ಲಿ ಪಾಲ್ಗೊಂಡು ಅವುಗಳನ್ನು ತರಗತಿಯಲ್ಲಿ ಅನುಪಾಲನೆ ಮಾಡುವುದು.
- ಶಿಕ್ಷಕರ ಅನುದಾನ ಸದ್ಬಳಕೆ, ಕ್ರಿಯಾಸಂಶೋಧನೆ ಮತ್ತು ಆವಿಷ್ಕೃತ ಚಟುವಟಿಕೆಗಳ ಅಳವಡಿಕೆ.
- ಶಿಕ್ಷಕರು ಗಳಿಸಿದ ಪ್ರಶಸ್ತಿ ಮತ್ತು ಸ್ಥಳೀಯ ಸನ್ನಿವೇಶದಲ್ಲಿ ಧನಾತ್ಮಕವಾಗಿ ಗುರುತಿಸಿಕೊಂಡಿರುವುದು.
- ಶಿಕ್ಷಕರು ವಿಶೇಷ ಸಾಮರ್ಥ್ಯಗಳನ್ನು ಶಾಲಾ ಕೆಲಸಗಳಲ್ಲಿ ಬಳಸುವುದು.
- ಪೂರ್ವಸಿದ್ಧತೆ, ಮೌಲ್ಯಮಾಪನ ಆಯಾಮಗಳಾದ ಸಾಮರ್ಥ್ಯಾಧಾರಿತ ಪರೀಕ್ಷೆ, ಘಟಕ ಪರೀಕ್ಷೆ ಮತ್ತು ಸೆಮಿಸ್ಟರ್ ಪರೀಕ್ಷೆಗಳೊಂದಿಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆಯ ಅನುಷ್ಠಾನ.
- ಪಠ್ಯವಿಷಯಗಳನ್ನು ಸ್ಥಳೀಯ ಸನ್ನಿವೇಶ, ಸಂಪನ್ಮೂಲ ಸೌಲಭ್ಯಗಳಿಗೆ ಸಮೀಕರಿಸಿ ವಿದ್ಯಾರ್ಥಿಗಳಿಗೆ ಕಲಿಸಿರುವುದು
- ಮಗು ತರಗತಿಯಲ್ಲಿ ಸಂತಸದಿಂದ ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು.

- ಮಗುವಿಗೆ ಹೆದರಿಕೆ, ಹಿಂಜರಿಕೆ ಬಾರದಂತೆ ಶಿಕ್ಷಕರು ವರ್ತಿಸುವುದು [ಒಂದೇ ಪದ, ವಾಕ್ಯ ಮತ್ತು ವಿಚಾರವನ್ನು ಹಲವು ಬಾರಿ ಬರೆಸುವುದು ಒಂದು ಶಿಕ್ಷೆ–ಎಂಬುದನ್ನು ಗಮನಿಸಿ]
- ಕಲಿಕೆಯ ವೇಳೆ ವಿದ್ಯಾರ್ಥಿ ಇತರರೊಂದಿಗೆ ಮಾತನಾಡಿ ನಿರ್ಣಯಕ್ಕೆ ಬರುವುದನ್ನು – ಪ್ರಶ್ನೆ ಕೇಳುವುದನ್ನು ಸ್ವಾಗತಿಸುವುದು.
- ಗೃಹಪಾಠವನ್ನು ಚಟುವಟಿಕೆಯುಕ್ತವಿರುವಂತೆ ಮಾಡುವುದು.

## ಚಿತ್ರಕಲಾ ಶಿಕ್ಷಕರಿಗೆ ವಿಶೇಷ ಸೂಚನೆಗಳು

**ಚಿತ್ರಕಲಾ ಶಿಕ್ಷಕರು ಶಾಲೆಗಳಲ್ಲಿ ತರಗತಿಯೇತರ ಚಟುವಟಿಕೆಗಳನ್ನು ಈ ಕೆಳಕಂಡಂತೆ ಮಾಡಲು ಸೂಚಿಸಿದೆ.**

ಶಾಲೆಯ ಹೊರಾಂಗಣದಲ್ಲಿ ಹೂದೋಟದ ಮಧ್ಯೆ (ಸ್ಥಳಾವಕಾಶವಿದ್ದಂತೆ) ಪಠ್ಯಚಟುವಟಿಕೆಗೆ ಸಂಬಂಧಿಸಿದಂತೆ ಪ್ರಾಣಿ, ಪಕ್ಷಿ ಇತ್ಯಾದಿ ಸಣ್ಣ ಸಣ್ಣ ಮಾಡೆಲ್ ತಯಾರಿಸಬಹುದು. ಹಾಗೂ ಶಾಲೆಗಳ ಗೋಡೆಗಳ ಮೇಲೆ ಲಭ್ಯ ಸೌಲಭ್ಯಕ್ಕನುಗುಣವಾಗಿ ಮೊದಲ ನೋಟಕ್ಕೆ ಸಿಗುವ ಹಾಗೆ ಅಥವಾ ದೂರಕ್ಕೆ ಎದ್ದು ಕಾಣುವ ಹಾಗೆ. ಶೈಕ್ಷಣಿಕ ಅಂಶಗಳನ್ನೊಳಗೊಂಡ ಮ್ಯೂರಲ್. ಮಾಡಬಹುದು. ಇದರಿಂದ ಶಾಲಾ ಆವರಣದಲ್ಲಿ ಶೈಕ್ಷಣಿಕ ಮಹತ್ವಗಳನ್ನೊಳಗೊಂಡ ಕಲಾತ್ಮಕ ವಾತಾವರಣ ನಿರ್ಮಾಣವಾಗುತ್ತದೆ.

ಒಳಾಂಗಣದಲ್ಲಿ ಶಾಲಾ ಕೊಠಡಿಗಳಿಗನುಗುಣವಾಗಿ ಒಂದು ಕೊಠಡಿಯಲ್ಲಿ ಶಾಲೆಯಿರುವ ಊರು, ಗ್ರಾಮಗಳ ಹಿನ್ನೆಲೆ, ಸ್ಥಳ ಪುರಾಣ ಆಧರಿಸಿ ಕೆಲವು ಚಿತ್ರ / ಫೋಟೋ ತಯಾರಿಸಿ ಅಲಂಕರಿಸಬೇಕು. ಅದಕ್ಕೆ ನನ್ನ ಊರು ಎಂದು ಹೆಸರಿಡಬಹುದು. ಅಲ್ಲಿನ ಸ್ಥಳೀಯ ಐತಿಹಾಸಿಕ ಸ್ಥಳಗಳ ಕಲೆ/ಕಲಾವಿದ/ಸಂಗೀತಗಾರರು ಇತ್ಯಾದಿ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳನ್ನು ಹಾಕಬೇಕು. ಆಗ ಆ ವಾಸಸ್ಥಳದ ಪ್ರಾಮುಖ್ಯತೆ ವಿದ್ಯಾರ್ಥಿಗೆ ಮನವರಿಕೆಯಾಗುತ್ತದೆ. ನಂತರ ಮುಂದಿನ ಹಂತದಲ್ಲಿ ಆ ಜಿಲ್ಲೆಯ ಐತಿಹಾಸಿಕ ಸ್ಥಳಗಳು ಅಲ್ಲಿ ಹರಿಯುವ ನದಿ, ಸರೋವರ ಪ್ರಸಿದ್ಧ ಸ್ಥಳಗಳು, ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು ಸಣ್ಣ ವಿವರದೊಂದಿಗೆ ಕೊಠಡಿಗಳ ಗಾತ್ರಕ್ಕನುಗುಣವಾಗಿ ಅಲಂಕರಿಸಿ ಅದಕ್ಕೆ ನನ್ನ ಜಿಲ್ಲೆ ಎಂದು ಹೆಸರಿಡಬಹುದು. ಇದರಿಂದ ಅಲ್ಲಿನ ಮಕ್ಕಳಿಗೆ ತನ್ನ ಜಿಲ್ಲೆಯ ಮಹತ್ವದ ಅಂಶಗಳ ಮನವರಿಕೆ ಜೊತೆಗೆ ಅಭಿಮಾನ ಮೂಡುತ್ತದೆ. ಅದೇ ರೀತಿ ನನ್ನ ರಾಜ್ಯ ಎಂದು ಹೆಸರಿಟ್ಟ ಕೋಣೆಯಲ್ಲಿ ರಾಜ್ಯದ ಹೆಸರಾಂತ ವ್ಯಕ್ತಿಗಳು, ಕವಿಗಳು, ಕಲಾವಿದರು, ವಿಜ್ಞಾನಿಗಳು, ಐತಿಹಾಸಿಕ ಸ್ಥಳಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳು, ನಮ್ಮ ರಾಜ್ಯದಲ್ಲಿ ಕಂಡು ಬರುವ ಹಕ್ಕಿಗಳು, ಪ್ರಾಣಿಗಳು, ಹೂವುಗಳು, ಔಷಧೀಯ ಸಸ್ಯಗಳು, ಮುಂತಾದ ಚಿತ್ರಗಳನ್ನು ಹಾಕಿ ಅಲಂಕರಿಸಿ. ಇದರಿಂದ ನಾಡಿನ ಸಾಂಸ್ಕೃತಿಕ ಹಾಗು ಐತಿಹಾಸಿಕ ಮಹತ್ವ ಮಕ್ಕಳಿಗೆ ದೃಶ್ಯ ರೂಪಗಳೊಂದಿಗೆ ದೊರೆತು ಮುಂದೆ ಅವರ ಬದುಕಿನಲ್ಲಿ ತನ್ನ ಊರು, ಜಿಲ್ಲೆ, ರಾಜ್ಯಗಳ ಬಗೆಗೆ ಆದರ, ಅಭಿಮಾನ ನಿರಂತರವಾಗಿ ಉಳಿಯಲು ಸಹಕಾರಿಯಾಗುತ್ತದೆ.

ಶಾಲೆಯ ಹೊರಗೋಡೆಯ ಮೇಲೆ 8 X 10 ಗಾತ್ರದ ಪಿನ್‌ಬೋರ್ಡನ್ನು ತಯಾರಿಸಿ ಪ್ರತಿದಿನ ಮಕ್ಕಳ ಕಡೆಯಿಂದ ಆಯಾ ದಿನ ಹಾಗು ವಾರಪತ್ರಿಕೆಗಳಲ್ಲಿ ಪ್ರಕಟವಾದ ವಿಶೇಷ ಲೇಖನಗಳನ್ನು ಸಂಗ್ರಹಿಸಿ ಅವುಗಳನ್ನು ಅಂದವಾಗಿ ಕತ್ತರಿಸಿ, ಮೌಂಟ್ ಅಂಟಿಸಿ ಪಿನ್ ಬೋರ್ಡ್ ಮೇಲೆ ಪಿನ್ ಮಾಡಿಸಿ. ಚೆನ್ನಾಗಿ ಮಾಡಿದ

ವಿದ್ಯಾರ್ಥಿಗಳಿಗೆ ಮೆಚ್ಚುಗೆ ಸೂಚಿಸಿ ಇದರಿಂದ ಮಕ್ಕಳಲ್ಲಿ ವಿಷಯ ಸಂಗ್ರಹ ಜ್ಞಾನದ ಜೊತೆಗೆ ದೃಶ್ಯದ ಸೌಂದರ್ಯಪ್ರಜ್ಞೆ ಹಾಗು ಪ್ರದರ್ಶನ ಜ್ಞಾನ ಬೆಳೆಯುತ್ತದೆ.

ಬಿಡುವಿನ ವೇಳೆಯಲ್ಲಿ ಸ್ಥಳೀಯವಾಗಿ ದೊರೆಯುವ ಬಿದಿರು/ರೇಷ್ಮೆ ಕಡ್ಡಿಗಳಂತಹ ಗಟ್ಟಿಕಡ್ಡಿಗಳನ್ನು ಚಪ್ಪಟೆಯಾಗಿ ಕೆತ್ತಿ ಬಣ್ಣಗಳಲ್ಲಿ ಅದ್ದಿ ಅಕ್ಷರಗಳನ್ನು ವಿವಿಧ ವಿನ್ಯಾಸಗಳಲ್ಲಿ ರಚಿಸುವಂತೆ ಮಕ್ಕಳಿಗೆ ತಿಳಿಸಬೇಕು. ಇದಲ್ಲದೆ ಇವೇ ಕಡ್ಡಿಗಳಿಂದ ಬೇರೆ ಬೇರೆ ಗಾತ್ರದ ವಿನ್ಯಾಸದ ಗೆರೆಗಳನ್ನು ರಚಿಸಲು ಕಲಿಸಬೇಕು. ಇದರಿಂದ ಮಕ್ಕಳಲ್ಲಿ ಸೃಜನಶೀಲ ಹಿನ್ನೆಲೆಯಲ್ಲಿ ಅಕ್ಷರ ರಚನಾಭ್ಯಾಸದ ಜೊತೆ ಸೌಂದರ್ಯಪ್ರಜ್ಞೆ ಬೆಳೆಯುತ್ತದೆ. ಅಕ್ಷರ ಕಲಿಕೆಗೆ ಅಥವಾ ಬರವಣಿಗೆಯಲ್ಲಿ ನಿರಾಸಕ್ತಿ ಹೊಂದಿರುವ ಮಕ್ಕಳು ಇಂತಹ ಪ್ರಯೋಗಗಳಿಂದ ಬರವಣಿಗೆಯಲ್ಲಿ ಆಸಕ್ತಿ ತಳೆಯುತ್ತಾರೆ.

ಪಠ್ಯವಿಷಯಗಳನ್ನು ಆಧರಿಸಿದ ರೂಪಕಗಳನ್ನು ನಟಿಸುವ ಮೂಲಕ ಪಠ್ಯಕ್ಕೆ ಹೊಸರೂಪ ಕೊಡಬಹುದು. ಹಾಗು ಪಠ್ಯ ಹೆಚ್ಚು ಆಕರ್ಷಣೀಯವಾಗುವಂತೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಚಿತ್ರಕಲಾ ಶಿಕ್ಷಕರು/ಕ್ರಾಫ್ಟ್ ಶಿಕ್ಷಕರು ಸಣ್ಣ ಸಣ್ಣ ವೇದಿಕೆ ಪರಿಕರಗಳು ಹಾಗು ಪಾತ್ರಕ್ಕೆ ಬೇಕಾದ ಆಭರಣ ಹಾಗು ಆಯುಧಗಳನ್ನು ಸ್ಥಳೀಯವಾಗಿ ದೊರೆಯುವ ಪಲ್ಪ್ ಬೋರ್ಡ್, ಥರ್ಮಾಕೋಲ್, ಸ್ಪಾಂಜ್, ಫೋಮ್ ಶೀಟುಗಳನ್ನು ಬಳಸಿ ಮಾಡಬಹುದು. ಅಗತ್ಯವಿದ್ದಲ್ಲಿ ಅವಕ್ಕೆ ಬಂಗಾರದ ಲೇಪನದಂತಹ ಮಣಿ ಅಥವಾ ಶೀಟ್‌ಗಳ ಮೂಲಕ ಅಲಂಕರಿಸಬಹುದು. ಇವುಗಳನ್ನು ಒಂದೆಡೆ ಸಂಗ್ರಹಿಸಿಟ್ಟಲ್ಲಿ ಆಗಾಗ ಬಳಸಲು ಸಾಧ್ಯವಾಗುತ್ತದೆ. ಅಲ್ಲದೆ, ಮಕ್ಕಳು ಇವುಗಳನ್ನು ತಯಾರಿಸುವಾಗ ತಯಾರಿಕ ಕೌಶಲ ಹಾಗು ವಿನ್ಯಾಸದ ಅರಿವು ಮತ್ತು ವಸ್ತುಪರಿಚಯಗಳನ್ನು ಮಾಡಿಕೊಳ್ಳುತ್ತಾರೆ.

ಈ ಮೂಲಕ ಚಿತ್ರಕಲಾ ಶಿಕ್ಷಕರು ಹಾಗು ಕ್ರಾಫ್ಟ್ ಶಿಕ್ಷಕರಿರುವ ಕಡೆ ಶಾಲೆಗಳಲ್ಲಿ ಶೈಕ್ಷಣಿಕ ಉದ್ದೇಶಗಳನ್ನು ಇಟ್ಟುಕೊಂಡು ಕಲಾತ್ಮಕವಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರ ಮೂಲಕ ಶಿಕ್ಷಣಕ್ಷೇತ್ರಕ್ಕೆ ಹೊಸ ಆಯಾಮ ನೀಡಬಹುದು.

# 12. ತರಗತಿಯ ಪ್ರಕ್ರಿಯೆಗಳು:

ಕೆಳಹಂತದ ತರಗತಿಗಳಲ್ಲಿ ನಲಿ–ಕಲಿ ಕಾರ್ಯಕ್ರಮ ಜಾರಿಯಲ್ಲಿದೆ. ಈ ಕಾರ್ಯಕ್ರಮದ ಸ್ವರೂಪವು ಚಟುವಟಿಕೆಯಿಂದ ಕೂಡಿರುವುದರಿಂದ ತರಗತಿಯ ಪ್ರಕ್ರಿಯೆಗಳು ಮಗುವಿಗೆ ಆಹ್ಲಾದವನ್ನು ಉಂಟುಮಾಡುತ್ತಿವೆ. ನಲಿ–ಕಲಿಯೇತರ ತರಗತಿಗಳಲ್ಲಿ ಕಲಿಕೆಯನ್ನು ಚಟುವಟಿಕೆಯಿಂದ ಕೂಡಿರುವಂತೆ ಮಾಡುವುದು ನಮ್ಮ ಮುಂದಿನ ಸವಾಲು, ಇದಕ್ಕಾಗಿ ಶಿಶುಕೇಂದ್ರಿತ ವಿಧಾನಗಳನ್ನು ಅಳವಡಿಸಬೇಕಾಗಿದೆ. ಇದಕ್ಕಾಗಿ ಯೋಜನಾಕಾರ್ಯ, ಕ್ಷೇತ್ರ ಅಧ್ಯಯನ, ಪ್ರಾತ್ಯಕ್ಷಿಕೆ, ಗುಂಪು ಚಟುವಟಿಕೆ, ಪಾತ್ರಾಭಿನಯ, ಸಂದರ್ಶನ ಮತ್ತು ವರದಿ ಮಾಡುವುದು, ಅನ್ವೇಷಣಾ ವಿಧಾನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳು ನಮ್ಮ ನೆರವಿಗೆ ಬರುತ್ತವೆ.

➢ **ಯೋಜನಾ ಕಾರ್ಯವನ್ನು** ಬೇರೆ ಬೇರೆ ವಿಷಯಗಳ ಬೋಧನೆಯಲ್ಲಿ ಅಳವಡಿಸಬಹುದು. ಉದಾಹರಣೆಗೆ – ಸಮಾನಾರ್ಥಕ; ಅನೇಕಾರ್ಥಕ ಪದಗಳನ್ನು ಸಂಗ್ರಹಿಸುವುದು. ಗದ್ಯಭಾಗವನ್ನು–ಸಂಭಾಷಣೆಯ ರೂಪದಲ್ಲಿ ಬರೆದು ಪಾತ್ರಾಭಿನಯದ ಮೂಲಕ ಪ್ರಸ್ತುತಪಡಿಸಲು ಹೇಳುವುದು, ಪ್ರಾಸಬದ್ಧ ಸಾಲುಗಳನ್ನು ಬರೆದು ತರುವಂತೆ ಮಾಡುವುದು ಇತ್ಯಾದಿ. ನಕಾಶೆ, ಭೂಪಟ ರಚಿಸಿ ಬಣ್ಣ ಹಾಕಿ ಮುಖ್ಯಾಂಶಗಳನ್ನು ವಿವರಿಸುವಂತೆ ಹೇಳುವುದು. 3ಡಿ ನಕಾಶೆಯ ಮೇಲೆ ನೈಸರ್ಗಿಕ ಅಂಶಗಳಾದ ಕಾಡು, ಗಿರಿಶ್ರೇಣಿ, ನದಿ ಇತ್ಯಾದಿಗಳನ್ನು ಬಿಡಿಸುವಂತೆ ಮಾಡುವುದು ಅಥವಾ ಯುದ್ಧ ನಡೆದ ಜಾಗಗಳಲ್ಲಿ ಅಂತಹ ಚಿತ್ರಣ ಬಿಡಿಸುವುದು. ಬಡಗಿ ತಯಾರಿಸುವ ಅನೇಕ ಆಕಾರಗಳನ್ನು ಯಾವ ಪರಿಕರಗಳ ಸಹಾಯದಿಂದ ತಯಾರಿಸುತ್ತಾರೆ ಅಥವಾ ಹೇಗೆ ತಯಾರಿಸಿರುತ್ತಾರೆ. ವೀಕ್ಷಿಸಿ ಬರೆದು ನೀಡಲು ತಿಳಿಸುವುದು.

ಮೇಲ್ಕಂಡ ಚಟುವಟಿಕೆಗಳು ಯೋಜನಾ ಕಾರ್ಯವೆಂದು ಕಂಡರೂ ಕ್ಷೇತ್ರ ಭೇಟಿ, ಅನ್ವೇಷಣೆ, ಸಂದರ್ಶನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳನ್ನು ಒಳಗೊಂಡಿದೆ. ಅಂದರೆ ಒಂದು ವಿಧಾನವು ಹಲವು ವಿಧಾನಗಳನ್ನು ಒಳಗೊಂಡಿರುತ್ತದೆ.

➢ **ಕ್ಷೇತ್ರ ಅಧ್ಯಯನ** ನಮ್ಮ ತರಗತಿಗಳನ್ನು ಶಿಶುಕೇಂದ್ರಿತ ಮಾಡಲು ಇರುವ ಇನ್ನೊಂದು ಬೋಧನಾ ಸಾಧ್ಯತೆ. ಮಕ್ಕಳಷ್ಟೆ ಅಲ್ಲ ವಯಸ್ಕರಿಗೂ ಈ ವಿಧಾನ ಕಲಿಕೆಗೆ ಸಹಕಾರಿ ಮತ್ತು ಉಲ್ಲಾಸದಾಯಕ. ತರಗತಿಯ ಕಲಿಕೆ ಮತ್ತು ಕ್ಷೇತ್ರಮಟ್ಟದಲ್ಲಿ ಕಂಡುಬರುವ ಚಿತ್ರಣಗಳ ನಡುವೆ ಇರುವ ಸಾದೃಶ್ಯ/ವಿದೃಶ್ಯಗಳ ತಿಳುವಳಿಕೆಯನ್ನು ಕಲಿಯುವವನಿಗೆ ನೀಡುತ್ತದೆ.

ಯಾವ ಕಲಿಕಾಂಶಗಳು ಇಂತಹ ಕ್ಷೇತ್ರಭೇಟಿಗಳಿಗೆ ಅನುಕೂಲ? ತೆಗದುಕೊಳ್ಳಬೇಕಾದ ಎಚ್ಚರಿಕೆ, ಹಣಕಾಸು ಇತಿ–ಮಿತಿ, ಇತ್ಯಾದಿ ಅಂಶಗಳನ್ನು ಆಧರಿಸಿ ಕ್ಷೇತ್ರಭೇಟಿಗಳನ್ನು ಯೋಜಿಸಬಹುದು. ಉದಾಹರಣೆಗೆ ಮಾನಸ ಸರೋವರದ ಪ್ರಾಂತ್ಯದಲ್ಲಿ ಭಾರತ ಉಪಖಂಡದ 3 ದೊಡ್ಡ ನದಿಗಳು ಹುಟ್ಟುತ್ತವೆ ಎಂಬ ಸಂಗತಿ ತಿಳಿಯಲು

ಕ್ಷೇತ್ರಭೇಟಿಗೆ ಮಕ್ಕಳನ್ನು ಮಾನಸ ಸರೋವರಕ್ಕೆ ಕರೆದೊಯ್ಯಲು ಸಾಧ್ಯವೆ? ಪರ್ಯಾಯವಾಗಿ ತನ್ನ ಊರಿನ ಸುತ್ತಮುತ್ತ ಇರುವ ಎತ್ತರ ಪ್ರದೇಶಗಳಿಗೆ ಮಕ್ಕಳನ್ನು ಕರೆದೊಯ್ದು ಮಳೆ ನೀರು ಹೇಗೆ ಭಿನ್ನ ಭಿನ್ನ ದಿಕ್ಕುಗಳಿಗೆ ಹರಿಯುತ್ತದೆ ಎಂದು ತಿಳಿಯಲು ಅವಕಾಶ ಮಾಡಿಕೊಡಬಹುದು.

ಎನ್‌ಸಿಎಫ್ ಆಶಯ ಅಥವಾ ಬೋಧನಾಶಾಸ್ತ್ರದ ಸಮಗ್ರ ಆಶಯ ಮಗು ತನ್ನ ನಿಕಟ ಪರಿಸರದ ಸಂಗತಿಗಳಿಂದ ಜ್ಞಾನವನ್ನು ತಿಳಿಯುತ್ತದೆ ಮತ್ತು ತನ್ನ ಜ್ಞಾನದ ಎಲ್ಲೆಯನ್ನು ವಿಸ್ತರಿಸಿಕೊಳ್ಳುತ್ತದೆ ಎಂಬುದಾಗಿದೆ. ಕ್ಷೇತ್ರಭೇಟಿಗಳು ಈ ಆಶಯಗಳನ್ನು ಈಡೇರಿಸಲು ಮುಖ್ಯ ಸಾಧನಗಳಾಗುತ್ತವೆ.

- **ಸಂದರ್ಶನ ವಿಧಾನ**ದಿಂದ ಅನೇಕ ಕೌಶಲಗಳು ಮಗುವಿಗೆ ಸಿದ್ಧಿಸುತ್ತವೆ. ಪರಿಚಿತ/ಅಪರಿಚಿತರೊಡನೆ ಸಂವಾದ, ಇತರರಿಂದ ವಿಷಯ ಹೊರತೆಗೆಯುವುದು, ಜಾಣ್ಮೆ, ಧೈರ್ಯ, ವಿಷಯಗಳ ಜೋಡಣೆ ಇತ್ಯಾದಿ. ಉದಾಹರಣೆಗೆ ಸ್ವಾತಂತ್ರ್ಯ ಹೋರಾಟ ಹೇಗೆ ನಡೆಯಿತು? ತನ್ನ ಊರಿನ ಜನರು ಇದನ್ನು ಕಂಡ ಬಗೆ ಹೇಗೆ? ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಪ್ರಯೋಜನಗಳೇನು? ಪರಿಸರ ಹೇಗೆ 50–60 ವರ್ಷಗಳಲ್ಲಿ ಬದಲಾಗುತ್ತಿದೆ. ಚುನಾವಣೆಗಳು ಹೇಗೆ ನಡೆಯುತ್ತವೆ? ಚುನಾಯಿತ ಸದಸ್ಯರು ಏನೇನು ಕೆಲಸ ಮಾಡುತ್ತಾರೆ? ಕುಶಲ ಕರ್ಮಿಗಳು ಯಾವ ಯಾವ ತಂತ್ರಜ್ಞಾನವನ್ನು ಬಳಸುತ್ತಾರೆ? ಇಂತಹ ಅನೇಕ ಸಾಧ್ಯತೆಗಳನ್ನು ವಿದ್ಯಾರ್ಥಿ ಈ ತಂತ್ರದ ಮೂಲಕ ತಿಳಿಯಬಹುದು.
- **ಅನ್ವೇಷಣಾ ವಿಧಾನ** ತುಂಬಾ ವ್ಯಾಪಕ ಅರ್ಥ ಹೊಂದಿದೆ. ಪೂರ್ಣ ಪ್ರಮಾಣದಲ್ಲಿ ಈ ವಿಧಾನಗಳನ್ನು ಬಳಕೆ ಪ್ರಶ್ನಾರ್ಹ. ನಿರ್ದೇಶಿತ ಅನ್ವೇಷನಾ ವಿಧಾನ [Guided Exploration] ಒಂದು ಅನುಸರಣಾ ಯೋಗ್ಯ ಸಾಧ್ಯತೆ. ಉದಾಹರಣೆಗೆ ಕಬ್ಬಿಣ ಯಾವಾಗ ತುಕ್ಕು ಹಿಡಿಯುತ್ತದೆ ಮತ್ತು ಏಕೆ? ಬಟ್ಟೆಗಳು – ಬಿಸಿಲು, ನೆರಳು, ಮನೆಯೊಳಗಿನ 03 ಸನ್ನಿವೇಶಗಳಲ್ಲಿ ಯಾವಾಗ ಬೇಗ ಒಣಗುತ್ತವೆ. ಹಿಡಿದ ಸಮಯ ಎಷ್ಟು? ನನ್ನೂರಿನ ಜನಪದ ಹಾಡುಗಳು ಯಾವುವು [ಬೇರೆ ವಿಧಾನಗಳೂ ಇಲ್ಲಿ ಬರಬಹುದು] ಧ್ಯುತಿಸಂಶ್ಲೇಷಣೆ ಕ್ರಿಯೆಯ ದರ ಯಾವಾಗ ಜಾಸ್ತಿ? ಇಂತಹ ಹಲವು ಕುತೂಹಲಗಳಿಗೆ ಮಕ್ಕಳು ಉತ್ತರವನ್ನು ಕಂಡುಕೊಳ್ಳಲು, ಅನ್ವೇಷಣೆ ನಡೆಸಲು ಮಕ್ಕಳಿಗೆ ಮಾರ್ಗದರ್ಶನ ನೀಡಬಹುದು.
- **ಅನುಗಮನ** ವಿಧಾನವಲ್ಲ, ಅದೊಂದು ಕ್ರಮ. ಅನೇಕ ಬೋಧನಾ ವಿಧಾನಗಳ ಸಮುಚ್ಛಯ. ಇವುಗಳ ಬಳಕೆಯಿಂದ ವಿದ್ಯಾರ್ಥಿ ಒಂದು ಜ್ಞಾನವನ್ನು ತಾನೇ ಸಾಮಾನ್ಯೀಕರಿಸಲು ಸಹಾಯಕವಾಗುತ್ತದೆ. ಉದಾಹರಣೆಗೆ ಕ್ರಿಯಾಪದ, ನಾಮಪದ, ಸವರ್ಣ ದೀರ್ಘಸಂಧಿ ಇಂತಹ ಪರಿಕಲ್ಪನೆಗಳನ್ನು ಬೋಧಿಸುವಾಗ ಸಾಮಾನ್ಯವಾಗಿ ಹಲವು ಉದಾಹರಣೆ ನೀಡಿ ಅಲ್ಲಿನ ಸಾದೃಶ್ಯಗಳನ್ನು ಗಮನಿಸುವಂತೆ ತಿಳಿಸಲಾಗುತ್ತದೆ ಹಾಗೂ ಇವುಗಳ ಆಧಾರದ ಮೇಲೆ ಸಾಮಾನ್ಯ ಅಭಿಪ್ರಾಯಗಳನ್ನು ವಿದ್ಯಾರ್ಥಿ ತಿಳಿಯುವಂತೆ ಮಾಡಲಾಗುತ್ತದೆ. ರೇಖಾಗಣಿತದ ಅನೇಕ ಪರಿಕಲ್ಪನೆಗಳನ್ನು ಮೂಡಿಸಲು ಇದು ಸಹಕಾರಿ – ಉದಾಹರಣೆಗೆ ಸಮಬಾಹು ತ್ರಿಭುಜ, ಲಂಬಕೋನ ತ್ರಿಭುಜ ಇತ್ಯಾದಿ ಅಥವಾ ಸೂತ್ರಗಳು ಹೇಗೆ ಹುಟ್ಟಿದವು ಎನ್ನುವುದನ್ನು ಅನುಗಮನ ಕ್ರಮದಿಂದ ಯಶಸ್ವಿಯಾಗಿ ವಿದ್ಯಾರ್ಥಿಗೆ ಕಲಿಸಲು ಸಾಧ್ಯ. ವಿಜ್ಞಾನದ ಪರಿಕಲ್ಪನೆಗಳನ್ನು ಉದಾ: ಬೆಳಕು ಸರಳರೇಖೆಯಲ್ಲಿ ಚಲಿಸುವುದು,

ಬೆಳಕಿನ ಪ್ರತಿಫಲದ ನಿಯಮಗಳು, ಲೋಹ, ಆಮ್ಲದ ಗುಣಗಳು, ಪರಿಕಲ್ಪನೆಗಳನ್ನು ಕಲಿಸಲು ಅನುಗಮನ ವಿಧಾನ ಸಹಕಾರಿ.

- **ಗೃಹಪಾಠಗಳು** ಕಲಿಕೆಯ ವಿಸ್ತರಣೆಗಳಾಗಬೇಕೆ ವಿನಃ ಕಲಿಕೆಯನ್ನು ಪುನರಾವರ್ತಿಸುವ ಯಾಂತ್ರಿಕ ಕ್ರಿಯೆ ಆಗಬಾರದು. ಎಲ್ಲಾ ಮಕ್ಕಳಿಗೂ ಒಂದೇ ತೆರನಾದ ಗೃಹಪಾಠ ಸಲ್ಲದು. ವಿದ್ಯಾರ್ಥಿಯ ಕಲಿಕೆಯ ವೇಗ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ವೈವಿಧ್ಯಮಯ ಗೃಹಪಾಠ ನೀಡಿ, ತಿದ್ದಿ ತೀಡಿ ಕಲಿಕೆಯನ್ನು ಗಟ್ಟಿಗೊಳಿಸಲು ಗೃಹಪಾಠ ಒಂದು ಪ್ರಬಲ ಅಸ್ತ್ರ.
- **ಗುಂಪು ಚಟುವಟಿಕೆ** ಕಲಿಕೆಗೆ ಮತ್ತೊಂದು ಪರಿಣಾಮಕಾರಿ ತಂತ್ರ. ಕೆಲವು ಸಾಮಾನ್ಯ ಸಂಗತಿಗಳನ್ನು ಚರ್ಚಿಸಿ – ತೀರ್ಮಾನಿಸಲು ಬಳಸಬಹುದು. ಇದಕ್ಕಾಗಿ ತರಗತಿಯ ಪಠ್ಯಪುಸ್ತಕಗಳನ್ನು ಆಕರವಾಗಿ ಬಳಸಬಹುದು ಅಥವಾ ಗ್ರಂಥಭಂಡಾರದಲ್ಲಿ ದೊರೆಯುವ ಪುಸ್ತಕಗಳನ್ನು ಬಳಸಬಹುದು. ಭಾಷೆ–ಸಮಾಜ ಪರಿಚಯದ ತತ್ವ ಪರಿಕಲ್ಪನೆಗಳನ್ನು ಸುಲಭವಾಗಿ ಇಲ್ಲಿ ಅಳವಡಿಸಬಹುದು. ಉದಾಹರಣೆಗೆ ತ್ರಿಭುಜದ ಕೋನದ ಮೊತ್ತ, ಪೈ–ಬೆಲೆ, ಏಕದಳ/ದ್ವಿದಳಧಾನ್ಯ, ಸಸ್ಯಗಳ ಗುಣಲಕ್ಷಣಗಳು, ಪಂಚಾಯಿತಿಯ ಕರ್ತವ್ಯಗಳು, ತನ್ನ ಊರಿನ ಸಂಪನ್ಮೂಲಗಳು, ಧಾರ್ಮಿಕ ಕೇಂದ್ರಗಳು, ಜನಪದ ಕಥೆ, ಹಾಡುಗಳು ಇತ್ಯಾದಿಗಳನ್ನು ಗುಂಪು ಚಟುವಟಿಕೆಯ ಮೂಲಕ ಪರಿಣಾಮಕಾರಿಯಾಗಿ ಕಲಿಸಬಹುದು.
- **ಸೃಜನಶೀಲತೆಗೆ ಪ್ರೋತ್ಸಾಹ:–**
  - **ತರಗತಿಗೊಂದು** – ಫ್ಲಾನೆಲ್ ಬೋರ್ಡ್, ಹಿಂದಿನ ಭಾಗಗಳಲ್ಲಿ ಈ ಕುರಿತು ವಿವರಿಸಿದೆ. ಹಿರಿಯ ತರಗತಿಗಳಲ್ಲಿ ಮಕ್ಕಳ ಕೃತಿಗಳನ್ನು ಪ್ರದರ್ಶಿಸಿ, 10–15 ದಿನಗಳಿಗೊಮ್ಮೆ ಪ್ರದರ್ಶಿಕೆಗಳನ್ನು ಬದಲಾಯಿಸಿ ಉತ್ತಮ ಕೃತಿಗಳನ್ನು ಸಂಗ್ರಹಿಸಿ – ಕೈಬರಹದ ಹಸ್ತಪ್ರತಿ ಹೊರತನ್ನಿ.
  - **20 ಅಂಶಗಳ ಕಾರ್ಯಕ್ರಮ** – 2002–03ರಲ್ಲಿನ ಕಾರ್ಯಕ್ರಮಗಳನ್ನು ಜ್ಞಾಪಿಸಿಕೊಳ್ಳಿ. ತೆಗೆ ಪುಸ್ತಕ ಹೊರಗೆ, ತರಗತಿಗೊಂದು ಹಸ್ತಪ್ರತಿ. ನಾನು ಶಿಕ್ಷಕನಾದರೆ, ಗೆಳೆಯನಿಗೊಂದು ಪತ್ರ ಇಂತಹ ಸುಲಭ ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳು ಲವಲವಿಕೆಯಿಂದ ಕೂಡಿರುವಂತೆ ಮಾಡಿ, ಸೃಜನಶೀಲತೆಯನ್ನು ಉತ್ತೇಜಿಸಿ.
  - **ವಿದ್ಯಾರ್ಥಿಗಳಿಂದ ಕಥೆ ಕವನ ರಚನೆ:** ವಿದ್ಯಾರ್ಥಿಗಳ ಸೃಜನಾತ್ಮಕತೆ, ಭಾಷಾ ಕೌಶಲಗಳ ಅಭಿವೃದ್ಧಿ ಮತ್ತು ಬಳಕೆಯ ಉದ್ದೇಶದಿಂದ ಶಾಲೆಗಳ ವಿದ್ಯಾರ್ಥಿಗಳಿಂದ ಅವರ ಇಚ್ಛೆಗನುಗುಣವಾಗಿ ಕಥೆಗಳನ್ನು ರಚಿಸಲು ಶಾಲಾ ಶಿಕ್ಷಕರು ಮಾರ್ಗದರ್ಶನ ನೀಡುವುದು. ಈ ಕಥೆಗಳ ಸಂಕಲನವನ್ನು ಫ್ಲಾನೆಲ್ ಬೋರ್ಡಿನಲ್ಲಿ ಪ್ರದರ್ಶಿಸುವುದು. ಉತ್ತಮವಾದ ಕೃತಿಗಳನ್ನು ಕ್ಲಸ್ಟರ್ ಹಂತದ ವಾರ್ತಾಸಂಚಿಕೆ, ಜಿಲ್ಲಾಹಂತದ ಸಂಚಿಕೆ ಮತ್ತು ಉತ್ತಮವಾದವುಗಳ ಶಿಕ್ಷಣ ವಾರ್ತೆ ಸಂಚಿಕೆಗಳಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳೊಡನೆ ಮಾಹಿತಿ ಹಂಚಿಕೊಳ್ಳುವುದು. ಮಕ್ಕಳು ಮಾಡಿದ ಇಂತಹ ಕಾರ್ಯಗಳನ್ನು ಒಂದು ಹೊತ್ತಿಗೆಯಲ್ಲಿ ಮಾಸಿಕವಾಗಿ ಮತ್ತು ವಾರ್ಷಿಕ ಸಂಚಿಕೆಯಾಗಿ ಹೊರತರುವುದು.

- **ತಿಂಗಳಿಗೊಂದು ವಿಜ್ಞಾನಪ್ರಶ್ನೆ ಕಾರ್ಯಕ್ರಮ**: ವಿಜ್ಞಾನದಲ್ಲಿನ ಕಲಿಕಾಂಶಗಳು ಅಭ್ಯಾಸ ಚಟುವಟಿಕೆಯಾಗಿ, ನಿಜಜೀವನಕ್ಕೆ ಅನ್ವಯಿಸುವ ಚಟುವಟಿಕೆಯಾಗಿ, ಅನ್ವೇಷಣೆ ಮತ್ತು ಪ್ರಯೋಗಾತ್ಮಕ ಅಂಶಗಳನ್ನು ಆಧರಿಸಿ ಸ್ಪಷ್ಟ ಮತ್ತು ಸ್ಫುಟವಾದ ಪ್ರಶ್ನೆ ತುಣುಕನ್ನು ಪ್ರಶ್ನಾರೂಪದಲ್ಲಿ ಪ್ರತಿ ವಾರಕ್ಕೊಂದರಂತೆ ಪ್ರಶ್ನೆಯನ್ನು ಪಿನ್ ಬೋರ್ಡಿನಲ್ಲಿ ಹಾಕುವುದು. ಉತ್ತರಗಳನ್ನು ಪಡೆದು ಪ್ರದರ್ಶಿಸುವುದು.

ಮೇಲ್ಕಾಣಿಸಿದ ಚಟುವಟಿಕೆಗಳಿಂದ ನಮ್ಮ ತರಗತಿಗಳಲ್ಲಿ ಕೆಳಕಂಡ ಬದಲಾವಣೆಗಳನ್ನು ಕಾಣಬಹುದಾಗಿದೆ.

- ಮಕ್ಕಳ ಮುಖದಲ್ಲಿ ಮಂದಹಾಸ ಕಾಣುತ್ತದೆ.
- ಮಕ್ಕಳು ಲವಲವಿಕೆಯಿಂದ ಇರುತ್ತಾರೆ.
- ಯುಕ್ತ ಪ್ರತಿಕ್ರಿಯೆಯನ್ನು ಮಕ್ಕಳು ತತ್‌ಕ್ಷಣ ನೀಡುತ್ತಾರೆ.
- ಮಕ್ಕಳು ಶಿಕ್ಷಕರೊಂದಿಗೆ ಗೌರವದಿಂದ ವರ್ತಿಸುತ್ತಾರೆ. ಆದರೆ ಭಯದಿಂದ ಅಲ್ಲ.
- ಯಾವ ಮಕ್ಕಳಲ್ಲಿಯೂ ಹಿಂಜರಿಕೆ ಕಾಣದು, ಅಧ್ಯಾಪಕರನ್ನು ಪ್ರಶ್ನಿಸುತ್ತಾರೆ. ಸಹಪಾಠಿಗಳೊಂದಿಗೆ ಚರ್ಚಿಸುತ್ತಾರೆ.

# 13. ಮೌಲ್ಯಮಾಪನ

ಮೌಲ್ಯಮಾಪನ ಎಂಬ ಪದದಲ್ಲಿ ಮಗುವಿನ ಕಲಿಕೆಯ "ಮಾಪನ" ಎಂಬ ಅರ್ಥಕ್ಕಿಂತ ವ್ಯಾಪಕವಾದ ಧ್ವನಿ ಇದೆ. ಇವು ಕೇವಲ ಮಾಪಿಸಿ ಬೆಲೆ ಕಟ್ಟುವುದು ಎಂಬ ಅರ್ಥವಲ್ಲ. ಬೆಲೆ ಕಟ್ಟಿದ ತರುವಾಯ ಈ ಬೆಲೆಯು ಏಕೆ? ಅದು ಹೆಚ್ಚಾಗಬಾರದಾಗಿತ್ತೆ? ಏನು ಕಾರಣ? ಕಲಿಯುವ ವಿಷಯದ ಕಾಠಿಣ್ಯ ಮಟ್ಟವೇ, ಬೋಧನಾ ವಿಧಾನವೇ; ಮಾಪನಕ್ಕೆ ಬಳಸಿದ ಸಾಧನಗಳಲ್ಲಿನ ಲೋಪಗಳೇ, ಮೌಲ್ಯಮಾಪನ ಕ್ರಮವೇ ಇತ್ಯಾದಿ ಪತ್ತೆಹಚ್ಚಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಒಟ್ಟು ಚಟುವಟಿಕೆಗಳು ಮೌಲ್ಯಮಾಪನ ಎಂಬ ಪದದಲ್ಲಿ ಇವೆ. ಇದು ವ್ಯಾಪಕ ಮತ್ತು ನಿರಂತರವಾಗಿ ಇರಬೇಕೆಂದು ಮೌಲ್ಯಮಾಪನದ ಇನ್ನೊಂದು ನಿರೀಕ್ಷೆ. ಅಂದರೆ ಮಗುವಿನ ಬೌದ್ಧಿಕ ಮನೋಭಾವನಾತ್ಮಕ ಕೌಶಲ ರೂಢಿಸಿಕೊಂಡಿರುವ ಮೌಲ್ಯಗಳನ್ನು ನಿರಂತರವಾಗಿ ಮೂಡಿಸಿ ಕೊರತೆಯನ್ನು ತುಂಬುತ್ತಾ ಹೋಗುವುದು ಮೌಲ್ಯಮಾಪನದ ಒಟ್ಟಾರೆ ನಿರೀಕ್ಷೆ.

- 8–9ನೇ ತರಗತಿಯವರೆಗೆ ಮೊದಲ ಮತ್ತು ಎರಡನೇ ಅವಧಿಯಲ್ಲಿ ಎರೆಡೆರಡು ಕಿರುಪರೀಕ್ಷೆ ನಡೆಸಬೇಕು. ಅಂದರೆ 1ನೇ ಕಿರು ಪರೀಕ್ಷೆಯನ್ನು ಜುಲೈ ಅಂತ್ಯದಲ್ಲಿ ಹಾಗೂ 2ನೇ ಕಿರು ಪರೀಕ್ಷೆಯನ್ನು ಆಗಸ್ಟ್‌ನಲ್ಲಿ, 3ನೇ ಕಿರುಪರೀಕ್ಷೆಯನ್ನು ಡಿಸೆಂಬರ್‌ನಲ್ಲೂ, 4ನೇ ಕಿರುಪರೀಕ್ಷೆಯನ್ನು ಫೆಬ್ರವರಿಯಲ್ಲಿಯೂ ನಡೆಸಬೇಕು. ಪ್ರತಿ ವಿಷಯದ ಕಿರುಪರೀಕ್ಷೆಗೆ 40 ಅಥವಾ 45 ನಿಮಿಷಗಳ ಒಂದು ಅವಧಿಯನ್ನು ಬಳಸಿಕೊಳ್ಳಬೇಕು. ಶೇ.50ರಷ್ಟು ವಸ್ತುನಿಷ್ಠ [ಬಹು ಆಯ್ಕೆ] ಪ್ರಶ್ನೆಗಳು ಹಾಗೂ ಶೇ.50ರಷ್ಟು ಕಿರು ಉತ್ತರ ಪ್ರಶ್ನೆಗಳು ಇರಬೇಕು.

ಈ ಕಿರುಪರೀಕ್ಷೆಯ ಗರಿಷ್ಠ ಅಂಕಗಳು 25 ಆಗಿವೆ. ಈ ಅಂಕಗಳನ್ನು ಶಿಕ್ಷಕರು ತಮ್ಮ ವೈಯಕ್ತಿಕ ಅಂಕವಹಿಯಲ್ಲಿ ನಮೂದಿಸಿಕೊಳ್ಳಬೇಕು.

- ಮೌಲ್ಯಮಾಪನವು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವುದರೊಂದಿಗೆ ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಪರೀಕ್ಷಿಸುವಂತಿರಬೇಕು.
- ಸಾಮರ್ಥ್ಯಾಧಾರಿತ ಮೌಲ್ಯಮಾಪನವನ್ನು ಪಠ್ಯದಲ್ಲಿರುವ ಸಾಮರ್ಥ್ಯಕ್ಕನುಗುಣವಾಗಿ ಸಾಮಗ್ರಿಗಳನ್ನು [ಉದಾ:– ಪ್ರಶ್ನೆಗಳು, ಮಾದರಿಗಳು, ನಕ್ಷೆಗಳು, ಚಿತ್ರಗಳು, ಚಟುವಟಿಕೆಗಳು] ರಚಿಸಿಕೊಂಡು ಮಾಡಬೇಕು.
- ಮೌಲ್ಯಮಾಪನ ಸಂದರ್ಭದಲ್ಲಿ ಸಾಮರ್ಥ್ಯವನ್ನು ಪರೀಕ್ಷಿಸುವಂತಹ ಪ್ರಶ್ನೆ/ಚಟುವಟಿಕೆಗಳಿಗೆ ಮಹತ್ವ ನೀಡಬೇಕೇ, ವಿನಃ ಪಠ್ಯವಿಷಯ ತುಂಬಾ ಪ್ರಧಾನವಾಗಬಾರದು.
- ಪ್ರಗತಿಪತ್ರದಲ್ಲಿ ಮಕ್ಕಳ ಕಲಿಕೆಯನ್ನು ದೃಢಪಡಿಸಿಕೊಂಡು ನಂತರವೇ "ಗಳಿಸಿದೆ" ಎಂದು ನಮೂದಿಸುವುದು. ಮೌಲ್ಯಮಾಪನ ಮಾಡಿದ ನಂತರ ಫಲಿತಾಂಶವನ್ನು ವಿಶ್ಲೇಷಣೆ ಮಾಡಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ಕೈಗೊಂಡು ಮಕ್ಕಳು ನಿಗದಿತ ಅವಧಿಯಲ್ಲಿ ಸಾಮರ್ಥ್ಯ ಗಳಿಸುವಂತೆ ಪ್ರೇರೇಪಿಸಬೇಕು. ಪೂರ್ಣವಾಗಿ

ಸಾಮರ್ಥ್ಯಗಳನ್ನು ಗಳಿಸದೇ ಇರುವ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯ ಸಂದರ್ಭದಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಸಾಮರ್ಥ್ಯ ಗಳಿಸುವಂತೆ ಪ್ರಯತ್ನಿಸಬೇಕು.

- ಮೌಲ್ಯಮಾಪನವು ಕೇವಲ ನೆನಪಿನಶಕ್ತಿಯನ್ನು ಪರೀಕ್ಷಿಸುವಂತಿರದೇ, ಗಳಿಸಿದ ಸಾಮರ್ಥ್ಯಗಳನ್ನು ಒರೆಗೆ ಹಚ್ಚುವಂತಿರಬೇಕು. ಮಕ್ಕಳ ಪ್ರಗತಿಯನ್ನು ಮಕ್ಕಳೇ ದಾಖಲಿಸಲು ಅವಕಾಶ ಮಾಡಿ ಹಾಗೂ ಕ್ರೋಢೀಕೃತ ಪ್ರಗತಿ ತಃಖ್ತೆಯಲ್ಲಿ ನಮೂದಿಸಬೇಕು. ಕ್ರೋಢೀಕೃತ /ಸಂಚಿತ ಅಂಕದಾಖಲೆ ಒಂದು ಸ್ಥಾಯಿ ದಾಖಲೆ.

**ಮೌಲ್ಯಮಾಪನ:**

ಮಧ್ಯವಾರ್ಷಿಕ ಹಾಗೂ ವಾರ್ಷಿಕ ಮೌಲ್ಯಮಾಪನವನ್ನು ಎರಡೂ ವಿಭಾಗಗಳಲ್ಲಿಯೂ ನಡೆಸಬೇಕು. ಎ ವಿಭಾಗದಲ್ಲಿ ಪ್ರತಿ ವಿಷಯದಲ್ಲಿ ಲಿಖಿತ ಹಾಗೂ ಮೌಖಿಕ ಮೌಲ್ಯಮಾಪನ ಇರುತ್ತದೆ. ಲಿಖಿತ ಮೌಲ್ಯಮಾಪನವು 40 ಅಂಕಗಳಾಗಿದ್ದು, 90 ನಿಮಿಷಗಳ ಅವಧಿಯುಳ್ಳದ್ದಾಗಿರುತ್ತದೆ. 10 ಅಂಕಗಳ ಮೌಖಿಕ ಮೌಲ್ಯಮಾಪನವನ್ನು ಎಲ್ಲಾ ವಿದ್ಯಾರ್ಥಿಗಳ ಸಮ್ಮುಖದಲ್ಲಿಯೇ ನಡೆಸಬೇಕು.

- ಕಂಠಪಾಠಕ್ಕೆ [ಅವಶ್ಯವಿರುವೆಡೆ ಬಿಟ್ಟು] ಪ್ರಾಮುಖ್ಯತೆ ನೀಡದೆ ಮಕ್ಕಳು ಸ್ವಯಂಶಕ್ತಿಯಿಂದ ಬರೆಯುವುದಕ್ಕೆ ಹಾಗೂ ಅಭಿವ್ಯಕ್ತಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.
- ಭಾಷಾ ವಿಷಯದಲ್ಲಿ ಆಯಾ ತರಗತಿಯಮಟ್ಟದ ವಿಷಯವನ್ನು ಒಳಗೊಂಡಿರುವ ಲೇಖನ/ಕಥೆ/ಸಂಭಾಷಣೆ ಇವುಗಳನ್ನು ನೀಡಿ ಅವನ್ನು ವಿದ್ಯಾರ್ಥಿ ಓದಿ, ಅರ್ಥೈಸಿಕೊಂಡು ಉತ್ತರಗಳನ್ನು ಬರೆಯುವಂತಹ ಸಾಮಗ್ರಿಗಳನ್ನು ಮೌಲ್ಯಮಾಪನದಲ್ಲಿ ಬಳಸಬೇಕು.
- ಸೆಮಿಸ್ಟರ್ ಪರೀಕ್ಷೆಯನ್ನು ಶಾಲಾಹಂತದಲ್ಲಿ ನಡೆಸಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಶ್ರೇಣಿಗಳಿಗೆ ಪರಿವರ್ತಿಸಿ, ಪ್ರಗತಿ ಪತ್ರದಲ್ಲಿ ಶ್ರೇಣಿಗಳನ್ನು ಮಾತ್ರ ನಮೂದಿಸಬೇಕು. ಅಂಕಗಳನ್ನು ಶಿಕ್ಷಕರು ತಮ್ಮ ವೈಯಕ್ತಿಕ ಅಂಕ ವಹಿಯಲ್ಲಿ ನಮೂದಿಸಿಕೊಳ್ಳಬೇಕು.
- ಸೆಮಿಸ್ಟರ್ ಅವಧಿಯ ಪ್ರಶ್ನೆಪತ್ರಿಕೆಗಳನ್ನು ಶಾಲಾಹಂತದಲ್ಲಿ ಆಯಾ ವಿಷಯ ಬೋಧಿಸುವ ಶಿಕ್ಷಕರೇ ತಯಾರಿಸಿಕೊಳ್ಳಬೇಕು.
- ಪ್ರಥಮ ಸೆಮಿಸ್ಟರ್ ಅವಧಿಯಲ್ಲಿ 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ಬೋಧನೆಯನ್ನು ಮಾಡಿ ಮುಂದಿನ ಸೆಮಿಸ್ಟರ್ ಅವಧಿಯ ಕಲಿಕೆಗೆ ಸಮರ್ಥರನ್ನಾಗಿಸಬೇಕು.
- 10ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಮೌಖಿಕ ಪರೀಕ್ಷೆಗೆ ಅವಕಾಶವಿಲ್ಲದಿರುವ ಕಾರಣ 9ನೆಯ ತರಗತಿಯ ದ್ವಿತೀಯ ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಮೌಖಿಕ ಪರೀಕ್ಷೆಯನ್ನು ಕೈ ಬಿಡಲಾಗಿದೆ.

**ಯೋಜನೆ [ಪ್ರಾಜೆಕ್ಟ್]**

1. ಪ್ರತಿ ಸೆಮಿಸ್ಟರ್ ಅವಧಿಗೆ ಈ ಕೆಳಕಂಡಂತೆ ಯೋಜನೆಯನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕು.
2. ಮೊದಲನೆಯ ಸೆಮಿಸ್ಟರ್ ಅವಧಿಯಲ್ಲಿ ಭಾಷೆ [ಪ್ರಥಮ, ದ್ವಿತೀಯ, ತೃತೀಯ ಭಾಷೆ] ಎರಡನೆಯ ಸೆಮಿಸ್ಟರ್ ಅವಧಿಯಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ [ಯೋಜನೆಯು ಗುಂಪು ಚಟುವಟಿಕೆ ಅಥವಾ ವೈಯಕ್ತಿಕ ಚಟುವಟಿಕೆ ಆಗಿರಬೇಕು].
3. ಪ್ರತಿ ತರಗತಿಯ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಪ್ರಥಮ ಸೆಮಿಸ್ಟರ್‌ನಲ್ಲಿ ಒಂದೊಂದು ಗುಂಪಿಗೆ ಒಂದೊಂದು ಭಾಷೆಯ ಯೋಜನೆಯನ್ನು ನೀಡಬೇಕು.
4. ದ್ವಿತೀಯ ಸೆಮಿಸ್ಟರ್‌ನಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನವನ್ನು ಒಂದೊಂದು ಗುಂಪಿಗೆ ನೀಡಬೇಕು. ಹೆಚ್ಚಿನ ವಿವರಗಳಿಗೆ "ಯೋಜನಾ" ಸಂಚಿಯನ್ನು ನೋಡಿರಿ.

"ಬಿ" ವಿಭಾಗದಲ್ಲಿ ಈ ಕೆಳಕಂಡ ವಿಷಯಗಳ ಮೇಲೆ ಮೌಲ್ಯಮಾಪವನ್ನು ನಿಗದಿಪಡಿಸಿರುವ ಅಂಕಗಳಿಗೆ ಅನುಗುಣವಾಗಿ ನಡೆಸುವುದು.

| | | | |
|---|---|---|---|
| 1. | ಯೋಜನೆ | – | 10 ಅಂಕಗಳು |
| 2. | ಮೌಲ್ಯ / ಜೀವನ ಕೌಶಲಗಳು | – | 10 ಅಂಕಗಳು |
| 3. | ಜೀವನ ವಿಜ್ಞಾನ (ದೈ.ಶಿ+ಯೋಗ+ಆರೋಗ್ಯ) | | 20 ಅಂಕಗಳು |
| 4. | ಕಲೆ/ಸಾ.ಉ.ಉ.ಕಾ | – | 10 ಅಂಕಗಳು |
| | ಒಟ್ಟು | | 50 ಅಂಕಗಳು |

**ಸವಿವರ ಮಾಹಿತಿಗೆ ಸೌರಭ 2007 ನೋಡಿ**

ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು:–

**1. ಉದ್ದಿಷ್ಟಗಳು: ಉದ್ದಿಷ್ಟವಾರು ಅಂಕವಿತರಣೆ**

| ಅ] ಭಾಷೆಗಳು: | | | ಕೋರ್ ವಿಷಯಗಳು | | |
|---|---|---|---|---|---|
| ಜ್ಞಾನ | – | 25% | ಜ್ಞಾನ | – | 25% |
| ಗ್ರಹಿಕೆ | – | 35% | ತಿಳುವಳಿಕೆ | – | 45% |
| ಅಭಿವ್ಯಕ್ತಿ | – | 30% | ಅನ್ವಯ | – | 20% |
| ಪ್ರಶಂಸೆ | – | 10% | ಕೌಶಲ | – | 10% |

**2. ಪ್ರಶ್ನೆಗಳ ಸ್ವರೂಪ**

| | ಪ್ರಶ್ನೆಗಳ ಸ್ವರೂಪ [ಭಾಷೆ] | ಪ್ರಶ್ನೆಗಳ ಸ್ವರೂಪ [ಕೋರ್ ವಿಷಯ] |
|---|---|---|
| ವಸ್ತುನಿಷ್ಠ | 30% | 30% |
| ಕಿರುಉತ್ತರ | 40% | 50% |
| ವಿವರಣಾತ್ಮಕ ಉತ್ತರ | 30% | 20% |

3. ಕಠಿಣತೆಯ ಮಟ್ಟ:

| | | |
|---|---|---|
| ಸುಲಭ | – | 30% |
| ಸಾಧಾರಣ | – | 40% |
| ಕಠಿಣ | – | 30% |

ವಿಶೇಷ ಸೂಚನೆ:– 2008–09ನೇ ಸಾಲಿನಿಂದ 6 ರಿಂದ 9ನೇ ತರಗತಿಯವರೆಗೆ ದೈಹಿಕ ಶಿಕ್ಷಣವನ್ನು ಕಡ್ಡಾಯ ಪರೀಕ್ಷಾ ವಿಷಯವನ್ನಾಗಿಸಿದೆ. ಈ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣ ಮೌಲ್ಯಮಾಪನದ ಸವಿವರವನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ನೀಡುವ ಸೂಚನೆಗಳಂತೆ ಮೌಲ್ಯಮಾಪನ ಮಾಡುವುದು.

ಪಾಠಗಳ ವಿಂಗಡಣೆ "ಎ ವಿಭಾಗ" ಶಾಲೆಗಳು ಕಾರ್ಯನಿರ್ವಹಿಸುವ ಅವಧಿ

| | | |
|---|---|---|
| ಮೊದಲನೇ ಅವಧಿ | 50% | ದಿ: 30–05–2011 ರಿಂದ 02–10–2011 |
| ಎರಡನೇ ಅವಧಿ | 50% | ದಿ: 21–10–2011 ರಿಂದ 10–04–2012 |

- **ಶ್ರೇಣೀಕರಣ ಹಾಗೂ ಶ್ರೇಣಿಮೌಲ್ಯ**

**"ಎ" ವಿಭಾಗ**

| ಕ್ರ ಸಂ | ಶ್ರೇಣಿ | ಶೇಕಡ | ಶೀರ್ಷಿಕೆ | ಮೌಲ್ಯ |
|---|---|---|---|---|
| 1 | ಎ+ | 90% ರಿಂದ 100% | ಅತಿ ಶ್ರೇಷ್ಠ | 6 |
| 2 | ಎ | 75% ರಿಂದ 89% | ಶ್ರೇಷ್ಠ | 5 |
| 3 | ಬಿ+ | 60% ರಿಂದ 74% | ಉತ್ತಮ | 4 |
| 4 | ಬಿ | 50% ರಿಂದ 59% | ತೃಪ್ತಿಕರ | 3 |
| 5 | ಸಿ+ | 30% ರಿಂದ 49 | ಸಾಧಾರಣ | 2 |
| 6 | ಸಿ | 29%ಕ್ಕಿಂತ ಕಡಿಮೆ | ಅತೃಪ್ತಿಕರ | 1 |

**"ಬಿ" ವಿಭಾಗ**

| ಕ್ರ ಸಂ | ಶ್ರೇಣಿ | ಶೇಕಡ | ಶೀರ್ಷಿಕೆ ಶ್ರೇಣಿ |
|---|---|---|---|
| 1 | ಎ | 75% ರಿಂದ 100% | ಅತ್ಯುತ್ತಮ |
| 2 | ಬಿ | 50% ರಿಂದ 74% | ಉತ್ತಮ |
| 3 | ಸಿ | 49% ರಿಂದ ಕಡಿಮೆ | ಕನಿಷ್ಠ |

ನೈದಾನಿಕ ಮೌಲ್ಯಮಾಪನ:– ವಿದ್ಯಾರ್ಥಿಯ ಕಲಿಕಾಮಟ್ಟವನ್ನು ಗುರುತಿಸಿ ತೀರ್ಮಾನ ತೆಗೆದುಕೊಳ್ಳಲು ಬಳಸುತ್ತೇವೆ. ಅಂದರೆ ವಿದ್ಯಾರ್ಥಿ ಶಾಲಾವಿಷಯದಲ್ಲಿ ಸಾಮಾನ್ಯ ಪ್ರಗತಿ ಹೊಂದಲು ವಿಫಲವಾಗುತ್ತಿರುವ ಅಂಶಗಳನ್ನು ಪತ್ತೆಹಚ್ಚಲು ನೈದಾನಿಕ ಪರೀಕ್ಷೆ ಮಾಡುತ್ತೇವೆ. ಮಕ್ಕಳ ಕಲಿಕಾ ಸಾಮರ್ಥ್ಯಗಳನ್ನು ಕಂಡುಕೊಳ್ಳುವುದರ ಜೊತೆಗೆ, ನ್ಯೂನ್ಯತೆ ತಿಳಿಯಲು ನೈದಾನಿಕ ಪರೀಕ್ಷೆಯನ್ನು ಬಳಸುತ್ತೇವೆ.

## ನೈದಾನಿಕ ಮೌಲ್ಯಮಾಪನ ಮಾಡುವಲ್ಲಿ ಶಿಕ್ಷಕರ ಪಾತ್ರ:

- ಬೋಧನಾ ಕಲಿಕಾ ಪ್ರಕ್ರಿಯೆಯ ಸನ್ನಿವೇಶಗಳಲ್ಲಿ ಮಕ್ಕಳ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು.
- ಪ್ರತಿವಿಷಯ ನಿರೀಕ್ಷಿತ ಕಲಿಕೆ ವರ್ತನೆಗಿಂತ ಬಿನ್ನವಾದ ವರ್ತನೆ ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿಕೊಳ್ಳಬೇಕು.
- ವಿದ್ಯಾರ್ಥಿಯ ಕಲಿಕೆ ದೋಷಗಳನ್ನು ಅನುಕ್ರಮವಾಗಿ ಜೋಡಿಸಬೇಕು.
- ದೋಷ ಪತ್ತೆಹಚ್ಚಲು/ನಿಖರವಾಗಿ ತಿಳಿಯಲು ಪ್ರಶ್ನೆಪತ್ರಿಕೆ ರಚಿಸಬೇಕು.
- ಪರೀಕ್ಷಿಸಲು ಉದ್ದೇಶಿಸಿರುವ ಕಲಿಕಾಂಶವನ್ನು ವಿವಿಧ ಪ್ರಶ್ನೆಗಳ ಮೂಲಕ ಅಳೆಯಬೇಕು.
- ವೈಯಕ್ತಿಕ ಗಮನಹರಿಸಿ ನೈದಾನಿಕ ಪರೀಕ್ಷೆ ಮಾಡಬೇಕು.

- ಉತ್ತರಗಳನ್ನು ವಿಶ್ಲೇಷಿಸಿದ ನಂತರ ಮಕ್ಕಳ ಕಲಿಕಾ ಮೌಲ್ಯಗಳನ್ನು ನಿಖರವಾಗಿ ಗುರುತಿಸಿ ಪರಿಹಾರ ಬೋಧನೆ ಮಾಡಬೇಕು.

**ನೈದಾನಿಕ ಮೌಲ್ಯಮಾಪನದ ಅನಂತರ:**

ನೈದಾನಿಕ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳ ನಿಖರವಾದ ದೋಷ ಪತ್ತೆಹಚ್ಚಿದರೆ ಸಾಲದು. ದೋಷ ಪರಿಹಾರ ಅತಿ ಮುಖ್ಯ. ಅದಕ್ಕಾಗಿ ಒಂದು ಪರಿಹಾರ ಬೋಧನೆಯ ಯೋಜನೆಯನ್ನು ತಯಾರಿಸಿಕೊಂಡು ಅದರಂತೆ ಚಟುವಟಿಕೆಯನ್ನು ರೂಪಿಸಬೇಕು.

| ಕ್ರ ಸಂ | ಸಾಮರ್ಥ್ಯ | ಸಾಮರ್ಥ್ಯ ಗಳಿಸದಿರಲು ಸಂಭವನೀಯ ಕಾರಣಗಳು | ಕ್ರಿಯಾ ಪ್ರಾಕಲ್ಪನೆ ರಚನೆ | ನಡೆಸಬಹುದಾದ ಚಟುವಟಿಕೆ | ಬಳಸಬಹುದಾದ ಕಲಿಕೋಪಕರಣ |
|---|---|---|---|---|---|
| | | | | | |

ರೂಪಿಸಿದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ವಿದ್ಯಾರ್ಥಿಯ ದೋಷ ಪರಿಹರಿಸಬೇಕು. ಈ ದೋಷ ಪುನರಾವರ್ತನೆಯಾಗದಂತೆ ಮುಂಜಾಗ್ರತೆ ವಹಿಸಬಹುದು.

**ಫಲಿತಾಂಶ:**

ಅ] ವಿದ್ಯಾರ್ಥಿಯ ವಾರ್ಷಿಕ ಫಲಿತಾಂಶವು ಅವನ/ಳ ಆ ವರ್ಷದ ಸಾಧನೆಯ ಮೇಲೆ ಅವಲಂಬಿತವಾಗಿರುತ್ತದೆ. ಅಂದರೆ ಎರಡು ಸೆಮಿಸ್ಟರ್ ಅವಧಿಗಳ ಅಂತ್ಯದ ಮೌಲ್ಯಮಾಪನಗಳಲ್ಲಿ ಪಡೆದ ಶ್ರೇಣಿಗಳ ಆಧಾರದಿಂದ ನಿರ್ಧರಿಸಲ್ಪಡುತ್ತದೆ.

ಆ] 'ಎ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಸಿ+ ಶ್ರೇಣಿಯನ್ನು ಗಳಿಸಿರಬೇಕು.

ಇ] 'ಬಿ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಬಿ ಶ್ರೇಣಿಯನ್ನು ಪಡೆದಿರಬೇಕು.

ಈ] ವಿದ್ಯಾರ್ಥಿ ಶಾಲೆಗೆ ದಾಖಲಾದ ದಿನದಿಂದ ಶೇ.75 ಹಾಜರಿ ಕಡ್ಡಾಯ.

ಉ] ಮೊದಲ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿ ಗೈರುಹಾಜರಾದರೆ ಪೂರಕ ಪರೀಕ್ಷೆಯನ್ನು ನವೆಂಬರ್‌ನಲ್ಲಿ ಎರಡನೇ ಸೆಮಿಸ್ಟರ್ ಪರೀಕ್ಷೆಗೆ ಗೈರುಹಾಜರಾದರೆ ಜೂನ್ ತಿಂಗಳಲ್ಲಿ ಪೂರಕ ಪರೀಕ್ಷೆ ಮಾಡಿ ಪಡೆದಿರುವ ಶ್ರೇಣಿಗಳ ಆಧಾರದ ಮೇಲೆ ಫಲಿತಾಂಶವನ್ನು ನಿರ್ಧರಿಸಬೇಕು.

ಊ] ತೇರ್ಗಡೆಗೆ ಬೇಕಾದ ಕನಿಷ್ಠ ಶ್ರೇಣಿ[ಸಿ+]ಯನ್ನು ಎರಡೂ ಸೆಮಿಸ್ಟರ್‌ಗಳಲ್ಲಿ ಗಳಿಸದಿದ್ದರೆ ಇಡೀ ವರ್ಷದ ಪಠ್ಯವಸ್ತುವಿನ ಮೇಲೆಯೂ ಯಾವುದಾದರೂ ಒಂದು ಸೆಮಿಸ್ಟರ್‌ನಲ್ಲಿ ಗಳಿಸದಿದ್ದರೆ ಆ ಸೆಮಿಸ್ಟರ್‌ನ ಪಠ್ಯವಸ್ತುವಿನ ಮೇಲೆಯೂ ಜೂನ್ ತಿಂಗಳಲ್ಲಿ ಪರಿಹಾರ ಬೋಧನೆ ಸಹಿತ ಮರುಮೌಲ್ಯಮಾಪನ ಮಾಡಬೇಕು. ಇದರಲ್ಲೂ ಸಿ+ ಬಾರದೇ ಹೋದರೆ ವಿದ್ಯಾರ್ಥಿಯನ್ನು ಅನುತ್ತೀರ್ಣನೆಂದು ಘೋಷಿಸಬೇಕು.

**ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಘಟಕವು ನಿರ್ವಹಿಸುವ ಚಟುವಟಿಕೆಗಳು:**

- ಯೋಜನಾ ಸಂಚಿ: ಭಾಗ 'ಬಿ' ಗೆ ಸಂಬಂಧಪಟ್ಟಂತೆ ತರಗತಿಗಳಲ್ಲಿ ಪ್ರಾಜೆಕ್ಟ್ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಮನಸ್ಸು, ಬುದ್ಧಿ, ಹೃದಯಗಳನ್ನು ಅರಳಿಸುವ ಪ್ರಕ್ರಿಯೆಗಳನ್ನು ಒಳಗೊಂಡ ಪರಿಣಾಮಕಾರಿ ಕಲಿಕೆಗೆ ಇದು ಪೂರಕವಾಗಿದೆ. ಗಂಭೀರ ಚಿಂತನೆ ಹಾಗೂ ಅನುಭವಗಳ ಆಧಾರದಲ್ಲಿ ಈ ಸಂಚಿಯನ್ನು ಬಳಸಿಕೊಂಡು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಲು ಸಾಧ್ಯವಾಗಿರುತ್ತದೆ.
- ಮಾರ್ಗದರ್ಶಿ ಸೂತ್ರಗಳು:– 2007–08ನೇ ಸಾಲಿಗೆ ಸೆಮಿಸ್ಟರ್ ಪದ್ಧತಿ ಅನುಗುಣವಾಗಿ ಮೌಲ್ಯಮಾಪನ ವಿಧಾನ, ಪ್ರಕ್ರಿಯೆ, ಶಾಲೆಯ ಅವಧಿ ಹಾಗೂ ಪರೀಕ್ಷೆ ಅವಧಿ ಮತ್ತು ರಜೆಯ ಅವಧಿಯನ್ನು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾರ್ಗದರ್ಶಿ ಸೂತ್ರಗಳ ಕೈಪಿಡಿಯನ್ನು ಮುದ್ರಿಸಿ ವಿತರಿಸಲಾಯಿತು.
- ಸೌರಭ ಶಿಕ್ಷಕರ ಕೈಪಿಡಿ:– ಸೆಮಿಸ್ಟರ್ ಪದ್ಧತಿಗೆ ಅನುಗುಣವಾಗಿ ಮಾರ್ಗಸೂಚಿಗಳನ್ನು ಶಿಕ್ಷಕರಿಗೆ ತಿಳಿಯಪಡಿಸಲಾಗಿದೆ. ವಿಷಯವಾರು ಪಾಠಗಳ ಹಂಚಿಕೆ ಸೆಮಿಸ್ಟರ್ ಅನ್ವಯ ಮಾಡಲಾಗಿದೆ ಹಾಗೂ ವೇಳಾಪಟ್ಟಿ, ಪ್ರಶ್ನೆಪತ್ರಿಕೆ ರಚನೆ ಮತ್ತು ಭಾಗ ಬಿ ವಿಭಾಗಕ್ಕೆ ಹೆಚ್ಚು ಒತ್ತು ನೀಡಿ, ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಗಮನ ಹರಿಸಲಾಗಿದೆ. ಅಲ್ಲದೇ 1 ರಿಂದ 4ನೇ ತರಗತಿಯವರೆಗೆ ನಿರಂತರ ಮೌಲ್ಯಮಾಪನವನ್ನು ಮುಂದುವರೆಸಲಾಗಿದೆ.
- ಮೌಲ್ಯಮಾಪನ ಶಿಕ್ಷಕರ ಕೈಪಿಡಿ:– ಮೌಲ್ಯಮಾಪನ ವಿಧಾನ, ಹಂತಗಳು ಮತ್ತು ಪ್ರಕ್ರಿಯೆಗಳನ್ನು ಒಳಗೊಂಡ ವಿಷಯವಾರು, ಸಾಮರ್ಥ್ಯಗಳಿಗೆ ಅನುಗುಣವಾಗಿ ಶಿಕ್ಷಕರಿಗೆ ತರಬೇತಿ ಸಂಚಿಯನ್ನು ಸಿದ್ಧಪಡಿಸಲಾಗಿದೆ. ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಈಗಾಗಲೇ ವಿತರಿಸಲಾಗಿದೆ. ಪಠ್ಯೇತರ ವಿಷಯಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗಿದ್ದು, 2009–10ರಲ್ಲಿ ರಾಜ್ಯಮಟ್ಟದಲ್ಲಿ ಸಿಟಿಇ, ಡಯಟ್ ಮತ್ತು ವಿಷಯವಾರು ಶಿಕ್ಷಕರಿಗೆ ಮೌಲ್ಯಮಾಪನ ತರಬೇತಿ ನೀಡಲಾಗಿದೆ. ಬ್ಲಾಕ್ ಮತ್ತು ಜಿಲ್ಲಾಮಟ್ಟದ ತರಬೇತಿ ನೀಡುವಂತೆ ಸಿಟಿಇಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಶಿಕ್ಷಕರು ಮೌಲ್ಯಮಾಪನ ತರಬೇತಿ ಸಂಚಿಕೆಯ ಉಪಯೋಗವನ್ನು ಪಡೆದುಕೊಳ್ಳಬೇಕಾಗಿದೆ.

ಸೂಚನೆ: ಹೆಚ್ಚಿನ ಮಾಹಿತಿಗಾಗಿ 2009ರ "ಮೌಲ್ಯಮಾಪನ ಸಂಚಿಕೆ" [ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಕೈಪಿಡಿ] ನೋಡುವುದು.

# 14. ಶಾಲಾ ಸಂಘಗಳು

ವ್ಯಕ್ತಿಯು ವೈಯಕ್ತಿಕವಾಗಿ ಸಾಧನೆ ಮಾಡಲಾರದ್ದನ್ನು ಸಂಘದ ಮೂಲಕ ಸಾಧಿಸಿ ತೋರಿಸಬಹುದು. "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಉಕ್ತಿಯು ಸಂಘದ ಚಟುವಟಿಕೆಗೆ ಬೆನ್ನೆಲುಬು. ಸಂಘದ ಚಟುವಟಿಕೆಯಲ್ಲಿ ವಿದ್ಯಾರ್ಥಿ ಭಾಗವಹಿಸುವುದರಿಂದ ನಾಯಕತ್ವ ಗುಣ, ಸಹಕಾರ ಮನೋಭಾವ ಹಾಗೂ ಸಾಮಾಜಿಕ ಮೌಲ್ಯಗಳು ಬೆಳವಣಿಗೆಯಾಗುತ್ತವೆ. ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಸಂಘಗಳನ್ನು ಪ್ರಾರಂಭಿಸಿ ಅದರ ಅಡಿಯಲ್ಲಿ ಹಲವಾರು ಚಟುವಟಿಕೆಗಳನ್ನು ವಿದ್ಯಾರ್ಥಿಗಳೇ ಸಂಘಟಿಸಬೇಕು. ಶಿಕ್ಷಣ ಇಲಾಖೆಯು ಶಾಲೆಗಳಲ್ಲಿ ವಿವಿಧ ಸಂಘಗಳನ್ನು ಸ್ಥಾಪಿಸಿ, ಚಟುವಟಿಕೆಗಳನ್ನು ಸಂಘಟಿಸಿ, ಕಾರ್ಯರೂಪಕ್ಕೆ ತಂದು, ಕಾರ್ಯ ಪ್ರವೃತ್ತರಾಗುವಂತೆ ಸುತ್ತೋಲೆಯನ್ನು ಕಳುಹಿಸಿದೆ.

**ಶಾಲೆಗಳಲ್ಲಿ ನಿರ್ವಹಿಸಬಹುದಾದ ಸಂಘಗಳು**

ವಿಜ್ಞಾನ ಸಂಘ, ಗಣಿತ ಸಂಘ, ಸಾಹಿತ್ಯ ಸಂಘ, ಕಲಾ ಸಂಘ, ಸಾಹಸ ಸಂಘ, ಇಕೋ ಕ್ಲಬ್, ಗ್ರಾಹಕ ಕ್ಲಬ್, ರೆಡ್ ರಿಬ್ಬನ್ ಕ್ಲಬ್, ವಿದ್ಯಾರ್ಥಿ ಸಂಘ, ಕ್ರೀಡಾ ಸಂಘ ಇತ್ಯಾದಿ.

**ವಿಜ್ಞಾನ ಸಂಘ:**

**ಅರ್ಥ:**

ಮಕ್ಕಳು ವಿಜ್ಞಾನವನ್ನು ಸಂತಸದಾಯಕವಾಗಿ, ಆಸಕ್ತಿಯಿಂದ ಕಲಿಯಲು, ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ.

**ರಚನೆ:**

ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿ, ವಿಜ್ಯಾನ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನೂ ನಡೆಸುವುದು.

**ನಾಮಕರಣ:**

ಸಂಘಕ್ಕೆ ಖ್ಯಾತ ವಿಜ್ಞಾನಿಯ ಹೆಸರನ್ನು ನಾಮಕರಣ ಮಾಡಬಹುದು.

**ಉದ್ದೇಶಗಳು:**

- ವಿಜ್ಞಾನದ ತತ್ವಗಳು ತನ್ನ ಪರಿಸರದಲ್ಲಿ ಅಳವಡಿಕೆಯಾಗಿರುವ ಅರಿವು ಮೂಡಿಸುವುದು.
- ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು.

**ಕೈಗೊಳ್ಳಬಹುದಾದ ಚಟುವಟಿಕೆಗಳು:**

- ವಿಜ್ಞಾನ ವಸ್ತು ಪ್ರದರ್ಶನ
- ವಿಜ್ಞಾನ ನಾಟಕ ಸ್ಪರ್ಧೆ
- ವಿಜ್ಞಾನ ಭಾಷಣ ಸ್ಪರ್ಧೆ
- ವಿಜ್ಞಾನಿಗಳ ಜನ್ಮ ದಿನಾಚರಣೆಗಳು
- ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ
- ವಿಜ್ಞಾನ ಪ್ರಬಂಧ ಸ್ಪರ್ಧೆ
- ವಿಜ್ಞಾನ ಮಾದರಿಗಳ ತಯಾರಿಕಾ ಸ್ಪರ್ದೆ
- ಕಸದ ನಿರ್ವಹಣೆ ಉಪನ್ಯಾಸ
- ಓಜೋನ್ ದಿನಾಚರಣೆ
- ರಾಷ್ಟ್ರೀಯ ವಿಜ್ಞಾನ ದಿನಾಚರಣೆ
- ವೈಜ್ಞಾನಿಕ ಪ್ರವಾಸ ಹಮ್ಮಿಕೊಳ್ಳುವುದು
- ವಿಜ್ಞಾನಿಗಳು, ವಿಷಯ ಪರಿಣಿತರಿಂದ ಪ್ರಚಲಿತ ವಿದ್ಯಮಾನಗಳ ವೈಜ್ಞಾನಿಕ ಉಪನ್ಯಾಸಗಳನ್ನೂ ಏರ್ಪಡಿಸುವುದು.
- ಆರೋಗ್ಯ ಮೇಳಗಳು, ಜಲ ಸಂರಕ್ಷಣೆ, ಉಪನ್ಯಾಸ, ಸಾವಯವ ಗೊಬ್ಬರ ತಯಾರಿಕೆ, ಎರೆಹುಳು ಗೊಬ್ಬರ ತಯಾರಿಕಾ ಘಟಕಗಳ ಪ್ರಾತ್ಯಕ್ಷತೆ ಮುಂತಾದ ಕಾರ್ಯಕ್ರಮಗಳನ್ನು ಸಮುದಾಯದಲ್ಲಿ ಏರ್ಪಡಿಸುವುದು.
- ವಿಜ್ಞಾನಹಬ್ಬ ಆಚರಿಸುವುದು.
- ಪ್ರತಿದಿನ ವಿಜ್ಞಾನದ ವಿಶೇಷತೆಯನ್ನು ಸೂಚನಾ ಫಲಕದಲ್ಲಿ ಬರೆಸುವುದು.

**ಗಣಿತ ಸಂಘ**

**ಅರ್ಥ:**

"ಗಣಿತವನ್ನು ಸಂತಸದಾಯಕವಾಗಿ, ಆಸಕ್ತಿಯಿಂದ ಕಲಿಯಲು, ತಾರ್ಕಿಕ ಚಿಂತನೆ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ".

**ರಚನೆ:**

ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿ, ಗಣಿತ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ನಾಮಕರಣ:**

ಸಂಘಕ್ಕೆ ಖ್ಯಾತ ಗಣಿತ ತಜ್ಞರ ಹೆಸರನ್ನು ಇಡುವುದು.

**ಉದ್ದೇಶಗಳು:**

- ಗಣಿತ ತಜ್ಞರ ಕೊಡುಗೆಗಳನ್ನು ಸ್ಮರಿಸುವುದು.
- ಗಣಿತದ ಜ್ಞಾನವನ್ನು ದಿನನಿತ್ಯ ಜೀವನದಲ್ಲಿ ಬಳಸುವುದು.
- ತಾರ್ಕಿಕ ಮನೋಭಾವ ಬೆಳೆಸುವುದು.

**ಕೈಗೊಳ್ಳಬಹುದಾದ ಚಟುವಟಿಕೆಗಳು:**

- ಗಣಿತ ವಸ್ತು ಪ್ರದರ್ಶನ ಏರ್ಪಡಿಸುವುದು.
- ಗಣಿತಜ್ಞರ ಜನ್ಮ ದಿನಾಚರಣೆಗಳನ್ನು ಆಚರಿಸುವುದು.
- ಮೆಟ್ರಿಕ್ ಮೇಳಗಳನ್ನು ಸಂಘಟಿಸುವುದು.
- ಸಂತಸ ಗಣಿತ ಕುರಿತು ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ಆಯೋಜಿಸುವುದು.
- ಗಣಿತ ವಿಷಯದ ಕಾರ್ಯಾಗಾರಗಳನ್ನು ಏರ್ಪಡಿಸುವುದು.
- ಅನುಪಯುಕ್ತ ವಸ್ತುಗಳಿಂದ ಗಣಿತದ ಮಾದರಿಗಳನ್ನು ತಯಾರಿಸುವುದು.
- ಗಣಿತ ಮಾದರಿಗಳ ತಯಾರಿಕಾ ಸ್ಪರ್ಧೆ ಏರ್ಪಡಿಸುವುದು.
- ಗಣಿತಜ್ಞರು, ವಿಷಯ ಪರಿಣಿತರಿಂದ ಪ್ರಚಲಿತ ವಿದ್ಯಮಾನದ ಗಣಿತದ ಉಪನ್ಯಾಸಗಳನ್ನು ಏರ್ಪಡಿಸುವುದು.
- ಪ್ರತಿದಿನ ಗಣಿತದ ವಿಶೇಷತೆಯನ್ನು ಸೂಚನಾ ಫಲಕದಲ್ಲಿ ಬರೆಸುವುದು.

**ಸಾಹಿತ್ಯ ಸಂಘ:**

**ಅರ್ಥ:**

"ಸಾಹಿತ್ಯದ ಅಭಿರುಚಿಯನ್ನು ಬೆಳೆಸಲು, ಸೃಜನಶೀಲತೆಯನ್ನು ಹೊರಹೊಮ್ಮಿಸಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ".

**ರಚನೆ:**

ಮುಖ್ಯಶಿಕ್ಷಕರು ಗೌರವ ಅಧ್ಯಕ್ಷರಾಗಿ, ಭಾಷಾ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನೂ ನಡೆಸುವುದು.

**ನಾಮಕರಣ:**

ಸಂಘಕ್ಕೆ ಖ್ಯಾತ ಸಾಹಿತಿಯ ಹೆಸರನ್ನು ಇಡುವುದು.

**ಉದ್ದೇಶಗಳು:**

- ಭಾಷಾಭಿಮಾನ, ಸಾಹಿತ್ಯ ಅಭಿರುಚಿ ಬೆಳೆಸುವುದು.
- ಲೇಖನಗಳನ್ನು ಬರೆಯುವಂತೆ ಪ್ರೋತ್ಸಾಹಿಸುವುದು.
- ಭಾಷಣ ಮಾಡುವ ಕೌಶಲ ಬೆಳೆಸುವುದು.
- ಸೃಜನಶೀಲತೆಯನ್ನು ಬೆಳೆಸುವುದು.
- ಕವಿಕುಲಕೋಟಿಯನ್ನು ಪರಿಚಯಿಸುವುದು.

**ಚಟುವಟಿಕೆಗಳು:**

- ರಸಪ್ರಶ್ನೆ ಕಾರ್ಯಕ್ರಮ
- ಪ್ರಬಂಧ ಸ್ಪರ್ಧೆ
- ಭಾಷಣ ಸ್ಪರ್ಧೆ
- ನಾಟಕ ಸ್ಪರ್ಧೆ
- ಚರ್ಚಾ ಸ್ಪರ್ಧೆ
- ಆಶುಭಾಷಣ ಸ್ಪರ್ಧೆ
- ಕಿರು ಲೇಖನಗಳ ಸ್ಪರ್ಧೆ
- ಸಾಹಿತಿಗಳ ಜನ್ಮ ದಿನಾಚರಣೆಗಳು
- ಸಾಹಿತಿಗಳ ಭಾವಚಿತ್ರಗಳನ್ನು ಬರೆಸುವುದು.
- ಪ್ರತಿದಿನ ಸಾಹಿತ್ಯದ ವಿಶೇಷತೆಯನ್ನು ಸೂಚನಾ ಫಲಕದಲ್ಲಿ ಬರೆಸುವುದು.
- ಸಾಹಿತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸುವುದು.

**ಇತಿಹಾಸ ಸಂಘ:**

**ಅರ್ಥ:**

ವಿದ್ಯಾರ್ಥಿಗಳು ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ತಾವೇ ಸ್ಥಾಪಿಸಿರುವ ಸಂಘ.

**ರಚನೆ:**

ಮುಖ್ಯ ಶಿಕ್ಷಕರು, ಗೌರವ ಅಧ್ಯಕ್ಷರಾಗಿ, ಕಲಾ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ನಾಮಕರಣ:**

ಸಂಘಕ್ಕೆ ಇತಿಹಾಸ ಪ್ರಸಿದ್ಧ ವ್ಯಕ್ತಿಯ ಹೆಸರನ್ನು ಇಡುವುದು.

**ಉದ್ದೇಶಗಳು:**

- ರಾಜಕೀಯ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಐತಿಹಾಸಿಕ ಘಟನೆಗಳನ ಅರಿವು ಮೂಡಿಸುವುದು.
- ಜಗತ್ತಿನ ಪ್ರಚಲಿತ ವಿಷಯಗಳನ್ನು ತಿಳಿಸುವುದು.
- ಸಾಮಾಜಿಕ ಪಿಡುಗುಗಳ ಬಗ್ಗೆ ತಿಳಿಸುವುದು.
- ರಾಷ್ಟ್ರಪ್ರೇಮ ಬೆಳೆಸುವುದು.

**ಚಟುವಟಿಕೆಗಳು:**

- ಸ್ಥಳೀಯ ಐತಿಹಾಸಿಕ/ಧಾರ್ಮಿಕ ಕ್ಷೇತ್ರ ಭೇಟಿ ಮತ್ತು ವರದಿ ತಯಾರಿಕೆ.
- ಸ್ಥಳೀಯ ಐತಿಹಾಸಿಕ ಮಾಹಿತಿ ಸಂಗ್ರಹಣೆ, ವರದಿ ತಯಾರಿಕೆ.
- ಸ್ಥಳೀಯ ಸ್ವಾತಂತ್ರ್ಯಯೋಧರ ಸಂದರ್ಶನ; ಅನುಭವ ಹಂಚಿಕೆ.

- ಸ್ಥಳೀಯ ಐತಿಹಾಸಿಕ ವಸ್ತುಗಳ ಕುರಿತು ಜಾಗೃತಿ ಮತ್ತು ಸಂರಕ್ಷಣೆ ಕಾರ್ಯ.
- ರಾಷ್ಟ್ರೀಯ ಹಬ್ಬಗಳ ಆಚರಣೆ
- ರಾಷ್ಟ್ರನಾಯಕರ ದಿನಾಚರಣೆಗಳು
- ಸ್ವಾತಂತ್ರ್ಯಯೋಧರ ದಿನಾಚರಣೆಗಳು
- ಮಾಹಿತಿ ಸಂಗ್ರಹಣಾ ಚಟುವಟಿಕೆಗಳಾದ ನಾಣ್ಯಗಳು, ಅಂಚೆ ಚೀಟಿಗಳು, ಹಳೆ ಆಯುಧಗಳು, ಹಳೆ ಪಾತ್ರೆಗಳು, ಧ್ವಜಗಳು – ಇವುಗಳ ಸಂಗ್ರಹ.
- ಪ್ರಚಲಿತ ವಿದ್ಯಮಾನದ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು.
- ಸಮಾಜ ವಿಜ್ಞಾನ ವಿಷಯದ ಮಾದರಿಗಳ ತಯಾರಿಕಾ ಸ್ಪರ್ಧೆ.
- ಚಿತ್ರ ಬಿಡಿಸುವ ಸ್ಪರ್ಧೆ.
- ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಲೇಖನ ಸ್ಪರ್ಧೆಗಳನ್ನು ಏರ್ಪಡಿಸುವುದು.
- ಪ್ರತಿದಿನ ಸಮಾಜ ವಿಜ್ಞಾನದ ವಿಶೇಷತೆಯನ್ನು ಸೂಚನಾ ಫಲಕದಲ್ಲಿ ಬರೆಸುವುದು.

**ಸಾಹಸ ಸಂಘ**

**ಅರ್ಥ:**

"ಸಾಹಸ ಅಭಿರುಚಿ ಬೆಳೆಸಲು, ಯೋಧರಾಗುವ ಮನೋಭಾವ ಹೊಂದಲು, ದೇಶಪ್ರೇಮ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ".

**ರಚನೆ:**

ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿ, ದೈಹಿಕ ಶಿಕ್ಷಣ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ನಾಮಕರಣ:**

ಸಂಘಕ್ಕೆ ಸಾಹಸಿಗರ ಹೆಸರನ್ನು ಇಡುವುದು.

**ಉದ್ದೇಶಗಳು:**

- ಸಾಹಸ ಮನೋಭಾವ ಹೊಂದುವಂತೆ ಮಾಡುವುದು.
- ಯೋಧರ ಸಾಹಸಗಳನ್ನು ಮೆಚ್ಚುವುದು.
- ಪ್ರಾಣಾಪಾಯದಿಂದ ಪಾರಾಗುವ ತಂತ್ರಗಳನ್ನು ಕಲಿಸುವುದು.
- ಪ್ರಕೃತಿ ವಿಕೋಪಗಳ ಬಗ್ಗೆ ಅರಿವು ಮೂಡಿಸುವುದು.

**ಚಟುವಟಿಕೆಗಳು:**

- ಸ್ಕೌಟ್ ಮತ್ತು ಗೈಡ್ ಸೇವಾದಳ ಸ್ಥಾಪನೆ.
- ಕಾಲ್ನಡಿಗೆಯಲ್ಲಿ ಕೆಲವು ಸಂದೇಶಗಳನ್ನು ತಿಳಿಸುವ ಜಾಥಾ ಕಾರ್ಯಕ್ರಮಗಳು.
- ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆ.
- ಬೆಟ್ಟ ಹತ್ತುವುದು ಮುಂತಾದ ಸಾಹಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಹುತಾತ್ಮರ ದಿನಾಚರಣೆಗಳು.
- ಸ್ವಾತಂತ್ರ್ಯಯೋಧರ ಉಪನ್ಯಾಸ ಕಾರ್ಯಕ್ರಮಗಳು.
- ಸಾಹಸಿಗರ ಮೇಲಿನ ಉಪನ್ಯಾಸ ಕಾರ್ಯಕ್ರಮಗಳು.
- ಪ್ರಾಣಾಪಾಯದಿಂದ ಪಾರಾಗುವ ತಂತ್ರಗಳ ಉಪನ್ಯಾಸಗಳು.

**ಇಕೋಕ್ಲಬ್**

**ಅರ್ಥ:**

ಜೀವ ವಿಜ್ಞಾನದಲ್ಲಿ ಆಸಕ್ತಿಯಿಂದ ಕಲಿಯಲು, ಪರಿಸರ ಕಾಳಜಿ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ.

**ರಚನೆ:**

ಮುಖ್ಯಶಿಕ್ಷಕರು ಗೌರವ ಅಧ್ಯಕ್ಷರಾಗಿ, ಜೀವ ವಿಜ್ಞಾನ ಶಿಕ್ಷಕರು ಸಂಚಾಲಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ನಾಮಕರಣ:**

ಸಂಘಕ್ಕೆ ಜೀವ ವಿಜ್ಞಾನಿಯ ಹೆಸರನ್ನು ಇಡುವುದು.

**ಉದ್ದೇಶಗಳು:**

- ಪರಿಸರದಲ್ಲಿನ ಸ್ವಚ್ಛತೆ, ನೈರ್ಮಲ್ಯದ ಬಗ್ಗೆ ತಿಳಿಸುವುದು.
- ಪರಿಸರ ಮಾಲಿನ್ಯದಿಂದ ಜೀವ ವೈವಿಧ್ಯತೆಯ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ತಿಳುವಳಿಕೆ ಉಂಟುಮಾಡುವುದು.
- ಗಿಡಗಳನ್ನು ಬೆಳೆಸುವ, ಸಂರಕ್ಷಿಸುವ ಮನೋಭಾವ ಬೆಳೆಸುವುದು.
- ಔಷಧಿ ಸಸ್ಯಗಳ ಸಂರಕ್ಷಣೆ ಬಗ್ಗೆ ತಿಳಿವಳಿಕೆ ಮೂಡಿಸುವುದು
- ಕಸದ ನಿರ್ವಹಣೆ ಬಗ್ಗೆ ಜಾಗೃತಿ ಮೂಡಿಸುವುದು.
- ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು.

**ಚಟುವಟಿಕೆಗಳು:**

- ಸ್ಥಳೀಯ ಸಸ್ಯವರ್ಗ/ಪ್ರಾಣಿವರ್ಗ ಸಮೀಕ್ಷೆ ಮತ್ತು ವರದಿ ತಯಾರಿ.
- ಸ್ಥಳೀಯ ಪರಿಸರದ ಬದಲಾವಣೆ ಕುರಿತು ಸಮೀಕ್ಷೆ ಮತ್ತು ವರದಿ ತಯಾರಿ.
- ಸ್ಥಳೀಯ ಪರಿಸರದ ಕುರಿತು ಜಾಗೃತಿ ಮತ್ತು ಸಂರಕ್ಷಣೆ ಕಾರ್ಯ.

- ಶಾಲಾ ಕೈತೋಟ ನಿರ್ಮಾಣ
- ಅರಣ್ಯ ಪ್ರದೇಶಗಳಿಗೆ ಭೇಟಿ
- ಗಿಡಗಳನ್ನು ನೆಟ್ಟು, ಸಂರಕ್ಷಿಸುವುದು.
- ಔಷಧಿ ಸಸ್ಯಗಳ ಬಗ್ಗೆ ಉಪನ್ಯಾಸ.
- ವಿವಿಧ ಜಾತಿಯ ಹೂಗಳ ಪ್ರದರ್ಶನ.
- ಸಸ್ಯಗಳ ಹರ್ಬೇರಿಯಂ ತಯಾರಿಸುವುದು.
- ವಿವಿಧ ಜಾತಿಯ ಬೀಜಗಳು, ಎಲೆಗಳನ್ನು ಸಂಗ್ರಹಿಸುವುದು.
- ಸಸ್ಯಗಳ ಚಿತ್ರ ಬರೆಸುವುದು, ರಸಪ್ರಶ್ನೆ, ಪ್ರಬಂಧ, ಭಾಷಣ, ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವುದು.
- ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿ.
- ಪಕ್ಷಿಧಾಮಗಳಿಗೆ ಪ್ರವಾಸ ಏರ್ಪಡಿಸುವುದು.
- ಜೀವ ವೈವಿಧ್ಯಗಳನ್ನು ಕುರಿತು ವಿದ್ಯಾರ್ಥಿಗಳಿಂದ ಯೋಜನೆಗಳನ್ನು ತಯಾರಿಸಿ ಮಂಡಿಸುವುದು.

## ಗ್ರಾಹಕ ಕ್ಲಬ್

**ಅರ್ಥ:**

"ಮಕ್ಕಳು ತಾವು ದಿನನಿತ್ಯ ಬಳಸುವ ವಸ್ತುಗಳ ಗುಣಮಟ್ಟ ಹಾಗೂ ಇವುಗಳ ಬೆಲೆಗಳ ಬಗ್ಗೆ ತಿಳುವಳಿಕೆ ಹೊಂದಲು ಸ್ಥಾಪಿಸುವ ಸಂಘ".

**ರಚನೆ:**

ಸರ್ಕಾರದಿಂದ ಅಂಗೀಕೃತವಾದ ಮಂಡಳಿಗಳಿಂದ ಗುರುತಿಸಲ್ಪಟ್ಟ ಪ್ರೌಢಶಾಲೆಗಳಲ್ಲಿ ಗ್ರಾಹಕ ಕ್ಲಬ್ ತೆರೆಯಬಹುದು. ಕನಿಷ್ಟ 50 ಜನ ಸದಸ್ಯರಿರಬೇಕು. ಸದಸ್ಯರು ಗ್ರಾಹಕರ ಹಿತರಕ್ಷಣೆ ಮತ್ತು ಕಲ್ಯಾಣ ಕಾರ್ಯದಲ್ಲಿ ತಮ್ಮ ಸಮಯ ಮತ್ತು ಸೇವೆಯನ್ನು ಸಮರ್ಪಿಸಿಕೊಳ್ಳಬೇಕಾಗುತ್ತದೆ. ಶಾಲೆಯಲ್ಲಿ ಒಂದೇ ಗ್ರಾಹಕ ಕ್ಲಬ್ ಇರಬೇಕು. ಪ್ರತಿ ಶಾಲೆಯ ಗ್ರಾಹಕ ಕ್ಲಬ್‌ನ ಜವಾಬ್ದಾರಿಯನ್ನು ಕ್ರಿಯಾ ಶೀಲ ಒಬ್ಬ ಶಿಕ್ಷಕರು ಸಂಚಾಲಕರಾಗಿ ಕಾರ್ಯನಿರ್ವಹಿಸಬೇಕು. ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿದ್ದು, ವಿದ್ಯಾರ್ಥಿಗಳು ಉಳಿದಂತೆ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

**ಉದ್ದೇಶಗಳು:**

- ಗ್ರಾಹಕ ಸಂರಕ್ಷಣಾ ಕಾಯಿದೆ 1986ರಲ್ಲಿ ಬರುವ ಗ್ರಾಹಕರ ಹಕ್ಕುಗಳ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡುವುದಾಗಿದೆ. ಹಾಗೂ ಯುವಕರಲ್ಲೂ ಸಹ ಗ್ರಾಹಕ ಹಕ್ಕುಗಳ ರಕ್ಷಣೆಯ ಬಗ್ಗೆ ಅರಿವು ಮೂಡಿಸಿ ಗ್ರಾಹಕ ಚಳುವಳಿಯನ್ನು ದೇಶದಾದ್ಯಂತ ಹೆಚ್ಚು ಬಲಯುತಗೊಳಿಸುವುದಾಗಿರುತ್ತದೆ.
- ವಿದ್ಯಾರ್ಥಿಗಳು ಗ್ರಾಹಕ ಕ್ಲಬ್‌ನಿಂದ ಕಲಿತ ವಿಷಯಗಳನ್ನು ಸಂಬಂಧಿಸಿದ ವ್ಯಾಪ್ತಿಯಲ್ಲಿನ ಸಹಪಾಠಿಗಳು ಹಾಗೂ ಜನರಲ್ಲಿ ಪ್ರಚಾರಗೊಳಿಸುವುದು. ಕ್ಲಬ್‌ನ ಸದಸ್ಯರು ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು.

- ಗ್ರಾಹಕ ಹಿತರಕ್ಷಣಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರಲು ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು, ಸಹಪಾಠಿ ವಿದ್ಯಾರ್ಥಿಗಳನ್ನು ಮತ್ತು ಜನರನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸುವುದು.

**ಚಟುವಟಿಕೆಗಳು:**

- ಡಿಸೆಂಬರ್ ತಿಂಗಳ 24ನೇ ದಿನಾಂಕದಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಆಚರಿಸುವುದು.
- ಮಾರ್ಚ್ ತಿಂಗಳ 15ನೇ ದಿನಾಂಕದಂದು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯನ್ನು ಆಚರಿಸುವುದು.
- ಗ್ರಾಹಕರ ಹಿತರಕ್ಷಣೆ ಹಾಗೂ ಕಲ್ಯಾಣಗಳಿಗೆ ಸಂಬಂಧಿಸಿದಂತೆ ದೃಶ್ಯಮಾಧ್ಯಮಗಳು, ಭಿತ್ತಿ ಪತ್ರಗಳು, ಉಪನ್ಯಾಸ, ವಸ್ತು ಪ್ರದರ್ಶನ, ಬೀದಿ ನಾಟಕಗಳು, ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಲೇಖನ ಬರೆಯುವ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ರೆಡ್ ರಿಬ್ಬನ್ ಕ್ಲಬ್(ಆರ್.ಆರ್.ಸಿ)**

**ಅರ್ಥ:**

ಹದಿಹರೆಯದವರಿಗಾಗಿ ಶಿಕ್ಷಣದ ಪರಿಕಲ್ಪನೆಯನ್ನು ಪರಿಣಾಮಕಾರಿಯಾಗಿ ಸಂಯೋಜಿಸಿ, ಬೋಧನಾ ಕಲಿಕಾ ಭಾಗವನ್ನಾಗಿ ಅಳವಡಿಸಿ, ವಿದ್ಯಾರ್ಥಿಗಳಲ್ಲಿ ಏಡ್ಸ್ ರೋಗದ ಬಗ್ಗೆ ಅರಿವು ಮೂಡಿಸಲು ಸ್ಥಾಪನೆ ಮಾಡಿರುವ ಸಂಘ.

**ರಚನೆ:**

ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿ, ಜೀವ ವಿಜ್ಞಾನದ ಶಿಕ್ಷಕರ ಸಂಚಾಲಕರಾಗಿ ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷರ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ಉದ್ದೇಶಗಳು:**

- ಹದಿಹರೆಯದವರ ಸಂತಾನೋತ್ಪತ್ತಿ. ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು.ಹೆಚ್.ಐ.ವಿ. ಏಡ್ಸ್ ಮಾದಕ ದ್ರವ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಹದಿಹರೆಯದಲ್ಲಿನ ವಿವಿಧ ಬೆಳವಣಿಗೆಯ ಬಗ್ಗೆ ಇರುವ ಮೂಢನಂಬಿಕೆ ಮತ್ತು ಕಲ್ಪನೆಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಮಾದಕ ದ್ರವ್ಯಗಳ ದುರ್ಬಳಕೆಯ ಬಗ್ಗೆ ಒಳ್ಳೆಯ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ ಬೆಳಸುವುದು.
- ಏಡ್ಸ್ ರೋಗಿಗಳ ಬಗ್ಗೆ ಧನಾತ್ಮಕ ಮನೋಭಾವ ಹೊಂದುವಂತೆ ಮಾಡುವುದು.
- ಭಿನ್ನ ಲಿಂಗಗಳನ್ನು ಗೌರವದಿಂದ ನೋಡುವಂತೆ ಮಾಡುವುದು.

**ಚಟುವಟಿಕೆಗಳು:**

- ಪ್ರಶ್ನೆ ಪೆಟ್ಟಿಗೆ
- ಗುಂಪು ಚರ್ಚೆ
- ಮೌಲ್ಯ ಸ್ಪಷ್ಟೀಕರಣ
- ವ್ಯಕ್ತಿ ಅಧ್ಯಯನ
- ಚರ್ಚಾ ಸ್ಪರ್ಧೆ
- ಬಣ್ಣ ಹಾಕುವ ಭಿತ್ತಿ ಚಿತ್ರ ಸ್ಪರ್ಧೆ
- ಪ್ರಬಂಧ ಸ್ಪರ್ಧೆ
- ರಸಪ್ರಶ್ನೆ ಸ್ಪರ್ಧೆ
- ವೈದ್ಯರಿಂದ ಉಪನ್ಯಾಸಕಗಳು
- ದಾದಿಯರಿಂದ ಸ್ವಚ್ಚತೆ ಬಗ್ಗೆ ಅರಿವು ಮೂಡಿಸುವ ಸಂವಾದ ಕಾರ್ಯಕ್ರಮ.
- ಪೋಷಕರೊಂದಿಗೆ ಸಂವಾದ ಕಾರ್ಯಕ್ರಮ.
- ಏಡ್ಸ್ ಕುರಿತ ನಾಟಕಗಳು.

**ಕ್ರೀಡಾ ಸಂಘ:**

**ಅರ್ಥ:**

ಕ್ರೀಡಾ ಅಭಿಮಾನ ಬೆಳೆಯಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ

**ರಚನೆ:**

ಮುಖ್ಯ ಶಿಕ್ಷಕರು ಗೌರವ ಅಧ್ಯಕ್ಷರಾಗಿ, ದೈಹಿಕ ಶಿಕ್ಷಣ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು.

**ನಾಮಕರಣ:**

ಕ್ರೀಡಾ ಪಟುವಿನ ಹೆಸರನ್ನು ಇಡುವುದು.

**ಉದ್ದೇಶಗಳು:**

- ಕ್ರೀಡಾ ಮನೋಭಾವ ಬೆಳೆಸುವುದು.
- ಕ್ರೀಡೆಗಳಲ್ಲಿ ಪ್ರತಿಯೊಬ್ಬರು  ಭಾಗವಹಿಸುವಂತೆ ಮಾಡುವುದು.
- ಸರ್ವಾಂಗೀಣ ಬೆಳವಣಿಗೆಗೆ ಕ್ರೀಡೆ ಅಗತ್ಯ ಎಂಬುದರ ಅರಿವು ಮೂಡಿಸುವುದು.

**ಚಟುವಟಿಕೆಗಳು:**

- ವೈಯಕ್ತಿಕ ಆಟಗಳನ್ನು ಸಂಘಟಿಸುವುದು.
- ಗುಂಪು ಆಟಗಳನ್ನು ಸಂಘಟಿಸುವುದು.
- ಶಾಲಾ ಮಟ್ಟದಲ್ಲಿ ಆಟಗಳನ್ನು ಸಂಘಟಿಸುವುದು.
- ಕ್ರೀಡಾ ಮಾದರಿಗಳ ತಯಾರಿಕಾ ಸ್ಪರ್ಧೆಗಳನ್ನು ಏರ್ಪಡಿಸುವುದು.
- ಕ್ರೀಡಾ ದಿನಾಚರಣೆ ಆಚರಿಸುವುದು.

- ಕ್ರೀಡಾ ಪಟುಗಳ ಜನ್ಮ ದಿನಾಚರಣೆಗಳು.
- ಪ್ರತಿದಿನ ಕ್ರೀಡಾ ವಿಶೇಷತೆಯನ್ನು ಸೂಚನಾಫಲಕದಲ್ಲಿ ಬರೆಸುವುದು.
- ಕ್ರೀಡಾ ಹಬ್ಬವನ್ನು ಆಚರಿಸುವುದು.

**ವಿದ್ಯಾರ್ಥಿ ಸಂಘ**

**ಅರ್ಥ:**

ಸಾಮಾಜಿಕ ನಾಯಕತ್ವ ಬೆಳವಣಿಗೆ ಉಂಟು ಮಾಡಲು ವಿದ್ಯಾರ್ಥಿಗಳೇ ಸ್ಥಾಪಿಸುವ ಸಂಘ.

**ರಚನೆ:**

ಮುಖ್ಯ ಶಿಕ್ಷಕರು ಗೌರ ಅಧ್ಯಕ್ಷರಾಗಿ ಒಬ್ಬ ಶಿಕ್ಷಕರು ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸದಸ್ಯರಾಗಿ ಸಂಘದ ಚಟುವಟಿಕೆಗಳನ್ನು ನಡೆಸುವುದು. ಸದಸ್ಯತ್ವದ ವಿವಿಧ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ವಿದ್ಯಾರ್ಥಿಗಳನ್ನು ತಪ್ಪದೇ ಸೇರಿಸುವುದು.

**ಉದ್ದೇಶಗಳು**

- ಸಹಕಾರ ಒಗ್ಗಟ್ಟು, ನಾಯಕತ್ವ ಗುಣಗಳನ್ನು ಬೆಳಸುವುದು.
- ರಾಜಕೀಯ ಮೌಲ್ಯಗಳನ್ನು ಬೆಳಸುವುದು.
- ಸಾಮಾಜಿಕ ಮೌಲ್ಯಗಳನ್ನು ಬೆಳಸುವುದು.
- ಪ್ರಜಾಪ್ರಭುತ್ವ ತತ್ವಗಳನ್ನು ಬೆಳೆಸುವುದು.
- ಸಹಕಾರ, ಒಗ್ಗಟ್ಟು, ನಾಯಕತ್ವ ಗುಣಗಳನ್ನು ಬೆಳೆಸುವುದು.
- ರಾಜಕೀಯ ಮೌಲ್ಯಗಳನ್ನು ಬೆಳೆಸುವುದು.
- ನೈತಿಕ ಮೌಲ್ಯಗಳನ್ನು ಬೆಳೆಸುವುದು.
- ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದು.
- ಪ್ರಜಾಪ್ರಭುತ್ವ ತತ್ವಗಳನ್ನು ಬೆಳೆಸುವುದು.

**ಚಟುವಟಿಕೆಗಳು:**

- ಶಾಲಾ ಮಂತ್ರಿಮಂಡಲದ ರಚನೆ. (ವಿವಿಧ ಕ್ಲಬ್‌ಗಳಲ್ಲಿ ಅಧ್ಯಕ್ಷರಾಗಿರುವ ವಿದ್ಯಾರ್ಥಿ ನಾಯಕರು ಇಲ್ಲಿ ಸಚಿವರಾಗುವಂತೆ ವ್ಯವಸ್ಥೆಗೊಳಿಸುವುದು ಹಾಗೂ ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನು ಆಯಾ ಸಂಘದ ನೇತೃತ್ವದಲ್ಲಿ ಮತ್ತು ಇತರ ಸಂಘಗಳ ಸಹಕಾರದಿಂದ ನಡೆಸುವುದು)
- ರಾಷ್ಟ್ರೀಯ ಹಬ್ಬಗಳ ಆಚರಣೆ.
- ಎನ್.ಎಸ್.ಎಸ್.ಶಿಬಿರಗಳನ್ನು ಸಂಘಟಿಸುವುದು.
- ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು.
- ನೈತಿಕ ಮೌಲ್ಯಗಳಿಗೆ ಸಂಬಂಧಿಸಿದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವುದು.
- ಶಾಲಾ ಹಬ್ಬವನ್ನು ಆಚರಿಸುವುದು.

# 15. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ

ಕೇಂದ್ರ ಸರ್ಕಾರವು ಶಿಕ್ಷಕರ ಕಲ್ಯಾಣ ಚಟುವಟಿಕೆಗಳಿಗಾಗಿ ಧಾರ್ಮಿಕ ಮತ್ತು ದತ್ತಿ ನಿಯಮ 1890 ರ ಅನ್ವಯ **ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನವನ್ನು** 1962 ರಲ್ಲಿ ಸ್ಥಾಪನೆ ಮಾಡಿದ್ದು, ಪ್ರತಿ ರಾಜ್ಯದಲ್ಲೂ ಇದರ ರಾಜ್ಯ ಘಟಕವೂ ಕಾರ್ಯ ನಿರ್ವಹಿಸುತ್ತಿದೆ. ಅದೇ ರೀತಿಯಲ್ಲಿ ಕರ್ನಾಟಕ ಸರ್ಕಾರವು 1963 ರಲ್ಲಿ ರಾಜ್ಯದಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ **ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯನ್ನು** ಸ್ಥಾಪಿಸಿದೆ.

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನಕ್ಕೆ ಸೆಪ್ಟೆಂಬರ್ 5 ರಂದು ಆಚರಿಸಲಾಗುವ ''ಶಿಕ್ಷಕರ ದಿನಾಚರಣೆ'' ಸಂದರ್ಭದಲ್ಲಿ ಶಿಕ್ಷಕರಿಗೆ, ವಿದ್ಯಾಥಿಗಳಿಗೆ ಬಾವುಟಗಳನ್ನು ಮಾರುವ ಮೂಲಕ ವಂತಿಗೆಯನ್ನು ಸಂಗ್ರಹಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳಿಗೆ ಪ್ರೌಢಶಾಲಾ ಹಂತ, ಕಾಲೇಜು ಹಂತ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಂದ ವಾರ್ಷಿಕ ವಂತಿಗೆಯನ್ನು ಪ್ರತಿವರ್ಷ ಶಾಲಾ – ಕಾಲೇಜುಗಳಿಗೆ ದಾಖಲಾಗುವ ಸಮಯದಲ್ಲಿ ಸಂಗ್ರಹಿಸಲಾಗುತ್ತಿದೆ ಹಾಗೂ ಶಿಕ್ಷಕರಿಂದ ರೂ.1500/– ಗಳ ಆಜೀವ ಸದಸ್ಯತ್ವ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. [ ಎಲ್ಲಾ ಬೋಧಕ ವೃಂದದವರೂ ಆಜೀವ ಸದಸ್ಯತ್ವ ಪಡೆಯಲು ಕೋರಿದೆ] ಈ ರೀತಿಯಾಗಿ ಸಂಗ್ರಹಿಸಿದ ಹಣವನ್ನು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಉಪಯೋಗಿಸಲಾಗುತ್ತಿದೆ.

## ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದಿಂದ ಶಿಕ್ಷಕರಿಗೆ ದೊರೆಯುವ ಸೌಲಭ್ಯಗಳು:

## ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ದೊರೆಯುವ ಸೌಲಭ್ಯಗಳು:

**( ದಿನಾಂಕ: 01.04.2011 ರಲ್ಲಿದ್ದಂತೆ )**

**1. ಶಿಕ್ಷಕರ / ನಿವೃತ್ತಿ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ವೇತನ.**

| ಕ್ರ.ಸ. | ಕೋರ್ಸು / ಪರೀಕ್ಷೆ | ವಿದ್ಯಾರ್ಥಿ ವೇತನಗಳ ಒಟ್ಟು ಸಂಖ್ಯೆ | ಪ್ರತಿಯೊಂದು ವಿದ್ಯಾರ್ಥಿಗೆ ವಾರ್ಷಿಕ ವೇತನದ ಮೊತ್ತ |
|---|---|---|---|
| 1 | ಎಸ್.ಎಸ್.ಎಲ್.ಸಿ | ಜಿಲ್ಲೆಗೆ ಹತ್ತು ವಿದ್ಯಾರ್ಥಿಗಳಿಗೆ | ರೂ. 500/– |
| 2 | ಪಿ,ಯು.ಸಿ (ದ್ವಿತೀಯ ವರ್ಷ)<br>ಕಲೆ, ವಿಜ್ಞಾನ, ಕಾಮರ್ಸ್, ವೃತ್ತಿಪರ ಶಿಕ್ಷಣ | ಪ್ರತಿ ವಿಷಯಕ್ಕೆ ಒಬ್ಬರಂತೆ<br>(ಜಿಲ್ಲೆಗೆ ನಾಲ್ಕು ವಿದ್ಯಾರ್ಥಿಗಳಿಗೆ) | ರೂ.1,000/– |
| 3 | ಅಂತಿಮ ಪದವಿ ಪರೀಕ್ಷೆ<br>(ಬಿಎ/ಬಿಎಸ್ಸಿ/ಬಿಕಾಂ/ಬಿಎಡ್/ಬಿಬಿಎಂ/<br>ಬಿಹೆಚ್ಂ/ ಬಿಸಿಎ) | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸ್‌ಗೆ ಒಂದರಂತೆ. | ರೂ.1,500/– |

| | | | |
|---|---|---|---|
| 4 | ಅಂತಿಮ ಪೂರ್ವಪರೀಕ್ಷೆ (ಬಿಇ / ಎಂಬಿಬಿಎಸ್) | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸ್‌ಗೆ ಒಂದರಂತೆ. | ರೂ.1,500/– |
| 5 | ಪ್ರಥಮ ವರ್ಷದ ಪರೀಕ್ಷೆ (ಎಂ.ಎ/ಎಂ.ಎಸ್ಸಿ/ಎಂ.ಕಾಂ/ಎಲ್.ಎಲ್.ಬಿ) | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸ್‌ಗೆ ಒಂದರಂತೆ. | ರೂ.2,000/– |

**2. ತಾಲ್ಲೂಕು / ಜಿಲ್ಲಾ ಕೇಂದ್ರಗಳಲ್ಲಿ ಶಿಕ್ಷಕರ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಗುರುಭವನ ನಿರ್ಮಾಣಕ್ಕಾಗಿ ಧನ ಸಹಾಯ:**

| ಕ್ರಮ ಸಂಖ್ಯೆ | ಗುರುಭವನದ ವಿಸ್ತೀರ್ಣ [ಅಡಿಗಳಲ್ಲಿ] | ಪ್ರಸ್ತುತ ನೀಡುವ ಗರಿಷ್ಠ ಅನುದಾನದ ಮೊತ್ತ |
|---|---|---|
| 1. | 30 X 60 ಅಡಿ ವಿಸ್ತೀರ್ಣದ ಸಭಾಂಗಣ | ರೂ 12.00 ಲಕ್ಷ |
| 2 | 40 X 60 ಅಡಿ ವಿಸ್ತೀರ್ಣದ ಸಭಾಂಗಣ | ರೂ 16.00 ಲಕ್ಷ |
| 3 | 50 X 120 ಅಡಿ ವಿಸ್ತೀರ್ಣದ ಸಭಾಂಗಣ | ರೂ 20.00 ಲಕ್ಷ |
| 4 | 10 X 10 ಅಡಿ ವಿಸ್ತೀರ್ಣದ ಅತಿಥಿ ಗೃಹದ ಒಂದು ಕೊಠಡಿಗೆ. | ರೂ 1.00 ಲಕ್ಷ |
| 5 | 10 X 10 ಅಡಿ ವಿಸ್ತೀರ್ಣದ ಅತಿಥಿ ಗೃಹದ ಹತ್ತು ಕೊಠಡಿಗಳಿಗೆ [ಗರಿಷ್ಠ]. | ರೂ 10.00 ಲಕ್ಷ |

ಗುರುಭವನ ನಿರ್ಮಾಣಕ್ಕೆ ಈಗಾಗಲೇ ಅನುದಾನವನ್ನು ಪಡೆದುಕೊಂಡಿರುವರು / ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವ ಗುರುಭವನಗಳಿಗೂ ಸಹ ಈ ಹೆಚ್ಚುವರಿ ಅನುದಾನ ಅನ್ವಯವಾಗುತ್ತದೆ. ಹಿಂದೆ ಕೊಟ್ಟ ಅನುದಾನವನ್ನು ಕಳೆದು ಹೆಚ್ಚುವರಿಯಾಗಿ ನೀಡುವ ಅನುದಾನವನ್ನು ಬಳಸಿಕೊಂಡು ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಬಹುದಾಗಿದೆ.

ಅಂದಾಜು ಪಟ್ಟಿಯಲ್ಲಿ ನಮೂದು ಮಾಡಿರುವ ಮೊತ್ತದಲ್ಲಿ ನಿಧಿಗಳ ಕಛೇರಿಯಿಂದ ಮಂಜೂರಾಗುವ ಅನುದಾನವನ್ನು ಬಿಟ್ಟು, ಕನಿಷ್ಠ ಶೇ 20 ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಗುರುಭವನ ನಿರ್ಮಾಣ ಮತ್ತು ನಿರ್ವಹಣಾ ಸಮಿತಿಯೇ ಸ್ಥಳೀಯವಾಗಿ ಸಂಗ್ರಹಿಸಿ ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಪೂರೈಸಬಹುದಾಗಿದೆ.

**3. ಶ್ಲಾಘನೀಯ ಸೇವೆ ಸಲ್ಲಿಸಿರುವ ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರಿಗೆ ನೀಡುವ ಪ್ರಶಸ್ತಿಗಳು ;**

| ಕ್ರ. ಸ | ವಿಭಾಗ | ಹಂತ | ಪ್ರಶಸ್ತಿಗಳ ಸಂಖ್ಯೆ | ಪ್ರತಿ ಪ್ರಶಸ್ತಿ ಮೊತ್ತ |
|---|---|---|---|---|
| 1 | ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರಿಗೆ | ಜಿಲ್ಲಾ ಪ್ರಶಸ್ತಿ | 390 | ರೂ 3,000/– |
| 2. | ಶೈಕ್ಷಣಿಕ/ವೈಜ್ಞಾನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕರಿಗೆ ವಿಶೇಷ ಪ್ರಶಸ್ತಿ | ರಾಜ್ಯ ಪ್ರಶಸ್ತಿ | 08 | ರೂ 5,000/– |
| 3. | ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪಶಸ್ತಿ | ರಾಜ್ಯ ಪ್ರಶಸ್ತಿ | 02 | ರೂ.12,000/– |

ಕ್ರಮ ಸಂಖ್ಯೆ 1 ರಲ್ಲಿ ತಿಳಿಸಲಾಗಿರುವ ಪ್ರಶಸ್ತಿಗಾಗಿ ಶಿಕ್ಷಕರು ಅರ್ಜಿ ಸಲ್ಲಿಸುವಂತಿಲ್ಲ. ಈ ಪ್ರಶಸ್ತಿಗಳಿಗೆ ಶಿಕ್ಷಕರನ್ನು ಇಲಾಖಾಧಿಕಾರಿಗಳ ಶಿಫಾರಸ್ಸಿನಂತೆ ಆಯ್ಕೆ ಮಾಡಲಾಗುವುದು. ಕ್ರಮ ಸಂಖ್ಯೆ 2 & 3 ರಲ್ಲಿ ತಿಳಿಸಲಾಗಿರುವ ಪ್ರಶಸ್ತಿಗೆ ಶಿಕ್ಷಕರಿಂದ ಅರ್ಜಿಗಳನ್ನು ಪ್ರತಿ ವರ್ಷ ಜುಲೈ/ಆಗಸ್ಟ್ ತಿಂಗಳಲ್ಲಿ ಆಹ್ವಾನಿಸಲಾಗುವುದು.

**4. ಶಿಕ್ಷಕರು / ನಿವೃತ್ತ ಶಿಕ್ಷಕರು ಮತ್ತು ಅವರ ಅವಲಂಬಿತರಿಗೆ ವೈದಕೀಯ ಚಿಕಿತ್ಸೆಗಾಗಿ ಧನ ಸಹಾಯ :**

ಶಿಕ್ಷಕರು / ನಿವೃತ್ತ ಶಿಕ್ಷಕರು ಮತ್ತು ಅವರ ಅವಲಂಬಿತರಿಗೆ ಖಾಯಿಲೆಯ ತೀವ್ರತೆಯನ್ನು ಪರಿಗಣಿಸಿ ರೂ 3,000/– ರಿಂದ ಗರಿಷ್ಠ ರೂ 15,000/– ಗಳ ಧನ ಸಹಾಯವನ್ನು ನೀಡಲಾಗುವುದು. ದಿನಾಂಕ 1–4–2011 ರಿಂದ ಜಾರಿಗೆ ಬರುವಂತೆ ಖಾಯಿಲೆಯ ತೀವ್ರತೆಯನ್ನು ಪರಿಗಣಿಸಿ ರೂ 4,000/– ರಿಂದ ಗರಿಷ್ಠ ರೂ 20,000/ ಗಳ ಮಿತಿಗೊಳಪಟ್ಟು ಧನ ಸಹಾಯವನ್ನು ಹೆಚ್ಚಿಸಲಾಗಿದೆ. [ಚಿಕಿತ್ಸೆಯನ್ನು ಪಡೆದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು] .

**5. ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಧನ ಸಹಾಯ:**

ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ತಾಲ್ಲೂಕು / ಜಿಲ್ಲಾ ಮಟ್ಟದಲ್ಲಿ ಆಯೋಜಿಸಲು ಪ್ರತಿ ತಾಲ್ಲೂಕಿಗೆ ರೂ 5,000/– ಮತ್ತು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲು ರೂ 10,000/– ಗಳನ್ನು ಧನ ಸಹಾಯವನ್ನು ನೀಡಲಾಗುವುದು. ರಾಜ್ಯ ಹಂತದಲ್ಲಿ ಸಂಗೀತ, ಆಶುಭಾಷಣ, ಪ್ರಬಂಧ, ಚಿತ್ರಕಲಾ ಸ್ಪರ್ಧೆ ಮತ್ತು ಸ್ಥಳದಲ್ಲೆ ಪಾಠೋಪಕರಣಗಳ ತಯಾರಿಕಾ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ಶಿಕ್ಷಕರಿಗೆ ಕ್ರಮವಾಗಿ ರೂ 3,000/–, ರೂ 2,000/– ಮತ್ತು ರೂ 1,000/–ರಂತೆ ನಗದು ಬಹುಮಾನ, ಪ್ರಮಾಣ ಪತ್ರ ಮತ್ತು ನೆನಪಿನ ಕಾಣಿಕೆ ನೀಡಲಾಗುವುದು.

**6. ಮೃತ ಶಿಕ್ಷಕರ ಕುಟುಂಬಕ್ಕೆ ಧನ ಸಹಾಯ :**

ಶಿಕ್ಷಕರು ಸೇವೆಯಲ್ಲಿ ಇರುವಾಗಲೇ ಮೃತಪಟ್ಟಿದ್ದು ಅವರ ಕುಟುಂಬಕ್ಕೆ ಕುಟುಂಬ ವೇತನ ಮಂಜೂರಾಗದಿದ್ದಲ್ಲಿ ರೂ 7,000/–ಗಳನ್ನು ಕುಟುಂಬ ನಿರ್ವಹಣೆಗಾಗಿ ಧನ ಸಹಾಯವನ್ನು ನೀಡಲಾಗುವುದು. ನಿವೃತ್ತಿಯ ನಂತರ ಮೃತಪಟ್ಟ ಶಿಕ್ಷಕರ ಕುಟುಂಬದವರಿಗೆ ರೂ 2,000/–ಗಳ ಧನ ಸಹಾಯವನ್ನು ನೀಡಲಾಗುವುದು. ದಿನಾಂಕ: 01.09.2010 ರಿಂದ ಕುಟುಂಬ ವೇತನವನ್ನು ಶಿಕ್ಷಕರು ಸೇವೆಯಲ್ಲಿ ಇರುವಾಗ ಮೃತಪಟ್ಟಲ್ಲಿ ರೂ.10,000/– ಹಾಗೂ ನಿವೃತ್ತಿಯ ನಂತರ ಮೃತಪಟ್ಟಲ್ಲಿ ಕುಟುಂಬಕ್ಕೆ ರೂ.5000/– ಧನಸಹಾಯವನ್ನು ಹೆಚ್ಚಿಸಲಾಗಿದೆ [ಮರಣ ಹೊಂದಿದ 180 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು.].

**7. ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ:**

ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯವನ್ನು ಈ ಕೆಳಕಾಣಿಸಿರುವ ಕೋರ್ಸುಗಳಿಗೆ ನೀಡಲಾಗುವುದು.

| ಕ್ರ.ಸ | ಕೋರ್ಸ್‌ಗಳ ಹೆಸರು | ನೀಡುವ ಮೊತ್ತ |
|---|---|---|
| 1 | ಪದವಿ ಪೂರ್ವ ಶಿಕ್ಷಣ/ಜೆಓಸಿ/ಪಿಯುಸಿಹೆಚ್/ಪಿಯುಸಿಜೆ/ಡಿ.ಇಡಿ/ಸಿಪಿಎಡ್/ಐಟಿಐ | ರೂ. 300/– |
| 2 | ಬಿಎ/ಬಿಎಸ್ಸಿ/ಬಿಕಾಂ/ಬಿಎಸ್‌ಡಬ್ಲ್ಯೂ/ಬಿ.ಲಿಬ್/ಬಿಸಿಎ/ಬಿಹೆಚ್‌ಎಂ/ ಬಿಪಿಎಡ್ | ರೂ. 400/– |
| 3 | ಪಾಲಿಟೆಕ್ನಿಕ್ ಕೋರ್ಸ್‌ಗಳು/ಬಿ.ಇಡಿ/ಎಲ್‌ಎಲ್‌ಬಿ/ಡಿಎಆರ್‌ಟಿ/ಜೆಟಿಡಿಸಿ | ರೂ. 500/– |
| 4 | ಬಿಎಸ್ಸಿ[ಅಗ್ರಿ]/ಬಿಹೆಚ್‌ಎಸ್ಸಿ/ಬಿಎಸ್ಸಿ[ನರ್ಸಿಂಗ್]/ಬಿಫಾರ್ಮ/ಬಿಬಿಎಂ/ಬಿಎಸ್ಸಿ[ಸಿರಿಕಲ್ಚರ್/ಡೈರಿ] ಬಿಎಸ್‌ಸಿಎ/ಬಿಹೆಚ್‌ಎಸ್‌ಸಿ/ಬಿಪಿಹೆಚ್/ಹೆಚ್‌ಓಆರ್‌ಟಿ/ ಬಿಹೆಚ್‌ಎಂ/ಬಿಸಿಎ | ರೂ. 600/– |
| 5 | ಬಿಇ/ಎಂಬಿಬಿಎಸ್/ಬಿಡಿಎಸ್/ಬಿಯುಎಂಎಸ್/ಬಿವಿಎಸ್ಸಿ/ಬಿಹೆಚ್‌ಎಂಎಸ್/ಬಿಎಎಂಎಸ್/ಬಿಎಸ್‌ಎಎಂ | ರೂ. 1,000/– |

**ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳು:**

**1. ಎನ್.ಟಿ.ಎಸ್. ವಿದ್ಯಾರ್ಥಿ ವೇತನ :**

ರಾಜ್ಯ ಮಟ್ಟದ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ [ಎನ್.ಟಿಎಸ್] ಉತ್ತೀರ್ಣರಾಗಿ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 2,000/–ಗಳಂತೆ ಎರಡು ವರ್ಷ ವಿದ್ಯಾರ್ಥಿ ವೇತನ ನೀಡಲಾಗುವುದು.

**2. ಕನ್ನಡ ಮಾಧ್ಯಮದಲ್ಲಿ ಬರೆದು ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವೇತನ :**

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆದು ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾಗದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದಲ್ಲಿ ಮೆರಿಟ್ ಆಧಾರದ ಮೇಲೆ ಪರಿಗಣಿಸಿ 200 ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 2,000/–ಗಳಂತೆ ಎರಡು ವರ್ಷ ವಿದ್ಯಾರ್ಥಿ ವೇತನ ನೀಡಲಾಗುವುದು.

**3. ಶೌರ್ಯ ಪ್ರಶಸ್ತಿ :**

ಅಪಾಯ ಸನ್ನಿವೇಶದಲ್ಲಿ ಅಸಾಧಾರಣ ಧೈರ್ಯ, ಸಮಯ ಪ್ರಜ್ಞೆ ಮತ್ತು ಸಾಹಸ ಪ್ರದರ್ಶಿಸಿ ಜನರ ಪ್ರಾಣ ಉಳಿಸಲು ನೆರವಾದ ವಿದ್ಯಾರ್ಥಿಗಳಿಗೆ ಮೆಚ್ಚಿಗೆ ಪತ್ರ, ರೂ 1,000/– ನಗದನ್ನು ಒಳಗೊಂಡ ಶೌರ್ಯ ಪ್ರಶಸ್ತಿಯನ್ನು ನೀಡಲಾಗುವುದು. ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು.

**4. ಕ್ರೀಡಾ ಪ್ರಶಸ್ತಿ :**

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆಸುವ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ವೈಯಕ್ತಿಕ ಹಾಗೂ ತಂಡದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಂತಹ ವಿದ್ಯಾರ್ಥಿಗಳಿಗೆ ನಿಧಿಗಳಿಂದ ಎಲ್ಲಾ ಸ್ಪರ್ಧೆಗಳಿಗೂ ಪ್ರತ್ಯೇಕವಾಗಿ ನಗದು ಬಹುಮಾನ ನೀಡಲಾಗುವುದು.

**5. ವಿದ್ಯಾರ್ಥಿ ಸುರಕ್ಷಾ ಪರಿಹಾರ ಯೋಜನೆ:**

ಅಪಘಾತದಿಂದ ಶಾಲಾ ವಿದ್ಯಾರ್ಥಿಗಳಿಗೆ ಆಗಬಹುದಾದ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು 2001–02 ನೇ ಸಾಲಿನಿಂದ "ವಿದ್ಯಾರ್ಥಿ ಸುರಕ್ಷಾ ಪರಿಹಾರ ಯೋಜನೆ" ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಸೌಲಭ್ಯಗಳು ಎಲ್ಲಾ (ಸರ್ಕಾರಿ, ಅನುದಾನಿತ ಹಾಗೂ ಅನುದಾನಿತ ಶಾಲೆ/ ಕಾಲೇಜುಗಳಲ್ಲಿ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ. ಇದರ ಜೊತೆಗೆ ಶಿಕ್ಷಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಎಲ್ಲಾ ಶಿಕ್ಷಕ / ಉಪನ್ಯಾಸಕರನ್ನೂ ಸಹ ಈ ಯೋಜನೆಯ ಸೌಲಭ್ಯಗಳಿಗೆ ಒಳಪಡಿಸಲಾಗಿದೆ.

**6. ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನ ಸಹಾಯ:**

ಶಿಕ್ಷಕರಿಗೆ ನೀಡುತ್ತಿರುವಂತೆ ವಿದ್ಯಾರ್ಥಿಗಳಿಗೂ ಖಾಯಿಲೆಯ ತೀವ್ರತೆಯನ್ನು ಆಧರಿಸಿ ರೂ 3,000/–ರಿಂದ ಗರಿಷ್ಠ ರೂ 15,000/–ರೂ.ಗಳ ಮಿತಿಗೊಳಪಟ್ಟು ವೈದ್ಯಕೀಯ ಧನ ಸಹಾಯವನ್ನು ನೀಡಲಾಗುತ್ತದೆ. . ದಿನಾಂಕ 1–4–2011 ರಿಂದ ಜಾರಿಗೆ ಬರುವಂತೆ ಖಾಯಿಲೆಯ ತೀವ್ರತೆಯನ್ನು ಪರಿಗಣಿಸಿ ರೂ 4,000/– ರಿಂದ ಗರಿಷ್ಠ ರೂ 20,000/– ಗಳ ಮಿತಿಗೊಳಪಟ್ಟು ಧನ ಸಹಾಯವನ್ನು ಹೆಚ್ಚಿಸಲಾಗಿದೆ.

**7.** ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇ. 100 ಫಲಿತಾಂಶ ಪಡೆದ ಪ್ರೌಢಶಾಲೆ / ಪದವಿ ಪೂರ್ವ ಕಾಲೇಜುಗಳಿಗೆ ಅಭಿನಂಧಿಸುವುದು.

8. **ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ:**

ಎಸ್ಎಸ್ಎಲ್ಸಿ [ಕನ್ನಡ ಮಾಧ್ಯಮ–5, ಇತರೆ ಮಾಧ್ಯಮಗಳು–5] 10 ಘ ವಿದ್ಯಾರ್ಥಿ ರೂ 2,000/–

ದ್ವಿತೀಯ ಪಿ.ಯು.ಸಿ [ವಿಜ್ಞಾನ–2, ಇತರೆ ವಿಷಯಗಳು–03] 05 ಘ ವಿದ್ಯಾರ್ಥಿ ರೂ 3,000/–

**9.** ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.50 ಭಾಗವನ್ನು ಮತ್ತು ಕಿರಿಯ ಕಾಲೇಜು (ಪಿಯುಸಿ), ಪ್ರಥಮ ದರ್ಜೆ ಹಾಗೂ ಇನ್ನಿತರೆ ಕಾಲೇಜುಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.60 ಭಾಗವನ್ನು ಆಯಾ ಕಾಲೇಜುಗಳಲ್ಲಿ ಉಳಿಸಿಕೊಂಡು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗಿಸುವುದು [ ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುವುದು/ ಪರೀಕ್ಷಾ ಶುಲ್ಕ / ನೋಟ್ ಪುಸ್ತಕಗಳ ವಿತರಣೆ/ ಬಹುಮಾನ ಇತರೆ ಸದ್ಬಳಕೆಗೆ ಕಾರ್ಯಕ್ಕಾಗಿ ವಿನಿಯೋಗಿಸಿಕೊಳ್ಳಬಹುದು].

10. **ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಸಲುವಾಗಿ ಧನ ಸಹಾಯ:**

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲು ಪ್ರತಿ ತಾಲ್ಲೂಕು ಹಾಗೂ ಜಿಲ್ಲೆಗೆ ರೂ. 5000/– ಗಳಂತೆ ಒಟ್ಟು ರೂ. 11,75,000/– ಗಳನ್ನು ಪ್ರತಿ ವರ್ಷ ಬಿಡುಗಡೆ ಮಾಡಲಾಗುವುದು.

11. **<u>ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಗಣಕಯಂತ್ರ [ಕಂಪ್ಯೂಟರ್]ಗಳನ್ನು ನೀಡುವುದು:</u>**

2008–09 ನೇ ಸಾಲಿನಿಂದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು ಶೈಕ್ಷಣಿಕ ಜಿಲ್ಲೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಮೂರು ವಿದ್ಯಾರ್ಥಿಗಳಿಗೆ [ಕನಿಷ್ಠ ಒಬ್ಬ ಕನ್ನಡ ಮಾಧ್ಯಮದ ವಿದ್ಯಾರ್ಥಿಗೆ] ಬಹುಮಾನವಾಗಿ ಗಣಕಯಂತ್ರ [ಕಂಪ್ಯೂಟರ್]ಗಳನ್ನು ಜಿಲ್ಲಾ ಉಪನಿರ್ದೇಶಕರ [ಆಡಳಿತ] ಮೂಲಕ ವಿತರಿಸಲಾಗುವುದು. [ಮುಂದಿನ ರಾಜ್ಯ ಸಮಿತಿಯ ಸಭೆಯು ನಡೆಯುವ ವರೆಗೆ ಈ ಸೌಲಭ್ಯವನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ]

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು http://www.schooleducation.kar.nic.in ವೆಬ್‌ಸೈಟಿನಿಂದ ಪಡೆಯಬಹುದು.

**ಕಾರ್ಯದರ್ಶಿ / ಖಜಾಂಚಿಗಳು,**
**ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ.**

## ಕರ್ನಾಟಕ ಸರ್ಕಾರದ ನಡವಳಿಗಳು:

ವಿಷಯ: ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಶೈಕ್ಷಣಿಕವಾಗಿ ಬಲಗೊಳಿಸುವ ಸಲುವಾಗಿ ಶೈಕ್ಷಣಿಕ ತಪಾಸಣೆ ಹಾಗೂ ಮಾರ್ಗದರ್ಶನವನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಬಗ್ಗೆ.

ಓದಲಾಗಿದೆ: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ: ಪ್ರಾ.ಪ್ರೌ.ಶಿ. ಸ:4249. ದಿನಾಂಕ:17-02-2010.

**ಪ್ರಸ್ತಾವನೆ:**

ಮೇಲೆ ಓದಲಾದ 17-02-2010ರ ಟಿಪ್ಪಣಿಯಲ್ಲಿ ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಶೈಕ್ಷಣಿಕವಾಗಿ ಬಲಗೊಳಿಸುವ ಸಲುವಾಗಿ ಶೈಕ್ಷಣಿಕ ತಪಾಸಣೆ ಹಾಗೂ ಮಾರ್ಗದರ್ಶನವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುವುದೆಂದು ಭಾವಿಸಲಾಗಿದೆ. ಗುಣಮಟ್ಟದ ಸುಧಾರಣೆ ಇಲಾಖೆಯ ಗುರಿಯಾಗಿದ್ದರೂ ಸಹ ಇದರ ಕಡೆ ಅಪೇಕ್ಷಿತ ಬದಲಾವಣೆಗಳು ಅಗುತ್ತಿರುವುದು ಕಂಡು ಬರುತ್ತಿಲ್ಲ.

ಇಲಾಖೆಯ ಮೂಲ ಧ್ಯೇಯೋದ್ದೇಶವಾದ "ಸರ್ವರಿಗೂ ಗುಣಾತ್ಮಕ ಶಿಕ್ಷಣ" ಎಂಬ ಧ್ಯೇಯ ವಾಕ್ಯ ಸಾಧಿಸುವಲ್ಲಿ ಇನ್ನಷ್ಟು ಚುರುಕುತನ, ಕಾರ್ಯ ಕ್ಷಮತೆ, ಪ್ರಾಮಾಣಿಕತೆ ಮತ್ತು ಬದ್ಧತೆ ಹೆಚ್ಚಾಗಬೇಕಾಗಿದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ: ಸ.ಪ್ರ.ಕಾ/ಪ್ರಾ.ಪ್ರೌ.ಶಿ/ಆಶಾ/52/2010**
**ಬೆಂಗಳೂರು, ದಿನಾಂಕ: 20-02-2010.**

ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳಿಗೆ ಪ್ರತಿ ತಿಂಗಳು ಕನಿಷ್ಟ ಈ ಕೆಳಕಂಡಂತೆ ಶೈಕ್ಷಣಿಕ ತಪಾಸಣೆ ಹಾಗೂ ಮಾರ್ಗದರ್ಶನ ಮಾಡಬೇಕೆಂದು ತೀರ್ಮಾನಿಸಲಾಗಿದೆ.

| ಕ್ರ.ಸಂ | ಅಧಿಕಾರಿಗಳು | ಶೈಕ್ಷಣಿಕ ತಪಾಸಣೆಗಳ ಸಂಖ್ಯೆ |
|---|---|---|
| 01 | ಆಯುಕ್ತರು/ಅಪರ ಆಯುಕ್ತರು/ರಾಜ್ಯ ಯೋಜನಾ ನಿರ್ದೇಶಕರು | 05 |
| 02 | ನಿರ್ದೇಶಕರು | 05 |
| 03 | ಸಿಟಿಇ ಪ್ರಾಂಶುಪಾಲರು/ಜಂಟಿ ನಿರ್ದೇಶಕರು | 05 |
| 04 | ರೀಡರ್ (ಸಿ.ಟಿ.ಇ) | 10 |
| 05 | ಉಪನ್ಯಾಸಕರು (ಸಿ.ಟಿ.ಇ) | 15 |

| | | |
|---|---|---|
| 06 | ಉಪ ನಿರ್ದೇಶಕರು (ಆಡಳಿತ) | 08 |
| 07 | ಇ.ಓ/ಡಿ.ವೈ.ಪಿ.ಸಿ | 10 |
| 08 | ವಿಷಯ ಪರಿವೀಕ್ಷಕರು/ಎಪಿಸಿ | 10 |
| 09 | ಡಯಟ್ ಪ್ರಾಂಶುಪಾಲರು | 10 |
| 10 | ಹಿರಿಯ ಉಪನ್ಯಾಸಕರು (ಡಯಟ್) | 12 |
| 11 | ಉಪನ್ಯಾಸಕರು (ಡಯಟ್) | 15 |
| 12 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 12 |
| 13 | ಇ.ಸಿ.ಓ | 20 |
| 14 | ಬಿ.ಆರ್.ಸಿ | 15 |
| 15 | ಬಿ.ಆರ್.ಪಿ | 20 |
| 16 | ಸಿ.ಆರ್.ಪಿ | 20 |
| 17 | ಜೆ.ಡಿ.ಪಿ.ಐ | 05 |
| 18 | ವಿಷಯ ಪರಿವೀಕ್ಷಕರು(ಹಿಂದಿ) | 10 |

ಪ್ರತಿ ತಿಂಗಳೂ ಆಯಾ ಆಯುಕ್ತಾಲಯ ವ್ಯಾಪ್ತಿಯಲ್ಲಿ ಉಪನಿರ್ದೇಶಕರು ಹಾಗೂ ಡಯಟ್ ಪ್ರಾಂಶುಪಾಲರೊಂದಿಗೆ ಪ್ರಗತಿ ಪರಿಶೀಲನೆ ಆಯುಕ್ತರು/ಅಪರ ಆಯುಕ್ತರು ಮಾಡಿ ದಿನಾಂಕ:10ರೊಳಗಾಗಿ ತಮ್ಮ ಸಂಕ್ಷಿಪ್ತ ವರದಿಯನ್ನು ಪ್ರಧಾನ ಕಾರ್ಯದರ್ಶಿರವರಿಗೆ ಸಲ್ಲಿಸಬೇಕಾಗಿದೆ.

ಪ್ರತಿ 2 ತಿಂಗಳಿಗೊಮ್ಮೆ ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆಯುಕ್ತರು. ಅಪರ ಆಯುಕ್ತರುಗಳು ಪ್ರಗತಿ ಪರಿಶೀಲನೆ ನಡೆಸಿ ಮಾನ್ಯ ಸಚಿವರಿಗೆ ಸಲ್ಲಿಸಲು ಆದೇಶಿಸಿದೆ.

ಈ ಆದೇಶವು ದಿನಾಂಕ: 01–03–2010 ರಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

ಸಹಿ/–

**ಕರ್ನಾಟಕ ಸರ್ಕಾರ,**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು–1**

**ಸಂಖ್ಯೆ:ನಿ(ಪ್ರೌ.ಶಿ)ಪ್ರ.ಅಂಶಗಳು 2009–10** **ದಿನಾಂಕ:09–03–2010.**

**ಜ್ಞಾಪನ**

ವಿಷಯ: ವಿವಿಧ ಹಂತದಲ್ಲಿ ಅಧಿಕಾರಿಗಳು ಸಾರ್ವತ್ರಿಕವಾಗಿ
ಗಮನಿಸಬೇಕಾದ ಪ್ರಮುಖ ಅಂಶಗಳು.

2010–11ನೇ ಶೈಕ್ಷಣಿಕ ವರ್ಷ ಒಂದು ವಿಶೇಷ ಕಾರ್ಯ ಯೋಜನೆಯನ್ನು ರೂಪಿಸಿ ಅವುಗಳ ಅನುಷ್ಠಾನದ ಕ್ರಮವಾಗಿ ಹಲವು ನಿರ್ದಿಷ್ಟ ಅಂಶಗಳ ವಿವಿಧ ಹಂತದಲ್ಲಿ ಅವಲೋಕಿಸಬೇಕಾಗಿದ್ದು ಅತ್ಯವಶ್ಯಕವಾಗಿದೆ.

**ಈ ಹಿನ್ನೆಲೆಯಲ್ಲಿ ಈ ಕೆಳಗಿನ ವಿವರಗಳು:**

- ತರಗತಿ ಕೋಣೆಯಲ್ಲಿ ಶಿಕ್ಷಕರ ಬೋಧನಾ – ಕಲಿಕೆ ಪ್ರಕ್ರಿಯೆಯ ಸ್ಪಷ್ಟ ಅವಲೋಕನ.
- ಮುಖ್ಯ ಶಿಕ್ಷಕರಿಂದ ಮೇಲ್ವಿಚಾರಣಾ ಕ್ರಮದ ಬಗ್ಗೆ ಪರಿಶೀಲಿನೆ.
- ಮೇಲ್ವಿಚಾರಣೆಯ ದಾಖಲೀಕರಣ ಹಾಗೂ ಅನುಪಾಲನೆ
- ಶೈಕ್ಷಣಿಕ ಪ್ರಗತಿ ಅವಲೋಕನ/ತಪಾಸಣೆಯ ಹಿನ್ನೆಲೆಯಲ್ಲಿ
- ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಪ್ರಗತಿ ಪರಿಶೀಲನೆ
- ಶಿಕ್ಷಕರ ಚಲನವಲನ ರಿಜಿಸ್ಟರ್ ಪರಿಶೀಲನೆ.
- ಮಕ್ಕಳ ಹಾಜರಾತಿ ಬಗ್ಗೆ ಹೆಚ್ಚಿನ ಗಮನ
- ಏಕರೂಪದ ಅಂಕಿ–ಅಂಶಗಳ ಕುರಿತು ಕಡ್ಡಾಯ ಗಮನ ಹಾಗೂ ಕ್ರಮ

**2. ಬ್ಲಾಕ್ ಹಂತದಲ್ಲಿ:**

- ಬಿ.ಇ.ಓ/ಬಿ.ಆರ್.ಸಿ ಕ್ಲಸ್ಟರ್ ಕೋ–ಅರ್ಡಿನೇಟರ್/ಶಿಕ್ಷಣ ಸಂಯೋಜಕರ ವರದಿ.
- ಪ್ರವಾಸ ಸೂಚಿ, ಪ್ರವಾಸ ದಿನಚರಿ, ಶಾಲಾ ಭೇಟಿ ಹಾಗೂ ತಪಾಸಣಾ ವಿವರಗಳು.
- ನಿಗದಿತ ಗುರಿ ಹಾಗೂ ಪ್ರಗತಿಯ ದಾಖಲೀಕರಣದ ವಿವರಗಳು
- ಕಾರ್ಯಾಲಯದಲ್ಲಿಯ ನೋಡಲ್ ಅಧಿಕಾರಿಗಳ ಪರಿಶೀಲನಾ ವರದಿಗಳು.
- ಸಾಮಾನ್ಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿಯ ವಿವರವನ್ನು ಪರಿಶೀಲಿಸುವುದು.
- ಕರ್ತವ್ಯ ಲೋಪಕ್ಕಾಗಿ ತೆಗೆದುಕೊಂಡ ಕ್ರಮಗಳು.
- ಏಕರೂಪದ ಅಂಕಿ–ಅಂಶಗಳ ನಿರ್ವಹಣೆ ಬಗ್ಗೆ ವಿಶೇಷ ಗಮನ.

**3. ಜಿಲ್ಲಾ ಮಟ್ಟದಲ್ಲಿ:**

- ಜಿಲ್ಲೆಯಲ್ಲಿ ಡಿ.ಡಿ.ಪಿ.ಐ/ಬಿ.ಇ.ಓ/ಡಿ.ವೈ.ಪಿ.ಸಿ/ಇ.ಓ/ಡಿ.ಎಸ್.ಪಿ.ಇ/ವಿಷಯ ಪರಿವೀಕ್ಷಕರು/ಎ.ಪಿ.ಸಿಗಳ ವರದಿ.
- ಜಿಲ್ಲೆಯ ಡಯಟ್ ಪ್ರಾಂಶುಪಾಲರು/ಹಿರಿಯ–ಕಿರಿಯ ಅಧಿಕಾರಿಗಳ ವರದಿ.

- ಪ್ರವಾಸ ಸೂಚಿ ಪ್ರವಾಸ ದಿನಚರಿ, ಶಾಲಾ ಭೇಟಿ ಹಾಗೂ ತಪಾಸಣೆಯ ವಿವರಗಳು.
- ವರದಿಗಳ ಪುನರ್ ಪರಿಶೀಲನೆ ಹಾಗೂ ದಾಖಲೀಕರಣ.
- ಕಾರ್ಯಾಲಯದ ನೋಡಲ್ ಅಧಿಕಾರಿಗಳ ಪರಿಶೀಲನಾ ಕಾರ್ಯ.
- ನೋಡಲ್ ಅಧಿಕಾರಿಗಳ ತ್ರೈಮಾಸಿಕ ವರದಿಗಳ ಕ್ರೋಡೀಕರಣಗಳ ವರದೀಕರಣ ವಿವರ ಪರಿಶೀಲನೆ.
- ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ಕಾರ್ಯಕ್ರಮಗಳ ವಿವರ ಪರಿಶೀಲನೆ.
- ಕರ್ತವ್ಯ ಲೋಪಕ್ಕಾಗಿ ತಾಲ್ಲೂಕುವಾರು ತೆಗೆದುಕೊಂಡ ಕ್ರಮಗಳ ವಿವರ.
- ಇತರೆ ಪ್ರಮುಖ ಅಭಿವೃದ್ದಿ ಹಾಗೂ ಆಡಳಿತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ.
- ಏಕರೂಪದ ಅಂಕಿ–ಅಂಶಗಳ ಪರಿಶೀಲನೆ ಹಾಗೂ ಮರ್ಗೋಪಾಯ ಸೂಚನೆ.

**4. ರಾಜ್ಯ ಮಟ್ಟದಲ್ಲಿ:**

- ಜಿಲ್ಲಾ ಹಾಗೂ ಆಯಾ ಆಯುಕ್ತಾಲಯದಿಂದ ವರದಿಗಳ ಕ್ರೋಡೀಕರಣ ಹಾಗೂ ಅವಶ್ಯಕತೆಯಂತೆ ಸರ್ಕಾರಕ್ಕೆ ಆಯುಕ್ತರ ಮೂಲಕ ವರದಿ.
- ಜಿಲ್ಲಾವಾರು ನೋಡೆಲ್ ಅಧಿಕಾರಿಗಳ ತ್ರೈಮಾಸಿಕ ಪರಿಶೀಲನಾ ವರದಿಗಳ ಪರಿಶೀಲನೆ ಹಾಗೂ ಮಾರ್ಗದರ್ಶನ ನೀಡುವುದು.
- ಅವಶ್ಯಕತೆ ಆಧಾರದ ಮೇಲೆ ಹೊಸ ಹೊಸ ಕಾರ್ಯಕ್ರಮಗಳು ರೂಪಿಸುವುದು ಹಾಗೂ ಮಾರ್ಗದರ್ಶನ ನೀಡುವುದು.

ಈ ಎಲ್ಲಾ ಅಂಶಗಳ ವಿವಿಧ ಹಂತದಲ್ಲಿ ಅವಶ್ಯವಾಗಿ ಅವಲೋಕಿಸಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು(ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಆಯುಕ್ತರ ಕಛೇರಿ, ಬೆಂಗಳೂರು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಏಪ್ರಿಲ್ 2010ರಂದು ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಪತ್ರ ಸಂಖ್ಯೆ: ಎ 8 ಪಸವಿ/69/2009–10 ದಿ: 20.03.2010

**ಪ್ರಸ್ತಾವನೆ:–**

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಏಪ್ರಿಲ್ 2010ರಂದು ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮಾದರಿಯನ್ನು ಶೈಕ್ಷಣಿಕ ದೃಷ್ಠಿಯಿಂದ ಬದಲಾಯಿಸಿದ್ದು, ಬರವಣಿಗೆ ಸಮಯದ ಬಗ್ಗೆ ವಿದ್ಯಾರ್ಥಿಗಳಲ್ಲಿನ ಆತಂಕವನ್ನು ನಿವಾರಿಸುವ ಸಲುವಾಗಿ ಏಪ್ರಿಲ್ 2010 ರಿಂದ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮೊದಲ 15 ನಿಮಿಷಗಳನ್ನು ಪ್ರಶ್ನೆ ಪತ್ರಿಕೆಯನ್ನು ವಿದ್ಯಾರ್ಥಿಗಳು ಅವಲೋಕಿಸುವ ಸಲುವಾಗಿ ನೀಡಲು ಹಾಗೂ ಹೆಚ್ಚುವರಿಯಾಗಿ ನೀಡುವ ಈ 15 ನಿಮಿಷದ ಸಮಯದಲ್ಲಿ ಪರೀಕ್ಷೆ ಮುಗಿಯುವ ಸಮಯದಲ್ಲಿ 15 ನಿಮಿಷ ಮುಂದೂಡಿ ನಿಗದಿಪಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. "ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 70 ಎಸ್‌ಎಲ್‌ಬಿ 2010**

**ಬೆಂಗಳೂರು ದಿ: 22ನೇ ಮಾರ್ಚ್ 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಅವಲೋಕಿಸಲು ಮೊದಲ 15 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

ಷರತ್ತುಗಳು:–

1) ಪರೀಕ್ಷಾ ವೇಳೆಯು ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿದ್ದು, 10–30 ರಿಂದ 10–45ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಪ್ರಾರಂಭವಾಗುವ ಪರೀಕ್ಷೆಗೆ 2.30 ರಿಂದ 2.45 ರವರೆಗೆ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಗಳನ್ನು ಮಾತ್ರ ಅವಲೋಕಿಸತಕ್ಕದ್ದು. ಈ ಅವಧಿಯಲ್ಲಿ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಲು ಅವಕಾಶವಿರುವುದಿಲ್ಲ.
2) ಪ್ರಶ್ನೆಗಳಿಗೆ ಉತ್ತರವನ್ನು ಬೆಳಿಗ್ಗೆ 10.30ರಿಂದ ಪ್ರಾರಂಭವಾಗುವ ಪರೀಕ್ಷೆಗೆ 10.45ರ ನಂತರ ಹಾಗೂ ಮಧ್ಯಾಹ್ನ ಪ್ರಾರಂಭವಾಗುವ ಪರೀಕ್ಷೆಗಳಿಗೆ ಮಧ್ಯಾಹ್ನ 2.45ರ ನಂತರವೇ ಬರೆಯಲು ಪ್ರಾರಂಭಿಸಬೇಕು.
3) ಪ್ರಶ್ನೆ ಪತ್ರಿಕೆಯನ್ನು ಅವಲೋಕಿಸುವುದಕ್ಕಾಗಿ ನೀಡಿರುವ 15 ನಿಮಿಷಗಳ ಹೆಚ್ಚುವರಿ ಕಾಲವನ್ನು ಪರೀಕ್ಷಾ ವೇಳಾಪಟ್ಟಿಯಲ್ಲಿ ಸೂಚಿಸಿರುವ ಪರೀಕ್ಷಾ ಮುಕ್ತಾಯದ ಸಮಯವನ್ನು 15 ನಿಮಿಷಗಳ ಕಾಲ ಮುಂದೂಡಿ ನಿಗದಿಪಡಿಸತಕ್ಕದ್ದು.
4) ಯಾವುದೇ ಕಾರಣಕ್ಕೂ ಮೇಲೆ ಸೂಚಿಸಿರುವ 15 ನಿಮಿಷಗಳ ಹೆಚ್ಚುವರಿ ಸಮಯಕ್ಕಿಂತ ಹೆಚ್ಚಿನ ಕಾಲಾವಕಾಶಕ್ಕೆ ಅವಕಾಶವಿರುವುದಿಲ್ಲ.
5) ಮೇಲಿನ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಈ ಸಂಬಂಧ ಯಾವುದೇ ದೂರುಗಳು ಬಂದಲ್ಲಿ, ಇದಕ್ಕೆ ಸಂಬಂಧಪಟ್ಟ ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರೇ ನೇರ ಜವಾಬ್ದಾರರಾಗಿರುತ್ತಾರೆ.

ಸಹಿ/–
ಹೆಚ್.ಟಿ.ಜಯರಾಂ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ[ಪ್ರೌಢ]

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು 1.**

ಸಂಖ್ಯೆ: ಎಡಿಎಂ 2 ಶಾಮೊಸ 97/2009–10 ದಿ: 04.03.2010

**ಸುತ್ತೋಲೆ**

ವಿಷಯ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳ ಉಪಯೋಗಿಸುವಿಕೆಯನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರ ಸುತ್ತೋಲೆ ಸಂಖ್ಯೆ; ಶಿಪ್ರಕಾ ಪ್ರಾಪ್ರೌಶಿ–44/2010 ದಿ: 18.02.2010

2. ಸರ್ಕಾರದ ಆದೇಶ ಸಂಖ್ಯೆ; ಇಡಿ 226 ಎಲ್‌ಐಬಿ 2007 ದಿ: 05.10.2007

ಶಿಕ್ಷಕ ಮತ್ತು ನೌಕರರ ವರ್ಗದವರು; ಅವರುಗಳು ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುತ್ತಿರುವುದರಿಂದ ಬೋಧನಾ ಚಟುವಟಿಕೆಗಳಿಗೆ ಅತೀವ ತೊಂದರೆಯಾಗುತ್ತಿರುವುದಾಗಿ ಸರ್ಕಾರದ ಗಮನಕ್ಕೆ ಬಂದಿದೆ. ಮೊಬೈಲ್ ಬಳಕೆ ಮಾಡಲಾಗುತ್ತಿರುವುದರಿಂದ ಉತ್ತಮ ವಾತಾವರಣವನ್ನು ಕಲುಷಿತಗೊಳಿಸಿದಂತಾಗಿ ಬೋಧನಾ ಕ್ರಮಕ್ಕೆ ಅಡ್ಡಿಯಾಗುತ್ತಿರುತ್ತದೆ. ಈ ಜ್ಞಾನ ಮಂದಿರಗಳ ಶಾಲೆಗಳಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸುವ ಸಲುವಾಗಿ ಮೊಬೈಲ್‌ಗಳ ಬಳಕೆ ಮಾಡುವುದನ್ನು ನಿಷೇಧಿಸುವುದು ಸೂಕ್ತವೆಂದು ಭಾವಿಸಲಾಗಿದೆ.

ಆದ್ದರಿಂದ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಬಳಕೆ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುವುದು ಕಂಡಲ್ಲಿ, ಅವರ ಮೇಲೆ ಶಿಸ್ತು ಕ್ರಮ ಜರುಗಿಸಲು ಸೂಚಿಸಿದೆ. ಶಾಲೆಯ ಮುಖ್ಯ ಶಿಕ್ಷಕರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಮೊಬೈಲ್‌ಗಳನ್ನು ಬಳಸದೇ ಇರುವಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಶಾಲಾ ಮುಖ್ಯ ಶಿಕ್ಷಕರಿಗೆ ಈ ನಿಷೇಧದಿಂದ ವಿನಾಯಿತಿ ನೀಡಲಾಗಿದ್ದರೂ ಸಹ, ಅವರು ತಮ್ಮ ಬೋಧನಾ ಕಾರ್ಯದ ಅವಧಿಯಲ್ಲಿ ಮೊಬೈಲ್‌ಗಳನ್ನು ಬಳಸುವುದನ್ನು ನಿಷೇದಿಸಿದೆ. ಯಾವುದೇ ಪ್ರಾಥಮಿಕ ಶಾಲೆ ಪ್ರೌಢಶಾಲೆಗಳಲ್ಲಿ ಶಾಲಾ ವೇಳೆಯಲ್ಲಿ ಮೊಬೈಲ್ ಉಪಯೋಗಿಸುತ್ತಿರುವುದು ಗಮನಕ್ಕೆ ಬಂದಲ್ಲಿ ಶಾಲೆಯ ಮುಖ್ಯ ಶಿಕ್ಷಕರೇ ಹೊಣೆಗಾರರಾಗುತ್ತಾರೆಂದು ತಿಳಿಸುತ್ತಾ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಸಹಿ/–
[ಬಿ.ಎ.ಹರೀಶ್‌ಗೌಡ]
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಶಿ ಪ್ರ ಕಾ/ಪ್ರಾಪ್ರೌಶಿ/15/2010
ದಿ: 18.12.2010

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಬೆಂಗಳೂರು

**ಸುತ್ತೋಲೆ**

ವಿಷಯ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಹಾಜರಾತಿ ನಿರ್ವಹಣೆ ಕುರಿತು

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಕೆಲವು ಕಡೆ ಹಾಜರಾದ ಮಕ್ಕಳಿಗೆ "P" ಎಂದು ಹಾಗೂ ಗೈರುಹಾಜರಿದ್ದ ಮಕ್ಕಳಿಗೆ "A" ಎಂದು ನಮೂದಿಸುತ್ತಿರುವುದು, ಕೆಲವೆಡೆ ಹಾಜರಿಗೆ ಒಂದು ಉದ್ದಗೆರೆ, ಗೈರು ಹಾಜರಿಗೆ "ಗೈ" ಎಂದೂ, "A" ನಮೂದಿಸುತ್ತಿರುವುದು ರೂಢಿಯಲ್ಲಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಗೈರು ಹಾಜರಾತಿಗಳ ನಮೂದನೆಯಲ್ಲಿ ಗೊಂದಲಗಳಾಗುವ ಸಾಧ್ಯತೆ ಇದೆ.

ಆದ್ದರಿಂದ ಮಕ್ಕಳ ಹಾಜರಾತಿ ವಹಿ ವ್ಯವಸ್ಥೆಯಲ್ಲಿ ಅಗತ್ಯ ಸುಧಾರಣೆಗಾಗಿ ಹಾಗೂ ರಾಜ್ಯದಾದ್ಯಂತ ಏಕರೂಪ ವ್ಯವಸ್ಥೆ ತರುವ ನಿಟ್ಟಿನಲ್ಲಿ ಇನ್ನೂ ಮುಂದೆ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಶಾಲೆಯ ತರಗತಿಗಳು ಪ್ರಾರಂಭವಾಗುವ ಮೊದಲುಇ ಹಾಜರಿದ್ದ ಮಕ್ಕಳಗೆ "ಹಾ" ಎಂದು ಗೈರು ಹಾಜರಿದ್ದ ಮಕ್ಕಳಿಗೆ "ಗೈರು" ಎಂದು ಕಡ್ಡಾಯವಾಗಿ ನಮೂದಿಸುವುದು.

ಮುಖ್ಯೋಪಾಧ್ಯಾಯರು ವರ್ಗವಾರು ಹಾಜರಾತಿ ವಹಿ ಪಡೆದು ಶಾಲೆಯ ಆ ದಿನದ ಒಟ್ಟಾರೆ ದಾಖಲಾತಿ/ಹಾಜರಾತಿಯ ಅಂಕಿ ಸಂಖ್ಯೆಗಳನ್ನು ಪ್ರತ್ಯೇಕ ವಹಿಯಲ್ಲಿ ದಾಖಲಿಸಬೇಕು. ಈ ಕೆಲಸವನ್ನು ಆಯಾ ದಿನ ಶಾಲೆ ಪ್ರಾರಂಭವಾದ ಒಂದು ಗಂಟೆಯೊಳಗೆ ಮಾಡಬೇಕು.

ಹಾಜರಾತಿ ವಹಿಯಲ್ಲಿ ಯಾವುದೇ ತಿದ್ದುಪಡಿ, ತಿದ್ದಿ ಬರೆಯುವುದು ಮುಂತಾದವು ಕಂಡು ಬಂದಲ್ಲಿ ಅಂತಹ ವರ್ಗದ ಶಿಕ್ಷಕರ ಮೇಲೆ ಹಾಗೂ ಮುಖ್ಯೋಪಾಧ್ಯಾಯರ ಮೇಲೆ ಅಗತ್ಯ ಶಿಸ್ತು ಕ್ರಮ ಜರುಗಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ/ಉಪ ನಿರ್ದೇಶಕರುಗಳಿಗೆ ತಿಳಿಸಲಾಗಿದೆ.

ವಿವಿಧ ಯೋಜನೆಗಳಡಿ ಪ್ರಯೋಜನ ಪಡೆಯುವ ಮಕ್ಕಳ ಅಂಕಿ ಸಂಖ್ಯೆಗಳಿಗೂ ವಾಸ್ತವ ಹಾಜರಾತಿಗೂ ತಾಳೆಯಾಗಬೇಕು, ವ್ಯತಿರಿಕ್ತವಾದಲ್ಲಿ ಸೂಕ್ತ ಅಗತ್ಯ ಕ್ರಮ ಜರುಗಿಸಲಾಗುವುದು. ಈ ನಿಟ್ಟಿನಲ್ಲಿ ಪ್ರತಿ ಶಾಲೆಗಳಲ್ಲಿ ಈ ವ್ಯವಸ್ಥೆ ದಿ: 01.03.2010ರಿಂದ ಜಾರಿಯಾಗುವಂತೆ ಕ್ರಮ ಕೈಗೊಳ್ಳುವುದು.

ಸಹಿ/–
[ಡಾ//ರ.ಗೋ.ನಡಾದೂರ]
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರು
ಉಪ ಪ್ರಾಂಶುಪಾಲರುಗಳ ಕಾರ್ಯ ಹಂಚಿಕೆ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ; ಇಡಿ 433 ಡಿಪಿಐ 2001 ದಿ: 09.01.2003
2. ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಎಲ್‌ಎಲ್‌ಬಿ 2004 ದಿ:
3. ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಡಿಪಿಐ 2006 ದಿ: 16.09.2006
4. ಸರ್ಕಾರದ ಆದೇಶ ಸಂಖ್ಯೆ; ಇಡಿ 92 ಡಿಪಿಐ 2006 ದಿ: 28.03.2007

**ಪ್ರಸ್ತಾವನೆ:**

ರಾಜ್ಯದಲ್ಲಿನ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ವಿಭಾಗ ಮತ್ತು ಪ್ರೌಢಶಾಲಾ ವಿಭಾಗಗಳಿರುತ್ತವೆ. ಇಂತಹ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ 750ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ 01 ಉಪ ಪ್ರಾಂಶುಪಾಲರ ಹುದ್ದೆಗೆ ಅವಕಾಶವಿದೆ. ಇಂತಹ ಸಂದರ್ಭದಲ್ಲಿ ಪ್ರಾಂಶುಪಾಲರು/ಉಪ ಪ್ರಾಂಶುಪಾಲರುಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಅಧಿಕಾರಿಗಳ ಬಗ್ಗೆ ಮೇಲೆ [1] ಮತ್ತು [2]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾರ್ಯಸೂಚಿಗಳನ್ನು ಹೊರಡಿಸಲಾಗಿದೆ.

ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಕಾರ್ಯ ಹಂಚಿಕೆಯನ್ನು ಸುಗಮಗೊಳಿಸುವ ದೃಷ್ಠಿಯಿಂದ ದಿ: 18.07.2006ರಂದು ಸಭೆಯನ್ನು ನಡೆಸಿ, ಈ ಹಿಂದೆ ಹೊರಡಿಸಿದ ಆದೇಶಗಳನ್ನು ರದ್ದುಪಡಿಸಿ ಮೇಲೆ [3]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರುಗಳಿಗೆ ಶೈಕ್ಷಣಿಕ, ಆಡಳಿತಾತ್ಮಕ ಆರ್ಥಿಕ ಹಾಗೂ ಇತರೆ ಅಧಿಕಾರಿಗಳ ಕಾರ್ಯಸೂಚಿಗಳನ್ನು ಹೊರಡಿಸಲಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿ: 08.01.2007ರ ಪತ್ರದಲ್ಲಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರ ಕಾರ್ಯ ಹಂಚಿಕೆ ಬಗ್ಗೆ ಮರು ಪರಿಶೀಲಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ [3]ರಲ್ಲಿ ಓದಲಾದ ಸರ್ಕಾರದ ದಿ: 16.09.2006ರ ಆದೇಶವನ್ನು ಹಿಂದಕ್ಕೆ ಪಡೆದು ದಿ: 09.01.2003ರಂದು ಹೊರಡಿಸಲಾಗಿದೆ.

ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರ ಮತ್ತು ಉಪ ಪ್ರಾಂಶುಪಾಲರುಗಳು ಕ್ರಮವಾಗಿ ಪದವಿ ಪೂರ್ವ ವಿಭಾಗ ಮತ್ತು ಪ್ರೌಢಶಾಲಾ ವಿಭಾಗವನ್ನು ಪ್ರತಿನಿಧಿಸುತ್ತಿರುವುದರಿಂದ, ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರಿಗೆ, ಪ್ರೌಢಶಾಲೆಗೆ ಸಂಬಂಧಿಸಿದಂತೆ ಉಪ ಪ್ರಾಂಶುಪಾಲರಿಗೆ ಹಾಗೂ ಉಪ ಪ್ರಾಂಶುಪಾಲರು ಇಲ್ಲದಿರುವ ಕಡೆ ಪ್ರೌಢಶಾಲಾ ವಿಭಾಗದಲ್ಲಿನ ಹಿರಿಯ ಸಹ ಶಿಕ್ಷಕರಿಗೆ ಕಾರ್ಯ ಹಂಚಿಕೆಯನ್ನು ವಹಿಸುವುದು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಠಿಯಿಂದ ಯೋಗ್ಯವಾದುದ್ದೆಂದು ಭಾವಿಸಿ ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ; ಇಡಿ 70 ಎಸ್‌ಎಲ್‌ಬಿ 2009
ಬೆಂಗಳೂರು ದಿ: 22ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಠಿಯಿಂದ ಪೂರ್ವ ಅಧಿಕಾರಗಳನ್ನು ಉಪ ಪ್ರಾಂಶುಪಾಲರಿಗೆ ಮತ್ತು ಉಪ ಪ್ರಾಂಶುಪಾಲರ ಹುದ್ದೆ ಇಲ್ಲದಿರುವ ಕಡೆ ಪ್ರೌಢಶಾಲೆಯ ಹಿರಿಯ ಸಹ ಶಿಕ್ಷಕರಿಗೆ ವಹಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ. ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು

ಮತ್ತು ಉಪ ಪ್ರಾಂಶುಪಾಲರು ನಿರ್ವಹಿಸಬೇಕಾದ ಕಾರ್ಯಸೂಚಿಗೆ ಸಂಬಂಧಿಸಿದಂತೆ ಹೊರಡಿಸಿರುವ ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಪಡಿಸಿದೆ. ಉಪ ಪ್ರಾಂಶುಪಾಲರು/ಹಿರಿಯ ಸಹ ಶಿಕ್ಷಕರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1ರಲ್ಲಿ ಪ್ರಾಂಶುಪಾಲರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಅನುಬಂಧ–2ರಲ್ಲಿ ಸೂಚಿಸಿರುವಂತೆ ಕಾರ್ಯ ಹಂಚಿಕೆಯನ್ನು ನಿರ್ವಹಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/–

ಹೆಚ್.ಟಿ.ಜಯರಾಂ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ[ಪ್ರೌಢ]

**ದಿನಾಂಕ: 22.01.2010 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 251 ಎಸ್.ಒ.ಹೆಚ್ 2009 ಕ್ಕೆ**
**ಅನುಬಂಧ–1**

## ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಶಿಕ್ಷಕರು/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಪ್ರಾಂಶುಪಾಲರು/ಹಿರಿಯ ಶಿಕ್ಷಕರ ಜವಾಬ್ದಾರಿ ಮತ್ತು ಕರ್ತವ್ಯಗಳು

**ಶೈಕ್ಷಣಿಕ ಕಾರ್ಯಾಭಾರ:**

- ಶಿಕ್ಷಕರಿಗೆ ವಾರ್ಷಿಕ ಕಾರ್ಯ ಹಂಚಿಕೆ
- ಶಿಕ್ಷಕರ ವಾರ್ಷಿಕ ಕಾರ್ಯ ಯೋಜನೆ ವಿಷಯವಾರು ಸಿದ್ಧಪಡಿಸುವುದನ್ನು ಖಾತರಿಪಡಿಸಿಕೊಳ್ಳುವುದು.
- ತರಗತಿವಾರು, ವಿಷಯವಾರು ಹಾಗೂ ಕ್ರೋಢಿಕೃತ ವೇಳಾಪಟ್ಟಿ ಸಿದ್ಧಪಡಿಸುವುದು.
- ಅರ್ಧ ವಾರ್ಷಿಕ ಪರೀಕ್ಷೆ, ಮಾಸಿಕ ಪರೀಕ್ಷೆಗಳಿಗೆ ಕಾರ್ಯ ಯೋಜನೆ ತಯಾರಿಸುವುದು.
- ಶಿಕ್ಷಕರ ಪಾಠ ಟಿಪ್ಪಣಿ ಪರಿಶೀಲಿಸುವುದು
- ಶಿಕ್ಷಕರು ನಿರ್ವಹಿಸುವ ಪಾಠಗಳ ವೀಕ್ಷಣೆ, ಮೇಲ್ವಿಚಾರಣೆ ಹಾಗೂ ಪಾಠೋಪಕರಣಗಳ ದೈನಂದಿನ ಬಳಕೆ ಬಗ್ಗೆ ಕ್ರಮ ವಹಿಸುವುದು.
- ಸೇತುಬಂಧ ಶಿಕ್ಷಣ ನೀಡುವ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಹೆಚ್ಚಿನ ಗಮನಹರಿಸಿ ಅವರ ಕಲಿಕೆಯಲ್ಲಿ ಪ್ರಗತಿ ಸಾಧಿಸಲು ಕಾರ್ಯ ಯೋಜನೆ ರೂಪಿಸವುದು. ಇಂತಹ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸುವುದು ಮತ್ತು ಪರಿಹಾರ ಬೋಧನಾ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಶಿಕ್ಷಕರಿಗೆ ವಿಷಯವಾರು ಕಾರ್ಯಗಾರಗಳನ್ನು ಏರ್ಪಡಿಸುವುದು ಹಾಗೂ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಲು ಅವಕಾಶ ಕಲ್ಪಿಸುವುದು.
- ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯನ್ನು ಗುರುತಿಸಲು ವೈಯುಕ್ತಿಕ ಮಾಹಿತಿ ಇರುವಂತೆ ಪ್ರತ್ಯೇಕ ವಹಿಗಳನ್ನು ನಿರ್ವಹಿಸುವುದು.
- ಕಂಪ್ಯೂಟರ್ ಕಾರ್ಯ ನಿರ್ವಹಣೆ ಬಗ್ಗೆ ಮಕ್ಕಳ ಕಂಪ್ಯೂಟರ್ ಕಲಿಕೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಸಹ ಪಠ್ಯ ಚಟುವಟಿಕೆಗಳ ವಾರ್ಷಿಕ ಯೋಜನೆ ಹಾಗೂ ಅನುಷ್ಠಾನ
- ಪಠ್ಯೇತರ ಚಟುವಟಿಕೆಗಳಾದ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಕ್ವಿಜ್ ಸಾಮಾನ್ಯ ಜ್ಞಾನ ಸ್ಪರ್ಧೆ ಇವುಗಳನ್ನು ಆಯೋಜಿಸಲು ಕ್ರಿಯಾ ಯೋಜನೆ ತಯಾರಿಸುವುದು. ಸಾಂಸ್ಕೃತಿಕ ಸಂಘದ ಮೂಕ ನಾಟಕೋತ್ಸವ, ನೃತ್ಯ, ಪ್ರತಿಭಾ ಕಾರಂಜಿ ಇತ್ಯಾಧಿ ಕಾರ್ಯಕ್ರಮಗಳನ್ನು ಯೋಜಿಸುವುದು.

- ರಾಷ್ಟ್ರೀಯ ಭಾವೈಕ್ಯತೆ, ಏಕತೆಯ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆಯನ್ನು ಬಿಂಬಿಸುವಂತೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಶಿಕ್ಷಕರಿಗೆ ವಿಷಯವಾರು ಸಂಪನ್ಮೂಲ ವ್ಯಕ್ತಿಗಳಿಂದ ಮಾದರಿ ಪಾಠಗಳನ್ನು ಯೋಜಿಸುವುದು ಹಾಗೂ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತು ಪ್ರದರ್ಶನ/ಕಲಾ ಪ್ರದರ್ಶನ/ಆಟೋಟಗಳನ್ನು ಏರ್ಪಡಿಸುವುದು.
- ಶಾಲಾ ಚಟುವಟಿಕೆಗಳನ್ನು ಶಾಲಾ ಶಿಕ್ಷಕರಲ್ಲಿ ಹಂಚಿ ಹೊಣೆಗಾರಿಕೆ ಹಂಚಿಕೊಳ್ಳುವುದು.
- ವಿಜ್ಞಾನ ಬೋಧನೆ ಮಾಡುವಾಗ ಬರುವ ಎಲ್ಲಾ ಪ್ರಯೋಗಗಳ ವಾರ್ಷಿಕ ಕಾರ್ಯ ಯೋಜನೆ ತಯಾರಿಕೆ ಹಾಗೂ ಅನುಷ್ಠಾನ.
- ಮಕ್ಕಳ ಕಲಿಕೆಯ ಬಗ್ಗೆ ಪರಿಶೀಲನೆ ಹಾಗೂ ಮಾರ್ಗದರ್ಶನ
- ಪ್ರತಿ ತರಗತಿ/ವಿಭಾಗದ ಹಾಜರಿ ಪುಸ್ತಕದಲ್ಲಿ ಪ್ರತಿ ಮಾಹೆಯ ಅಂತ್ಯದಲ್ಲಿ ಪ್ರತಿ ವಿದ್ಯಾರ್ಥಿಯ ಹಾಗೂ ತರಗತಿಯ ಸರಾಸರಿ ಹಾಜರಾತಿಗಳನ್ನು ಲೆಕ್ಕಾಚಾರ ಮಾಡಬೇಕು.
- ಗೈರು ಹಾಜರಾದ ಮಕ್ಕಳ ಹಾಜರಾತಿ ಅನುಪಾಲನೆ ಹಾಗೂ ಶಾಲೆಗೆ ಬರುವಂತೆ ಮಾಡಿದ ಪ್ರಯತ್ನಗಳ ದಾಖಲೀಕರಣ ಶಾಲೆಗಳಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವುದು.
- ಮಕ್ಕಳಲ್ಲಿ ಇರುವ ಸೃಜಾನಾತ್ಮಕತೆ ಹಾಗೂ ಹವ್ಯಾಸಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು. ವಿಷಯವಾರು ಕ್ಲಬ್ [ಇಕೋ ಕ್ಲಬ್, ಗ್ರಾಹಕರ ವಿಜ್ಞಾನ ಕ್ಲಬ್] ಸ್ಥಾಪಿಸಿ, ಇದರನನ್ವಯ ಚಟುವಟಿಕೆಗಳನ್ನು ನಡೆಸುವುದು. ಶಾಲೆಯಲ್ಲಿ ವಿವಿಧ ವಿಷಯದ [ಭಾಷೆ, ಗಣಿತ, ವಿಜ್ಞಾನ] ಸಂಘಗಳನ್ನು ಸ್ಥಾಪಿಸಿ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮ ಏರ್ಪಡಿಸುವುದು. ವಾಚನಾಲಯ ಪುಸ್ತಕಗಳನ್ನು ಶಿಕ್ಷಕರು ಹಾಗೂ ಮಕ್ಕಳೂ ಸಹ ಓದುವಂತೆ ಪ್ರೋತ್ಸಾಹಿಸುವುದು. ತರಗತಿಯ ಮಕ್ಕಳಿಗೆ ತರಗತಿ ಶಿಕ್ಷಕರಿಂದ ತರಗತಿಯಲ್ಲಿಯೇ ಪುಸ್ತಕಗಳ ವಿತರಣೆ ಮಾಡುವದು ಹಾಗೂ ದಾಖಲೆಗಳನ್ನು ನಿರ್ವಹಿಸುವುದು.
- ಶಾಲೆಯಲ್ಲಿ ನೋಟೀಸ್ ಬೋರ್ಡ್, ಡಿಸ್‌ಪ್ಲೆಬೋರ್ಡ್‌ಗಳಲ್ಲಿ ಪ್ರಮುಖವಾದ ವಿಷಯಗಳನ್ನು ಪ್ರಕಟಿಸುವುದು. [ವೈಜ್ಞಾನಿಕ, ಸಾಮಾನ್ಯ ಜ್ಞಾನ, ಕ್ರೀಡೆ ಹಾಗೂ ಇತರೆ]
- ಯೋಗ ಶಿಕ್ಷಣ, ಆರೋಗ್ಯ, ಶಾಲೆಯಲ್ಲಿನ ಶಿಸ್ತು, ಸಾಮೂಹಿಕ ಕವಾಯತು, ಕ್ರೀಡೆಗಳಿಗೆ ಶಾಲಾ ಮಟ್ಟದ ಹಾಗೂ ಅಂತರ ಶಾಲಾ ವಿವಿಧ ಮಟ್ಟದ ಕ್ರೀಡೆಗಳಿಗೆ ಶಾಲಾ ಮಟ್ಟದ ಹಾಗೂ ಅಂತರ ಶಾಲಾ ವಿವಿಧ ಮಟ್ಟದ ಕ್ರೀಡೆಗಳಿಗೆ ಪ್ರೋತ್ಸಾಹಿಸುವುದು.
- ಶಾಲೆಯಲ್ಲಿ ಬೆಳಗಿನ ಪ್ರಾರ್ಥನೆಯಾದ ಕೂಡಲೇ ಸುಭಾಷಿತ ಮತ್ತು ದಿನ ಪತ್ರಿಕೆಯ ಮುಖ್ಯಾಂಶಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು.
- ಮಕ್ಕಳಲ್ಲಿ ಮುಖಂಡತ್ವವನ್ನು ಬೆಳೆಸಲು ಹಾಗೂ ಹಿಂಜರಿಕೆಯನ್ನು ಹೋಗಲಾಡಿಸಲು ಶಾಲೆಯನ್ನು ಮಾಕ್ ಪಾರ್ಲಿಮೆಂಟ್ ಕಾರ್ಯಕ್ರಮವನ್ನು ಆಯೋಜಿಸುವುದು.
- ಶಾಲೆಯಲ್ಲಿ ಔಷಧಿಯು ಸಸ್ಯಗಳನ್ನು ಒಳಗೊಂಡಂತೆ ಕೈ ತೋಟಗಳನ್ನು ನಿರ್ವಹಿಸುವುದು.
- ಮಕ್ಕಳ ಕಲಿಕೆಯ ಬಗ್ಗೆ ಪೋಷಕರ ಗಮನಕ್ಕೆ ತರಲು ಪ್ರತಿ ತಿಂಗಳು/2 ತಿಂಗಳಿಗೊಮ್ಮೆ ಪೋಷಕರ ಸಭೆಯನ್ನು ಮತ್ತು ಶಾಲಾಭಿವೃದ್ಧಿ ಸಮಿತಿ ಸಭೆಯನ್ನು ಆಯೋಜಿಸಿ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು.
- ಶಾಲಾ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸುವುದು.
- ಮಕ್ಕಳಲ್ಲಿ ವ್ಯಕ್ತಿತ್ವ ವಿಕಾಸ, ಜೀವನ ಕೌಶಲ್ಯವನ್ನು ಬೆಳೆಸುವಂತಹ ಹಾಗೂ ಏಡ್ಸ್‌ನಂತಹ ಮಾರಕ ರೋಗ ಮತ್ತು ಸಾಕ್ಷರತೆ, ಕುಡಿತದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸಮುದಾಯ, ಸಾಮಾಜಿಕ ಸಾಮರಸ್ಯ, ಸಹಬಾಳ್ವೆ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸ್ಥಳೀಯವಾಗಿ ಲಭ್ಯವಿರುವ ವೈಜ್ಞಾನಿಕ, ಐತಿಹಾಸಿಕ ಪ್ರಾಮುಖ ಸ್ಥಳಗಳು, ಪ್ಲಾನೆಟೇರಿಯಂ, ಕಾರ್ಖಾನೆಗಳು, ಗಣಿಗಳು, ಜಾನಪದ ಲೋಕ, ಅಗ್ನಿಶಾಮಕ ಕೇಂದ್ರ, ಹೂದೋಟಗಳು, ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿ ಇತ್ಯಾದಿಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಕಾರ್ಯಕ್ರಮ ಆಯೋಜಿಸುವುದು.
- ಸಾಹಿತಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು, ಸ್ವಾತಂತ್ರ್ಯ ಯೋಧರು ಹಾಗೂ ಜಾನಪದ ಕ್ಷೇತ್ರದಲ್ಲಿ ಆಳವಾದ ಜ್ಞಾನವುಳ್ಳ ವ್ಯಕ್ತಿಗಳಿಂದ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.

- ಪ್ರಥಮ ಚಿಕಿತ್ಸೆ, ಆರೋಗ್ಯ ನೈರ್ಮಲ್ಯದ ಬಗ್ಗೆ ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಪರೀಕ್ಷಾ ಪದ್ಧತಿ, ನೂತನ ಪರೀಕ್ಷಾ ಕ್ರಮಗಳಿಗೆ ಅಗತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು. [ವಸ್ತುನಿಷ್ಠ ಪ್ರಶ್ನಾಬ್ಯಾಂಕ್ ತಯಾರಿಸುವುದು]
- ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಳಿತಾಯ ಯೋಜನೆಯ ಬಗ್ಗೆ ಅರಿವು ಮೂಡಿಸಿ ವಿದ್ಯಾರ್ಥಿಗಳ ಉಳಿತಾಯ ಖಾತೆಗಳನ್ನು ಬ್ಯಾಂಕ್‌ಗಳಲ್ಲಿ ತೆರೆಯುವುದು.
- ಚಿತ್ರಕಲೆ, ತೋಟಗಾರಿಕೆ, ಹೂ ಜೋಡಣೆ, ಹೊಲಿಗೆ, ಮರಗೆಲಸಗಳಂತಹ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಬಿಂಬಿಸುವಂತಹ ನೃತ್ಯ ರೂಪಕ, ನಾಟಕಗಳು, ಸಮೂಹಗಾನ, ಸಮೂಹ ನೃತ್ಯಗಳಲ್ಲಿ ಮಕ್ಕಳನ್ನು ಪ್ರೋತ್ಸಾಹಿಸುವುದು.
- ಶಾಲಾ ವಾರ್ಷಿಕೋತ್ಸವ ದಿನಾಚರಣೆ, ಪರಿಸರ ದಿನ, ಶಿಕ್ಷಕರ ದಿನಾಚರಣೆ, ರಾಷ್ಟ್ರ ನಾಯಕರ ಜನ್ಮ ದಿನಗಳ ಆಚರಣೆ, ವಿವೇಕಾನಂದ ದಿನಾಚರಣೆ ಇವುಗಳನ್ನು ಆಯೋಜಿಸುವುದು.
- ವೃತ್ತಿಪರ ಕೋರ್ಸ್‌ಗಳು, ಉನ್ನತ ವ್ಯಾಸಂಗದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಗಳ ಬಗ್ಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸಮುದಾಯದಲ್ಲಿ ಅರಿವು ಮೂಡಿಸಿ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಗುರುತಿಸಿ ತರಬೇತಿ ನೀಡಿ ಪ್ರೋತ್ಸಾಹಿಸುವುದು.
- ಅಂತರ್ ಶಾಲಾ ಮಟ್ಟ, ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಸೂಕ್ತ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದು.

**ಆಡಳಿತಾತ್ಮಕ ಕಾರ್ಯಭಾರ:**

- ಮೇಲಾಧಿಕಾರಿಗಳಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ದಾಖಲೆಗಳನ್ನು ಅಂಕಿ–ಅಂಶಗಳನ್ನು ಸಲ್ಲಿಸುವುದು. [ಶಾಲಾ ಆಯವ್ಯಯ, ಅಂಕಿ–ಅಂಶಗಳು, ಸಿಬ್ಬಂದಿ ವಿವರ. ಖಾಲಿ ಹುದ್ದೆಗಳ ವಿವರ ಇತ್ಯಾದಿ]
- ಸಹಶಿಕ್ಷಕರ ವಾರ್ಷಿಕ ಕಾರ್ಯ ನಿರ್ವಹಣಾ ವರದಿ ಸಲ್ಲಿಸುವುದು. ಆಸ್ತಿ ಮತ್ತು ಋಣಭಾರ ಪಟ್ಟಿಗಳನ್ನು ಸಲ್ಲಿಸುವುದು.
- ಸಹಶಿಕ್ಷಕರಿಗೆ ಸಾಂದರ್ಭಿಕ ರಜೆ, ಮತ್ತಿತರ ರಜೆ ಮಂಜೂರು ಮಾಡುವುದು. ವಾರ್ಷಿಕ ಬಡ್ತಿ ಮಂಜೂರು ಮಾಡುವುದು. ಕಾಲಮಿತಿ ವೇತನ ಬಡ್ತಿ, ವಿಶೇಷ ವೇತನ ಬಡ್ತಿ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸುವುದು.
- ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ ವಿತರಿಸುವುದು.
- ಶಾಲೆಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ವೈದ್ಯಕೀಯ ತಪಾಸಣೆಯನ್ನು ಮೂಡಿಸುವುದು. ವೈದ್ಯಕೀಯ ದಾಖಲೆ ನಿರ್ವಹಿಸುವುದು [Health Cards]
- ಪ್ರೌಢಶಾಲೆಗೆ ಅವಶ್ಯವಿರುವ ಹಾಗೂ ಅಗತ್ಯವಿರುವ ವೃತ್ತ ಪತ್ರಿಕೆಗಳು, ಗ್ರಂಥಗಳು, ನಿಯತ ಕಾಲಿಕೆಗಳು, ಕ್ರೀಡಾ ಸಾಮಗ್ರಿಗಳು, ವೃತ್ತಿ ಶಿಕ್ಷಣ ಹಾಗೂ ಪ್ರಾಯೋಗಿಕ ಉಪಕರಣಗಳನ್ನುಇ ಖರೀದಿಸುವುದು.
- ಸರ್ಕಾರ ಮತ್ತು ಸರ್ಕಾರೇತರ ನಗದು ಪುಸ್ತಕಗಳನ್ನು ದಿನವಹಿ ನಿಯಮಬದ್ಧವಾಗಿ ನಿರ್ವಹಿಸುವುದು.
- ಪ್ರೌಢಶಾಲಾ ಬೋಧಕೇತರ ಸಿಬ್ಬಂದಿಯ ಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ಹೊಂದುವುದು.
- ಎಸ್‌ಡಿಎಂಸಿ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.
- ಶಾಲಾ ದಾಖಲೆಗಳನ್ನು ಆಗಿಂದಾಗ್ಗೆ ನಿಯಮಬದ್ಧವಾಗಿ ಬರೆದು ಸುರಕ್ಷಿತವಾಗಿ ಇಟ್ಟು, ಉತ್ತಮ ಸ್ಥಿತಿಯಲ್ಲಿ ಕಾಪಾಡುವುದು.
- ಶಾಲೆಯ ಸಾಂಸ್ಥಿಕ ಯೋಜನೆ ಸಿದ್ಧಪಡಿಸುವುದು ಹಾಗೂ ಕಾರ್ಯಗತಗೊಳಿಸುವಂತೆ ಶ್ರಮ ವಹಿಸುವುದು.
- ಶಾಲೆಯ ಅಭಿವೃದ್ಧಿ ಯೋಜನೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು.

o ಶಾಲಾ ವೇಳಾಪಟ್ಟಿಯಲ್ಲಿ ನಿಗದಿತ ಆವರಣದ ಸ್ವಚ್ಛತೆ ಹಾಗೂ ಶಿಸ್ತಿನ ಬಗ್ಗೆ ಗಮನಹರಿಸುವುದು.

o ಮಾಹಿತಿ ಸಿಂಧು ಶಾಲೆಗಳನ್ನು ಗಣಕ ಯಂತ್ರ ಪೂರಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳಲ್ಲಿ ಮೂಡುತ್ತಿದೆಯೇ ಎಂದು ಖಾತ್ರಿ ಮಾಡಿಕೊಳ್ಳುವುದು ಹಾಗೂ ಬೇಸಿಗೆ ಮತ್ತು ಮಧ್ಯಂತರ ರಜೆಯ ಸಂದರ್ಭದಲ್ಲಿ ಸೇವಾನಿರತ ಶಿಕ್ಷಕರಿಗೆ ತರಬೇತಿಯನ್ನು ಹಮ್ಮಿಕೊಳ್ಳುವುದು. [ಮಾಹಿತಿ ಸಿಂಧು ಶಾಲೆಯಲ್ಲಿ ಎಲ್ಲಾ ಶಿಕ್ಷಕರಿಗೂ ತರಬೇತಿ ಮುಗಿದಿದ್ದರೆ ಪಕ್ಕದ ಪ್ರೌಢಶಾಲೆ/ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ತರಬೇತಿ ನೀಡುವುದು]

o ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರು, ಶಾಲೆಯ ನಾಯಕ, ಮಾರ್ಗದರ್ಶಕ ಹಾಗೂ ಶಿಕ್ಷಣ ಪ್ರಗತಿಯ ಪ್ರತೀಕವಾಗಿದ್ದು, ಉತ್ತಮ ಆಡಳಿತಗಾರನಾಗಿರಬೇಕು.

o ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರು, ಸಮುದಾಯದತ್ತ ಶಾಲೆಯ ಯೋಜನೆ ದತ್ತು ಯೋಜನೆ, ರಾಷ್ಟ್ರೀಯ ಹಬ್ಬಗಳ ಆಚರಣೆ, ಮಕ್ಕಳ ಪ್ರತಿಭಾ ಪುರಸ್ಕಾರ, ಶಿಕ್ಷಕರಿಗೆ ಪ್ರೋತ್ಸಾಹ ಇತರೆ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

o ಸಮುದಾಯ ಹಾಗೂ ಎಸ್‌ಡಿಎಂಸಿ ರವರ ಸಹಾಯದಿಂದ ಸಂಪನ್ಮೂಲವನ್ನು ಕ್ರೋಢೀಕರಿಸಿ ಶಾಲೆಯ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುವುದು.

o ಶಿಕ್ಷಣದಲ್ಲಿ ನೂತನವಾಗಿ ಜಾರಿಗೆ ಬರುವ ಪದ್ಧತಿಯನ್ನು ಅನುಷ್ಠಾನಗೊಳಿಸುವುದು.

**ಹಣಕಾಸಿನ ಕಾರ್ಯಭಾರ:**

o ಸರ್ಕಾರಿ ಹಾಗೂ ಸರ್ಕಾರೇತರ ನಗದು ಪುಸ್ತಕವನ್ನು ಪ್ರತಿ ದಿನವೂ ಬರೆಯಬೇಕು. ಇದಕ್ಕೆ ಪೂರಕವಾಗಿರುವ ವೈಯಕ್ತಿಕ ವಹಿಗಳು, ರಸೀದಿಗಳು, ಪಾವತಿಯಾಗಿರುವ ಸರ್ಕಾರಿ ಚಲನ್‌ಗಳು, ಹಣ ನೀಡಿರುವ ವಹಿ, ಕೊಟೇಷನ್‌ಗಳ ಕಡತ, ಸರ್ಕಾರೇತರ ಶುಲ್ಕವನ್ನು ನಿಯಮಾನುಸಾರ ಖರ್ಚು ಮಾಡಲು ಆಯವ್ಯಯ ಅನುಮೋದನೆಯ ನಡಾವಳಿಯನ್ನು ನಿರ್ವಹಣೆ ಮಾಡುವುದು.

o ವಿದ್ಯಾರ್ಥಿಗಳಿಂದ ಕಾಲ ಕಾಲಕ್ಕೆ ಸಂಗ್ರಹಿಸಿದ ಶುಲ್ಕವು ಕಡ್ಡಾಯವಾಗಿ ಸರ್ಕಾರದ ರಸೀದಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಒದು ಪ್ರತಿಯನ್ನು ವಿದ್ಯಾರ್ಥಿಗಳಿಗೆ/ಪೋಷಕರಿಗೆ ನೀಡಬೇಕು.

o ಸರ್ಕಾರಿ ರಸೀದಿ ಪುಸ್ತಕಗಳು ಅಥವಾ ಸರ್ಕಾರೇತರ ರಸೀದಿ ಪುಸ್ತಕಗಳು ಇಲ್ಲದ ಸಂದರ್ಭದಲ್ಲಿ ಅದರ ಬದಲಾಗಿ ಉಪಯೋಗಿಸುವಂತಹ ರಸೀದಿ ಪುಸ್ತಕಗಳನ್ನು ಸ್ಟಾಕ್ ಪುಸ್ತಕಕ್ಕೆ ತೆಗೆದುಕೊಂಡಿರುಬೇಕು ಹಾಗೂ ಅವುಗಳ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಹಿಯಲ್ಲಿ ನಿರ್ವಹಿಸಿರಬೇಕು.

o ಸರ್ಕಾರಿ ಅಥವಾ ಸರ್ಕಾರೇತರ ಶುಲ್ಕವನ್ನು ವಸೂಲಿ ಮಾಡಿದ ನಂತರ ಅದೇ ದಿನ ತಪ್ಪಿದಲ್ಲಿ ಮಾರನೆಯ ದಿನ ಖಜಾನೆ/ಬ್ಯಾಂಕ್‌ಗೆ ಪಾವತಿಸಬೇಕು. ಬ್ಯಾಂಕ್ ಅಥವಾ ಖಜಾನೆ ದೂರವಿದ್ದಲ್ಲಿ ಕ್ಯಾಷ್ ಆನ್ ಹ್ಯಾಂಡ್ ಪುಸ್ತಕದಲ್ಲಿ ನಮೂದಿಸಿ, ಹಣವನ್ನು ಶಾಲೆಯಲ್ಲಿ ಭದ್ರವಾಗಿ ರಕ್ಷಿಸಿ ಆಯಾ ತಿಂಗಳ ಅಂತ್ಯಕ್ಕೆ ಜಮಾ ಮಾಡಬೇಕು.

o ಆರ್.ಆರ್.ಕ್ರೀಡೆ, ಗ್ರಂಥಾಲಯ, ವೈದ್ಯಕೀಯ, ದೃಕ್ ಶ್ರವಣ ಮತ್ತು ಬಡ್ಡಿಯ ಹಣವನ್ನು ಆರ್ಥಿಕ ವರ್ಷದಲ್ಲಿ ಬಳಸಿ ಇನ್ನೂ ಉಳಿದಿದ್ದಲ್ಲಿ ಮುಂದಿನ ಆರ್ಥಿಕ ವರ್ಷದಲ್ಲಿ ಖರ್ಚು ಮಾಡುವ ಪ್ರಸಂಗ ಉದ್ಭವವಾದಲ್ಲಿ ಇಲಾಖೆಯ ಲಿಖಿತ ಆದೇಶ/ಸುತ್ತೋಲೆಯ ಆಧಾರದ ಮೇಲೆ ಮಾತ್ರ ಡ್ರಾ ಮಾಡಿ ಬಳಸಬೇಕು. ಕಡತದಲ್ಲಿ ಒಂದು ಪ್ರತಿ ಆದೇಶವನ್ನು ಕಡ್ಡಾಯವಾಗಿ ಇಟ್ಟಿರಬೇಕು.

o ತಡವಾಗಿ ವರ್ಗಾವಣೆ ಪತ್ರ ನೀಡುವಾಗ ವಸೂಲಿ ಮಾಡುವಂತಹ ಸರ್ಚಿಂಗ್ ಫೀಸ್ ಅನ್ನು ನಿಯಮಾನುಸಾರ ಖಜಾನೆಗೆ ಜಮಾ ಮಾಡಿರಬೇಕು ಹಾಗೂ ಭಾಗಶಃ ದಾಖಲೆ ಹುಡುಕಿದಂತಹ ಸಹಾಯಕರಿಗೆ ನೀಡಿರಬೇಕು.

o ಎಸ್.ಎಸ್.ಎಲ್.ಸಿ ರಿಜಿಸ್ಟೇಷನ್ ಶುಲ್ಕ, ಪರೀಕ್ಷಾ ಶುಲ್ಕ, ಪುನರಾವರ್ತಿತ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳನ್ನು ಸಂಗ್ರಹಿಸಿ ರಸೀದಿ ಪುಸ್ತಕದಲ್ಲಿ ನಮೂದಿಸಿರಬೇಕು. ವಿದ್ಯಾರ್ಥಿಗಳಿಗೆ ರಸೀದಿ ನೀಡಿರಬೇಕು. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಟ್ಟಿದಂತಹ ಡಿಡಿ ವಿವರಗಳೊಂದಿಗೆ ಇತರೆ ದಾಖಲೆಗಳನ್ನು ನಿರ್ವಹಿಸಬೇಕು.

o ಎಸ್‌ಡಿಎಂಸಿ ಯಲ್ಲಿ ನಿಯಮಾನುಸಾರವಾಗಿ ನಡಾವಳಿಗಳಲ್ಲಿ ಸೂಚಿಸಿರುವಂತೆ ಹಣವನ್ನು ಸಾರ್ವಜನಿಕರಿಂದ ವಂತಿಗೆ ರೂಪದಲ್ಲಿ ಪಡೆದಿದ್ದಲ್ಲಿ ಸ್ಟಾಕ್‌ಗೆ ತೆಗೆದುಕೊಂಡಿರುವಂತಹ ರಸೀದಿ ಪುಸ್ತಕಗಳಿಂದ ರಸೀದಿಗಳನ್ನು ನೀಡಬೇಕು ಹಾಗೂ ಇದಕ್ಕೆ ಪೂರಕವಾದ ಕಡತ ಮತ್ತು ನಗದು ಪುಸ್ತಕ ನಿರ್ವಹಣೆ ಮಾಡಿರಬೇಕು.

o ವಂತಿಗೆಯನ್ನು ದಾನಿಗಳು ನಿರ್ದಿಷ್ಠ ಉದ್ದೇಶಕ್ಕಾಗಿ ನೀಡಿದಲ್ಲಿ ಅಂತಹದೆ ಉದ್ದೇಶಕ್ಕಾಗಿ ಅದನ್ನು ಬಳಸಿರಬೇಕು ಹಾಗೂ ಅಂತಹ ದಾನಿಗಳಿಗೆ ಅಭಿನಂದನಾ ಪತ್ರವನ್ನು ಇಲಾಖೆಯ ಮೇಲಾಧಿಕಾರಿಗಳಿಂದ ಅಥವಾ ಮುಖ್ಯ ಶಿಕ್ಷಕರು ನೀಡಬೇಕು.

o ಎಸ್‌ಡಿಎಂಸಿಯ ಮೂಲಕ ಸರ್ಕಾರದಿಂದ/ಸಾರ್ವಜನಿಕ ವಂತಿಗೆಯ ಮೂಲಕ ಯಾವುದೇ ಸಿವಿಲ್ ಕಾಮಗಾರಿಗಳು ಅಥವಾ ಶಾಲೆಗೆ ಸಾಮಗ್ರಿಗಳನ್ನು ಖರೀದಿಸಿದ್ದಲ್ಲಿ ಅದನ್ನು ಬಳಕೆ ಮಾಡಿರುವ ಬಗ್ಗೆ ಎಸ್‌ಡಿಎಂಸಿ ಯ ಸದಸ್ಯರ ಗಮನಕ್ಕೆ ತರಬೇಕು.

o ಸರ್ಕಾರದ ಮೂಲಕ ನೀಡಿದಂತಹ ಕಾಮಗಾರಿಗಳನ್ನು ಎಸ್‌ಡಿಎಂಸಿ/ಯಾವುದೇ ಏಜೆನ್ಸಿಯ ಮೂಲಕ ನಿರ್ಮಾಣ ಮಾಡಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಪ್ಲಾನ್, ಎಸ್ಟಿಮೇಟ್, ಕಂಪ್ಲೀಷನ್ ಸರ್ಟಿಪಿಕೇಟ್ ಮತ್ತು ವ್ಯಾಲ್ಯುಯೇಷನ್ ಸರ್ಟಿಫಿಕೇಟ್ ಅಧಿಕೃತ ಅಭಿಯಂತರರಿಂದ ಪಡೆದಿರಬೇಕು. ಕೆಲವೊಮ್ಮೆ ಪೋಟೊ ದಾಖಲೆಗಳು ಅವಶ್ಯಕವಾಗಿರುತ್ತದೆ.

o ಶಾಲೆಯ ಸಿಬ್ಬಂದಿಗೆ ವೇತನ, ವಾರ್ಷಿಕ ಬಡ್ತಿ, ಹಬ್ಬದ ಮುಂಗಡ, ಗಳಿಕೆ ರಜೆ, ಅಂಗವಿಕಲರ ಭತ್ಯೆ, ಪರ್ಸನಲ್ ಪೇ ಇತರೆ ಮತ್ತು ಕಛೇರಿಯ ಮುಖ್ಯಸ್ಥರ ವ್ಯಾಪ್ತಿಯಲ್ಲಿರುವ ವಿವಿಧ ರಜೆಗಳನ್ನು ಮಂಜೂರು ಮಾಡುವುದು ಸೇರಿದಂತೆ ವೈಯಕ್ತಿಕ ಕ್ಲೇಮ್‌ಗಳನ್ನು ಯಾವುದೇ ಕಾರಣಕ್ಕೂ ತಡ ಮಾಡಬಾರದು ಕಾಲ ಕಾಲಕ್ಕೆ ಮಂಜೂರು ಮಾಡಬೇಕು.

o ಖಜಾನೆಯಿಂದ ಹಣ ಸೆಳೆಯುವ ಪ್ರಕ್ರಿಯೆಯಲ್ಲಿ ಪ್ರತ್ಯೇಕ ಡ್ರಾಯಿಂಗ್ ಕೋಡ್ ಹೊಂದಿದ್ದು, ಅದಕ್ಕೆ ಸಂಬಂಧಿಸಿದ ಪ್ರತ್ಯೇಕ ಪೇಪರ್ ಹೊಂದಿದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪೇಪ್ ಟೋಕನ್ ಅನ್ನು ಕಛೇರಿಯ ಮುಖ್ಯಸ್ಥರ ವಶದಲ್ಲಿ ಇಟ್ಟುಕೊಂಡಿರಬೇಕು.

o ಜಿಪಿಎಫ್ ಸಾಲಗಳ ಬಿಲ್‌ಗಳುಇ/ಹಿಂದಿನ ಬಾಕಿ ಬಿಲ್‌ಗಳು/ವೇತನದ ಬಿಲ್‌ಗಳು ಒಮ್ಮೆ ಡ್ರಾ ಮಾಡಿದ ನಂತರ ಮತ್ತೊಮ್ಮೆ ಖಜಾನೆಯಿಂದ ಹಣ ಸೆಳೆಯುವ ಪ್ರಯತ್ನ ಅಪರಾಧವಾಗಿರುತ್ತದೆ. ಹಾಗಾಗದ ರೀತಿಯಲ್ಲಿ ಮುನ್ನೆಚ್ಚರಿಕೆ ವಹಿಸಬೇಕು.

o ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ಮತ್ತು ವಿದ್ಯಾರ್ಥಿ ಕಲ್ಯಾಣ ನಿಧಿಗಾಗಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕದಲ್ಲಿ ಪ್ರತಿ ತರಗತಿಯಲ್ಲಿ ಅತ್ಯಂತ ಹೆಚ್ಚಿನ ಅಂಕ ಗಳಿಸಿದ ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ನಿಯಮಾನುಸಾರ ವಿದ್ಯಾರ್ಥಿ ವೇತನ ನೀಡಿ, ಅದೇ ಆರ್ಥಿಕ ವರ್ಷದಲ್ಲಿ ಶಿಕ್ಷಕರ ಕಲ್ಯಾಣ ನಿಧಿಯ ಕಛೇರಿಯ ಕಛೇರಿಗೆ ತಲುಪಿಸಿ ದಾಖಲೆಗಳನ್ನು ರಕ್ಷಿಸಿಡಬೇಕು.

- ವಿವಿಧ ಇಲಾಖೆಗಳಿಂದ ಶಾಲೆಗೆ ಮಂಜೂರಾಗಿರುವಂತಹ ವಿದ್ಯಾರ್ಥಿ ವೇತನವನ್ನು ಮುಖ್ಯ ಶಿಕ್ಷಕರ ಖಾತೆಗೆ ಜಮಾ ಮಾಡಿ ವಿದ್ಯಾರ್ಥಿಗಳಿಗೆ ನೀಡುವ ಸಂದರ್ಭದಲ್ಲಿ ಚೆಕ್ ಮೂಲಕ ಹಣ ವಿತರಿಸುವುದು ಸೂಕ್ತ. ಇದರ ಜೊತೆಗೆ ಬಟವಾಡೆ ಪುಸ್ತಕವನ್ನು ನಿರ್ವಹಿಸಬೇಕು. ವಿವಿಧ ಕಾರಣಗಳಿಂದ ವಿದ್ಯಾರ್ಥಿ ವೇತನ ವಿತರಣೆಯಾಗದೇ ಉಳಿದಿದ್ದಲ್ಲಿ ಸಂಬಂಧಿಸಿದ ಇಲಾಖೆಗೆ ಬಟವಾಡೆ ಪ್ರತಿಯ ಜೊತೆಗೆ ಹಿಂದಿರುಗಿಸಬೇಕು.
- ಮಧ್ಯಾಹ್ನ ಉಪಹಾರ ಯೋಜನಾ ಕಾರ್ಯಕ್ರಮವನ್ನು ಉತ್ತಮ್ಮ ರೀತಿಯಲ್ಲಿ ಅನುಷ್ಟಾನಗೊಳಿಸುವುದು.
- ಸರ್ಕಾರದಿಂದ ಮಕ್ಕಳಿಗೆ ನೀಡಬೇಕಾದ ಪ್ರೋತ್ಸಾಹ ಯೋಜನಾ ಅಡಿಯಲ್ಲಿ ಪಠ್ಯಪುಸ್ತಕ, ಸಮವಸ್ತ್ರ ವಿದ್ಯಾರ್ಥಿ ವೇತನಗಳನ್ನು ಸಕಾಲದಲ್ಲಿ ವಿತರಿಸಿ ಸೂಕ್ತ ದಾಖಲೆಗಳನ್ನು ಇಟ್ಟಿರಬೇಕು.
- ಇವುಗಳ ಕೊರತೆ ಇದ್ದಲ್ಲಿ ಹೆಚ್ಚಿನ ಬೇಡಿಕೆ ಸಲ್ಲಿಸುವುದು. ಹೆಚ್ಚುವರಿ ಇದ್ದಲ್ಲಿ, ಮೇಲಾಧಿಕಾರಿಗಳಲ್ಲಿ ವರದಿ ಮಾಡಿ ತಕ್ಷಣ ಹಿಂದಿರುಗಿಸುವುದು.
- ಶಾಲೆಯ ಚರಾ/ಸ್ಥಿರಾಸ್ಥಿಗಳ ಸೂಕ್ತ ಸಂರಕ್ಷಣೆ ಹಾಗು ಇವುಗಳ ದಾಖಲೆಗಳ ಸಂರಕ್ಷಣೆ ಅತಿ ಮುಖ್ಯವಾಗಿದೆ.

**ಇತರೆ ಕಾರ್ಯಭಾರ:**

- 10ನೇ ತರಗತಿಗೆ ಖಾಸಗಿಯಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ದಾಖಲಾತಿ ವಹಿಗಳನ್ನು ನಿರ್ವಹಿಸಬೇಕು. ಆ ಸಮಯದಲ್ಲಿ ವಿದ್ಯಾರ್ಥಿಯು ಒದಗಿಸುವ ದಾಖಲೆಗಳನ್ನು [ಅಂಕಪಟ್ಟಿ /ಟಿ1ಇ.ಸಿ] ಆಧರಿಸಿ ಪ್ರತ್ಯೇಕ ದಾಖಲಾತಿ ಸಂಖ್ಯೆಯನ್ನು ನೀಡಬೇಕು. ವಿದ್ಯಾರ್ಥಿಯು ಪಾಸಾಗಲೀ ಅಥವಾ ನಪಾಸಾಗಲೀ ಟಿ.ಸಿ.ಯನ್ನು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ನೀಡುವಂತೆಯೇ ವಿತರಣೆ ಮಾಡಬೇಕು.
- ಎಸ್.ಡಿ.ಎಂ.ಸಿ.ಯನ್ನು ನಿಯಮಾನುಸಾರ ರಚನೆ ಮಾಡಬೇಕು. ಇದೊಂದು ಸಂವಿಧಾನಾತ್ಮಕವಾಗಿ ರಚನೆಯಾದ ಸಮಿತಿಯಾಗಿದೆ. ಇದರಲ್ಲಿ ಮುಖ್ಯ ಶಿಕ್ಷಕರು / ಉಪಪ್ರಾಂಶುಪಾಲರು ಕಾರ್ಯದರ್ಶಿಗಳಾಗಿರುತ್ತಾರೆ.
- ಹಿರಿಯ ವಿದ್ಯಾರ್ಥಿಗಳು / ಹಳೆಯ ವಿದ್ಯಾರ್ಥಿಗಳು ಸಂಘಗಳ ಯಾವುದೇ ಸಮಯದಲ್ಲಿ ಶಾಲೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೆ ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಹಣಕಾಸಿನ ವಹಿಯನ್ನು ನಿರ್ವಹಿಸಬೇಕು.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಅನೇಕ ಸಂಘ ಸಂಸ್ಥೆಗಳ ಮೂಲಕ ಸಾಮಗ್ರಿಗಳನ್ನು [ಉದಾ : ವೀಲ್ ಚೇರ್, ಟ್ರೈಸೈಕಲ್ ಇತ್ಯಾದಿ] ಒದಗಿಸಿಕೊಡುವಲ್ಲಿ ಪ್ರಯತ್ನಿಸುವುದು.
- ಶಾಲೆಗೆ ಮಂಜೂರಾದ ನಿವೇಶನ ಹಾಗು ಆಟದ ಮೈದಾನವನ್ನು ದಾನದ ರೂಪದಲ್ಲಿ ಅಥವಾ ಸರ್ಕಾರದಿಂದ ಒದಗಿಸಿದ್ದಲ್ಲಿ ಜಮೀನಿನ ದಾಖಲೆಗಳನ್ನು ಕಛೇರಿಯ ಮುಖ್ಯಸ್ಥರು ರಕ್ಷಿಸಿಡಬೇಕು. [ಕಂದಾಯ ಹಾಗು ಭೂಮಾಪನ ಇಲಾಖೆ ಸಹಕಾರದೊಂದಿಗೆ ಪಡೆಯುವುದು.\
- ಶಾಲೆಗೆ ಹೊಂದಿಕೊಂಡಂತಹ ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಜಿಲಲಾ ಪಂಚಾಯಿತಿ ಶಾಸಕರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು, ರಾಜ್ಯ ಸಭೆ ಹಾಗು ಲೋಕ ಸಭಾ ಸದಸ್ಯರುಗಳ ಮೂಲಕ ಬಿಡುಗಡೆಯಾಗುವ ಅನುದಾನವನ್ನು ಪಡೆದು ಶಾಲೆಯ ಉನ್ನತಿಗೆ ಗಮನಹರಿಸುವುದು ಹಾಗು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಆಹ್ವಾನ ನೀಡುವುದು.
- ವಿಶೇಷ ತರಗತಿಗಳನ್ನು ನಡೆಸುವುದು.
- ಆರೋಗ್ಯ ತಪಾಸಣೆ, ವಿವರವಾಗಿ (Eye, Ear, Dental etc.) ಕೈಗೊಂಡು ಮಕ್ಕಳಿಗೆ ಉಚಿತ ವೈದ್ಯಕೀಯ ನೆರವು ಕಲ್ಪಿಸುವುದು.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು ಗುರುತಿಸಿ, ಅವರಿಗೆ ಅವಶ್ಯ ಸೌಲಭ್ಯಗಳನ್ನು ಕಲ್ಪಿಸುವುದು ಹಾಗು ಅವರನ್ನು ಪ್ರೋತ್ಸಾಹಿಸುವುದು.
- ದತ್ತು ಯೋಜನೆಗೆ ಶಾಲೆಯಿಂದ ಶಾಲೆಗೆ ಅನುಕೂಲ ಪಡೆಯುವುದು.
- ಮಕ್ಕಳಲ್ಲಿ ಸಮಾನತೆ ಮೂಡಿಸಲು ಸಮಾನ ಅವಕಾಶವನ್ನು ಕಲ್ಪಿಸುವುದು.
- ಸಮವಸ್ತ್ರ ಪಠ್ಯ ಪುಸ್ತಕವನ್ನು ಪಡೆದು ಪೂರೈಸುವುದು.

ಸಹಿ/–

[ಹೆಚ್.ಟಿ.ಜಯರಾಂ]

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ.[ಪ್ರೌಢ]

## ಅನುಬಂಧ–2

**ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳ ಜವಾಬ್ದಾರಿ ಮತ್ತು ಕರ್ತವ್ಯಗಳು**

ಪದವಿ ಪೂರ್ವ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ಸೂಚಿಸುವಂತಹ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪಾಲಿಸುವುದು.

**ಇತರೆ:**

ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರ ಕಾರ್ಯಭಾರದ ಹಂಚಿಕೆಗೆ ಸಂಬಂಧಿಸಿದಂತೆ ಜವಾಬ್ದಾರಿಗಳ ನಿರ್ವಹಣೆಯಲ್ಲಿ ವಿವಾದಗಳು ಉಂಟಾದಾಗ ಅವುಗಳನ್ನು ಇತ್ಯರ್ಥಪಡಿಸಲು ಸಂಬಂಧಪಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾಯನಿರ್ವಹಣಾಧಿಕಾರಿಯಾಗಿರುತ್ತಾರೆ. ಪೀಠೋಪಕರಣ ಹಾಗು ಕಟ್ಟಡಗಳ ಉಸ್ತುವಾರಿ ಮೇಲ್ವಿಚಾರಣೆಯನ್ನು ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರು ಸಮನ್ವಯತೆಯಿಂದ ನಿರ್ವಹಣೆ ಮಾಡುವುದು.

ಸಹಿ/–
[ಹೆಚ್.ಟಿ.ಜಯರಾಂ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.[ಪ್ರೌಢ]

# ಕರ್ನಾಟಕ ಸರ್ಕಾರ

ಸಿಆಸುಇ 18ನೇ ಇವಿ 2001

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಬೆಂಗಳೂರು,
ದಿನಾಂಕ: 14.09.2001

## ಸುತ್ತೋಲೆ

ವಿಷಯ: ಸರ್ಕಾರಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದ ದಂಡನೆಗಳ ಕುರಿತು.

&&&

1. ಸರ್ಕಾರಿ ನೌಕರನು ಸೇವೆಯಲ್ಲಿ ಎಸಗುವ ಅಪರಾಧಗಳ ಕುರಿತು ವಿಚಾರಣೆ ನಡೆಸಿ, ಸಾಬೀತಾದ ಪ್ರಕರಣಗಳಲ್ಲಿ ಆರೋಪಿ ನೌಕರನಿಗೆ ವಿಧಿಸಬಹುದಾದಂತಹ ದಂಡನೆಗಳ ಬಗ್ಗೆ ಕರ್ನಾಟಕ ಸಿವಿಲ್ ಸೇವಾ ನಿಯಮದಲ್ಲಿ ನಿರ್ದಿಷ್ಟಪಡಿಸಲಾಗಿದೆ. ಆದರೆ, ಸದರಿ ನಿಯಮದಲ್ಲಿ ಯಾವ ಆರೋಪಕ್ಕೆ ಯಾವ ಶಿಕ್ಷೆಯನ್ನು ವಿಧಿಸಬಹುದು ಎಂಬುದನ್ನು ನಿಗದಿಪಡಿಸಿರುವುದಿಲ್ಲ. ಇದರಿಂದಾಗಿ ಕೆಲವು ಸಂದರ್ಭಗಳಲ್ಲಿ ಆರೋಪದ ತೀವ್ರತೆಗಿಂತ ವಿಧಿಸಲಾದ ದಂಡನೆಗಳು ಕಡಿಮೆ ಅಥವಾ ಹೆಚ್ಚಿನದಾಗುವ/ಹೊಂದಿದ ಆರೋಪಗಳ ಶಿಸ್ತು ಪ್ರಾಧಿಕಾರಿಗಳು, ಹೋಲಿಸಬಹುದಾದಂತಹ ತೀವ್ರತೆಯನ್ನು ಹೊಂದಿದ ಆರೋಪಗಳ ಪ್ರಕರಣಗಳಲ್ಲಿ ಬೇರೆ ಬೇರೆ ದಂಡನೆಗಳನ್ನು ವಿಧಿಸುವ ಸಾಧ್ಯತೆಯೂ ಇರುತ್ತದೆ. ಆದುದರಿಂದ, ಸರ್ಕಾರವು ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಬೀತಾದಂತಹ ಆರೋಪಗಳಿಗನುಗುಣವಾಗಿ ವಿಧಿಸಬಹುದಾದಂತಹ ದಂಡನೆಗಳ ಉದಾಹರಣೆಗಳನ್ನು ಈ ಕೆಳಗೆ ನಮೂದಿಸಿದೆ.

| ಕ್ರಸಂ | ಸಾಬೀತಾದಂತಹ ಆರೋಪದ ಸ್ವರೂಪ | ವಿಧಿಸಬಹುದಾದಂತಹ ದಂಡನೆ |
|---|---|---|
| 1 | ಒಂದು ತಿಂಗಳಿಗೆ ಮೇಲ್ಪಟ್ಟು, ಆದರೆ ನಾಲ್ಕು ತಿಂಗಳಿಗಿಂತ ಕಡಿಮೆ | ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 2 | ನಾಲ್ಕು ತಿಂಗಳು ಮೀರಿದ ಅನಧಿಕೃತ ಗೈರು ಹಾಜರಿ | ಸೇವೆಯಿಂದ ತೆಗೆದು ಹಾಕುವುದು. |
| 3 | ರೂ.10,000ಕ್ಕಿಂತ ಕಡಿಮೆ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ | 5 ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 4 | ರೂ.10,000ಕ್ಕಿಂತ ಅಧಿಕ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ | ಕಾಲವೇತನ ಶ್ರೇಣಿಯ ಹುದ್ದೆಯ ಕೆಳಗಿನ ಹಂತಕ್ಕೆ ಇಳಿಸುವುದು. |
| 5 | ಸರ್ಕಾರಿ ಹಣದ ದುರುಪಯೋಗ : ತಪ್ಪು ಬಳಕೆ | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 6 | ಕಾರ್ಯ ವಿಧಾನದ ಲೋಪಗಳು | ಮೊದಲ ಸಂದರ್ಭದಲ್ಲಿ ವಾಗ್ದಂಡನೆ ಮತ್ತು ಎರಡು ಮತ್ತು ನಂತರದ ಸಂದರ್ಭಗಳಲ್ಲಿ ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು. |
| 7 | ಕಛೇರಿ ಕಾರ್ಯ ವಿಧಾನ ಕೈಪಿಡಿ ಇತ್ಯಾದಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯ ಸಕಾರಣವಲ್ಲದ [ಅಸಮಂಜಸ] ವಿಳಂಬ | ಮೊದಲ ಸಂದರ್ಭದಲ್ಲಿ ವಾಗ್ದಂಡನೆ ಎರಡು ಮತ್ತು ನಂತರದ ಸಂದರ್ಭಗಳಲ್ಲಿ ಕನಿಷ್ಟ ಪಕ್ಷ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. |

| | | |
|---|---|---|
| 8 | ಲೈಂಗಿಕ ಕಿರುಕುಳ | ಕೆಳಮಟ್ಟದ ಕಾಲವೇತನ ಶ್ರೇಣಿ ಅಥವಾ ಹುದ್ದೆಗೆ ಇಳಿಸುವುದು. |
| 9 | ಮೇಲಾಧಿಕಾರಿಗಳ ಲಿಖಿತ ಸೂಚನೆಗಳನ್ನು ಪಾಲಿಸಲು ನಿರಾಕರಣೆ | ಎರಡು ವಾರ್ಷಿಕ ಬಡ್ತಿಗಳನ್ನು ತಡೆಹಿಡಿಯುವುದು. |
| 10 | ಕುಟುಂಬದ ಸದಸ್ಯರೊಂದಿಗೆ ಯಾವುದೇ ಕಂಪನಿ ಅಥವಾ ಸಂಸ್ಥೆಯಲ್ಲಿ ಉದ್ಯೋಗ ಗಳಿಸಿಕೊಳ್ಳಲು ಅಧಿಕಾರ ಸ್ಥಾನವನ್ನು ಉಪಯೋಗಿಸಿಕೊಳ್ಳುವುದು ಅಥವಾ ವರ್ಚಸ್ಸನ್ನು ಬೀರುವುದು. | ಕಾಲವೇತನ ಶ್ರೇಣಿಯಲ್ಲಿನ ಕೆಳಗಿನ ಹಂತಕ್ಕೆ ಇಳಿಸುವುದು. |
| 11 | ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಸರ್ಕಾರಿ ನೌಕರನ ಸ್ವಹಿತಾಸಕ್ತಿ ಒಳಗೊಂಡ ಯಾವುದೇ ಕಂಪನಿ ಅಥವಾ ಸಂಸ್ಥೆಗೆ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ವ್ಯವಹರಿಸುವುದು ಅಥವಾ ಯಾವುದೇ ಗುತ್ತಿಗೆಯನ್ನು ಕೊಡುವುದು ಅಥವಾ ಮಂಜೂರು ಮಾಡುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 12 | ಕೆ.ಸಿ.ಎಸ್.[ನಡತೆ] ನಿಯಮಗಳು, 1966ರಲ್ಲಿನ ಅವಕಾಶಗಳನ್ನು ಉಲ್ಲಂಘಿಸಿ ರಾಜಕೀಯ ಅಥವಾ ಚುನಾವಣೆಗಳಲ್ಲಿ ಭಾಗವಹಿಸುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಅವಕಾಶಗಳನ್ನು ಉಲ್ಲಂಘಿಸಿ ಮುಷ್ಕರ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುವುದು. | ಕಾಲವೇತನ ಶ್ರೇಣಿಯಲ್ಲಿನ ಕೆಳಗಿನ ಹಂತಕ್ಕೆ ಇಳಿಸುವುದು. |
| 14 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಅವಕಾಶಗಳನ್ನು ಉಲ್ಲಂಘಿಸಿ ಆಕಾಶವಾಣಿ, ಪತ್ರಿಕೆ, ದೂರದರ್ಶನ ಮೊದಲಾದ ಬೃಹತ್ ಮಾಧ್ಯಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು | ಕನಿಷ್ಠ ಪಕ್ಷ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 15 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಅವಕಾಶಗಳನ್ನು ಉಲ್ಲಂಘಿಸಿ ಸರ್ಕಾರವನ್ನು ಟೀಕಿಸುವುದು. | ಕನಿಷ್ಠ ಪಕ್ಷ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 16 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಅವಕಾಶ ಗಳನ್ನು ಉಲ್ಲಂಘಿಸಿ ವಂತಿಗೆಯನ್ನು ಸ್ವೀಕರಿಸುವುದು ಅಥವಾ ಬೇರೆ ರೀತಿಯಲ್ಲಿ ನಿಧಿ ಸಂಗ್ರಹಿಸಲು, ನಿಧಿ ಸಂಗ್ರಹಣೆ ಕಾರ್ಯದಲ್ಲಿ ಪಾಲ್ಗೊಳ್ಳುವುದು, ಅಥವಾ ಇತರೆ ಸಂಗ್ರಹಣೆಗಳು ನಗದು ಅಥವಾ ಇತರೆ ರೂಪ | ಕಾಲವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ಇಳಿಸುವುದು |
| 17 | ವರದಕ್ಷಿಣೆ ಕೊಡುವುದು ; ತೆಗೆದುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ ; ಕೊಡುವುದಕ್ಕೆ ಉತ್ತೇಜಿಸುವುದು. | ಸರ್ಕಾರಿ ಸೇವೆಯಿಂದ ತೆಗೆದು ಹಾಕುವುದು. |
| 18 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ವ್ಯವಹಾರ ಅಥವಾ ವ್ಯಾಪಾರಗಳಲ್ಲಿ ಅಥವಾ | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |

| | | |
|---|---|---|
| | ಯಾವುದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು. | |
| 19 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಉಪಬಂಧಗಳನ್ನು ಉಲ್ಲಂಘಿಸಿ, ಬಂಡವಾಳ ಹೂಡಿಕೆ ಮಾಡುವುದು, ಸಾಲವನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು. | ಕಾಲವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ಇಳಿಸುವುದು. |
| 20 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಉಪಬಂಧಗಳನ್ನು ಉಲ್ಲಂಘಿಸಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸದಿರುವುದು. | ಕನಿಷ್ಠ ಪಕ್ಷ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು. |
| 21 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಅವಕಾಶಗಳನ್ನು ಉಲ್ಲಂಘಿಸಿ ಚರ ಮತ್ತು ಸ್ಥಿರ ಆಸ್ತಿಗಳ ವ್ಯವಹಾರ. | ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು. |
| 22 | ಕೆ.ಸಿ.ಎಸ್ [ನಡತೆ] ನಿಯಮಗಳು, 1966 ರ ಉಪಬಂಧಗಳನ್ನು ಉಲ್ಲಂಘಿಸಿ ಎರಡನೇ ಮದುವೆ ಮಾಡಿಕೊಳ್ಳುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 23 | ಸರ್ಕಾರದ ಸ್ಥಾಯಿ ಸೂಚನೆಗಳಿಗೆ ವಿರುದ್ಧವಾಗಿ ಸಿನಿಮಾ, ನಾಟಕ ಮುಂತಾದವುಗಳಲ್ಲಿ ಭಾಗವಹಿಸುವುದು ಒಳಗೊಂಡಂತೆ ತೊಡಗಿಸಿಕೊಳ್ಳುವುದು. | ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 24 | ಕೆ.ಸಿ.ಎಸ್ [ಕಾರ್ಯ ನಿರ್ವಹಣಾ ವರದಿ] ನಿಯಮಗಳು, 2000ದ ಅವಕಾಶಗಳನ್ನು ಉಲ್ಲಂಘಿಸಿ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯನ್ನು ಬರೆಯಲು ವಿಫಲರಾಗುವುದು | ವಾಗ್ದಂಡನೆ [Censure] |

2. ಮೇಲಿನ ಪಟ್ಟಿಯಲ್ಲಿ ನಮೂದಿಸಲಾದ ಪ್ರಕರಣಗಳು ಉದಾರಹಣಾತ್ಮಕ [illustrative] ಆಗಿವೆಯೇ ಹೊರತು, ಅವುಗಳು ವ್ಯಾಪಕವಾಗಿ [exhaustive] ಇರುವುದಿಲ್ಲ. ಅವುಗಳಲ್ಲಿ ಸೇರಿಸದೇ ಇರುವ ಪ್ರಕರಣಗಳಲ್ಲಿ ಯಾವ ದಂಡನೆಯನ್ನು ವಿಧಿಸಬಹುದೆನ್ನುವ ಬಗ್ಗೆ, ಸಂಬಂಧಿಸಿದ ಶಿಸ್ತಿನ ಪ್ರಾಧಿಕಾರ ಅವುಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನಿಸಬೇಕು.

3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಈ ಸೂಚನೆಗಳನ್ನು ಪಾಲಿಸಲು ಹಾಗು ಅವುಗಳನ್ನು ಅವರವರ ಅಧೀನದಲ್ಲಿ ಬರುವ ಎಲ್ಲಾ ನೇಮಕಾತಿ : ಶಿಸ್ತು ಪ್ರಾಧಿಕಾರಿಗಳ ಗಮನಕ್ಕೆ ಪಾಲನೆಗಾಗಿ ತರಲು ಸೂಚಿಸಿದೆ.

ಸಹಿ/–
[ಕೆ.ಎಸ್.ಜಯರಾಮ]
ಸರ್ಕಾರದ ಅಧೀನ ಕಾರ್ಯದರ್ಶಿ–2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
[ಸೇವಾ ನಿಯಮಗಳು]

# ಕರ್ನಾಟಕ ಸರ್ಕಾರ

ಸಂಖ್ಯೆ:ಸಪ್ರಕಾ/ಪ್ರಾಪ್ರೌಶಿ/ಆಶಾ/43/2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು
ದಿನಾಂಕ: 18–02–2010

**ಸುತ್ತೋಲೆ**

ವಿಷಯ: ಮಹಿಳೆಯರ/ಬಾಲಕಿರ ಮೇಲೆ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಬಗ್ಗೆ.

–&&&–

1. ಶಿಕ್ಷಣ ಇಲಾಖೆಯಲ್ಲಿ ಮಹಿಳೆಯರಿಗೆ / ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವ ಬಗ್ಗೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಆದ್ಯತೆ ಮೇರೆಗೆ ಗಂಭೀರ ಕ್ರಮವನ್ನು ಜರುಗಿಸುವುದು ಅಗತ್ಯವಾಗಿರುತ್ತದೆ.

   ಕರ್ನಾಟಕ ಸಿವಿಲ್ ಸೇವಾ [ನಡತೆ] ನಿಯಮಗಳು, 1966ಕ್ಕೆ ದಿನಾಂಕ: 17–06–1998 ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್.14.ಎಸ್.ಆರ್.ಸಿ.97 ರಲ್ಲಿರುವಂತೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ಅಧಿಸೂಚನೆಯ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ಧರಿಸಿದೆ.

2. **Insertion of new rule 29 B**:- After rule 29A of the Karnataka Civil Services [Conduct] Rules, 1966, the following rule shall be inserted, namely:-

   **29B. Prohibition of sexual harassment:-** No Government Servant shall subject any woman Government servant to sexual harassment in working places".

Explanation:- For the purpose of this rule, " sexual harassment " includes such unwelcome sexually determined [Whether directly or by implication] behavior as:

[a] Physical Contact and advances:
[b] A demand or request for sexual favours:
[c] Sexually coloured remarks:
[d] showing pornography : or
[e] Any other unwelcome physical, verbal or non-verbal conduct of sexual nature".

ಶಾಲಾ/ಕಾಲೇಜು/ಕಛೇರಿಯಲ್ಲಿ ಮಹಿಳೆಯರಿಗೆ ಹಾಗೂ ಬಾಲಕಿಯರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ವಿಚಾರಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಗಳ ಸಮಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೊರಡಿಸಿದ ದಿನಾಂಕ:08–06–2000 ರ ಸರ್ಕಾರಿ ಆದೇಶ ಸಂಖ್ಯೆ:ಮಮಇ..36.ಮಮ.98 ರನ್ವಯ ರಚಿಸಲಾಗಿದೆ.

ಮಹಿಳೆಯರಿಗೆ / ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ಗಮನಕ್ಕೆ ಬಂದಲ್ಲಿ ಆರೋಪಿಗಳನ್ನು ನಿಯಮಾನುಸಾರ ಈ ಕೆಳಗಿನಂತೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಈ ಮೂಲಕ ಸೂಚಿಸಿದೆ.

1. ಇಂತಹ ಆರೋಪಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವುದು.
2. ಇಲಾಖಾ ವಿಚಾರಣಾ ಕ್ರಮಗಳನ್ನು ಕೈಗೊಳ್ಳುವುದು.
3. ವಿಚಾರಣೆ ಕಾಯ್ದಿರಿಸಿ, ಅಮಾನತ್ತುಗೊಳಿಸುವುದು.
4. ವಿಚಾರಣೆ ಪೂರ್ಣಗೊಳ್ಳುವವರೆಗೆ ಅಮಾನತ್ತನ್ನು ತೆರವುಗೊಳಿಸದಿರುವುದು.
5. ವಿಚಾರಣೆಯಲ್ಲಿ ಅಪರಾಧ ಸಾಬೀತಾದಲ್ಲಿ, ಕಠಿಣ ಶಿಕ್ಷೆಗೆ ಗುರಿಪಡಿಸುವುದು.

ಈ ವಿಷಯಕ್ಕೆ ಸೂಕ್ತವಾದ ಮಹತ್ವ ನೀಡಿ, ಶಾಲಾ / ಕಾಲೇಜು / ಕಛೇರಿಯ ವಾತಾವರಣವನ್ನು ಚೆನ್ನಾಗಿ ಇಟ್ಟುಕೊಳ್ಳುವಂತೆ ಎಲ್ಲರಿಗೂ ಕಟ್ಟುನಿಟ್ಟಿನ ಎಚ್ಚರಿಕೆಯನ್ನು ನೀಡುವಂತೆ ಸೂಚಿಸಿದೆ.

ಸಹಿ/–
[ಡಾ: ರ.ಗೋ.ನಡಾದೂರ]
ಸರ್ಕಾರದ ಪ್ರಧಾನ ಕಾರ್ಯದರ್ಶಿ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,
# ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಎಡಿಎಂ2/ಮಕ್ಕಳ ಸುರಕ್ಷತೆ 20/2007–08 ದಿನಾಂಕ: 10–12–2009.

ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ
ಎಲ್ಲಾ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ವಿಷಯ: ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡಗಳಲ್ಲಿ ಸುರಕ್ಷತೆ ಹಾಗು ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ. 483/2004, ದಿನಾಂಕ: 13.04.2009ರ ಆದೇಶ.
2. ಸರ್ಕಾರಿ ಪತ್ರದ ಸಂಖ್ಯೆ, ಇಡಿ 140 ಎಂಸಿಡಿ 2009 ದಿನಾಂಕ: 17.04.2009.
3. ಅಧೀಕ್ಷಕ ಇಂಜಿನಿಯರ್, ಕಟ್ಟಡ ವೃತ್ತ ಬೆಂಗಳೂರು ಇವರ ಪತ್ರ ಸಂಖ್ಯೆ. ಅಅ>ಕವೃ.ಎಇ–3:2009–10/3438 ದಿನಾಂಕ: 27.06.2009.

&&&

ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಾಷ್ಟ್ರದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ ರಾಜ್ಯ ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ಈ ಸಂಬಂಧ ಕಟ್ಟಡಗಳ ಸುರಕ್ಷತೆ ಬಗ್ಗೆ ಹಾಗು ವಿಷಪೂರಿತ ವಸ್ತುಗಳನ್ನು ಶಾಲಾ ಆವರಣದಲ್ಲಿ ದಾಸ್ತಾನು ಮಾಡುತ್ತಿಲ್ಲವೆಂಬ ಬಗ್ಗೆ ರಾಜ್ಯ ಸರ್ಕಾರವು ಪ್ರಮಾಣ ಪತ್ರವನ್ನು ಸಲ್ಲಿಸಬೇಕೆಂಬುದಾಗಿ ತೀರ್ಪನ್ನು ನೀಡಿದ್ದು, ಈ ಸಂಬಂಧ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ಈ ಕಾರಣದಿಂದಾಗಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಅನುದಾನಿತ / ಅನುದಾನರಹಿತ ಶಾಲೆಗಳು ಮಕ್ಕಳ ಸುರಕ್ಷತೆಗೋಸ್ಕರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು, ಅದರಂತೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿರುತ್ತದೆ.

1. ಶಾಲಾ ಕಟ್ಟಡಗಳನ್ನು ನಿರ್ಮಿಸುವಾಗ ರಾಷ್ಟ್ರೀಯ ಕಟ್ಟಡ ಸಂಹಿತಯೆ ಸೂಚನೆಗಳನ್ನು ಅಳವಡಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳುವುದು.
2. ಯಾವುದೇ ಕಟ್ಟಡವನ್ನು ತೆಂಗಿನಗರಿ ಅಥವಾ ಸಂಪೂರ್ಣ ಮರದಿಂದ ನಿರ್ಮಿಸಿರುವ ಸ್ಥಳಗಳಲ್ಲಿ ಶಾಲೆಗಳಿಗೆ ಅನುಮತಿ ನೀಡಬಾರದು. ಈ ರೀತಿಯ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದಲ್ಲಿ ಅಂತಹ ಶಾಲೆಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ತಕ್ಷಣವೇ ಸೂಕ್ತ ಸುರಕ್ಷತೆಯ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲು ತಿಳಿಸುವುದು.
3. ಒಂದು ವೇಳೆ ಅನುದಾನಿತ / ಅನುದಾನರಹಿತ ಶಾಲೆಗಳಲ್ಲಿ ಇಂತಹ ಕಟ್ಟಡಗಳು ಹೊಂದಿರುವ ಶಾಲೆಗಳನ್ನು ನಡೆಸುತ್ತಿದ್ದಲ್ಲಿ ಈ ಶಾಲೆಗಳ ಅನುದಾನ ಮತ್ತು ಮಾನ್ಯತೆಯನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲು ತಿಳಿಸುವುದು.
4. ತರಗತಿಗಳು ನಡೆಯುವ ಸ್ಥಳಗಳಲ್ಲಿ ಅಡುಗೆ ತಯಾರಿಸುವ ಕಾರ್ಯವನ್ನು ಮಾಡದಿರಲು ಸೂಚಿಸಿದೆ. ಗ್ಯಾಸ್ ಸಿಲಿಂಡರ್‌ಗಳನ್ನು ತರಗತಿ ಕೋಣೆಗಳಲ್ಲಿ ಇಡುವುದಾಗಲೀ, ಸ್ವೀಕರಿಸುವುದಾಗಲೀ ಅಥವಾ ನೀಡುವುದಾಗಲಿ ಮಾಡಬಾರದೆಂದು ಸೂಚನೆಗಳನ್ನು ನೀಡಲು ತಿಳಿಸಿದೆ.
5. ವಿದ್ಯಾರ್ಥಿಗಳ ತರಗತಿ ನಡೆಯುವ ಸ್ಥಳಗಳಲ್ಲಿ ಯಾವುದೇ ವಿಷಮೂರಿತ ವಸ್ತುಗಳನ್ನು ದಾಸ್ತಾನು ಮಾಡಬಾರದೆಂದು ಸೂಚಿಸಿದೆ.

6. ಪ್ರತಿ ಶಾಲೆಗಳಲ್ಲೂ ಅವಶ್ಯಕತೆಯಿರುವಷ್ಟು ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿಕೊಳ್ಳುವುದು ಅಲ್ಲದೆ ಅಗ್ನಿಶಾಮಕ ಉಪಕರಣಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನೋಡುವ ಜೊತೆಗೆ, ಶಾಲಾ ಸಿಬ್ಬಂದಿಯವರಿಗೆ ಅಗ್ನಿಶಾಮಕ ಉಪಕರಣವನ್ನು ಉಪಯೋಗಿಸುವ ಬಗ್ಗೆ ತರಬೇತಿಯನ್ನು ನೀಡುವುದು.
7. ಒಂದು ವೇಳೆ ಶಾಲಾ ತರಗತಿಗಳು ಮಹಡಿ ಕಟ್ಟಡಗಳಲ್ಲಿ ನಡೆಯುತ್ತಿದ್ದಲ್ಲಿ, ಅಂತಹ ಶಾಲೆಗಳ ನರ್ಸರಿ ಹಾಗು 1 ಮತ್ತು 2ನೇ ತರಗತಿ ಮಕ್ಕಳನ್ನು ಕಡ್ಡಾಯವಾಗಿ ನೆಲ ಮಹಡಿಗಳಲ್ಲಿ ತರಗತಿಗಳನ್ನು ನಡೆಸಲು ಸೂಚಿಸುವುದು.
8. ಮಹಡಿ ಕಟ್ಟಡಗಳಲ್ಲಿ ಮೆಟ್ಟಿಲುಗಳು ವಿಶಾಲವಾಗಿ ಮತ್ತು ಕಟ್ಟಡದ ಎರಡೂ ಭಾಗಗಳಲ್ಲಿ ಇರುವಂತೆ ನಿರ್ಮಾಣ ಕಾರ್ಯವನ್ನು ಮಾಡುವಂತೆ ಸೂಚಿಸುವುದು. ಈಗಾಗಲೇ ನಿರ್ಮಾಣ ಕಾರ್ಯ ಮಾಡಲಾಗಿರುವ ಕಡೆಗಳಲ್ಲಿ ಮೆಟ್ಟಿಲುಗಳು ಇಲ್ಲದಿದ್ದಲ್ಲಿ, ಕಟ್ಟಡದ ಎರಡೂ ಕಡೆಗಳಲ್ಲಿ ವಿಶಾಲವಾದ ಮತ್ತು ತಡೆಗೋಡೆಗಳನ್ನು ಹೊಂದಿರುವಂತಹ ಮೆಟ್ಟಿಲುಗಳನ್ನು ನಿರ್ಮಾಣ ಮಾಡಲು ತಿಳಿಸುವುದು.
9. ಮಹಡಿ ಕಟ್ಟಡಗಳು ಇರುವ ಶಾಲೆಗಳ ಕೊಠಡಿಗಳ ಮುಂಭಾಗದಲ್ಲಿ ಓಡಾಡಲು ವಿಶಾಲವಾದ ಜಾಗಗಳನ್ನು ಬಿಡುವುದು ಹಾಗು ತಡೆಗೋಡೆಗಳನ್ನು ನಿರ್ಮಿಸುವುದು. ಯಾವುದೇ ವಿದ್ಯಾರ್ಥಿಯು ಮಹಡಿ ಕಟ್ಟಡಗಳಿಂದ ಕೆಳಗೆ ಬೀಳಲು ಅವಕಾಶವಿರುವಂತಹ ಕಡೆ ತಡೆಗೋಡೆಗಳನ್ನು ನಿರ್ಮಿಸುವುದು ಕಡ್ಡಾಯ. ಒಂದು ವೇಲೆ ತಡೆ ಗೋಡೆ ನಿರ್ಮಿಸದಿದ್ದಲ್ಲಿ ಗ್ರಿಲ್‌ಗಳನ್ನು ಅಳವಡಿಸಿ ಸುರಕ್ಷತೆ ಕಾಪಾಡಲು ಸೂಚಿಸುವುದು.
10. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಉಪನಿರ್ದೇಶಕರು ಯಾವುದೇ ಹೊಸ ಶಾಲೆಗೆ ಅನುಮತಿಯನ್ನು ನೀಡುವಾಗ ಅಂತಹ ಆಡಳಿತ ಮಂಡಳಿಗಳು ಸುರಕ್ಷತೆವುಳ್ಳ ಹಾಗು ರಾಷ್ಟ್ರೀಯ ಕಟ್ಟಡ ಸಂಹಿತೆ ಅನುಸಾರ ಕಟ್ಟಡ ಅಗತ್ಯ ಎಂಬುದನ್ನು ಪರಿಶೀಲಿಸಿ ಅನುಮತಿ ನೀಡುವುದು. ಮತ್ತು ಅನುದಾನಕ್ಕೆ ಒಳಪಡಿಸುವ ಪೂರ್ವದಲ್ಲಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅನುದಾನಕ್ಕೆ ಶಿಫಾರಸ್ಸು ಮಾಡುವುದು.
11. ಈ ಕಛೇರಿಯಿಂದ ಕಾಲಕಾಲಕ್ಕೆ ಶಾಲಾ ಮಕ್ಕಳ ಸುರಕ್ಷತೆ ಬಗ್ಗೆ ನೀಡಿರುವ ಸೂಚನೆಗಳನ್ನು ಒಳಗೊಂಡಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು.
12. ಯಾವುದೇ ಒಂದು ಆಡಳಿತ ಮಂಡಳಿಯು, ಇಲಾಖೆಯು ಮಕ್ಕಳ ಸುರಕ್ಷತೆಗಾಗಿ ನೀಡುವ ಯಾವುದೇ ಸುತ್ತೋಲೆಗಳನ್ನು / ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಂಸ್ಥೆಗಳ ಮೇಲೆ ಮಾನ್ಯತೆ ರದ್ದುಪಡಿಸಲು ಕ್ರಮಕೈಗೊಳ್ಳುವುದು, ಮತ್ತು ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಉಪನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಿದೆ.

ಸಹಿ/–

(ಡಿ.ಎಸ್.ರಾಜಣ್ಣ]

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

1. ಪ್ರತಿಯನ್ನು ಗೌರವಪೂರ್ವಕವಾಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ) ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.

# ಕರ್ನಾಟಕ ಸರ್ಕಾರದ
# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,
# ನೃಪತುಂಗ ರಸ್ತೆ, ಬೆಂಗಳೂರು-1

**ಸಂಖ್ಯೆ:ಆಪ್ತ ಶಾಖೆ:ಸಿ-4:2009-10:26210** **ದಿನಾಂಕ:08-02-2011.**

## ಸುತ್ತೋಲೆ

ವಿಷಯ:-ಪರಿಣಾಮಕಾರಿ ಬೋಧನೆ ಹಾಗೂ ಮಾರ್ಗದರ್ಶನ ಪ್ರಕ್ರಿಯೆ

**& & &**

ಶಿಕ್ಷಣ ಮನುಷ್ಯನನ್ನು ರೂಪಿಸುತ್ತದೆ. ತನ್ನಲ್ಲಿ ಸುಪ್ತವಾಗಿರುವ ಸಾಮರ್ಥ್ಯಗಳನ್ನು ಹೊರ ತೆಗೆಯುತ್ತದೆ. ಆದ್ದರಿಂದ ಈ ಶೈಕ್ಷಣಿಕ ಬದುಕು ಮನುಷ್ಯನ ಜೀವನದಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ನಮ್ಮ ಶೈಕ್ಷಣಿಕ ಬದುಕು ಈ ಕೆಳಗಿನ ತಿಳುವಳಿಕೆಯ ಮೇಲೆ ಸಾಗುತ್ತಿದೆ.

- ಆರನೇ ವಯೋಮಾನದ ಮಕ್ಕಳು ಶಾಲೆಗಳಲ್ಲಿ ದಾಖಲಾಗುತ್ತಾರೆ.
- ದಾಖಲಾದ ಮಕ್ಕಳಿಗೆ ಶಿಕ್ಷಕರು ಬೋಧಿಸುತ್ತಾರೆ.
- ಸಹಜವಾದ ಬೋಧನೆಯಿಂದ ಮಕ್ಕಳು ಸಹಜವಾಗಿ ಕಲಿಯುತ್ತಾರೆ.
- ಈ ಕ್ರಮದಿಂದ ಗುಣಮಟ್ಟ ಫಲಿಸುತ್ತದೆ.

ಹೌದು, ಇದು ಭಾಗಶಃ ಸತ್ಯ, ಶಾಲೆಗೆ ಬರುವ ಮಗು ಏನೆಲ್ಲಾ ಕಲಿತು ಬರುತ್ತದೆ ಅದಕ್ಕಾಗಿಯೇ ಹೇಳುವುದು ''ಮಗುವಿನ ತಲೆ ಖಾಲಿ ಕೊಡವಲ್ಲ'' ಆದರೆ ಇದು ಅನೌಪಚಾರಿಕ ಕಲಿಕೆ. ಇಂತಹ ಮಕ್ಕಳ ಪೂರ್ವ ಜ್ಞಾನವನ್ನು ಜೌಪಚಾರಿಕ ಕಲಿಕೆಯೊಂದಿಗೆ ಬೆಸೆದು ಮುಂದಿನ ಕಲಿಕೆಗೆ ಹೆಜ್ಜೆ ಹಾಕಬೇಕಾಗುತ್ತದೆ. ಔಪಚಾರಿಕ ಕಲಿಕೆಗೆ ಒಂದು ಮಿತಿಯಿದೆ, ಒಂದು ಗತಿಯಿದೆ, ಒಂದು ವಿಧಾನವಿದೆ ಹಾಗೂ ಒಂದು ಕ್ರಮಬದ್ಧ ಶಾಸ್ತ್ರೀಯ ಪ್ರಕ್ರಿಯೆ ಇದೆ. ಈ ಕ್ರಮಗಳು ಮಗುವಿನ ಕಲಿಕೆಯ ಮೇಲೆ ಬಹಳ ಪರಿಣಾಮ ಬೀರುತ್ತವೆ. ಅಲ್ಲದೆ, ಇದು ಕಲಿಕೆಗೆ ಪೂರಕ ವೇದಿಕೆ ಸಿದ್ಧಪಡಿಸುತ್ತದೆ.

ಕ್ರಮಬದ್ಧ ಬೋಧನೆ ಹಾಗೂ ಕಲಿಕಾ ಕ್ರಮಗಳು ಮಗುವಿನಲ್ಲಿ ಉತ್ಸಾಹ, ಪ್ರೇರಣೆ ಹಾಗೂ ಅಭಿರುಚಿಗಳನ್ನು ಮೂಡಿಸುವಂತೆ ಇರಬೇಕೆಂಬುದೇ ತಜ್ಞರ ಅಪೇಕ್ಷೆ. ಈ ಹಿನ್ನೆಲೆಯಲ್ಲಿಯೇ ರಾಷ್ಟ್ರ, ರಾಜ್ಯ ಪಠ್ಯಕ್ರಮ ಹಾಗೂ ಪಠ್ಯವಸ್ತುಗಳು ರಚಿತಗೊಳ್ಳುತ್ತವೆ. ಏಂದೇನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವುಗಳ ಧ್ಯೇಯೋದ್ದೇಶಗಳನ್ನು ಸಾಂಕೇತಿಕವಾಗಿ ಪಠ್ಯಪುಸ್ತಕಗಳ ಮೂಲಕವೇ ಸಾಕಾರಗೊಳಿಸಬೇಕಾಗಿದೆ.

ಪಠ್ಯಕ್ರಮದಲ್ಲಿನ ವಿಷಯವಾರು ಉದ್ದೇಶಗಳನ್ನು ಸಾಕ್ಷೀಕರಿಸಲು ವಿಷಯವಾಗು ಅವಧಿ ಹಾಗು ಮೌಲ್ಯಮಾಪನ ಕ್ರಮಗಳು ಬೋಧನೆ ಹಾಗೂ ಕಲಿಕೆಯ ಅಂಗವಾಗಿ ರೂಪಿತವಾಗಿದ್ದು ಅವುಗಳ ಪರಿಣಾಮಕಾರಿ ಅನುಷ್ಠಾನದ ಕೊರತೆಯೇ ಶಿಕ್ಷಣ ಗುಣಮಟ್ಟದ ಅಧಃಪತನಕ್ಕೆ ಕಾರಣವಾಗಿದೆ.

ಮೂಲತಃ ಮೂಲ ತರಗತಿಗಳಿಗೆ ಒತ್ತು ನೀಡುವುದು ಅತ್ಯಾವಶ್ಯಕ. ಭಾಷೆ ಅಭಿವ್ಯಕ್ತಿ ಕೌಶಲವನ್ನು ಬೆಳೆಸುತ್ತದೆ. ಅಭಿವ್ಯಕ್ತಿಯು ಮಗುವಿನ ಸಂವಹನ ಕೌಶಲ (ಅಂಟಟಣಟಿಛಿಚಿಣುಂಟಿ ಖಞುಟಟ) ವನ್ನು ಹೆಚ್ಚಿಸುತ್ತದೆ. ಆದ್ದರಿಂದ ಮಗುವಿನ ಭಾಷಾ ಬೆಳವಣಿಗೆಗೆ ಹೆಚ್ಚು ಗಮನ ಹರಿಸಬೇಕು. ತನ್ನ ಬಗ್ಗೆ, ತನ್ನ ಶಾಲೆಯ ಬಗ್ಗೆ, ತನಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಆತ್ಮವಿಶ್ವಾಸದಿಂದ ಮಾತನಾಡುವಂತೆ ಭಾಷಾ ಕಲಿಕೆಯಾಗಬೇಕು. ಮಗು ಮನೆಯಿಂದ ತಮ್ಮ ತಮ್ಮ ಭಾಷೆಯಲ್ಲಿ ಮಾತನಾಡಲು ತಕ್ಕಮಟ್ಟಿಗೆ ಕಲಿತು ಬರುತ್ತದೆ. ಅಲ್ಲಿಂದಲೇ ಮುಂದಿನ ಮಜಲು ನಿರ್ಧರಿಸಬೇಕಾಗುತ್ತದೆ. ಅದಕ್ಕಾಗಿಯೇ ಪ್ರಾಥಮಿಕ ಹಂತದಲ್ಲಿ ಭಾಷೆಯ ಕಲಿಕೆಗೆ ಹೆಚ್ಚಿನ ಒತ್ತು ನೀಡಲು

ಹೆಚ್ಚಿನ ಅವಧಿಗಳನ್ನು ನಿಗದಿ ಪಡಿಸಲಾಗಿದೆ. ಪುಸ್ತಕ ಯಾವುದೇ ಆಗಲಿ, ನಿಗದಿತ ಪದ್ದತಿ ಯಾವುದಾದರೂ ಸರಿ, ಅವುಗಳಲ್ಲಿನ ಬೋಧನಾ ಅಂಶಗಳ ಕಲಿಕಾ ಫಲದತ್ತ ಶಿಕ್ಷಕರು ಚಿತ್ತ ಹರಿಸುವುದು ಅನಿವಾರ್ಯವಾಗಿದೆ.

ಉದಾ: ಭಾಷೆಗಾಗಿ ನಿಗದಿಯಾಗಿರುವ ತರಗತಿವಾರು ಅವಧಿಗಳು:

ಮೊದಲನೇ ಭಾಷೆ : ತರಗತಿ 1 ಮತ್ತು 2 – 13 ಅವಧಿಗಳು (ವಾರಕ್ಕೆ)

ಮೊದಲನೇ ಭಾಷೆ : ತರಗತಿ 3 ಮತ್ತು 4 – 12 ಅವಧಿಗಳು (ವಾರಕ್ಕೆ)

ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ 5ನೇ ತರಗತಿ 7+4+4=16 ಅವಧಿಗಳು (ವಾರಕ್ಕೆ)

ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ 6 ಮತ್ತು 7ನೇ ತರಗತಿ 6+5+4=16 ಅವಧಿಗಳು (ವಾರಕ್ಕೆ)

ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ 8 ರಿಂದ 10ನೇ ತರಗತಿಯಲ್ಲಿ 7+5+4=15 ಅವಧಿಗಳು (ವಾರಕ್ಕೆ)

ಪ್ರಥಮ , ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ ಅನುಕ್ರಮವಾಗಿ 210+175+140=525 ಅವಧಿಗಳು (ವರ್ಷಕ್ಕೆ)

ಈ ಅವಧಿಗಳು, ಪರಿಣಾಮಕಾರಿ ಕಲಿಕೆಗಾಗಿ ಓದು, ಬರಹ, ಬರಹದಲ್ಲಿ ಉಕ್ತಲೇಖನ, ಕಥೆ, ಪ್ರಬಂಧ ಇತರೆ ಅಂಶಗಳನ್ನು ಕಲಿಸಲು ಒತ್ತು ಕೊಡುತ್ತವೆ.

ಓದು – ಇದನ್ನು ಪರಿಣಾಮಕಾರಿ ಪೂರ್ವ ಗ್ರಹಿಕೆಯಿಂದ ರೂಢಿ ಮಾಡಿಸಬೇಕಾಗುತ್ತದೆ. ಇದರೊಂದಿಗೆ ಕಥೆ, ಇತರೆ ಪುಸ್ತಕಗಳ ಓದಿನಲ್ಲಿ ಆಸಕ್ತಿ ಮೂಡಿಸುವುದಾಗಿದೆ. ಹೀಗೆ ಭಾಷಾ ಬೆಳವಣಿಗೆಯನ್ನು, ಚಿತ್ರಗಳನ್ನು ಓದುವುದರಿಂದ ಪ್ರಾರಂಭಿಸಿ, ನಂತರ ವಾಕ್ಯಗಳು, ನಂತರ ಪ್ಯಾರಾಗ್ರಾಫ್ ಓದಿಸುವುದರ ಮೂಲಕ ಮಾಡುವುದು.

ಶಬ್ದ ಸಂಪತ್ತು – ಇದನ್ನು ಹೆಚ್ಚಿಸಲು ಭಾಷಾ ಆಟಗಳನ್ನು ಆಡಿಸುವುದು. ಶಬ್ದಗಳ ಬಳಕೆಗೆ ಹೊಸ ಹೊಸ ಲೇಖನ, ಪುಸ್ತಕಗಳನ್ನು ನೀಡುವುದು ಹಾಗೂ ಇವುಗಳ ಅನುಷ್ಠಾನದತ್ತ ಹೆಚ್ಚು ಒತ್ತು ಕೊಡುವುದು ಅನಿವಾರ್ಯವಾಗಿದೆ. ಇವುಗಳಿಗಾಗಿ ನಿಗಧಿತ ಅವಧಿಗಳನ್ನು ನಿಗಧಿಪಡಿಸುವುದು.

ಇದರಂತೆ, ಪಾಠದ ಕೊನೆಯಲ್ಲಿ ನೀಡಲಾದ ಪೂರಕ ಚಟುವಟಿಕೆಯ ಪಾಠ [Exercise] ಗಳನ್ನು ಕಡ್ಡಾಯವಾಗಿ ಬೋಧನೆ ಮಾಡಿದ ನಂತರವೇ ಮುಂದಿನ ಪಾಠಕ್ಕೆ ಅಣಿ ಆಗುವುದು. ಈ ಕ್ರಮ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಜಾರಿ ಇಡಬೇಕು. ಇವು ರೂಢಿ ಆದಾಗ ಕಲಿಕಾ ಫಲ ಎದ್ದು ಕಾಣುತ್ತದೆ ಮತ್ತು ಶಿಕ್ಷಕರ ಹಾಗೂ ಮಕ್ಕಳ ಉತ್ಸಾಹ ಹೆಚ್ಚುತ್ತಾ ಹೋಗುತ್ತದೆ. ಇದೇ ನಿಜವಾದ ಬೋಧನಾ ಕಲಿಕಾ ಪ್ರಕ್ರಿಯೆ. ಕಲಿಕಾಂಶಗಳ ಮನನವೇ ನಿಜವಾದ ಕಲಿಕಾ ಪಲವೇ ನಿಜವಾದ ಸಾಧನೆ.

ಈ ಮಧ್ಯೆ ನಿಧನಾವಾಗಿ ಕಲಿಯುವವರ ಬಗೆಗೂ ಗಮನಹರಿಸಿ ಅವರಿಗೆ, ಪಠ್ಯಕ್ರಮದಲ್ಲಿ ಸೂಚಿಸಿದಂತೆ, ವಾರಕ್ಕೊಂದು ಅವಧಿ ಪರಿಹಾರ ಬೋಧನೆ ಮಾಡುವುದನ್ನು ರೂಢಿ ಮಾಡಿಕೊಳ್ಳುವುದು. ಈ ಚಟುವಟಿಕೆಯ ಹಿನ್ನೆಲೆಯಲ್ಲಿ ಸೃಜನಾತ್ಮಕವಾದ ಗೃಹ ಪಾಠ ನೀಡವುದು ಹಾಗೂ ಅವುಗಳ ತಿದ್ದುವಿಕೆಯನ್ನು ಕೂಡಾ ಕಡ್ಡಾಯಗೊಳಿಸುವುದು. ಇದರಿಂದ ಎಲ್ಲಾ ಮಕ್ಕಳಿಗೆ ಪ್ರೇರಣೆ ಎಲ್ಲಾ ಹಂತದಲ್ಲಿ ದೊರೆದಂತಾಗುತ್ತದೆ.

ಭಾಷೆಯ ಬೆಳವಣಿಗೆಯ ಅಂಗವಾಗಿ ಮುಂಜಾನೆ ಪ್ರಾರ್ಥನೆ, ಪಂಚಾಂಗ ಪಠಣ, ದೈನಂದಿನ ಸುದ್ದಿ ಸಮಾಚಾರ ಹಾಗೂ ಪ್ರಮುಖ ವಾರ್ತೆ, ಸುವಿಚಾರ ಇತ್ಯಾದಿಗಳ ಮೂಲಕ ಮಕ್ಕಳಲ್ಲಿ ಮೌಲ್ಯ ವರ್ಧನೆಗೊಳಿಸುವುದು. ಸಾಯಂಕಾಲ ಕಡ್ಡಾಯವಾಗಿ ಎಲ್ಲಾ ತರಗತಿಯ ಮಕ್ಕಳು ಸೇರಿ ಮಗ್ಗಿ ಪಠಣದ ನಂತರ ತರಗತಿಗಳ ವಿಸರ್ಜನೆ ಮಾಡುವುದು. ಇಲ್ಲಿ ಎಲ್ಲಾ ಮಕ್ಕಳು, ಎಲ್ಲಾ ಶಿಕ್ಷಕರು ಹಾಜರಿರುವುದು ಕಡ್ಡಾಯ. ಇದಾದ ನಂತರ ದೈಹಿಕ ಶಿಕ್ಷಕರು ಯಥಾವತ್ತಾಗಿ ವಿಶೇಷ ಆಟಗಳನ್ನು ಆಡಿಸಲು ಕನಿಷ್ಠ ಒಂದು ಗಂಟೆ ಅವಧಿ ನಿಗಧಿಪಡಿಸಿಕೊಳ್ಳುವುದು. ಇದರಂತೆ, ಇತರೆ ವಿಷಯಗಳಿಗೆ ಗೊತ್ತುಪಡಿಸಿದ ಗುರಿ ಹಾಗೂ ಉದ್ದೇಶಗಳನ್ನು ಈಡೇರಿಸಲು ತರಗತಿಯ ಕೋಣೆಯಲ್ಲಿಯೇ ತರಗತಿಯ ಶಿಕ್ಷಕರು ಬೋಧಿಸಬೇಕಾಗುತ್ತದೆ.

ಒಟ್ಟಾರೆ ಪ್ರಾಥಮಿಕ ಹಂತದಲ್ಲಿ ಪ್ರತಿದಿನ ಕಡ್ಡಾಯ ಓದು, ಬರಹ, ಉಕ್ತ ಲೇಖನ, ಹೊಸ ಶಬ್ದಗಳ ಅರ್ಥ ಹಾಗೂ ವಾಕ್ಯ ರಚನೆಗೆ ಹೆಚ್ಚು ಒತ್ತು ನೀಡಲೇಬೇಕು. ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಇವುಗಳ ಜೊತೆಗೆ ಬೇರೆ ಬೇರೆ ಪುಸ್ತಕಗಳ ಆಧಾರದ ಮೇಲೆ ನಿಬಂಧಗಳ ರಚನೆ/ಸ್ಪರ್ಧೆಗಳ ಮೂಲಕ ಭಾಷೆಗಳಲ್ಲಿ ಸೃಜನಾತ್ಮಕ ಹೆಚ್ಚು ಗಮನಹರಿಸಬೇಕು.

ಮುಖ್ಯ ಶಿಕ್ಷಕರ ಪಾತ್ರ:–

- ಶಾಲೆಯ ಮುಖ್ಯಸ್ಥರು ಪ್ರತಿಯೊಬ್ಬ ಶಿಕ್ಷಕರ/ಶಾಲಾ ವೇಳಾಪಟ್ಟಿಯನ್ನು ಶಾಲಾ ವರ್ಷ ಪ್ರಾರಂಭದ ಮುನ್ನವೇ ಸಿದ್ಧಪಡಿಸಿಕೊಳ್ಳುವುದು ವಾಡಿಕೆ. ಆದರೆ, ಅನೇಕರು ಸಕಾಲಕ್ಕೆ ಮಾಡದಿರುವುದು ಗಮನಿಸಲಾಗಿದೆ. ಇದನ್ನು ಕಡ್ಡಾಯವಾಗಿ ತಯಾರಿಸುವುದು.
- ವಿಷಯವಾರು ವೇಳಾಪಟ್ಟಿಯೊಂದಿಗೆ ಬೋಧಿಸುವ ವಿಷಯದಲ್ಲಿ ಕಲಿಕೆ ಖಚಿತ ಮಾಡಿಕೊಳ್ಳಲು ಕಲಿಕಾಂಶಗಳ ಬಗೆಗೆ ಕಾಳಜಿ ವಹಿಸುವುದು ಅವಶ್ಯವಿದೆ. ಹಾಗೆಯೇ ಮಕ್ಕಳಲ್ಲಿ ಅಭಿವ್ಯಕ್ತಿ ಸಾಮರ್ಥ್ಯದ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ತರಗತಿಗಳ ಮೇಲ್ವಿಚಾರಣೆ ಸಂದರ್ಭದಲ್ಲಿ ಕಡ್ಡಾಯವಾಗಿ ಮಕ್ಕಳೊಂದಿಗೆ ಮಾತನಾಡಬೇಕು.
- ಮುಖ್ಯ ಗುರುಗಳು ಶಿಕ್ಷಕರ ಮೇಲ್ವಿಚಾರಣೆಯ ಸಮಯದಲ್ಲಿ ಈ ಅಂಶಗಳನ್ನು ಗಮನಿಸಬೇಕು – ಮಾರ್ಗದರ್ಶನ ನೀಡಬೇಕು.
- ಶಿಕ್ಷಕರು ತಿದ್ದಿದ ಗೃಹ ಪಾಠಗಳ ಕನಿಷ್ಠ ಸಂಖ್ಯೆ ವಾರಕ್ಕೆ 3 ರಿಂದ 5 ಇರಬೇಕು. ಶಾಲೆಯ ಮುಖ್ಯಸ್ಥರು ತಿದ್ದಿದ ಗೃಹಪಾಠಗಳನ್ನು ಪುನಃ ಪರಿಶೀಲಿಸುವುದು.
- ಪ್ರತಿಯೊಬ್ಬ ಶಿಕ್ಷಕರ ವಿವರವನ್ನು ದಾಖಲಿಸಿ, ಮಾರ್ಗದರ್ಶನ ನೀಡುವುದು.
- ಮುಂಜಾನೆ ಪ್ರಾರ್ಥನೆ ಹಾಗೂ ಸಾಯಂಕಾಲ ಸಾಮೂಹಿಕ ಮಗ್ಗಿ ಪಠಣ ಸಮಯಕ್ಕೆ ಎಲ್ಲಾ ಶಿಕ್ಷಕರು ಕಡ್ಡಾಯವಾಗಿರುವಂತೆ ನೋಡಿಕೊಳ್ಳಬೇಕು.

ವೀಕ್ಷಣಾಧಿಕಾರಿಗಳ ಪಾತ್ರ:–

- ಶಾಲೆಗೆ ಭೇಟಿ ನೀಡಿದಾಗ ಭೇಟಿ ನೀಡಿದ ಅಧಿಕಾರಿಗಳು ನೇರವಾಗಿ ತರಗತಿಯ ಕೋಣೆಗೆ ಪ್ರವೇಶಿಸಬೇಕು.
- ಸಮಯದ ಲಭ್ಯತೆಯ ಆಧಾರದ ಮೇಲೆ ತರಗತಿಗಳನ್ನು ವೀಕ್ಷಿಸಿ ಶಿಕ್ಷಕರಿಗೆ ಆ ತರಗತಿಯಲ್ಲಿಯ ಕಲಿಕೆಯ ಉತ್ತಮ ಅಂಶಗಳು ಹಾಗೂ ಕೊರತೆಗಳನ್ನು ನೀಗಿಸಲು ಸ್ಪಷ್ಟ ಮಾರ್ಗದರ್ಶನ ನೀಡುವುದು.
- ಈ ಬಗ್ಗೆ ಶಾಲೆಯ ಮುಖ್ಯ ಗುರುಗಳ ಗಮನವನ್ನು ಲಿಖಿತವಾಗಿ ಸೆಳೆಯುವುದು.

ತರಗತಿಗಳಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ಅಂಶಗಳು:–

1. 1 ರಿಂದ 4 : ನಲಿಕಲಿ ಅಥವಾ ಕಲಿನಲಿ ಮಾದರಿಯಲ್ಲಿಯ ಕ್ರಮದಂತೆ ಬೋಧನೆ ಜರುಗಿಸುವುದು. ಕ್ರಮವೇನಿದ್ದರೂ ಓದು–ಬರಹ ಹಾಗೂ ಲೆಕ್ಕಗಳ ಮೂಲ ಕ್ರಿಯೆಗಳಿಗೆ ಹೆಚ್ಚಿನ ಗಮನಕೊಡುವುದು. ಶಿಕ್ಷಕರು ಕಲಿಕಾಂಶಗಳ ಕಡೆ ಗಮನಹರಿಸಲು ಸೂಚಿಸಿದೆ.
2. 5 ರಿಂದ 7 : ಇಲ್ಲಿಯೂ ಆದ್ಯತೆ ಭಾಷಾಭಿವೃದ್ಧಿಗಿದ್ದೂ ಬೋಧನಾ ಅವಧಿಗಳಲ್ಲಿ ಈ ರೀತಿ ಹಂಚಿಕೆ ಇರಲಿ.
    - ಬದಲಿ ದಿನಕ್ಕೊಮ್ಮೆ ಎಲ್ಲಾ ಮಕ್ಕಳಿಂದ ಓದಿಸುವುದು ಹಾಗೂ ಅವರ ಓದು ಸರಿಪಡಿಸುವುದು.
    - ಬದಲಿ ದಿನಕ್ಕೊಮ್ಮೆ ಕಡ್ಡಾಯವಾಗಿ ಉಕ್ತ ಲೇಖನ ಹಾಗೂ ಅವುಗಳನ್ನು ತಿದ್ದಿ ಶಿಕ್ಷಕರು ಎಲ್ಲಾ ಮಕ್ಕಳ ಸಾಮಾನ್ಯ ತಪ್ಪುಗಳನ್ನು ತಿದ್ದಿ ಹೇಳುವುದು.
    - ಪ್ರತಿ ದಿನದ ಪಾಠದಲ್ಲಿ ಹೊಸ ಶಬ್ದಗಳ ಪರಿಚಯ: ಶಬ್ದಗಳ ಅರ್ಥ ವ್ಯಾಪ್ತಿ ಹಾಗೂ ಅವುಗಳ ಬಳಕೆಯನ್ನು ಮಗುವು ಮಾಡುವಂತಾಗಬೇಕು. ಅಂದರೆ ಪ್ರತಿಯೊಂದು ಹೊಸ ಶಬ್ದವೂ ಮಕ್ಕಳ ಭಾಷೆಯಲ್ಲಿದೆ. ಪ್ರತಿ ಮಗವೂ ಕನಿಷ್ಠ ಒಂದೊಂದು ಹೊಸ ವಾಕ್ಯದ ರಚನೆ ಕಡ್ಡಾಯ ಮಾಡಬೇಕು. ಇವುಗಳನ್ನು ಶಿಕ್ಷಕರು ಕಡ್ಡಾಯವಾಗಿ ಓದಿ, ತಿದ್ದಿ ಪ್ರತಿಯೊಂದು ಮಗುವಿಗೆ ತಿಳಿ ಹೇಳಬೇಕು. ಎಲ್ಲಾ ಮಕ್ಕಳ ಕಡೆಗೆ ಗಮನಹರಿಸುವುದು.
    - ಮಕ್ಕಳು ತಮ್ಮ ಬಗ್ಗೆ ಹಾಗೂ ತಮ್ಮ ಸುತ್ತಮುತ್ತಲಿನ ವಿಷಯಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಅಭಿವ್ಯಕ್ತಿಗೊಳಿಸಲು ಕಥೆ ಹೇಳಿಸಲು, ಹಾಡು ಹೇಳಿಸಲು ಪ್ರತಿದಿನವೂ ಕಡ್ಡಾಯವಾಗಿ ಒಂದು ಅವಧಿಯನ್ನು ನಿಗಧಿಗೊಳಿಸುವುದು. ಇದನ್ನು 1 ರಿಂದ 9ನೇ ತರಗತಿಯವರೆಗೂ ಅಳವಡಿಸಬೇಕು.

3. ಶುದ್ಧ ಲೇಖನ [Copy Writing]: 1 ರಿಂದ 7ನೇ ತರಗತಿಯವರೆಗೆ ಕಡ್ಡಾಯವಾಗಿ ಕನ್ನಡ ಪ್ರಥಮ ಹಾಗೂ ದ್ವಿತೀಯಿ ಭಾಷೆಯಲ್ಲೂ ಒಂದೆರಡು ಪುಟಗಳ ಶುದ್ಧ ಲೇಖನ ಬರೆಯುವ ಪ್ರಕ್ರಿಯೆಯನ್ನುಇ ಜಾರಿಗೊಳಿಸಬೇಕು.

ಶುದ್ಧಲೇಖನ ಬರೆಸುವಾಗ ಅಕ್ಷರಗಳನ್ನು ನಿಖರವಾಗಿ [Correct Strokes] ಬರೆಸಬೇಕು.

4. ಗಣಿತದ ಮೂಲ ಕ್ರಿಯೆಗಳು: ಗಣಿತದ ಮೂಲ ಕ್ರಿಯೆಗಳು ಹಾಗೂ ಗಣಿತದ ಸೂತ್ರಗಳಿಗೆ ಹೆಚ್ಚಿನ ಗಮನ ಹಾಗೂ ಆದ್ಯತೆ [ಎಷ್ಟೇ ತರಗತಿಗಳಿದ್ದರೂ] ನೀಡಬೇಕು. ಇದು ಗಣಿತದ ಕಲಿಕೆಗೆ ಬುನಾದಿ.
5. ವಿಜ್ಞಾನ/ಪರಿಸರ ವಿಜ್ಞಾನ: ವಿಜ್ಞಾನ ಬೋಧನೆಯಲ್ಲಿ ಪರಿಸರದ ಉದಾಹರಣೆಗಳೊಂದಿಗೆ ಹೆಚ್ಚಿನ ವಿವರ ನೀಡಬೇಕು. ಇಲ್ಲಿ ಬರುವ ಚಿತ್ರ/ಡಯಾಗ್ರಾಮ್‌ಗಳನ್ನು ಕಡ್ಡಾಯವಾಗಿ ಬಿಡಿಸಲು ತಿಳಿಸಿದರೆ ಸಾಲದು, ಬಿಡಿಸುವಂತೆ ಕ್ರಮ ಜರುಗಿಸಬೇಕು.
6. ಸಮಾಜ ವಿಜ್ಞಾನ:–
   - ➢ ಇತಿಹಾಸದಲ್ಲಿ ಸ್ಥಳೀಯ ಸನ್ನಿವೇಶಗಳನ್ನು ಹಾಗೂ ಘಟನಾವಳಿಗಳನ್ನು ಉಲ್ಲೇಖಿಸಿ, ನಂತರ ಮುಂದಿನ ಸನ್ನಿವೇಶಕ್ಕೆ ಹೋಗುವುದು. ಸ್ಥಳೀಯ ಮಹಾಪುರುಷರ ಸಾಧನೆಗಳ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಬೇಕು.
   - ➢ ಪೌರನೀತಿಯಲ್ಲಿ, ಪೌರಾಡಳಿತ ಕ್ರಮದಲ್ಲಿ ಜಿಪಿ/ಟಿಪಿ/ಜಡ್‌ಪಿ ಗಳೊಂದಿಗೆ ಎಸ್‌ಡಿಎಂಸಿ/ಸಿಎಸಿ, ಪರಿಸರ, ನೈರ್ಮಲ್ಯ/ಕುಟುಂಬ ಆರೋಗ್ಯ, ಸಾಮಾಜಿಕ ಬದುಕುಗಳಿಗೆ ಹೋಲಿಕೆ ಇರಲಿ.
   - ➢ ಭೂಗೋಳ ಬೋಧಿಸುವಲ್ಲಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲೆ/ರಾಜ್ಯಗಳ ವಿವರ ನೀಡುತ್ತಾ ಸಮಯ ಸನ್ನಿವೇಶಗಳನ್ವಯ ಆಯಾ ಭಾಗದ ಎಲ್ಲಾ ಸನ್ನಿವೇಶಗಳು ತಿಳಿ ಹೇಳುವುದರ ಜೊತೆಗೆ ತಾಲ್ಲೂಕು/ಜಿಲ್ಲೆ/ ರಾಜ್ಯಗಳ ನಕಾಶೆಗಳನ್ನು ಬಿಡಿಸುವುದನ್ನು ಕಡ್ಡಾಯಗೊಳಿಸಬೇಕು.
7. ಪಠ್ಯೇತರ ಚಟುವಟಿಕೆಗಳು: ಇವು ಅಬಾಧಿತವಾಗಿ ನಡೆಯಬೇಕು. ಸಾಂಕೇತಿಕವಾಗಿ ಮಾತ್ರ ಅಲ್ಲ. ಇವುಗಳ ಪರಿಣಾಮ ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ.
8. ಪ್ರಬಂಧ ರಚನೆ/ಭಾಷಣೆ ಸ್ಪರ್ಧೆಗಳನ್ನು ಕಡ್ಡಾಯಗೊಳಿಸಬೇಕು. ಈ ಸಮಗ್ರ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಅನುಷ್ಠಾನವೇ ಗುಣಮಟ್ಟದ ಶಿಕ್ಷಣಕ್ಕೆ ನಾಂಧಿ. ಅನುಷ್ಠಾನದ ಹೆಜ್ಜೆಗಳು ಎಲ್ಲಾ ಹಂತದಲ್ಲಿ ಗಟ್ಟಿಗೊಳಿಸಲು ಈ ಮೂಲಕ ಸೂಚಿಸಿದೆ.

ಸಹಿ/–
ನಿರ್ದೇಶಕರು[ಪ್ರೌಢಶಿಕ್ಷಣ]
ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ರಾಜ್ಯದ ಎಲ್ಲಾ ಉಪನಿರ್ದೇಶಕರು[ಆಡಳಿತ] ಹಾಗೂ ಉಪನಿರ್ದೇಶಕರು[ಅಭಿವೃದ್ಧಿ] ಇವರಿಗೆ ಸೂಕ್ತ ಕ್ರಮಕ್ಕಾಗಿ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಕೆ.ಆರ್.ವೃತ್ತ, ಬೆಂಗಳೂರು–560 001.**

ಸಂಖ್ಯೆ ಎಂಸಿ1 ಐಇಡಿ.ಎಸ್ಎಸ್.ಪ್ರಸ್ತಾವನೆ (ಮಾ.ಸೂ) 02/2010–11 ದಿನಾಂಕ 07.06.2010

ಮಾರ್ಗಸೂಚಿ

ವಿಷಯ:– 2010–11 ನೇ ಶೈಕ್ಷಣಿಕ ಸಾಲಿನಲ್ಲಿ ಸಮನ್ವಯ ಶಿಕ್ಷಣ (ಐ.ಇ.ಡಿ.ಎಸ್.ಎಸ್) ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರೇತರ ಸಂಸ್ಥೆಗಳು ಅನುಸರಿಸಬೇಕಾಗಿರುವ ಮಾರ್ಗಸೂಚಿ.

ಉಲ್ಲೇಖ:– 1. ಸರ್ಕಾರದ ಪತ್ರ ಸಂಖ್ಯೆ:ಇಡಿ 257 ಯೋಸಕ 2008, ಬೆಂಗಳೂರು, ದಿನಾಂಕ:06.02.2009.

2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: F.No.14-38 2002-IE, ನವದೆಹಲಿ, ದಿನಾಂಕ: 21.10.2008

3. ಕೇಂದ್ರ ಸರ್ಕಾರದ ಎಂ.ಹೆಚ್.ಆರ್.ಡಿ. ನವದೆಹಲಿ ರವರ ಪತ್ರ ಸಂಖ್ಯೆ: F.No.14-7/2009-IE, ದಿನಾಂಕ: 13.04.2009.

4. ಕೇಂದ್ರ ಸರ್ಕಾರದ ಎಂ.ಹೆಚ್.ಆರ್.ಡಿ. ನವದೆಹಲಿ ರವರ ಪತ್ರ ಸಂಖ್ಯೆ: F.No.14-7/2009-IEDC, ದಿನಾಂಕ: 07.04.2010.

* * * * *

ಸಮನ್ವಯ ಶಿಕ್ಷಣ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಸರ್ಕಾರೇತರ ಸಂಸ್ಥೆಗಳು ಪ್ರೌಢ ಶಾಲೆಗಳಲ್ಲಿ (09 ಮತ್ತು 10 ನೇ) ತರಗತಿಗಳಿಗೆ ಐ.ಇ.ಡಿ.ಎಸ್.ಎಸ್. ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

ಗುರಿ:–

ಎ) ರಾಜ್ಯ ಸರ್ಕಾರವು ಈ ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ (ಎನ್.ಜಿ.ಓ) ಅನುಷ್ಠಾನಗೊಳಿಸುತ್ತದೆ.

ಬಿ) ಈ ಯೋಜನೆಯ ಮುಖ್ಯ ಉದ್ದೇಶ ಅಂಗವಿಕಲ ಮಕ್ಕಳು 08 ವರ್ಷದ ಪ್ರಾಥಮಿಕ ಶಿಕ್ಷಣ ಮುಗಿಸಿದ ನಂತರ ಪ್ರೌಢ ಶಾಲೆಗಳಿಗೆ ದಾಖಲೆ ಹೊಂದಿ ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು.

ಉದ್ದೇಶಗಳು:

- ವಿಕಲಚೇತನ ಮಕ್ಕಳ ಅಂಗವಿಕಲತೆಯನ್ನು ಗುರುತಿಸುವುದು ಹಾಗೂ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಮಾಡಿಸುವುದು.
- ವಿಕಲಚೇತನ ಮಕ್ಕಳ ನ್ಯೂನತೆಗೆ ಅನುಗುಣವಾಗಿ ಸಲಕರಣೆಗಳನ್ನು ಒದಗಿಸುವುದು.
- ವಿಕಲಚೇತನ ಮಕ್ಕಳಿಗೆ ಶಾಲೆಯಲ್ಲಿ ಯಾವುದೇ ಅಡೆ ತಡೆಗಳಿರದಂತೆ ತರಗತಿ, ಕೋಣೆ, ಲೈಬ್ರರಿ, ಪ್ರಯೋಗಾಲಯ, ಶೌಚಾಲಯಗಳ ಚಲನವಲನಕ್ಕೆ ಅನುಕೂಲತೆಗಳನ್ನು ಒದಗಿಸುವುದು.
- ನ್ಯೂನತೆಗೆ ಅನುಗುಣವಾಗಿ ಕಲಿಕಾ ಸಾಮಾಗ್ರಿಗಳನ್ನು ಒದಗಿಸುವುದು.

ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಸಮನ್ವಯ ಶಿಕ್ಷಣ ಯೋಜನಾ ನಿಯಮಾವಳಿ ಅನ್ವಯ ನ್ಯೂನತೆಯುಳ್ಳ ಮಕ್ಕಳನ್ನು ಗುರ್ತಿಸಿ ತಜ್ಞ ವೈದ್ಯರಿಂದ ವೈದ್ಯಕೀಯ ನಿರ್ಧಾರಣ ಮಾಡಿಸಿರಬೇಕು. ಜಿಲ್ಲಾ ವೈದ್ಯಾಧಿಕಾರಿಗಳ/ ಜಿಲ್ಲಾ ಅಂಗವಿಕಲ ಕಲ್ಯಾಣ ಇಲಾಖೆಯ ದೃಢೀಕರಣ ಅಗತ್ಯ. ಈ ವೈದ್ಯಕೀಯ ನಿರ್ಧಾರಣದ ಒಂದು ಪ್ರತಿಯನ್ನು ಉಪ ನಿರ್ದೇಶಕರು (ಆಡಳಿತ) ರವರಿಗೆ ಕಳುಹಿಸಿದರೆ ಸಾಕು. ಈ ಕಛೇರಿಗೆ ಕಳುಹಿಸುವ ಅಗತ್ಯವಿಲ್ಲ.

ಕಡ್ಡಾಯವಾಗಿ ಪರಿಶೀಲಿಸುವ ಅಂಶಗಳು

- ಜಿಲ್ಲಾ ವೈದ್ಯಾಧಿಕಾರಿಗಳಿಂದ ದೃಢೀಕರಿಸಿರುವ ವೈದ್ಯಕೀಯ ಪ್ರಮಾಣ ಪತ್ರ (ನ್ಯೂನತೆಯೊಂದಿಗೆ ಮಗುವಿನ ಭಾವಚಿತ್ರ)
- ಸಂಸ್ಥೆಯನ್ನು ನೊಂದಾಯಿಸಿರುವ ದಾಖಲೆಗಳು.

- ವಿದ್ಯಾರ್ಹತೆ ಹೊಂದಿರುವ ಶಿಕ್ಷಕರ ನೇಮಕಾತಿ (ದಾಖಲೆಗಳೊಂದಿಗೆ)
- ಶಿಕ್ಷಕರಿಗೆ ಬ್ಯಾಂಕ್ ಮೂಲಕ ಸಂಬಳ ನೀಡುವ ಬಗ್ಗೆ ಖಾತರಿ.

ಅಂಗವಿಕಲತೆ ಅಧಿನಿಯಮ 1995 ರಂತೆ ಅಂಗವಿಕಲತೆ ಎಂದರೆ

- ಅಂಧತ್ವ
- ಮಂದ ದೃಷ್ಠಿ
- ಕುಷ್ಟ ರೋಗ ನಿವಾರಿತರು
- ಶ್ರವಣ ದೋಷವುಳ್ಳವರು
- ಚಲನವಲನ ಅಂಗವಿಕಲತೆ
- ಬುದ್ಧಿ ಮಾಂಧ್ಯತೆ
- ಮಾನಸಿಕ ಅಸ್ವಸ್ಥತೆ
- ಆಟಿಸಂ (Autism)
- ಮೆದುಳಿನ ಪಾರ್ಶ್ವವಾಯು (Cerebral palsy)

1. ವೈದ್ಯಕೀಯ ನಿರ್ಧಾರಣದ ಆಧಾರದ ಮೇಲೆ ಅರ್ಹ ಫಲಾನುಭವಿಗಳಿಗೆ ಶೈಕ್ಷಣಿಕ ವರ್ಷಾರಂಭದಲ್ಲಿಯೇ ನಿಯಮಾವಳಿಗಳ ಪ್ರಕಾರ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಸಮನ್ವಯಗೊಳಿಸಿದ ವಿದ್ಯಾರ್ಥಿ / ವಿದ್ಯಾರ್ಥಿನಿಯರ ಹೆಸರು, ದಾಖಲಾತಿ ಸಂಖ್ಯೆ, ತರಗತಿ, ನ್ಯೂನತೆ ವಿವರ ಭಾವ ಚಿತ್ರದೊಂದಿಗೆ ಪೋಷಕರ ಹೆಸರು ಮತ್ತು ವಿಳಾಸ ಶಾಲಾ ಮುಖ್ಯಸ್ಥರಿಂದ ದೃಢೀಕರಣವಾಗಿರಬೇಕು. ಇದರ ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು.
2. ವಿತರಣಾ ಪುಸ್ತಕದಲ್ಲಿ ವಿತರಣೆಗೆ ಸಂಬಂಧಿಸಿದಂತೆ ಫಲಾನುಭವಿಯ ಹೆಸರು, ಶಾಲೆಯ ಹೆಸರು, ದಾಖಲಾತಿ ಸಂಖ್ಯೆ, ಓದುತ್ತಿರುವ ತರಗತಿ, ನ್ಯೂನತೆಯ ಸ್ವರೂಪ, ವಿತರಿಸಲಾದ ಸಾಮಗ್ರಿ/ಸಲಕರಣೆಗಳು, ಮತ್ತು ಈ ಸಾಮಗ್ರಿ/ ಸಲಕರಣೆಗಳ ಬೆಲೆಯನ್ನು ಕಟ್ಟುನಿಟ್ಟಾಗಿ ದಾಖಲಿಸಬೇಕು. ಫಲಾನುಭವಿಯ ಸಹಿ, ಪೋಷಕರ ಸಹಿ ಹಾಗೂ ಮುಖ್ಯ ಶಿಕ್ಷಕರ ಸಹಿ ಕಡ್ಡಾಯವಾಗಿರಬೇಕು. ಈ ಮಾಹಿತಿಯ ಒಂದು ಪ್ರತಿಯನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರಿಗೆ ನೀಡಬೇಕು.
3. ಸಂಸ್ಥೆಯವರು ಸಂಪನ್ಮೂಲ ಶಿಕ್ಷಕರಿಗೆ ವಹಿಸಿರುವ ಮಕ್ಕಳ ಬಗ್ಗೆ ವೈಯಕ್ತಿಕ ಕಡತವನ್ನು, ಮಕ್ಕಳಿಗೆ ನೀಡಿರುವ ಸವಲತ್ತುಗಳು, ನ್ಯೂನತೆಯ ವಿವರ ಹಾಗೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಪ್ರಗತಿ, ಶಿಕ್ಷಕರು ಮತ್ತು ಪೋಷಕರರೊಡನೆ ಚರ್ಚಿಸಿದ ವಿವರ ಇತ್ಯಾದಿಗಳನ್ನು ನಿರ್ವಹಿಸಬೇಕು.
4. ಈ ಯೋಜನೆಯನ್ವಯ ಸರ್ಕಾರೇತರ ಸಂಸ್ಥೆಗಳಿಂದ ಅನುಷ್ಠಾನಗೊಳಿಸುತ್ತಿರುವ ಸಂಪನ್ಮೂಲ ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಕಡ್ಡಾಯವಾಗಿ ವಿಶೇಷ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳುವುದು. ಹಾಗೂ ನೇಮಕಾತಿ ನಿಯಮವನ್ನು ಪಾಲಿಸುವುದು. ಒಬ್ಬ ಸಂಪನ್ಮೂಲ ಶಿಕ್ಷಕರು ಸಕ್ಷಮ ಪ್ರಾಧಿಕಾರಿಗಳಿಂದ ವೈದ್ಯಕೀಯ ನಿರ್ಧಾರಣವಾದ 05 ಅಂಗವಿಕಲ ಮಕ್ಕಳಿಗಿಂತ (ಚಲನ ದುರ್ಬಲತೆ ಮಕ್ಕಳನ್ನು ಹೊರೆತುಪಡಿಸಿ) ಕಡಿಮೆ ಇಲ್ಲದಂತೆ ಶೈಕ್ಷಣಿಕ ಮಾರ್ಗದರ್ಶನ ನೀಡತಕ್ಕದ್ದು. ಇಂತಹ ಶಿಕ್ಷಕರು ಮಾತ್ರ ಯೋಜನೆಯಡಿಯಲ್ಲಿ ವೇತನ/ವಿಶೇಷ ಭತ್ಯೆಗೆ ಅರ್ಹರಾಗಿರುತ್ತಾರೆ. ಪರಿಣಾಮಕಾರಿ ಕಲಿಕೆಗೆ ವಿಕಲಚೇತನ ವಿದ್ಯಾರ್ಥಿಗಳ ದಾಖಲೆ 1:5 ಅನುಪಾತದಲ್ಲಿರಬೇಕು. ಗರಿಷ್ಠ 09 ಕಿಂತ ಮೀರಬಾರದು.
5. ಕೇವಲ ಸಂಪನ್ಮೂಲ ಶಿಕ್ಷಕರ ನೇಮಕದಿಂದ ಮಾತ್ರವೇ ಯೋಜನೆ ಫಲಪ್ರದವಾಗುವುದಿಲ್ಲ. ಆದ್ದರಿಂದ ಫಲಾನುಭವಿಗಳಿಗೆ ನೀಡಬೇಕಾದ ಅಗತ್ಯ ಸೌಲಭ್ಯಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಒದಗಿಸಿ, ಸೂಕ್ತ ಶೈಕ್ಷಣಿಕ ಮಾರ್ಗದರ್ಶನ ನೀಡುವುದರ ಮೂಲಕ ಮಕ್ಕಳ ಪ್ರಗತಿಗೆ ಶ್ರಮಿಸುವುದು ಕಡ್ಡಾಯವಾಗಿದೆ. ಆಗ ಮಾತ್ರ ಯೋಜನೆಯ ಉದ್ದೇಶ ಈಡೇರಿದಂತಾಗುತ್ತದೆ. ಫಲಾನುಭವಿಗಳಿಗೆ ವೈದ್ಯಕೀಯ ನಿರ್ಧಾರಣ ಮಾಡಿಸದೆ, ಸಾಧನ ಸಲಕರಣೆಗಳನ್ನು ಒದಗಿಸದೆ, ಗುಣಾತ್ಮಕ ಶೈಕ್ಷಣಿಕ ಮಾರ್ಗದರ್ಶನ ನೀಡದೆ, ಕೇವಲ ಫಲಾನುಭವಿಗಳು ಮತ್ತು ಶಿಕ್ಷಕರ ಸಂಖ್ಯೆಯನ್ನು ತೋರಿಸುವುದರಿಂದ ಯೋಜನೆಯ ಉದ್ದೇಶವು

ಸಫಲವಾಗುವುದಿಲ್ಲ. ಇಂತಹ ಸಂಸ್ಥೆಗಳಿಗೆ ಯೋಜನೆಯನ್ನು ಮುಂದುವರಿಸಲು ಅವಕಾಶ ನೀಡಲಾಗುವುದಿಲ್ಲ.

6. ಯಾವುದೇ ಶಾಲೆಯಲ್ಲಿ ಅಂಗವಿಕಲತೆ ಮಕ್ಕಳ ಸಂಖ್ಯೆ 05 ಕಿಂತ ಹೆಚ್ಚಿದ್ದರೆ ಒಬ್ಬ ವಿಶೇಷ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು. 1:5 ಅನುಪಾತದಲ್ಲಿ ನ್ಯೂನತೆಗೆ ಅನುಗುಣವಾಗಿ ಶಾಲೆ ಅಥವಾ ಶಿಕ್ಷಕರ ಅಂತರದಲ್ಲಿ ಅಗತ್ಯಕ್ಕೆ ಅನುಗುಣವಾಗಿ ವಿಶೇಷ ಶಿಕ್ಷಕರನ್ನು ನೇಮಿಸಿಕೊಳ್ಳುವುದು. (ಗರಿಷ್ಟ 1:9) ದೈಹಿಕ ನ್ಯೂನತೆಯನ್ನು ಹೊರೆತುಪಡಿಸಿ ಈ ಶಿಕ್ಷಕರು ವಿಕಲಚೇತನ ಮಕ್ಕಳ ಪೋಷಕರೊಂದಿಗೆ ಸಮಾಲೋಚನೆ ಮಾಡುವುದು. ತರಬೇತಿ ಕಾರ್ಯದಲ್ಲಿ ಭಾಗವಹಿಸಿ ಸಹಕಾರ ನೀಡುವುದು. ಹಾಗೂ ವಿಕಲಚೇತನ ಸಂಬಂಧಿಸಿದ ಕಾರ್ಯಗಳಿಗೆ ನೆರವಾಗುವುದು.

7. ವಿದ್ಯಾರ್ಹತೆ: ಪ್ರೌಢ ಶಾಲೆ– ಪದವಿಯೊಂದಿಗೆ ಬಿ.ಇಡಿ.( ವಿಶೇಷ ಶಿಕ್ಷಣ) ಅಥವಾ ಪದವಿಯೊಂದಿಗೆ ಬಿ.ಇಡಿ. (ಸಾಮಾನ್ಯ) 2 ವರ್ಷದ ವಿಶೇಷ ಶಿಕ್ಷಣದ ಡಿಪ್ಲೋಮ ಹೊಂದಿರಬೇಕು. ಇಂತಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರುಗಳು ಲಭ್ಯವಿಲ್ಲದೇ ಹೋದಲ್ಲಿ ಸಾಮಾನ್ಯ ಪದವಿಯೊಂದಿಗೆ (ಬಿ.ಎ./ಬಿ.ಎಸ್ಸಿ) ಜನರಲ್ ಬಿ.ಇಡಿ. ವಿದ್ಯಾರ್ಹತೆಯ ಜೊತೆಗೆ ಆರ್.ಸಿ.ಐ. ಮಾನ್ಯತೆಯ ಅಲ್ಪಾವಧಿ ಕೋರ್ಸ್ ವಿದ್ಯಾರ್ಹತೆಯನ್ನು ಹೊಂದಿರುವಂತಹ ಶಿಕ್ಷಕರುಗಳನ್ನು ನೇಮಿಸಿಕೊಳ್ಳಬಹುದು. ಇಂತಹ ಶಿಕ್ಷಕರುಗಳು ಪೂರ್ಣಾವಧಿ ಆರ್.ಸಿ.ಐ. ಮಾನ್ಯತೆಯ ವಿದ್ಯಾರ್ಹತೆಯನ್ನು ನೇಮಕಾತಿ ಹೊಂದಿದ ಮೂರು ವರ್ಷಗಳಲ್ಲಿ ವಿಶೇಷ ಶಿಕ್ಷಣ ತರಬೇತಿಯಲ್ಲಿ ಉತ್ತೀರ್ಣರಾಗತಕ್ಕದ್ದು ಎಂಬ ಷರತ್ತಿನ ಮೇಲೆ ಈ ಶಿಕ್ಷಕರುಗಳಿಗೆ ಪೂರ್ಣಾವಧಿ ಕೋರ್ಸ್ ಪಡೆದ ನಂತರ ವಿಶೇಷ ಭತ್ಯೆಯನ್ನು ಪಡೆಯಲು ಅರ್ಹರಾಗುತ್ತಾರೆ.

8. ಸರ್ಕಾರೇತರ ಸಂಸ್ಥೆಯಿಂದ ನೇಮಕಗೊಂಡ ಸಂಪನ್ಮೂಲ ಶಿಕ್ಷಕರು ಒಂದು ಸಂಸ್ಥೆಯಲ್ಲಿ ಮಾತ್ರ ನೇಮಕಗೊಳ್ಳಲು ತಮ್ಮ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಹಿಂದಿನ ಸಾಲುಗಳಲ್ಲಿ ಶಿಕ್ಷಕರು ಹಲವಾರು ಸಂಸ್ಥೆಗಳಿಂದ ಒಬ್ಬರೇ ಶಿಕ್ಷಕರು ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಗಮನಿಸಿದೆ. ಒಂದು ವೇಳೆ ಒಬ್ಬರೇ ಶಿಕ್ಷಕರುಗಳು ಬೇರೆ ಬೇರೆ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಅನುದಾನಕ್ಕೆ ಸಲ್ಲಿಸಿದರೆ ಅಂತಹ ಶಿಕ್ಷಕರನ್ನು ಗುರುತಿಸಿ ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರಗಳನ್ನು ಅನರ್ಹಗೊಳಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪ್ರತಿಯೊಂದು ವ್ಯವಹಾರವನ್ನು ಬ್ಯಾಂಕ್ ಮೂಲಕ ನಡೆಸತಕ್ಕದ್ದು. ಶಿಕ್ಷಕರಿಗೆ ಬ್ಯಾಂಕ್ ಖಾತೆಯ ಮೂಲಕವೇ ವೇತನ ಪಾವತಿಸಬೇಕು. ಇದನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಪನ್ಮೂಲ ಶಿಕ್ಷಕರ ವೇತನ ಬ್ಯಾಂಕ್ ಖಾತೆಯ ಮೂಲಕ ನೀಡಿರುವುದು. ಅದಕ್ಕೆ ಸಂಬಂಧಿಸಿದಂತೆ ಪಾಸ್ ಬುಕ್‌ಗಳನ್ನು ಪೇಯಿಸ್ ರೆಸಿಪ್ಟ್ (Payees receipt) ಇರುವುದನ್ನು ಖಾತರಿ ಪಡಿಸಿಕೊಳ್ಳುವುದು. ಶಿಕ್ಷಕರ ಬ್ಯಾಂಕ್ ಪಾಸ್ ಪುಸ್ತಕ, ಚೆಕ್ ಪುಸ್ತಕ, ಕ್ರೆಡಿಟ್ ಕಾರ್ಡ್ ಇತ್ಯಾದಿ ಶಿಕ್ಷಕರ ವಶದಲ್ಲಿಯೇ ಇರುವಂತೆ ಕ್ರಮ ವಹಿಸಬೇಕು.

10. ಸಮನ್ವಯ ಶಿಕ್ಷಣ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಚಿಕ್ಕ ಪ್ರಮಾಣದಲ್ಲಿಯೇ ಫಲಾನುಭವಿಗಳನ್ನು ಗುರ್ತಿಸಿ, ವ್ಯಾಪ್ತಿಯನ್ನು ಮಿತಿಗೊಳಿಸಿ, ಸಂಪನ್ಮೂಲ ಶಿಕ್ಷಕರ ಅಮೂಲ್ಯ ಸಮಯ ಕೇವಲ ಓಡಾಟದಲ್ಲಿಯೇ ವ್ಯಯವಾಗುವುದನ್ನು ತಪ್ಪಿಸುವುದು ಅಗತ್ಯ. ಸಾಧ್ಯವಾದ ಮಟ್ಟಿಗೆ ವಾರದ 6 ದಿನಗಳೂ ಸಂಪನ್ಮೂಲ ಶಿಕ್ಷಕರ ಸಂಪರ್ಕ ಹಾಗೂ ಸೇವೆ ಫಲಾನುಭವಿಗಳಿಗೆ ಲಭ್ಯವಾಗುವಂತೆ ಯೋಜನೆಯನ್ನು ರೂಪಿಸತಕ್ಕದ್ದು.

11. ಸಂಪನ್ಮೂಲ ಶಿಕ್ಷಕರು ತಾವು ಸೇವೆ ಸಲ್ಲಿಸುವ ಶಾಲೆಗಳಲ್ಲಿ ಸಮನ್ವಯ ಶಿಕ್ಷಣ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದ ನಿಗದಿತ ದಾಸ್ತಾವೇಜುಗಳ / ವಹಿಗಳ ನಿರ್ವಹಣೆ, ವಿಶೇಷ ವೇಳಾಪಟ್ಟಿ, ಮಕ್ಕಳ ಪ್ರಗತಿ ಕುರಿತು ಶಿಕ್ಷಕರು ಹಾಗೂ ಪೋಷಕರೊಂದಿಗೆ ನಡೆಸಿದ ಸಮಾಲೋಚನೆಗಳ ವಿವರ, ದಿನಚರಿ, ಪಾಠ ಟಿಪ್ಪಣಿ, ಪಾಠೋಪಕರಣಗಳ ಬಳಕೆ ಇತ್ಯಾದಿಗಳ ಮಾಹಿತಿಯನ್ನು ನಿರ್ವಹಿಸಬೇಕು. ಈ ಕರ್ತವ್ಯದಲ್ಲಿ ವಿಮುಖರಾದಲ್ಲಿ ಅಥವಾ ನಿಗದಿತ ಕಾರ್ಯ ಸರಿಯಾಗಿ ನಡೆಸದೇ ಇದ್ದಲ್ಲಿ ಸಂಪನ್ಮೂಲ ಶಿಕ್ಷಕರು ಹಾಗೂ ಸಂಬಂಧಿಸಿದ ಸಂಸ್ಥೆಯನ್ನು ಜವಾಬ್ದಾರರನ್ನಾಗಿ ಮಾಡಿ, ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು.

12. ಸಂಪನ್ಮೂಲ ಶಿಕ್ಷಕರಲ್ಲಿ ಯಾರಾದರೂ ಕೆಲಸಕ್ಕೆ ರಾಜೀನಾಮೆ ನೀಡಿದ್ದಲ್ಲಿ ಅಥವಾ ಕರ್ತವ್ಯ ನಿರ್ವಹಿಸದಿದ್ದಲ್ಲಿ ಈ ಬಗ್ಗೆ ಉಪನಿರ್ದೇಶಕರು (ಆಡಳಿತ) ಹಾಗೂ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಬೆಂಗಳೂರು ರವರಿಗೆ ಕೂಡಲೇ ಮಾಹಿತಿಯನ್ನು

ಸರ್ಕಾರೇತರ ಸಂಸ್ಥೆಗಳು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ವೇತನ ಬಿಡುಗಡೆ ಮಾಡಲಾಗುವುದಿಲ್ಲ. ಇದು ಕಡ್ಡಾಯ. ಯಾವುದೇ ಕಾರಣಕ್ಕೂ ಸಂಪನ್ಮೂಲ ಶಿಕ್ಷಕರನ್ನು ಪದೇ ಪದೇ ಬದಲಾಯಿಸಬಾರದು. ಅನಿವಾರ್ಯ ಕಾರಣಗಳಿಂದ ಸಂಪನ್ಮೂಲ ಶಿಕ್ಷಕರು ರಾಜೀನಾಮೆ ನೀಡಿದ ಪಕ್ಷದಲ್ಲಿ ಅವರ ಬದಲಾಗಿ ಅರ್ಹ ವಿದ್ಯಾರ್ಹತೆ ಹೊಂದಿದ ಬೇರೆ ಶಿಕ್ಷಕರನ್ನು ನೇಮಿಸಿದ ಪಕ್ಷದಲ್ಲಿ ಕೂಡಲೇ ನೇಮಕಾತಿ ಆದೇಶ ಹಾಗೂ ಶೈಕ್ಷಣಿಕ ಅರ್ಹತೆಯ ಪ್ರಮಾಣ ಪತ್ರಗಳನ್ನು, ಶಿಕ್ಷಕರ ಭಾವಚಿತ್ರಗಳನ್ನು ಉಪನಿರ್ದೇಶಕರು (ಆಡಳಿತ) ರವರ ದೃಢೀಕರಣದೊಂದಿಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು. ಯಾವುದೇ ಸರ್ಕಾರಿ ಸೌಲಭ್ಯವನ್ನು ಪಡೆಯುತ್ತಿಲ್ಲವೆಂದು ಶಿಕ್ಷಕರಿಂದ ದೃಢೀಕರಣ ಪಡೆದಿರಬೇಕು.

13. ಫಲಾನುಭವಿಗಳಿಗೆ ವಿತರಿಸುವ ಸೌಲಭ್ಯಗಳನ್ನು ಜನತಾ ಬಜಾರ್ ಅಥವಾ ಸಹಕಾರ ಸಂಘದಿಂದ ಖರೀದಿಸತಕ್ಕದ್ದು. ಇತರೇ ಅಂಗಡಿಗಳಲ್ಲಿ ಖರೀದಿಸಿದಲ್ಲಿ ಖರೀದಿಗೆ ಸಂಬಂಧಿಸಿದಂತೆ ದರ ಪಟ್ಟಿಯನ್ನು ಮೂರು ಅಧಿಕೃತ ಸಂಸ್ಥೆಗಳಿಂದ ಪಡೆದು ಖರೀದಿ ನಿಯಮಾವಳಿಗಳಿಗನುಗುಣವಾಗಿ ಖರೀದಿಸಬೇಕು. ತಪಾಸಣಾ ವೇಳೆಯಲ್ಲಿ ಈ ಬಗ್ಗೆ ಅಧಿಕಾರಿಗಳು ಕೂಲಂಕುಶವಾಗಿ ಪರಿಶೀಲಿಸಬೇಕು.
ಒಂದು ಲಕ್ಷಕಿಂತ ಮೇಲ್ಪಟ್ಟಿದ್ದರೆ ಖರೀದಿಯನ್ನು ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಬೇಕು. ಸಂಬಂಧಿಸಿದ ರಸೀದಿಯ ಮೇಲೆ "ಪಾವತಿ ಮಾಡಿ ರದ್ದುಗೊಳಿಸಿದೆ" ಎಂದು ಬರೆದು ಸಂಸ್ಥೆಯ ಕಾರ್ಯದರ್ಶಿಗಳು ಸಹಿ ಹಾಕತಕ್ಕದ್ದು. ಹಾಗೂ ಈ ಸಾಮಾಗ್ರಿ/ಸಲಕರಣೆಗಳನ್ನು ದಾಸ್ತಾನಿಗೆ ತೆಗೆದುಕೊಳ್ಳತಕ್ಕದ್ದು.

14. ಸರ್ಕಾರೇತರ ಸಂಸ್ಥೆಗಳು ಸಮನ್ವಯ ಶಿಕ್ಷಣ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರಗಳು, ನಗದು ಪುಸ್ತಕ ಇತ್ಯಾದಿ ವಹಿಗಳ ನಿರ್ವಹಣೆಯಲ್ಲಿ ಇಲಾಖೆಯು ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಅದರಂತೆ ನಿರ್ವಹಣೆ ಮಾಡತಕ್ಕದ್ದು.

15. ಸಮನ್ವಯ ಶಿಕ್ಷಣ ಯೋಜನೆ ಜಾರಿಗೊಳಿಸಿರುವ ಶಾಲೆಗಳಿಗೆ ಸಂಬಂಧಿಸಿದಂತೆ, ದೂರನಕ್ಷೆಯನ್ನು ಸಂಸ್ಥೆಯಲ್ಲಿ ನಿರ್ವಹಿಸಬೇಕು. ಇದರಲ್ಲಿ ಸಂಪನ್ಮೂಲ ಕೇಂದ್ರದಿಂದ ಶಾಲೆಗಳಿಗಾಗುವ ದೂರ, ಶಾಲೆಗಳ ಹೆಸರು, ಫಲಾನುಭವಿಗಳ ಸಂಖ್ಯೆ ಮತ್ತು ವಿವರ ಹಾಗೂ ಶಿಕ್ಷಕರ ಸಂಖ್ಯೆ ಮತ್ತು ವಿವರಗಳನ್ನು ನಮೂದಿಸಿರಬೇಕು.

16. ಇಲಾಖೆ ನಿಗದಿಪಡಿಸಿರುವ ಎಲ್ಲಾ ವಹಿಗಳನ್ನು ಸರ್ಕಾರೇತರ ಸಂಸ್ಥೆಗಳು ಕ್ರಮವಾಗಿ ನಿರ್ವಹಿಸಬೇಕು. ತಪಾಸಣಾ ಸಂದರ್ಭದಲ್ಲಿ ತಪಾಸಣಾಧಿಕಾರಿಗಳಿಗೆ ಯೋಜನೆಗೆ ಸಂಬಂಧಿಸಿದ ಎಲ್ಲಾ ವಹಿಗಳು / ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕು. ತಪಾಸಣಾ ವರದಿ ತಲುಪಿದ 15 ದಿನಗಳೊಳಗಾಗಿ ಅನುಸರಣಾ ವರದಿಯನ್ನು ದ್ವಿಪ್ರತಿಗಳಲ್ಲಿ ತಪಾಸಣಾಧಿಕಾರಿಗಳಿಗೆ ಈ ಕೆಳಕಂಡ ನಮೂನೆಯಲ್ಲಿ ಕಳುಹಿಸತಕ್ಕದ್ದು.

........................................ ನೇ ಸಾಲಿನ ತಪಾಸಣಾ ಅನುಸರಣಾ ವರದಿ

ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ:

ತಪಾಸಣಾ ದಿನಾಂಕ:

ತಪಾಸಣೆ ಮಾಡಿದ ಅಧಿಕಾರಿಗಳ

ಹೆಸರು ಮತ್ತು ವಿಳಾಸ:

| ತಪಾಸಣಾ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳು. | ನ್ಯೂನತೆಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮ. | ಷರಾ. |
|---|---|---|
| | | |

17. ಸಲಕರಣೆ ಭತ್ಯೆಯನ್ನು ಅರ್ಹ ಫಲಾನುಭವಿಗಳಿಗೆ 5 ವರ್ಷಗಳಿಗೊಮ್ಮೆ ನೀಡಲಾಗುವುದು. ಸಲಕರಣೆಗಳನ್ನು ವೈದ್ಯರ ಶಿಫಾರಸ್ಸಿನಂತೆ ಖರೀದಿಸಬೇಕು. ಹಾಗೂ ವೈದ್ಯರ ಶಿಫಾರಸ್ಸು ಪತ್ರ ಲಗತ್ತಿಸಿರಬೇಕು. ವೈಯಕ್ತಿಕ ಸಲಕರಣೆ ಹಾಗೂ ಗುಂಪು ಸಲಕರಣೆಗಳ ಖರೀದಿಯು ಯೋಜನಾ ಮಾರ್ಗಸೂಚಿಯಂತೆ ಇರಬೇಕು.

18. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಓ) ವಿಕಲಚೇತನ ಮಕ್ಕಳ ಶಿಕ್ಷಣದಲ್ಲಿ ಅನುಭವ ಹೊಂದಿರಬೇಕು./ ಅಂಗವಿಕಲ ಪುನರ್ ವಸತಿ ಕಲ್ಪಸುವಲ್ಲಿ ಅನುಭವ ಹೊಂದಿರುವ ಉತ್ತಮ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳ ಪ್ರಸ್ತಾವನೆಯನ್ನು ಪರಿಗಣಿಸುವುದು.

19. ಸರ್ಕಾರೇತರ ಸಂಸ್ಥೆಗಳು ಸಮನ್ವಯ ಶಿಕ್ಷಣ ಯೋಜನೆ ಅನುಷ್ಠಾನಗೊಳಿಸುತ್ತಿರುವ ಶಾಲೆಗಳಿಗೆ ಆಗಿಂದಾಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಇತರೆ ಅಧಿಕಾರಿಗಳು ಭೇಟಿ ನೀಡಿದಾಗ ಸಂಪನ್ಮೂಲ ಶಿಕ್ಷಕರ ಕರ್ತವ್ಯ ನಿರ್ವಹಣೆ ಹಾಗೂ ಯೋಜನೆ ಅನುಷ್ಠಾನದ ಪರಿಶೀಲನೆಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಗಳನ್ನು ಒದಗಿಸತಕ್ಕದ್ದು.
20. ಉಪನಿರ್ದೇಶಕರು (ಆಡಳಿತ) ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸದರಿ ಸಮನ್ವಯ ಶಿಕ್ಷಣ ಯೋಜನೆಯ ಬಗ್ಗೆ ತಿಳುವಳಿಕೆ / ಮಾಹಿತಿಯನ್ನು ನೀಡಿ, ಯೋಜನೆ ಅನುಷ್ಠಾನಗೊಳಿಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಸೂಕ್ತ ಸಹಕಾರ / ಮಾರ್ಗದರ್ಶನ ದೊರೆಯುವಂತೆ ವ್ಯವಸ್ಥೆ ಮಾಡಲು ತಿಳಿಸಿದೆ ಹಾಗೂ ಈ ಬಗ್ಗೆ ಉಪನಿರ್ದೇಶಕರು (ಆಡಳಿತ) ಇವರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಸುತ್ತೋಲೆ ಹೊರಡಿಸಲು ತಿಳಿಸಿದೆ. ಸಮುದಾಯದತ್ತ ಶಾಲೆ, ಚಿಣ್ಣರ ಅಂಗಳ ಹಾಗೂ ಇನ್ನಿತರೆ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನ್ಯೂನತೆಯುಳ್ಳ ಮಕ್ಕಳಿಗೆ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳ ಬಗ್ಗೆ ಪರಿಚಯಿಸುವುದು ಅಗತ್ಯ.
21. ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಸರ್ಕಾರೇತರ ಸಂಸ್ಥೆಗಳು ಸಲ್ಲಿಸಿದ 2010–11ನೇ ಸಾಲಿನ ಆಯವ್ಯಯದ ಪ್ರಸ್ತಾವನೆಗಳನ್ನು ಪರಿಶೀಲಿಸಲು ತ್ರಿಸದಸ್ಯ ಸಮಿತಿ ರಚಿಸಿ ಸಂಸ್ಥೆ ಹಾಗೂ ಶಾಲೆಗಳಿಗೆ ಭೇಟಿ ನೀಡಿ, ಕೂಲಂಕಷವಾಗಿ ತಪಾಸಣೆ ಮಾಡಿ ಸ್ಪಷ್ಟ ಅಭಿಪ್ರಾಯದೊಂದಿಗೆ ಕೇಂದ್ರ ಸರ್ಕಾರ ನೀಡಿರುವ ನಮೂನೆಯಲ್ಲಿ ದೃಢೀಕರಿಸಿ ಪ್ರಸ್ತಾವನೆಯ ಒಂದು ಪ್ರತಿಯನ್ನು ಉಪನಿರ್ದೇಶಕರು (ಆಡಳಿತ) ರವರ ಕಛೇರಿಯಲ್ಲಿಯೇ ಉಳಿಸಿಕೊಂಡು ಇನ್ನೊಂದು ಪ್ರತಿಯನ್ನು ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು – ಇವರಿಗೆ ಕಳುಹಿಸಿಕೊಡಲು ಕೋರಿದೆ. ಮಾರ್ಗಸೂಚಿಯನ್ವಯ ಅರ್ಹತೆ ಇಲ್ಲದ ಪ್ರಸ್ತಾವನೆಗಳನ್ನು ನಿಮ್ಮ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ತಿರಸ್ಕರಿಸಬಹುದು. ತಪಾಸಣಾ ವರದಿಯ ಒಂದು ಪ್ರತಿಯನ್ನು ಸಂಸ್ಥೆಗೆ ನೀಡಿ, ಅವರಿಂದ 15 ದಿನಗಳೊಳಗಾಗಿ ಅನುಸರಣಾ ವರದಿಯನ್ನು ಪಡೆದು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.
22. ಸರ್ಕಾರೇತರ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಮೊದಲು ತ್ರಿಸದಸ್ಯ ಜಂಟಿ ತಂಡ ರಚಿಸಿ ಯೋಜನೆ ಅನುಷ್ಟಾನ, ಅರ್ಹತೆ ಬಗ್ಗೆ ಅನುದಾನ ಬಳಕೆ ಪರಿಶೀಲಿಸಿ. ತಪಾಸಣೆ ಮಾಡಿದ ನಂತರ ಆಯಾ ಸಾಲಿನ ಪ್ರಸ್ತಾವನೆಗಳಿಗೆ ಅನುಗುಣವಾಗಿ ಸಂಪನ್ಮೂಲ ಶಿಕ್ಷಕರ ಸಂಖ್ಯೆ ಫಲಾನುಭವಿಗಳ ಸಂಖ್ಯೆಗೆ ಹೊಂದಿಕೆಯಾಗುವ ಬಗ್ಗೆ ಖಾತರಿಪಡಿಸಿಕೊಂಡು ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದು.
23. ಜಿಲ್ಲೆಯ ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಐ.ಇ.ಆರ್.ಟಿ. ಶಿಕ್ಷಕರು (ಸಂಪನ್ಮೂಲ ಶಿಕ್ಷಕರು) ಇವರಿಗೆ ಸರ್ಕಾರೇತರ ಸಂಸ್ಥೆಯವರು ಗುರುತಿಸಿರುವಂತಹ ವಿಕಲಚೇತನ ಮಕ್ಕಳಿರುವ ಶಾಲೆಗಳನ್ನು ತಪ್ಪದೆ ಪ್ರತಿ ತಿಂಗಳು ಕಡ್ಡಾಯವಾಗಿ ಭೇಟಿ ನೀಡಿ ಅಲ್ಲಿಯ ಕಾರ್ಯವೈಖರಿ ಹಾಗೂ ಮಕ್ಕಳ ಕಲಿಕೆಯ ಬಗ್ಗೆ ಖಾತರಿ ಪಡಿಸಿಕೊಳ್ಳುವಂತೆ ಸೂಚಿಸುವುದು.
24. ಈ ವಿಶೇಷ ಶಿಕ್ಷಕರು ಸರ್ಕಾರೇತರ ಸಂಸ್ಥೆಗಳ ವತಿಯಿಂದ ನೇಮಕಗೊಂಡಿರುವುದರಿಂದ ಅವರುಗಳು ಆಯಾ ಸರ್ಕಾರೇತರ ಸಂಸ್ಥೆಗಳೊಂದಿಗೆ ವ್ಯವರಿಸತಕ್ಕದ್ದು. ಈ ಶಿಕ್ಷಕರ ಸಂಪೂರ್ಣ ಜವಾಬ್ಧಾರಿ ಸರ್ಕಾರೇತರ ಸಂಸ್ಥೆಗಳಿಗೆ ಸಂಬಂಧಿಸಿರುತ್ತದೆ. ಸರ್ಕಾರಕ್ಕೂ ಈ ಶಿಕ್ಷಕರ ನೇಮಕಾತಿಗೂ ಯಾವುದೇ ಸಂಬಂಧವಿರುವುದಿಲ್ಲ.
25. ಸರ್ಕಾರೇತರ ಸಂಸ್ಥೆಯ ಮುಖ್ಯಸ್ಥರುಗಳಿಂದ ನೇಮಕಗೊಂಡ ಸಂಪನ್ಮೂಲ ಶಿಕ್ಷಕರುಗಳು, ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಈ ಕಛೇರಿಗೆ ಅನುದಾನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಈ ಶಿಕ್ಷಕರುಗಳಿಗೆ ಎನ್.ಜಿ.ಓ. ಸಂಸ್ಥೆಯ ಮುಖ್ಯಸ್ಥರು, ವಿಕಲಾಚೇತನರನ್ನು ಗುರುತಿಸಿರುವ ಶಾಲೆಗಳಲ್ಲಿ ಸಮನ್ವಯ ಶಿಕ್ಷಣವನ್ನು ಭೋದಿಸಲು ಸಂಬಂಧಿಸಿ ಜಿಲ್ಲಾ ಉಪನಿರ್ದೇಶಕರು, ಶಾಲೆಗಳ ಮುಖ್ಯಸ್ಥರಿಗೆ ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಮಾಡಲು ಸೂಕ್ತ ತಿಳುವಳಿಕೆ ನೀಡುವುದು.
26. ಐ.ಇ.ಡಿ.ಎಸ್.ಎಸ್ ಯೋಜನೆಯ ರೂಪು ರೇಷೆಗಳಂತೆ ಫಲಾನುಭವಿಗಳಿಗೆ ಒದಗಿಸುವ ಸೌಲಭ್ಯಗಳಿಗೆ ನಿಗಧಿಗೊಳಿಸಿರುವಂತಹ ಸೌಲಭ್ಯಗಳ ವಿವರ ಈ ಕೆಳಕಂಡಂತಿರುತ್ತದೆ

| Para of Scheme | Sl.No. | Item | Provisions |
|---|---|---|---|
| | I | 14+ ನಿಂದ 18 + ವಯಸ್ಸಿನ (ತರಗತಿ 09 ರಿಂದ 12) ಅಂಗವಿಕಲ ಮಕ್ಕಳಿಗೆ ಒಂದು ಮಗುವಿಗೆ ಒಂದು ವರ್ಷಕ್ಕೆ ರೂ. 3000/– ರಂತೆ ಶಾಲೆ/ಸಂಸ್ಥೆಗೆ ಹಣವನ್ನು ನೀಡಲಾಗುವುದು. ಈ ಹಣವನ್ನು ಆಯಾ ಮಗುವಿನ ಅವಶ್ಯಕತೆಗನುಗುಣವಾಗಿ ಉಪಯೋಗಿಸುವುದು. ಬಾಬ್ತುಗಳ ವಿವರ ಈ ಕೆಳಗಿನಂತಿದೆ. | |
| 5.2.1.(i) | 1. | ವೈದ್ಯಕೀಯ ತಪಾಸಣೆ (ಹಣವನ್ನು ತಜ್ಞರ ತಂಡಕ್ಕೆ ನೀಡಲಾಗುವುದು.) | ಶೈಕ್ಷಣಿಕ ತಪಾಸಣೆಯನ್ನು ತರಗತಿ ಶಿಕ್ಷಕರು , ಸರ್ಕಾರೇತರ ಸಂಸ್ಥೆ, ವಿಶೇಷ ಶಿಕ್ಷಕರು ಮತ್ತು ಎಸ್.ಎಸ್.ಎ. ಯ ತಪಾಸಣಾ ತಂಡದ ಕಡೆಯಿಂದ ಕೈಗೊಳ್ಳುವುದು ಅವಶ್ಯಕತೆಯಿದ್ದಲ್ಲಿ. |
| 5.2.1.(iv) | 2. | ಪುಸ್ತಕ ಮತ್ತು ಲೇಖನ ಸಾಮಾಗ್ರಿಗಳ ನಿವ್ವಳ ಹಣ | ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಇಂತಹ ಯಾವುದೇ ಯೋಜನೆಗಳಿಂದ ಸೌಲಭ್ಯವನ್ನು ಪಡೆಯದೇ ಇರುವ ಅಂಗವಿಕಲ ಮಕ್ಕಳು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. |
| 5.2.1.(iv) | 3. | ಸಮವಸ್ತ್ರಕ್ಕೆ ತಗಲುವ ನಿವ್ವಳ ಹಣ | |
| 5.2.1.(iv) | 4. | ಸಾರಿಗೆ ವೆಚ್ಚ (ವಸತಿ ನಿಲಯದಲ್ಲಿ ವಾಸಿಸದೇ ಇರುವ ಮಕ್ಕಳಿಗೆ) | ವಾಹನಗಳನ್ನು ವ್ಯವಸ್ಥೆಗೊಳಿಸುವ ಶಾಲೆಗೆ ಅಥವಾ ಪೋಷಕರಿಗೆ ಈ ಹಣವನ್ನು ನೀಡಬಹುದು. |
| 5.2.1.(iv) | 5. | ರೀಡರ್ಸ್ ಭತ್ಯೆ– ದೃಷ್ಠಿ ದೋಷವುಳ್ಳ ಮಕ್ಕಳಿಗೆ ರೀಡಿಂಗ್ ಸರ್ವಿಸ್ ಕೊಡುವವರಿಗೆ ಮತ್ತು ರೀಡಿಂಗ್ ಸೇವೆಯ ಅವಶ್ಯಕತೆಯಿರುವ ಅಂಗವಿಕಲರಿಗೆ ಉಕ್ತಲೇಖಕ (ಹೇಳಿದ್ದನ್ನು ಬರೆದುಕೊಳ್ಳುವ ಅಂಗವಿಕಲ ಮಕ್ಕಳಿಗೆ) | |
| 5.2.1.(v) | 6. | ಅಂಗವಿಕಲತೆಯುಳ್ಳ ವಿದ್ಯಾರ್ಥಿನಿಯರಿಗೆ ಗೌರವ ಧನ. | ಗರಿಷ್ಟ ಮಿತಿ ಒಂದು ತಿಂಗಳಿಗೆ ರೂ. 200/– |
| 5.2.1.(iv) | 7. | ಎಸ್ಕಾರ್ಟ್ ಭತ್ಯೆ: ಮಂಡಿಯ ಕೆಳಭಾಗದ ತೀವ್ರ ಅಂಗವಿಕಲತೆಯ ಮಕ್ಕಳಿಗೆ ( ಶಾಲೆಗೆ ಕರೆತರಲು ಮನೆಯವರು ಅಥವಾ ಸಮುದಾಯದ ನೆರವು ಇಲ್ಲದವರಿಗೆ) | |
| 5.2.1.(ii) | 8. | ಸಹಾಯದ ಸಾಧನಗಳು, ಸಲಕರಣೆಗಳು, ಶೈಕ್ಷಣಿಕ ಸಾಧನಗಳು ಮತ್ತು ವೈಯಕ್ತಿಕ ಬೋಧನಾ ಕಲಿಕಾ ಸಾಮಾಗ್ರಿಯನ್ನೊಳಗೊಂಡಂತೆ ನಿವ್ವಳ ಹಣ. | |
| 5.2.1.(iv) | 9. | ಶಾಲೆಯಲ್ಲಿ ತೀವ್ರ ಅಂಗವಿಕಲ ಮಕ್ಕಳಿಗೆ 10 ಮಕ್ಕಳಿಗೆ ಒಬ್ಬ ಸಹಾಯಕರು/ಅಟೆಂಡರ್/ಆಯಾ. | |
| 5.2.1.(iv) | 10 | ಶಾಲೆಯ ವಸತಿ ನಿಲಯದಲ್ಲಿದ್ದು ಓದುತ್ತಿರುವ ಅಂಗವಿಕಲ ಮಕ್ಕಳ ಊಟ ಮತ್ತು ವಸತಿಗಾಗಿ ವೆಚ್ಚ. | |

| | | | |
|---|---|---|---|
| 5.2.1.(iv) | 11. | ಶಾಲೆಯ ವಸತಿ ನಿಲಯದಲ್ಲಿರುವ ತೀವ್ರ ದೈಹಿಕ ಅಂಗವಿಕಲ ಮಕ್ಕಳಿಗೆ ನೆರವಾಗಲು ಸಹಾಯಕರು/ಆಯಾ. | |
| 5.2.1.(vi) | 12. | ಚಿಕಿತ್ಸಾ ತಂತ್ರ (ಥೇರಾಪ್ಯುಟಿಕ್) ಸೇವೆಗಳಿಗೆ. | ಅವಶ್ಯಕತೆ ಹಾಗೂ ಸಮರ್ಥನೆಗನುಗುಣವಾಗಿ. |
| 5.2.1.(vi) | 13. | ದೋಷವುಳ್ಳವರಿಗೆ ಸ್ಕ್ರೀನ್ ರೀಡಿಂಗ್ ಸಾಫ್ಟ್‌ವೇರ್ ಗಳಾದ ಜಾಸೆ, ಸಾಫ, ಮೊದಲಾದವುಗಳ ಖರೀದಿ, ಶ್ರವಣದೋಷವುಳ್ಳವರಿಗೆ ಮಾತನ್ನು ಗುರುತಿಸಿರುವ (ಸ್ಪೀಚ್ ರೆಕಾಗ್ನಿಷನ್) ಸಾಫ್ಟ್‌ವೇರ್ ಮತ್ತು ಕಂಪ್ಯೂಟರ್ ಶಬ್ಧ ಭಂಡಾರವನ್ನು ಬೆಳಸುವ ಕಾರ್ಯಕ್ರಮಗಳು. | ಕಂಪ್ಯೂಟರ್ ಸೌಲಭ್ಯವಿದ್ದಲ್ಲಿ ಇವುಗಳ ಬೆಲೆಗನುಗುಣವಾಗಿ. |
| 5.2.1.(vii) | 14. | ಖರೀದಿ/ಬೋಧನಾ ಸಲಕರಣೆಗಳ ತಯಾರಿಕೆ | ಅವಶ್ಯಕತೆ ಹಾಗೂ ಸಮರ್ಥನೆಗನುಗುಣವಾಗಿ. |
| | II | ಇತರೆ ಬಾಬ್ತುಗಳು | |
| 5.2.II(vi) | 1. | ದೈಹಿಕ ಅಂಗವಿಕಲರನ್ನು ಹೊರತುಪಡಿಸಿ ಉಳಿದ ಅಂಗವಿಕಲತೆಗೆ ಶಾಲೆ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳ ಮಟ್ಟದಲ್ಲಿ ವಿಶೇಷ ಶಿಕ್ಷಕರನ್ನು 1:5 ರ ಅನುಪಾತದಲ್ಲಿ ನೇಮಕ. | ಸಾಮಾನ್ಯ ಶಿಕ್ಷಕರಿಗೆ ನೀಡುವ ರೀತಿಯಲ್ಲಿಯೇ ವೇತನ ಪಾವತಿ ಅದಲ್ಲದೇ ಪದವಿಯೊಂದಿಗೆ ವಿಶೇಷ ಶಿಕ್ಷಣದಲ್ಲಿ ಬಿ.ಇಡಿ. ಪದವಿಯನ್ನು ಹೊಂದಿರುವ ಸಂಪನ್ಮೂಲ ಶಿಕ್ಷಕರಿಗೆ ಮಾಸಿಕ ರೂ. 400/– ಗೌರವ ಧನ ನೀಡಿಕೆ. |
| 5.2.II(ii) | 2. | ಸಾಮಾನ್ಯ ವಿಶೇಷ ಶಿಕ್ಷಣದಲ್ಲಿ ತರಬೇತಿ ಹೊಂದಿದ್ದಲ್ಲಿ ವಿಶೇಷ ವೇತನ | ಸಾಮಾನ್ಯ ಶಿಕ್ಷಕರು (ಅಂದರೆ ಪದವಿಯೊಂದಿಗೆ ಸಾಮಾನ್ಯ ಬಿ.ಇಡಿ. ಪದವಿ ಹೊಂದಿದವರು) ಎರಡು ವರ್ಷಗಳ ವಿಶೇಷ ಡಿಪ್ಲೋಮ ಶಿಕ್ಷಣ ತರಬೇತಿ ಪಡೆದಿದ್ದಲ್ಲಿ ಅವರಿಗೂ ಮಾಸಿಕ ರೂ. 400/– ರಂತೆ ಗೌರವ ಧನ ನೀಡಿಕೆ. |
| 5.2.II(ii) | 3. | ವಿಶೇಷ ಶಿಕ್ಷಕರಿಗೆ ತರಬೇತಿ. | ರಾಷ್ಟ್ರೀಯ ಸಂಸ್ಥೆಗಳು/ಆರ್.ಸಿ.ಐ., ಅಗ್ರ ಶ್ರೇಣಿಯಲ್ಲಿರುವ ಇತರೆ ಸಂಸ್ಥೆಗಳು ಅಥವಾ ರಾಜ್ಯದ ಇನ್ನ್ಯಾವುದೇ ಸಂಸ್ಥೆಯಡಿಯಲ್ಲಿ ನಡೆಸುವ ವ್ಯವಸ್ಥಿತ ಕಾರ್ಯಕ್ರಮಗಳ ಮುಖಾಂತರ ಈ ಸಂಪನ್ಮೂಲ ಶಿಕ್ಷಕರಿಗೆ ಅಂಗವಿಕಲ ಮಕ್ಕಳ ನಿರ್ವಹಣೆ ಸಂಬಂಧಿ ಸೇವಾ ನಿರತ ತರಬೇತಿ ಸೌಲಭ್ಯ ಕಲ್ಪಿಸಬೇಕು. |
| 5.2.II(ii) | 4. | ಸಾಮಾನ್ಯ ಶಿಕ್ಷಕರ ತರಬೇತಿ | ಸಂಪನ್ಮೂಲ ಸಂಸ್ಥೆಗಳಾದ ಎನ್.ಸಿ.ಇ.ಆರ್.ಟಿ., ಎಸ್.ಸಿ.ಇ.ಆರ್.ಟಿ., ಎನ್.ಐ.ಓ.ಎಸ್, ಆರ್.ಸಿ.ಐ.,. ರಾಜ್ಯದ ಮುಕ್ತ ಶಾಲೆಗಳು ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳಾದ ಐ.ಎ.ಎಸ್.ಇ., ಸಿ.ಇ.ಟಿ. ಗಳು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗಗಳ ಸಹಯೋಗದೊಂದಿಗೆ. |

| | | | |
|---|---|---|---|
| 5.2.II(iii) | 5. | ಶೈಕ್ಷಣಿಕ ಆಡಳಿತಗಾರರು, ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ಸಾಮಾನ್ಯ ಶಿಕ್ಷಕರು/ ವಿಶೇಷ ಶಿಕ್ಷಕರು ಮತ್ತು ಅಂಗವಿಕಲ ಮಕ್ಕಳ ಪೋಷಕರಿಗೆ 05 ದಿನಗಳವರೆಗೆ ಪುನಶ್ಚೇತನ ಕಾರ್ಯಾಗಾರ. | ರಾಜ್ಯದ ನೀತಿ ನಿಯಮಾವಳಿಗಳ ಪ್ರಕಾರ. |
| 5.2.II(v) | 6. | ವಿಭಾಗೀಯ ಮಟ್ಟದ (Block level) ಸಂಪನ್ಮೂಲ ಕೊಠಡಿಯ ನಿರ್ಮಾಣ, ಒಂದು ಸಂಪನ್ಮೂಲ ಕೊಠಡಿಗೆ ರೂ. 2 ಲಕ್ಷಗಳಂತೆ 5000 ಬ್ಲಾಕ್ ಗಳಿಗೆ. | ಸಾಧ್ಯವಾದಷ್ಟು ಪ್ರಸ್ತುತ ಇರುವಂತಹ ಬ್ಲಾಕ್ ರಿಸೋರ್ಸ ಸೆಂಟರ್ (ಬಿ.ಆರ್.ಸಿ) , ಕ್ಲಸ್ಟರ್ ರಿಸೋರ್ಸ ಸೆಂಟರ್ (ಸಿ.ಆರ್.ಸಿ) ಉಪಯೋಗ ಮಾಡುವುದು. |
| 5.2.II(v) | 7. | ಬ್ಲಾಕ್ ಮಟ್ಟದ ಸಂಪನ್ಮೂಲ ಕೊಠಡಿಗೆ ಸಲಕರಣೆಗಳು. (ಅವಶ್ಯಕತೆ ಮತ್ತು ಅಫೆಂಡಿಕ್ಸ್ 2 ರಲ್ಲಿ ಲಗತ್ತಿಸಿದ ಪಟ್ಟಿಯ ಅನ್ವಯ) ಒಂದು ಸಂಪನ್ಮೂಲ ಕೊಠಡಿಗೆ ರೂ.70,000/- ಗಳಂತೆ 6000 ಬ್ಲಾಕ್ ಗಳಿಗೆ | ವಿಶೇಷ ಶಾಲೆಗಳ ಸಂಪನ್ಮೂಲ ಕೇಂದ್ರಗಳನ್ನು ಉಪಯೋಗಿಸುತ್ತಿರುವ ಸಂಯೋಜಿತ ಶಾಲೆಗಳು (Inclusive schools) ಅಥವಾ ಸರ್ಕಾರೇತರ ಸಂಸ್ಥೆಗಳ ಸಂಪನ್ಮೂಲ ನೆರವನ್ನು ಉಪಯೋಗಿಸುವಲ್ಲಿ ಟೋಕನ್ ಹಣವನ್ನು ನೀಡುವ ವ್ಯವಸ್ಥೆ. |
| 5.2.II(i) | 8. | ಪ್ರಸ್ತುತ ಶಾಲೆಗಳಲ್ಲಿ ವಾಸ್ತು ಶಿಲ್ಪದ ಅಡೆ ತಡೆಗಳನ್ನು ನಿವಾರಿಸಲು ಅನುದಾನ. | ಅಂಗವಿಕಲ ಮಕ್ಕಳು ದಾಖಲಾಗಿರುವ ಸದ್ಯದ ಶಾಲೆಗಳಿಗೆ ಈ ಉದ್ದೇಶಕ್ಕಾಗಿ ಅನುದಾನದ ವ್ಯವಸ್ಥೆಯಿದೆ. ಹೊಸ ಶಾಲೆಗಳಿಗೆ ಸಾರ್ವತ್ರಿಕ ವಿನ್ಯಾಸಕ್ಕಾಗಿ ಬೇರೆ ಕಾರ್ಯಕ್ರಮದಡಿಯಲ್ಲಿ ಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ವೆಚ್ಚವನ್ನು ವ್ಯವಸ್ಥೆಗೊಳಿಸಲಾಗಿದೆ. (ಅಂದಾಜು ಮಾಡಲ್ಪಟ್ಟ ವೆಚ್ಚಕಿಂತ ಶೇ 1 ರಷ್ಟು ಹೆಚ್ಚಳ.) |
| 5.2.II(iv) | 9. | ತರಬೇತಿ ಸಂಸ್ಥೆಗಳನ್ನು ಬಲಪಡಿಸುವ ಮತ್ತು ಪ್ರಸ್ತುತ ಸಂಸ್ಥೆಗಳಿಗೆ ಸಹಾಯ ಮಾಡುವುದು./ ಸರ್ಕಾರೇತರ ಸಂಸ್ಥೆಗಳು ಶಿಕ್ಷಕರ ತರಬೇತಿ ಕಾರ್ಯವನ್ನು ಸಂಯೋಜಿತ ಶಾಲೆಗಳಲ್ಲಿ ಹಮ್ಮಿಕೊಳ್ಳುವುದು. ಹಾಗೂ ನಿರ್ಧಿಷ್ಟ ನ್ಯೂನತೆಗನುಸಾರ ಶೈಕ್ಷಣಿಕ ಮಧ್ಯ ಪ್ರವೇಶಿಕೆಗಳನ್ನು ಹಮ್ಮಿಕೊಳ್ಳುವುದು. | ಸಲಕರಣೆಗಳ ಖರೀದಿ ಹಾಗೂ ಪಡೆಯುವಿಕೆಯೊಂದಿಗೆ ಬೋಧನಾ ಸಲಕರಣೆಗಳ ತಯಾರಿಕೆಗೆ ಬೇಕಾದ ಬಂಡವಾಳವನ್ನು ಇದರ ವ್ಯಾಪ್ತಿಗೆ ಒಳಪಡಿಸುವುದು. |
| 5.2.II(vii) | 10. | ಮಾದರಿ ಸಂಯೋಜಿತ ಶಾಲೆಗಳ ಅಭಿವೃದ್ದಿ ಐ.ಸಿ.ಟಿ. ನಿರ್ವಹಣೆ (Monitoring) ಮತ್ತು ಮೌಲ್ಯ ಮಾಪನ ಮುಂತಾದ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಕಲ್ಪಗಳು (Projects) | ಕೇಂದ್ರದ ಶೇಕಡ 5 ಭಾಗದಷ್ಟು ಫಂಡನ್ನು ಇನ್ನೊವೇಟಿವ್ ಮತ್ತು ಆರ್.&ಡಿ ಪ್ರಕಲ್ಪ (Projects) ಗಳಿಗೆ ಮೀಸಲಿಡಲಾಗಿದೆ. ಮಾದರಿ ಶಾಲೆಗಳನ್ನು ಪ್ರಾರಂಭಿಸಲು ರೂ.05 ಲಕ್ಷದವರೆಗೆ ನೆರವನ್ನು ನೀಡಲಾಗುವುದು. |
| 5.2.II(ix) | 11. | ಪರಿಸರ ನಿರ್ಮಾಣ ಕಾರ್ಯಕ್ರಮಗಳು<br>ಕಾರ್ಯಕ್ರಮವೊಂದಕ್ಕೆ ಸ್ಥಳೀಯ ಮಟ್ಟದಲ್ಲಿ ರೂ. 10000/- ದವರೆಗೆ | |
| ಈ ಹಂತದಲ್ಲಿ ಕಂಡು ಬರುವ ಇನ್ನಿತರೇ ಅವಶ್ಯಕತೆ ಆಧಾರಿತ ಅಪೇಕ್ಷಗಳು /ಅಗತ್ಯಗಳು | | | |

<u>ಅಪೆಂಡಿಕ್ಸ್ II</u>

ಅಂಗವಿಕಲತೆಗನುಗುಣವಾಗಿ ಸಂಪನ್ಮೂಲ ಕೊಠಡಿಗೆ ಅವಶ್ಯಕವಾದ ಉಪಕರಣಗಳು ಮತ್ತು ವಸ್ತುಗಳ ಪಟ್ಟಿ.

ಸಾಧನ ಸಲಕರಣೆಗಳು:

| ಅಂಗವಿಕಲತೆ | ವ್ಯಕ್ತಿಗಳು | ಶಾಲೆಯಲ್ಲಿ ಹಂಚಿಕೊಳ್ಳುವುದು | ಶಾಲೆಗಳ ಮಧ್ಯೆ ಹಂಚಿಕೊಳ್ಳುವುದು. | ಬೋಧನಾ ಸಲಕರಣೆಗಳು |
|---|---|---|---|---|
| ದೈಹಿಕ ಅಂಗವಿಕಲತೆ | ಹೊಂದಾಣಿಕೆ ಮಾಡಿಕೊಳ್ಳಬಹುದಾದ ಪೀಠೋಪಕರಣೆಗಳು, ವಿಶೇಷ ಬರವಣಿಗೆ, ದಪ್ಪ ಪೆನ್ನುಗಳು ಇತ್ಯಾದಿ | ಹೊಂದಾಣಿಕೆ ಮಾಡಿಕೊಳ್ಳವ ಪೀಠೋಪಕರಣೆಗಳು, ಸುಧಾರಿತ ಚಿಕಿತ್ಸಾತ್ಮಕ ಸಾಧನ ಸಲಕರಣೆಗಳ ತಯಾರಿಕೆಗೆ ಅವಕಾಶ. | | |
| ದೃಷ್ಠಿ ನ್ಯೂನತೆ ಹಾಗೂ ಅಂಧತ್ವ | ಬ್ರೈಲ್ ಸ್ಲೇಟು ಮತ್ತು ಸ್ಟೈಲಸ್, ಅಬ್ಯಾಕಸ್, ಟೇಯ್ಲರ್ ಪ್ರೇಂ, ಮೊಬಿಲಿಟಿ ಕೇನ್, ಇತ್ಯಾದಿ. | ಬ್ರೈಲರ್, ಅಬ್ಯಾಕಸ್, ಟೇಯ್ಲರ್ ಫ್ರೇಂ, ಕ್ಯಾಸೆಟ್‌ಗಳು ಮತ್ತು ಶ್ರವಣ ಪುಸ್ತಕ/ ಮಾತನಾಡುವ ಪುಸ್ತಕಗಳು, ಭೂಪಟಗಳು, ಮನೋರಂಜನಾತ್ಮಕ ವಸ್ತುಗಳು ಇತ್ಯಾದಿ. | ಬ್ರೆಲ್ ಹಾಳೆಗಳು, ಥರ್ಮಫಾರಂ ಮಿಷನ್, ಬ್ರೈಯಲಾನ್ ಇಂದೂ ,ಬ್ರೈಯಲಾನ್ ಸೇವೆಗಳ ನಿರ್ವಹಣೆ, ಮನೋಹರಾತ್ಮಕ ಉಬ್ಬು ವಸ್ತುಗಳು, | ಬ್ರೈಲ್ ಪುಸ್ತಕಗಳು, ಕ್ಯಾಸೆಟ್ ಗಳು ಮತ್ತು ಆಡಿಯೋ ಪುಸ್ತಕಗಳು, ಕಲಿಕೆ ,ಅಭಿವೃದ್ಧಿ, ಪರಿಕಲ್ಪನೆಗಳು ಮತ್ತು ಕೌಶಲ್ಯಗಳ ವರ್ಧನೆಗೆ ಕಂಪ್ಯೂಟರ್ ಮತ್ತು ಕಾರ್ಯಕ್ರಮಗಳು. |
| ಪಾರ್ಶ್ವದೃಷ್ಠಿ ಮತ್ತು ಅಲ್ಪ ದೃಷ್ಠಿ ಮಕ್ಕಳಿಗೆ | ವಿಶೇಷ ಅಳವಡಿಕೆ ಸಲಕರಣೆಗಳಾದ ಹ್ಯಾಂಡ್ ಮ್ಯಾಗ್ನಿಫೈಯರ್ ಗಳನ್ನು ಕನ್ನಡಕದೊಂದಿಗೆ ಉಪಯೋಗಿಸುವುದು. ಸಾಧ್ಯಾವುವಂತಹ ರೀಡಿಂಗ್ ಲ್ಯಾಂಪ್‌ಗಳು | ವಿಶೇಷವಾಗಿ ಯೋಜಿಸಲಾದ ಡೆಸ್ಕ್‌ಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದಾದ ಮ್ಯಾಗ್ನಿ ಫೈಯರ್‌ಗಳು | ಲಾರ್ಜ್ ಪ್ರಿಂಟ್ ಮೆಟೀರಿಯಲ್ ಗಳನ್ನು ತಯಾರಿಸಲು ವಿಶೇಷ ವ್ಯವಸ್ಥೆ. | ಲಾರ್ಜ್ ಪ್ರಿಂಟ್ ಮೆಟೀರಿಯಲ್‌ಗಳು |
| ಶ್ರವಣ ನ್ಯೂನತೆ | ವೈಯಕ್ತಿಕ ಶ್ರವಣೋಪಕರಣ | ಧ್ವನಿ ತರಬೇತಿ ಯಂತ್ರ ಶ್ರವಣ ಮಾಪಕ ಯಂತ್ರ, ವಾಕ್ ಶ್ರವಣ ತರಬೇತಿಗಾಗಿ ತರಬೇತಿ ಕೊಡುವವರು ನಿರ್ವಹಿಸಬೇಕಾದ 3X6 ಅಳತೆಯ ಕನ್ನಡಿ, ತರಗತಿಯಲ್ಲಿ 10 X6 ಅಳತೆಯ ದೊಡ್ಡ ಕನ್ನಡಿ , ಸಾಮೂಹಿಕ ಶ್ರವಣೋಪಕರಣ, ಶ್ರವಣೋಪಕರಣಕ್ಕಾಗಿ ಬೇಕಾದ ಸೆಲ್‌ಗಳು. | | ವಿಶೇಷಕಲಿಕಾ ಸಾಮಾಗ್ರಿಗಳಾದ ಮಿಂಚು ಪಟ್ಟಿಗಳು, ಶೈಕ್ಷಣಿಕ ಆಟಗಳು, ತರಗತಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಹ್ಯಾಂಡೌಟ್‌ಗಳು (ಬೋಧನೋಪಕರಣಗಳು) |
| ಬುದ್ಧಿ ಮಾಂಧ್ಯತೆ | | ಮಾರಿಯಾ ಮಾಂಟೆಸರಿ ಕಿಟ್ ಆಧರಿಸಿ ತಯಾರಿಸಿದ ಜ್ಞಾನೇಂದ್ರಿಯ ಉಪಕರಣಗಳು ಮತ್ತು ಕಿಟ್‌ಗಳು, ಅಥವಾ ಎಸ್.ಸಿ.ಇ.ಆರ್.ಟಿ. ಯವರು ಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸದ ಕಾರ್ಯಕ್ರಮಕ್ಕಾಗಿ ತಯಾರಿಸಿದ್ದು, ಸಾಮಾನ್ಯ ಮಟ್ಟಕಿಂತ ಕೆಳಮಟ್ಟಕಿಂತ ಕೆಳಮಟ್ಟದಲ್ಲಿ ಬರೆದಂತಹ ಓದುಗಾರಿಕೆ ವಸ್ತುಗಳು | | |

ಐ.ಇ.ಡಿ.ಎಸ್.ಎಸ್. ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ http:/education.nic.in/secedu/sec_iedc.asp, ಸಂಪರ್ಕಿಸಬಹುದು.

(ಮೀರ್ ಉಬೇದುಲ್ಲಾ)
ನಿರ್ದೇಶಕರು

ವಿಶೇಷ ಸೂಚನೆ: ಸರ್ಕಾರೇತರ ಸಂಸ್ಥೆಗಳ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಮೇಲ್ಕಂಡ ಅಂಶಗಳನ್ನು ಚಾಚೂ ತಪ್ಪದೇ ಅನುಸರಿಸತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು. ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿದ್ದರೆ ಅಂತಹ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಉಪ ನಿರ್ದೇಶಕರು ಶಿಫಾರಸ್ಸು ಮಾಡುವುದು.

ಪ್ರತಿಯನ್ನು :

1. ಗೌರವ ಪೂರ್ವಕವಾಗಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಗೌರವ ಪೂರ್ವಕವಾಗಿ ವಿಶೇಷಾಧಿಕಾರಿಗಳು ಹಾಗೂ ಸರ್ಕಾರದ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಯೋಜನೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ನಿರ್ದೇಶಕರು, ಪ್ರಾಥಮಿಕ/ಪ್ರೌಢಶಿಕ್ಷಣ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–01. ರವರಿಗೆ ಮಾಹಿತಿಗಾಗಿ.
4. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು –01. ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, 100 ಅಡಿ ರಸ್ತೆ, ಹೊಸಕೇರಹಳ್ಳಿ, ಬೆಂಗಳೂರು.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಮಾಹಿತಿಗಾಗಿ.
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಮಾಹಿತಿಗಾಗಿ.
10. ಸಮನ್ವಯ ಶಿಕ್ಷಣ ಯೋಜನೆ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಸರ್ಕಾರೇತರ ಸಂಸ್ಥೆಗಳ ಅಧ್ಯಕ್ಷಕರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ.
11. ಕಡತ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 142 ಯೋಯೋಕ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21–02–2009.

**: ಸುತ್ತೋಲೆ :**

ವಿಷಯ : ಕಲಿಕೆಯಲ್ಲಿ ನ್ಯೂನತೆಯಿರುವ ಡಿಸ್‌ಲೆಕ್ಷಿಯಾ ಇರುವ ಮಕ್ಕಳಿಗೆ
ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ.
ಉಲ್ಲೇಖ : ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 03 ಯೋಯೋಕ 2007,
ದಿನಾಂಕ: 21–01–2008.

* * * * *

ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಪರೀಕ್ಷಾ ಮಂಡಳಿಯು ನಡೆಸುತ್ತಿರುವ 10ನೇ ತರಗತಿಯ ಪರೀಕ್ಷೆಯಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯವನ್ನು 1 ರಿಂದ 10ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಮತ್ತು ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಕಿವುಡು ಮತ್ತು ಮೂಗ, ಕಲಿಕಾ ನ್ಯೂನತೆ ಮತ್ತು ಬುದ್ಧಿ ಮಾಂದ್ಯ ಮಕ್ಕಳಿಗೆ ನೀಡಲು ಸೂಚಿಸಲಾಗಿದೆ.

ಮುಂದುವರೆದು, ಕಲಿಕೆಯಲ್ಲಿ ನ್ಯೂನತೆಯಿರುವ, ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಷಿಯಾ ಮಕ್ಕಳಿಗೆ 1 ರಿಂದ 10 ತರಗತಿಯವರೆಗೆ ನಡೆಯುವ ಎಲ್ಲಾ ಪರೀಕ್ಷೆಗಳಲ್ಲಿ
ಪರೀಕ್ಷಾ ಸಂದರ್ಭದಲ್ಲಿ ಸರಳ ಕಲನ (calculator) ಯಂತ್ರಗಳನ್ನು (ಕ್ಯಾಲ್ಯುಕ್ಯುಲೇಟರ್ಸ್) ತಂದಲ್ಲಿ ಉಪಯೋಗಿಸಲು ಅನುಮತಿ ನೀಡುವುದು.

ಇಂತಹ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಒದಗಿಸುವುದು.

- ನಾಮಪದಗಳು, ಸರ್ವನಾಮಗಳು, ನಿರ್ದಿಷ್ಟ ನಾಮಪದಗಳನ್ನು (ಪ್ರಾಪರ್‌ನೌನ್ಸ್) ಹೊರತುಪಡಿಸಿ ಇಂತಹ ಮಕ್ಕಳು ಮಾಡುವ ಸಣ್ಣ ಪುಟ್ಟ ಉಚ್ಛಾರಣಾ ದೋಷಗಳನ್ನು ಪರಿಗಣಿಸರಿರುವಂತೆ ಮೌಲ್ಯಮಾಪಕರಿಗೆ ಸೂಚನೆಗಳನ್ನು ನೀಡುವುದು.

ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ 1 ರಿಂದ 9ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಡಿಸ್‌ಲೆಕ್ಷಿಯಾ ವಿದ್ಯಾರ್ಥಿಗಳಿಗೆ, ಮೌಖಿಕ ಮತ್ತು ಲಿಖಿತ ಪರೀಕ್ಷೆಯಲ್ಲಿ ಈ ಕೆಳಕಂಡಂತೆ ಅಂಕ ಪ್ರಮಾಣ ನೀಡತಕ್ಕದ್ದು.

| ಹಂತ | ಗುರುತ್ವ (Weightage) | |
|---|---|---|
| | ಮೌಖಿಕ ಪರೀಕ್ಷೆ | ಲಿಖಿತ ಪರೀಕ್ಷೆ |
| ತರಗತಿ 1 ಮತ್ತು 2 | 100 | – |
| ತರಗತಿ 3 ಮತ್ತು 4 | 75 | 25 |
| ತರಗತಿ 5, 6 ಮತ್ತು 7 | 50 | 50 |
| ತರಗತಿ 8 ಮತ್ತು 9 | 30 | 70 |

ಸಹಿ/–

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,
ಶಿಕ್ಷಣ ಇಲಾಖೆ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 142 ಯೋಯೋಕ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 06–07–2009.

**: ಸುತ್ತೋಲೆ :**

ವಿಷಯ : ಕಲಿಕೆಯಲ್ಲಿ ನ್ಯೂನತೆಯಿರುವ ಡಿಸ್‌ಲೆಕ್ಷಿಯಾ ಇರುವ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 32 ಯೋಯೋಕ 2007, ದಿನಾಂಕ: 21–01–2008.
2. ಸಮಸಂಖ್ಯೆ: ಸುತ್ತೋಲೆ, ದಿನಾಂಕ: 21–02–2009.

* * *

ಉಲ್ಲೇಖಿತ ಸುತ್ತೋಲೆಯಲ್ಲಿ ಪರೀಕ್ಷಾ ಮಂಡಳಿಯವರು ನಡೆಸುತ್ತಿರುವ 10ನೇ ತರಗತಿಯ ಪರೀಕ್ಷೆಯಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯವನ್ನು, 1 ರಿಂದ 10ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಮತ್ತು ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಮೂಗ, ಕಲಿಕಾ ನ್ಯೂನತೆ ಮತ್ತು ಬುದ್ಧಿ ಮಾಂದ್ಯ ಮಕ್ಕಳಿಗೆ ನೀಡಲು ಸೂಚಿಸಲಾಗಿದೆ.

ಮುಂದುವರೆದು, ಕಲಿಕೆಯಲ್ಲಿ ನ್ಯೂನತೆಯಿರುವ, ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಷಿಯಾ ಮಕ್ಕಳಿಗೆ, 1 ರಿಂದ 10 ತರಗತಿಯವರೆಗೆ ನಡೆಯುವ ಎಲ್ಲಾ ಪರೀಕ್ಷೆಗಳಲ್ಲಿ ಸರಳ ಕಲನ (calculator) ಉಪಯೋಗಿಸಲು, ಸಹಾಯಕರನ್ನು ಒದಗಿಸಲು ಅನುಮತಿ ಹಾಘೂ ಸಣ್ಣಪುಟ್ಟ ದೋಷಗಳನ್ನು ಪರಿಗಣಿಸದಿರುವಂತೆ ಸೂಚಿಸಲಾಗಿದೆ.

ಮುಂದುವರೆದು, ಈ ಕೆಳಕಂಡ ಕಲಿಕೆಯಲ್ಲಿ ನ್ಯೂನತೆಯಿರುವ ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಷಿಯಾ ಮಕ್ಕಳಿಗೆ ವಿಶೇಷ ಸೌಲಭ್ಯ ದೃಢೀಕರಣ ನೀಡುವಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು.

1. ಕಲಿಕೆಯಲ್ಲಿ ನ್ಯೂನತೆಯಿರುವ ವಿದ್ಯಾರ್ಥಿಗಳು ಕೆಳಕಂಡ ಸಂಸ್ಥೆಗಳು ದೃಢೀಕರಿಸಿದಲ್ಲಿ ಅದನ್ನು ಪರಿಗಣಿಸುವುದು.
    - ನಿಮ್ಹಾನ್ಸ್.
    - ಅಖಿಲ ಭಾರತ ದೃಕ್ – ಶ್ರವಣ ಸಂಸ್ಥೆ ಮೈಸೂರು.
    - ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರರು ನೀಡುವ ಪ್ರಮಾಣ ಪತ್ರ.
    - ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆಯನ್ನು ಹೊಂದಿರುವ ಕ್ಲಿನಿಕಲ್ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇರದ ಸರ್ಕಾರಿ ವೈದ್ಯರು ದೃಢೀಕರಿಸಿದ ಪ್ರಮಾಣ ಪತ್ರ.
    - ಮಲ್ಲೇಶ್ವರಂ ಡಿಸ್‌ಲೆಕ್ಷಿಯಾ ಅಸೋಸಿಯೇಷನ್ (ರಿ) ನಂ. 103, ಶರ್ನಾಗ್ ಅಪಾರ್ಟ್‌ಮೆಂಟ್, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55 ರವರು ನೀಡುವ ಪ್ರಮಾಣ ಪತ್ರ.
2. ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಡಿಸ್‌ಲೆಕ್ಷಿಯಾ / ಸ್ಪ್ಯಾಸ್ಟಿಕ್ ಎಂದು ಮುದ್ರಿಸಿ ನೀಡುವ ಬದಲು ಅಭ್ಯರ್ಥಿಗೆ ಇರುವ ಕಲಿಕಾ ನ್ಯೂನತೆ ದೋಷವನ್ನು ಮಾತ್ರ (Specific Learning Disability)

ಎಂದು ಮುದ್ರಿಸಿ ನೀಡುವುದು. ಈ ಸೌಲಭ್ಯವನ್ನು ಪಡೆಯಲು ವಿದ್ಯಾರ್ಥಿಗಳ ಇರುವ ಕಲಿಕಾ ನ್ಯೂನತೆ ದೋಷದ (Specific Learning Disability) ಪ್ರಮಾಣ ಪತ್ರಗಳನ್ನು 2009 – 10ರ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಈ ಸುತ್ತೋಲೆಯನ್ನು ಹೊರಡಿಸಿದ ಒಂದು ತಿಂಗಳೊಳಗೆ 9 ಅಥವಾ 10ನೇ ತರಗತಿ ವಿದ್ಯಾರ್ಥಿಗಳು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಮೂಲಕ ಸಲ್ಲಿಸತಕ್ಕದ್ದು. ಮುಂದಿನ ಶೈಕ್ಷಣಿಕ ವರ್ಷದಿಂದ 9ನೇ ತರಗತಿಯ ಪ್ರಾರಂಭದ ದಿನದಲ್ಲಿಯೇ ನೀಡುವುದು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಅದಕ್ಕೆ ಲಗತ್ತಿಸಿ ಕಳುಹಿಸುವುದು. ಆದರೆ 2009ರ ಮಾರ್ಚ್ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಅಂಕಪಟ್ಟಿಗಳು ಈಗಾಗಲೇ ವಿತರಣೆಯಾಗಿದ್ದು, ಅಂಕಪಟ್ಟಿಯ ಮೇಲೆ ಡಿಸ್‌ಲೆಕ್ಷಿಯಾ / ಸ್ಪ್ಯಾಸ್ಟಿಕ್ ಎಂದು ನಮೂದಿಸಲಾಗಿದೆ. ವಿದ್ಯಾರ್ಥಿಗಳು / ಪೋಷಕರು (Specific Learning Disability) ಎಂದು ಮರು ಮುದ್ರಿಸಿಕೊಡಲು ಶಾಲೆ ಮುಖಾಂತರ ಮಂಡಳಿಯನ್ನು ರೂ. 200–00 ಗಳ ಶುಲ್ಕದೊಂದಿಗೆ ಮೂಲ ಪ್ರಮಾಣ ಪತ್ರವನ್ನು ಮಂಡಳಿಗೆ ಹಿಂದಿರುಗಿಸಿದಲ್ಲಿ ಅಂತಹವರಿಗೆ (Specific Learning Disability) ಎಂದು ಮುದ್ರಿಸಿ ಪರಿಷ್ಕೃತ ಪ್ರಮಾಣ ಪತ್ರವನ್ನು ನೀಡುವುದು.

3. ದೃಷ್ಟಿಮಾಂದ್ಯ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನದ ಬದಲು ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ, ಭಾರತೀಯ ಅರ್ಥಶಾಸ್ತ್ರ, ಭಾರತೀಯ ಸಮಾಜ ಶಾಸ್ತ್ರ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಇವುಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ತೆಗೆದುಕೊಂಡು ಪರೀಕ್ಷೆ ಬರೆಯಲು ಅನುಮತಿಸಲಾಗಿದೆ. ಈ ಸೌಲಭ್ಯವನ್ನು ಕಲಿಕಾ ನ್ಯೂನತೆ ಇರುವ ಮಕ್ಕಳಿಗೂ ಸಹ ವಿಸ್ತರಿಸಲಗಿದೆ.

ಸಹಿ/–
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲ ಮಕ್ಕಳಿಗೆ ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ: ಸಕಕಾ 79 ಪಿಹೆಚ್‌ಪಿ 78 ದಿ: 16:18–1–78
2) ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿ: 30–06–92
3) ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರ ಪತ್ರದ ಸಂ: ನಿಅಕಿ:ಭಾವಿ:93–04/2000 ದಿನಾಂಕ: 17–12–99.

ಪ್ರಸ್ತಾವನೆ:–

ಮೇಲೆ ಓದಲಾದ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ, ಮಾನ್ಯತೆ ಪಡೆದ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕೆಯಲ್ಲಿ ತೊಂದರೆಯಿರುವ ಮಕ್ಕಳು ಅಂದರೆ, ಲರ್ನಿಂಗ್ ಡಿಸೆಬಿಲಿಟಿ ಇರುವವರಿಗೆ ಅಲ್ಲದೆ, ಬುದ್ಧಿಮಾಂದ್ಯ ಮಕ್ಕಳಿಗೂ ಸಹ ಎಲ್ಲಾ ಹಂತಗಳಲ್ಲಿ ಒಂದೇ ಒಂದು ಭಾಷೆಯನ್ನು ಕಲಿಯಲು ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗಳ ಅಭ್ಯಾಸದಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಕೆಲವು ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಇಂತಹ ಮಕ್ಕಳು ಮೊದಲನೆ ಭಾಷೆ ಸಹ ಕಲಿಯಬೇಕಾಗಿದ್ದು, ಎರಡೂ ಭಾಷೆಗಳನ್ನು ಕಲಿಯಲು ಸಾಧ್ಯವಾಗದೇ ತೊಂದರೆಯಾಗುತ್ತಿರುವುದಿರಂದ ದ್ವಿತೀಯ, ತೃತೀಯ ಭಾಷೆ ಎಂದು ನಿರ್ಬಂಧಪಡಿಸದೇ ಶಿಕ್ಷಣ ಮಾಧ್ಯಮ ಭಾಷೆಯನ್ನು ಮಾತ್ರ ಕಲಿಯಲು ಅವಕಾಶ ನೀಡುವಂತೆ ನಿರ್ದೇಶಕರು, ಮೇಲೆ ಓದಲಾದ (3) ರ ಪತ್ರದಲ್ಲಿ ಕೋರಿರುತ್ತಾರೆ.

ಈ ಬಗ್ಗೆ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ಮೇಲೆ ಸೂಚಿಸಿರುವ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಹೊರೆಯಾಗದಿರುವುದು ಅಗತ್ಯವಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂ: ಮಮ 65 ಪಿಹೆಚ್‌ಪಿ 2000, ಬೆಂಗಳೂರು, ದಿನಾಂಕ: 10–03–2000 ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿನಾಂಕ:: 30–06–92 ರ ಆದೇಶವನ್ನು ಮಾರ್ಪಡಿಸಿ, ಮಾನ್ಯತೆ ಪಡೆದ ಶಾಲೆಯಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಶಿಕ್ಷಣ ಮಾಧ್ಯಮ ಭಾಷೆಯೊಂದನ್ನು ಮಾತ್ರ ಕಲಿಯಲು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–

ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

## **ಶಾಲಾ ಸಂದರ್ಶನದ ನಮೂನೆ**

- ✓ ಶಾಲೆಯ ಹೆಸರು/ವಿಳಾಸ :
- ✓ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು:
- ✓ ಸಂದರ್ಶನದ ದಿನಾಂಕ:

| | |
|---|---|
| * ಹಿಂದಿನ ಸಂದರ್ಶನದ ಅವಧಿಯಲ್ಲಿ ನೀಡಿದ ಸಲಹೆಗಳ ಅನುಪಾಲನೆಯ ವಿವರ ಹಾಗೂ ನೀಡಿದ ಸಲಹೆ. | |
| * ಶಾಲೆಯ ಆವರಣ, ತರಗತಿ ಕೋಣೆಗಳು, ಕುಡಿಯುವ ನೀರು, ಶೌಚಾಲಯ; ಅಡುಗೆಕೋಣೆ ಇವುಗಳ ಸ್ವಚ್ಛತೆ ಮತ್ತು ಬಳಕೆಯ ಕುರಿತು | |
| * ಶಾಲೆಯಲ್ಲಿ ಇರುವ ಸೌಲಭ್ಯಗಳಾದ ಗ್ರಂಥಾಲಯ, ಗಣಕ ಯಂತ್ರಗಳು, ಟಿವಿ, ರೇಡಿಯೋ, ವಿಜ್ಞಾನ ಉಪಕರಣಗಳು, ಕ್ರೀಡೆ ಮತ್ತು ಸಂಗೀತಕ್ಕೆ ಸಂಬಂಧಿಸಿದ ಉಪಕರಣಗಳ ಸುಸ್ಥಿತಿ ಮತ್ತು ಬಳಕೆಯ ಕುರಿತು. | |
| * ಶಾಲಾ ಹಂತದಲ್ಲಿ ಮತ್ತು ಕ್ಲಸ್ಟರ್ ಹಂತದಲ್ಲಿ ಸಹಪಠ್ಯ ಚಟುವಟಿಕೆಯ ಸಂಘಟನೆ ಮತ್ತು ಭಾಗವಹಿಸುವಿಕೆ ಕುರಿತು | |
| * ಮಕ್ಕಳ ದಾಖಲಾತಿ; ಹಾಜರಾತಿ, ಮಕ್ಕಳ ಕಲಿಕೆ, ಗೈರುಹಾಜರಿ ಮತ್ತು ಈ ಕುರಿತು ಅಧ್ಯಾಪಕರು ಮತ್ತು ಎಸ್.ಡಿ.ಎಂ.ಸಿ.ಯವರು ಕೈಗೊಂಡಿರುವ ಕ್ರಮಗಳು. ಅಧ್ಯಾಪಕರ ಹಾಜರಾತಿ ಕುರಿತು ಎಸ್‌ಡಿಎಂಸಿಯವರು ನಡೆಸಿದ ಕ್ರಮಗಳು. | |
| * ಫ್ಲಾನೆಲ್ ಬೋರ್ಡ್; ತರಗತಿಗೊಂದು ಕಿರುಹೊತ್ತಿಗೆ, ಮಕ್ಕಳ ಅಭಿವ್ಯಕ್ತಿಗೆ ಕಲ್ಪಿಸಿರುವ ಅವಕಾಶಗಳ ಅವಲೋಕನ / ಹಿಮ್ಮಾಹಿತಿ | |
| * ಅಧ್ಯಾಪಕರು/ವಿದ್ಯಾರ್ಥಿಗಳು ತಯಾರಿಸಿರುವ ಕಲಿಕಾ–ಬೋಧನಾ ಸಾಮಾಗ್ರಿಗಳು ಮತ್ತು ಅವುಗಳ ಬಳಕೆ | |
| * ಮುಖ್ಯೋಪಾಧ್ಯಾಯರು ನಡೆಸುತ್ತಿರುವ ಶೈಕ್ಷಣಿಕ ಮೇಲ್ವಿಚಾರಣೆ: (ವ್ಯವಸ್ಥೆಯ ಏಣಿ–ಶ್ರೇಣಿಯಲ್ಲಿನ ಹಿರಿಯ ಅಧಿಕಾರಿ / ಮೇಲ್ವಿಚಾರಕರು ಈ ಮಾಹಿತಿಯನ್ನು ಅವಲೋಕಿಸಿ ಹಿಮ್ಮಾಹಿತಿ ನೀಡಬೇಕು.) | |
| ✓ ಸಹೋಪಾಧ್ಯಾಯರ ತರಗತಿ ಸಿದ್ಧತೆ | |
| ✓ ಸಹೋಪಾಧ್ಯಾಯರು ನಡೆಸುತ್ತಿರುವ ಮೌಲ್ಯಮಾಪನ ಮತ್ತು ನೀಡುತ್ತಿರುವ ಹಿಮ್ಮಾಹಿತಿ. | |
| ✓ ತಿಂಗಳಿಗೊಮ್ಮೆ ಎಲ್ಲಾ ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿ ಪರಿಶೀಲನೆ ಮತ್ತು | |

| | |
|---|---|
| ನೀಡಲಾದ ಹಿಮ್ಮಾಹಿತಿ | |
| ✓ ತಿಂಗಳಿಗೊಮ್ಮೆ ಅಧ್ಯಾಪಕರ ಪಾಠ ವೀಕ್ಷಣೆ ಮಾಡಿ ನೀಡಿದ ಹಿಮ್ಮಾಹಿತಿ | |
| ✓ ತಿಂಗಳಿಗೊಮ್ಮೆ ನಡೆಸಲಾಗುತ್ತಿರುವ ಅಧ್ಯಾಪಕರ ಸಭೆಗಳು | |
| ✓ ತಿಂಗಳಿಗೊಮ್ಮೆ ನಡೆಸಲಾಗುತ್ತಿರುವ SDMC ಸಭೆಗಳು ಮತ್ತು ನಡವಳಿಯ ಅನುಷ್ಠಾನ | |
| * ನೀಡಿದ ಪಾಠದ/ಕಲಿಕಾಂಶದ ಪ್ರಾತ್ಯಕ್ಷಿಕೆಯ ವಿವರ | |
| * ತಯಾರಿಸಿ ತೋರಿಸಿದ ಅಥವ ತಾವೇ ತಯಾರಿಸಿಕೊಂಡು ತಂದ ಟಿ.ಎಲ್.ಎಂ ಗಳ ಪ್ರಾತ್ಯಕ್ಷಿಕೆಯ ವಿವರ | |
| * ಅಧ್ಯಾಪಕರು ನಡೆಸಿದ ಕ್ರಿಯಾಸಂಶೋಧನೆಗಳು/ಕಲಿಕೆ–ಬೋಧನೆಯಲ್ಲಿ ಬಳಸುತ್ತಿರುವ ಹೊಸ ವಿಧಾನ/ಕ್ರಮಗಳು ಅವುಗಳ ಪ್ರಸ್ತುತತೆ | |
| * 02/03 ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿಯನ್ನು ಪರೀಕ್ಷಿಸಿದಾಗ ಕಂಡುಬಂದ ಸ್ಥಿತಿಯ ವಿವರ ಮತ್ತು ಹಿಮ್ಮಾಹಿತಿ ಕುರಿತು | |
| * ತರಗತಿ ಪ್ರಕ್ರಿಯೆ ನಮೂನೆ | ಅನುಬಂಧಿಸಿದೆ |
| * ನಿರ್ಮಿಸಲಾಗುತ್ತಿರುವ ಸಿವಿಲ್ ಕಾಮಗಾರಿಗಳ ವಿವರ ಮತ್ತು ಅವುಗಳ ಗುಣಮಟ್ಟ ಕುರಿತು | |
| * ಶಾಲಾಮಕ್ಕಳಿಗೆ ನೀಡಿದ ವಿವಿಧ ಪ್ರೋತ್ಸಾಹಕಗಳ ವಿತರಣೆ/ಸಮರ್ಪಕತೆ | |
| * ಅಕ್ಷರ ದಾಸೋಹ ದಾಸ್ತಾನು ವಿವರ | |
| * ನಗದು ಪುಸ್ತಕದ/ಪಾಸ್ ಪುಸ್ತಕಗಳ ವಿವರ (ಹಿರಿಯ ಅಧಿಕಾರಿಗಳು/ಉಸ್ತುವಾರಿದಾರರು ನೋಡಲಿ) | |

**ಸಂದರ್ಶಕರ ಸಹಿ**

ಟಿಪ್ಪಣಿ : √ ತರಗತಿ ಪ್ರಕ್ರಿಯೆ ಹೊರತುಪಡಿಸಿ–ಉಳಿದ ಭಾಗಗಳನ್ನು ಸಂದರ್ಶನ ಪುಸ್ತಕದಲ್ಲಿ ನಮೂದಿಸತಕ್ಕದ್ದು.

√ ಸಂದರ್ಶನ ವೇಳೆಯಲ್ಲಿ ಕನಿಷ್ಠ ಒಂದು ಪಾಠಬೋಧನೆಯನ್ನು ವೀಕ್ಷಿಸಿ ಹಿಮ್ಮಾಹಿತಿ ನೀಡಬೇಕು. ಆದರೆ ಶಾಲಾ ಮೌಲ್ಯಮಾಪನ ಸಂಧರ್ಭದಲ್ಲಿ ಎಲ್ಲಾ ಅಧ್ಯಾಪಕರ ಪಾಠ ವೀಕ್ಷಣೆ ಮಾಡುವುದು.

√ ಮುಖ್ಯೋಪಾಧ್ಯಾಯರೂ ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳೂ–ತರಗತಿ ಪ್ರಕ್ರಿಯೆ ನಮೂನೆ ಬಳಸಬಹುದು.

## ತರಗತಿ ಪ್ರಕ್ರಿಯೆಗಳನ್ನು ವೀಕ್ಷಿಸಲು ನಮೂನೆ

(NCF-05 ಮತ್ತು RTE- 09 ರನ್ವಯ)

ಸೂಚನೆ : ತರಗತಿಯ ಪ್ರಕ್ರಿಯೆ ಲವಲವಿಕೆಯಿಂದ ಕೂಡಿರಬೇಕೆಂಬ ಆಶಯದ ಹಿನ್ನೆಲೆಯಲ್ಲಿ ಈ ನಮೂನೆ ತಯಾರಾಗಿದೆ. ನಾಲ್ಕು ಆಯಾಮಗಳಲ್ಲಿ ತರಗತಿ ಬೋಧನೆಯನ್ನು ವೀಕ್ಷಿಸಲಾಗುತ್ತದೆ. ಪ್ರತಿ ಆಯಾಮದಡಿ ವಿವಿಧ ಸೂಚನಾತ್ಮಕ ಪ್ರಶ್ನೆಗಳಿವೆ. ಇವುಗಳಿಗೆ ಪ್ರತಿಯಾಗಿ ವಸ್ತುಸ್ಥಿತಿಯನ್ನು 05 ಬಿಂದು ಶ್ರೇಣಿಯಲ್ಲಿ ಮಾಪಿಸುವುದು. 1–ಎಂದರೆ ಕನಿಷ್ಠ; 2–ಸುಧಾರಿಸಬೇಕು; 3–ಪರವಾಗಿಲ್ಲ; 4– ಸಮಾಧಾನಕರ; 5–ಉತ್ತಮ. ಕೊರತೆಯಿರುವ ಅಂಶಗಳಿಗೆ ಯುಕ್ತವಾದ ಸಲಹೆಗಳನ್ನು ದಾಖಲಿಸಿ.

ತರಗತಿ :
ವಿಷಯ :
ಕಲಿಕಾಂಶ :
ದಾಖಲಾತಿ :
ತರಗತಿ ಹಾಜರಾತಿ :

ಅಧ್ಯಾಪಕರ ಹೆಸರು :

| • **ಕಲಿಕೆಗೆ ಪೂರಕ ವಾತಾವರಣ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ತರಗತಿ ಕೋಣೆ ಸ್ವಚ್ಛವಾಗಿದೆ/ ಆಕರ್ಷಕವಾಗಿದೆ | | | | | | |
| 2. ಕಪ್ಪುಹಲಗೆಯು ಚೆನ್ನಾಗಿದೆ | | | | | | |
| 3. ಕಪ್ಪು ಹಲಗೆಯ ಇಕ್ಕೆಲಗಳಲ್ಲಿ ಭೂಪಟ/ನಕಾಶೆ ತೋರಿಸಲು ಮೊಳೆ ಜೋಡಿಸಿದ್ದಾರೆ/ಸಮರ್ಪಕವಾಗಿದೆ (ಗೋಡೆ ಛಿದ್ರವಾಗಿಲ್ಲ.) | | | | | | |
| 4. ಮಕ್ಕಳ ಕೂಡುವ ವ್ಯವಸ್ಥೆ ಸಮರ್ಪಕವಾಗಿದೆ | | | | | | |
| 5. ಕಲಿಕಾ ಬೋಧನಾ ಸಾಮಗ್ರಿಯನ್ನು ವ್ಯವಸ್ಥಿತವಾಗಿ ಜೋಡಿಸಿ ಇಡಲಾಗಿದೆ | | | | | | |
| 6. ಗಾಳಿ ಬೆಳಕಿನ ವ್ಯವಸ್ಥೆ ಚೆನ್ನಾಗಿದೆ | | | | | | |

ಒಟ್ಟು ಅಂಕ

| • **ತರಗತಿಯ ಸಿದ್ಧತೆ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಅಧ್ಯಾಪಕರು ಮಾಡಿರುವ ಪಾಠಯೋಜನೆಯು ಎಲ್ಲಾ ಹಂತಗಳನ್ನೂ ಒಳಗೊಂಡಿದ್ದು ಕಲಿಕೆ ಬೋಧನೆಯ ಉದ್ದೇಶಗಳಿಗೆ ಅನುಗುಣವಾಗಿ ತರಗತಿ ಪ್ರಕ್ರಿಯೆಗಳನ್ನು ರೂಪಿಸಿರುತ್ತಾರೆ. | | | | | | |
| 2. ಆಯ್ದ ಕಲಿಕೆ, ಬೋಧನೆ ಅಂಶಗಳಿಗೆ ಅನುಗುಣವಾಗಿ ಕಲಿಕೆ ಬೋಧನೆ ಉಪಕರಣಗಳನ್ನು ಜೋಡಿಸಿಕೊಂಡಿರುವುದು ಸಮರ್ಪಕವಾಗಿದೆ. | | | | | | |
| 3. ನಿಗದಿತ ವೇಳಾಪಟ್ಟಿಯಂತೆ ತರಗತಿ ಕೋಣೆಯಲ್ಲಿ ಶಿಕ್ಷಕರು ಪಾಠ ಮಾಡುತ್ತಿದ್ದಾರೆ. | | | | | | |

ಒಟ್ಟು ಅಂಕ

| • **ತರಗತಿಯ ಕಲಿಕೆ ಬೋಧನೆಯ ಪ್ರಕ್ರಿಯೆ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಪೂರ್ವಸಿದ್ಧತಾ/ಕಲಿಕಾ ಪೂರ್ವ ಚಟುವಟಿಕೆಯಲ್ಲಿ ಎಲ್ಲ ಮಕ್ಕಳೂ ಸಕ್ರಿಯವಾಗಿ ಭಾಗವಹಿಸಿದ್ದರು; ಮತ್ತು ಚಟುವಟಿಕೆಗಳು | | | | | | |

| | | | | | | |
|---|---|---|---|---|---|---|
| ಸಮರ್ಪಕವಿದ್ದವು. | | | | | | |
| 2. ಅಧ್ಯಾಪಕರ ಪ್ರಶ್ನಿಸುವಿಕೆಯಲ್ಲಿ ಸ್ಪಷ್ಟತೆ ಇತ್ತು. | | | | | | |
| 3. ಪ್ರಶ್ನೆಗಳು ಎಲ್ಲಾ ಮಕ್ಕಳಿಗೆ ಸಮಾನವಾಗಿ ಹಂಚಿಕೆಯಾಗಿದ್ದವು | | | | | | |
| 4. ಮಕ್ಕಳು ಉತ್ತರಿಸದಿದ್ದಾಗ ನೀಡುತ್ತಿದ್ದ ಸೂಚನಾತ್ಮಕ ಪ್ರಶ್ನೆಗಳು (Clue)ಸಮಂಜಸವಾಗಿದ್ದವು | | | | | | |
| 5. ಮಕ್ಕಳಿಂದ ಉತ್ತರ ಪಡೆದ ತರುವಾಯ ಅದನ್ನು ಸಾಮಾನ್ಯೀಕರಿಸುವ ಕ್ರಮ ಸಮರ್ಪಕವಾಗಿತ್ತು | | | | | | |
| 6. ಅಧ್ಯಾಪಕರು ನೀಡುತ್ತಿದ್ದ ವಿವರಣೆಯ ಧ್ವನಿ ಎಲ್ಲಾ ಮಕ್ಕಳಿಗೂ ಕೇಳಿಸುತ್ತಿತ್ತು | | | | | | |
| 7. ವಿವರಣೆಯಲ್ಲಿ ಖಚಿತತೆ ನಿರರ್ಗಳತೆ ಕಂಡುಬರುತ್ತಿತ್ತು | | | | | | |
| 8. ವಿವರಣೆಯು ತರ್ಕಬದ್ಧವಾಗಿ ಜೋಡಿಸಲ್ಪಟ್ಟಿತ್ತು | | | | | | |
| 9. ಎಲ್ಲಾ ವಿಷಯವನ್ನು ತಾವೇ ಹೇಳದೆ ಮಕ್ಕಳೂ ಭಾಗವಹಿಸಿ ಉತ್ತರಿಸುವಂತೆ ಇತ್ತು. | | | | | | |
| 10. ವಿವರಣೆಯನ್ನು ಎಲ್ಲ ಮಕ್ಕಳು ಕುತೂಹಲದಿಂದ ಆಲಿಸುತ್ತಿದ್ದರು | | | | | | |
| 11. ಮಕ್ಕಳ ಅವಧಾನವನ್ನು ಕೇಂದ್ರೀಕರಿಸುವ ತಂತ್ರ ಪರಿಣಾಮಕಾರಿಯಾಗಿತ್ತು. | | | | | | |
| 12. ಹೊರಾಂಗಣ ಚಟುವಟಿಕೆ, ಯೋಜನಾ ವಿಧಾನ; ಗುಂಪು ಚಟುವಟಿಕೆ; ಸಂದರ್ಶನ ಚಟುವಟಿಕೆ; ಮಾರ್ಗದರ್ಶಿತ ಪ್ರಾತ್ಯಕ್ಷಿಕೆ; ಚರ್ಚೆ; ಸಂಶೋಧನಾತ್ಮಕ ವಿಧಾನ ಅಥವಾ ಅನುಗಮನ ಬೋಧನ ಕ್ರಮಗಳ ಮೂಲಾಂಶಗಳ ಬಳಕೆ ಮುಂತಾದ 2/3 ಬೋಧನ ವಿಧಾನಗಳನ್ನು ತರಗತಿಯಲ್ಲಿ ಬಳಸಲಾಯಿತು. | | | | | | |
| 13. ಬಳಸಿದ ಬೊಧನಾ ವಿಧಾನ/ಬೋಧನಾ ಕ್ರಮಗಳ ಚಟುವಟಿಕೆಗಳು ಆಯಾ ಕಲಿಕಾಂಶಕ್ಕೆ ಪೂರಕವಾಗಿದ್ದವು. | | | | | | |
| 14. ಬಳಸಿದ ಬೋಧನಾ ವಿಧಾನ/ಬೋಧನಾ ಕ್ರಮಗಳ ಚಟುವಟಿಕೆಗಳು ಮಕ್ಕಳ ಮಟ್ಟಕ್ಕೆ ಇದ್ದವು | | | | | | |
| 15. ಅಧ್ಯಾಪಕರು ಬಳಸಿದ ಕೆಲವು ಕಲಿಕೋಪಕರಣ ಗಳು ಮಕ್ಕಳು ಕೂಡಾ ಬಳಸುವಂತೆ ಇದ್ದವು, ಅಥವ ಬಳಸಲು ಅವಕಾಶವಿತ್ತರು. | | | | | | |
| 16. ಬಳಸಿದ ಕಲಿಕೋಪಕರಣಗಳನ್ನು ಎಲ್ಲಾ ಮಕ್ಕಳಿಗೆ ಕಾಣುವಂತೆ ಪ್ರದರ್ಶಿಸಲಾಯಿತು. | | | | | | |
| 17. ತರಗತಿಯ ಸನ್ನಿವೇಶಗಳನ್ನು ಕಲಿಕೆಯ | | | | | | |

| | | | | | | |
|---|---|---|---|---|---|---|
| ಸಂದರ್ಭದಲ್ಲಿ ಬಳಸಿಕೊಳ್ಳಲಾಯಿತು | | | | | | |
| 18. ಸ್ಥಳೀಯ ಸನ್ನಿವೇಶಗಳಿಗೆ ಅಥವಾ ಪಠ್ಯದ ಇತರ ಕಲಿಕಾಂಶಗಳಿಗೆ ಪ್ರಸ್ತುತ ಕಲಿಕಾಂಶಗಳನ್ನು ಹೋಲಿಕೆ ಮಾಡಲಾಯಿತು. | | | | | | |
| 19. ಕಪ್ಪು ಹಲಗೆಯ ಕೆಲಸವು ಕ್ರಮಬದ್ಧವಾಗಿತ್ತು | | | | | | |
| 20. ಕಪ್ಪುಹಲಗೆಯ ಬರಹ ಸ್ಪಷ್ಟವಾಗಿಯೂ/ ಗುಂಡಾಗಿಯೂ ಇದ್ದಿತು. | | | | | | |
| 21. ಅಧ್ಯಾಪಕರು ಕೋಪಿಸಿಕೊಳ್ಳುವುದು/ ಬೇಸರ ಮಾಡುತ್ತಿರುವುದು ಕಂಡುಬರಲಿಲ್ಲ. | | | | | | |
| 22. ಉತ್ತಮ ವರ್ತನೆಗಳನ್ನು ಅಧ್ಯಾಪಕರು ಗಮನಿಸಿ ಯುಕ್ತವಾಗಿ ಮೆಚ್ಚುತ್ತಿದ್ದರು | | | | | | |
| 23. ಅಧ್ಯಾಪಕ/ಕಿಯರ ವೇಷಭೂಷಣ/ಹಾವ-ಭಾವ ಮುಂತಾದವು ಮಕ್ಕಳ ಅವಧಾನ ವಿಚಲನೆಗೆ ಕಾರಣವಾಗಲಿಲ್ಲ. | | | | | | |
| 24. ಕುಶಲಕರ್ಮಿಗಳು/ಸಮುದಾಯದ ಸಂಪನ್ಮೂಲ ವ್ಯಕ್ತಿಗಳನ್ನು ಕಲಿಕೆ-ಬೋಧನೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. | | | | | | |
| 25. ಮೌಲ್ಯಮಾಪನವನ್ನು ಮಾಡಲು ಬಳಸಿದ ಕ್ರಮದ ಸಮರ್ಪಕವಾಗಿತ್ತು. | | | | | | |
| ಅನುಸರಿಸಿದ ಬೋಧನಾ ವಿಧಾನ; | | | | | | |
| ಅದು ಶಿಶುಕೇಂದ್ರಿತವೇ ? | | | | | | |

ಒಟ್ಟು ಅಂಕ

| • **ಮಕ್ಕಳ ಭಾಗವಹಿಸುವಿಕೆ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಎಲ್ಲಾ ಮಕ್ಕಳು ಶಿಕ್ಷಕರು ನೀಡುವ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು | | | | | | |
| 2. ಕಲಿಕಾಂಶಗಳನ್ನು ಕಲಿಯುವಾಗ ಮಕ್ಕಳು ಪರಸ್ಪರ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರು ಹಾಗೂ ಅಂಜಿಕೆಯಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. | | | | | | |
| 3. ಮಕ್ಕಳು ಪ್ರಶ್ನೆಗಳನ್ನು ಅಧ್ಯಾಪಕರಿಗೆ ಕೇಳುತ್ತಾರೆ ಇದಕ್ಕೆ ಪೂರಕವಾಗಿ ಅಧ್ಯಾಪಕರು ಹುಡುಕಾಟದ ಪ್ರಶ್ನೆ/ಸನ್ನಿವೇಶವನ್ನು ಸೃಷ್ಠಿಸುತ್ತಾರೆ. | | | | | | |
| 4. ಮಕ್ಕಳು ಕಲಿಕೋಪಕರಣಗಳನ್ನು ಕಲಿಕಾಂಶಗಳನ್ನು ಅರ್ಥಮಾಡಿಕೊಳ್ಳಲು ಬಳಸುತ್ತಾರೆ. | | | | | | |
| 5. ಮಕ್ಕಳಿಗೆ ಕಲಿಕಾ ವಿಷಯದ ಕುರಿತು ಇರುವ ಅನುಭವವನ್ನು/ಪೂರ್ವಜ್ಞಾನವನ್ನು ಕಲಿಕೆ ಬೋಧನೆಯ ವೇಳೆಯಲ್ಲಿ ವ್ಯಕ್ತಪಡಿಸಿದರು. | | | | | | |
| 6. ಮಕ್ಕಳು ಅಧ್ಯಾಪಕರು ನೀಡಿದ ಕಲಿಕೆಯ ಅನುಭವ ಮತ್ತು ತಮ್ಮ ನಡುವಿನ ಚರ್ಚೆ ಮುಂತಾದ ಚಟುವಟಿಕೆಗಳಿಂದ | | | | | | |

| | | | | | | |
|---|---|---|---|---|---|---|
| ಪರಿಕಲ್ಪನೆಗಳನ್ನು ತಾವೇ ಕಟ್ಟಿಕೊಳ್ಳುತ್ತಾರೆ. | | | | | | |
| 7. ಯಾವುದೇ ವಿದ್ಯಾರ್ಥಿಯು ಅಧ್ಯಾಪಕರಿಂದಾಗಲೀ ಅಥವಾ ಸಹಪಾಠಿಗಳಿಂದಾಗಲೀ ಕಡೆಗಣಿಸಲ್ಪಡಲಿಲ್ಲ. | | | | | | |
| 8. ಎಲ್ಲಾ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಗೌರವಿಸುವ ವಾತಾವರಣ ತರಗತಿಯಲ್ಲಿ ಇದೆ. | | | | | | |
| 9. ಮಕ್ಕಳ ಉತ್ತಮ ವರ್ತನೆಗಳನ್ನು (ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಹಾಗೂ ಇತರ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ) ಅಧ್ಯಾಪಕರು ಗುರುತಿಸಿದಾಗ–ಮಕ್ಕಳು ಸಂತೋಷಪಡುತ್ತಾರೆ. | | | | | | |
| 10. ಮಕ್ಕಳ ಮುಖದಲ್ಲಿ ಮಂದಹಾಸವಿತ್ತು. | | | | | | |
| 11. ಹಿಂಜರಿಕೆ, ನಿಧಾನಕಲಿಕೆ, ಮಕ್ಕಳ ಕುರಿತು ವಹಿಸಿದ ಕಾಳಜಿಯಿಂದಾಗಿ ಅಂತಹ ಮಕ್ಕಳೂ ಕಲಿಕೆಯಲ್ಲಿ ಪಾಲ್ಗೊಂಡರು. | | | | | | |
| 12. ಮಕ್ಕಳ ನಡುವೆ ತಾರತಮ್ಯ ಮಾಡುವ ಅಂಶಗಳು ಬೋಧನಾ ಅವಧಿಯಲ್ಲಿ ಕಂಡು ಬರಲಿಲ್ಲ. | | | | | | |
| 13. ಕಲಿಕಾ ಬೋಧನಾ ಚಟುವಟಿಕೆಗಳು ಪಠ್ಯ ಪುಸ್ತಕಗಳನ್ನು ಮೀರಿಯೂ ಇರುವ ಸಂದರ್ಭಗಳು ಇವೆ. | | | | | | |
| 14. ಮಕ್ಕಳು ಕಲಿತ ಮಟ್ಟ | | | | | | |
| 15. ಗೃಹಪಾಠ ಚಟುವಟಿಕೆಯಿಂದ ಕೂಡಿತ್ತು / ಸಮುದಾಯದ ಸಂಪನ್ಮೂಲ ಬಳಸಿಕೊಂಡು ಗೃಹಪಾಠವನ್ನು ಪೂರ್ಣಗೊಳಿಸಲು ಅವಕಾಶಗಳಿದ್ದವು. | | | | | | |

ಒಟ್ಟು ಅಂಕ [ ]

സാമാന്യ ಅಭಿಪ್ರಾಯ (ನಿರ್ದಿಷ್ಟ ಸಲಹೆಗಳು)

ಎಲ್ಲಾ ಅಂಶಗಳ ಒಟ್ಟು

| 50 | 51-60 | 61-70 | 71-80 | > 80 | ಪ್ರತಿಶತ |
|---|---|---|---|---|---|
| 123 | 124-147 | 148-172 | 173-196 | > 196 | ಅಂಕಗಳ ವ್ಯಾಪ್ತಿ |
| ಕನಿಷ್ಠ | ಸುಧಾರಿಸುವುದು | ಪರವಾಗಿಲ್ಲ | ಸಮಾಧಾನಕರ | ಉತ್ತಮ | ಶ್ರೇಣಿ |

ಸಂದರ್ಶಕರ ಹೆಸರು, ಹುದ್ದೆ,
ವಿಳಾಸ

## ಟಿಪ್ಪಣಿ

- ಪ್ರತಿ ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಇವು ತರಗತಿ ಪ್ರಕ್ರಿಯೆ ಲವಲವಿಕೆಯಿಂದ ಕೂಡಿರಬೇಕೆಂದು ಬಯಸುತ್ತವೆ. ತರಗತಿಯಲ್ಲಿ ಕಂಡುಬರುವ ವಸ್ತುಸ್ಥಿತಿಯನ್ನು ಸಮಸ್ಥಿತಿಯಿಂದ ಗಮನಿಸಿ – ಅಂಕಗಳನ್ನು ನೀಡಿ.
- ಪ್ರತಿ ಪ್ರಶ್ನೆಗಳಿಗೂ ವಸ್ತುಸ್ಥಿತಿಯು–ಹೀಗೆ ಇರಬೇಕು ಎಂಬ ಸಾಮಾನ್ಯ ಭಾವನೆ ಇದೆ. ಅದನ್ನು ಆಧರಿಸಿ ಅಂಕ ನೀಡಿ. ಉದಾಹರಣೆಗೆ–ಅಧ್ಯಾಪಕರು ಕೋಪಿಸಿಕೊಳ್ಳುತ್ತಿರಲಿಲ್ಲ–ಎನ್ನುವುದು ವಸ್ತುಸ್ಥಿತಿಯಾಗಿದ್ದರೆ ಅದು ನಿರೀಕ್ಷಿತ ವರ್ತನೆಯಾಗಿದ್ದರೆ–ಪೂರ್ಣ ಅಂಕ ನೀಡಬಹುದು. ಸ್ವಲ್ಪಮಟ್ಟಿಗೆ ಕೋಪಿಸಿಕೊಳ್ಳುವುದು ಇದೆ–ಎಂದಾದರೆ ಪ್ರಮಾಣ ನಿರ್ಧರಿಸಿ ಅಂಕ ನೀಡಿ. ಕೋಪಿಸಿಕೊಳ್ಳುವುದು ತುಂಬಾ ಜಾಸ್ತಿ ಅನಿಸಿದರೆ ಆಗ ನೀವು ಕೊಡಬಹುದಾದ ಅಂಕ–01.
- ಪ್ರತಿ ಆಯಾಮದ ಅಂಕಗಳನ್ನು ಕೂಡಿ ನೀಡಿರುವ ಅಂಕಣದಲ್ಲಿ ದಾಖಲಿಸಿ. ಒಟ್ಟಾರೆ ಅಂಕಗಳನ್ನು ಸಂಚಯನ ಮಾಡಿ, ಶ್ರೇಣಿಕೊಡಿ.

➢

| | ಗೃಹಪಾಠ | | | | | | ಪಾಠ ಬೋಧನೆ ಯೋಜನೆಯಂತೆ ಇದೆ/ಇಲ್ಲ | | |
|---|---|---|---|---|---|---|---|---|---|
| ವಿಷಯ/ತರಗತಿ | 08 | | 09 | | 10 | | 08 | 09 | 10 |
| | ನೀಡಿದ್ದು | ತಿದ್ದಿದ್ದು | ನೀಡಿದ್ದು | ತಿದ್ದಿದ್ದು | ನೀಡಿದ್ದು | ತಿದ್ದಿದ್ದು | | | |
| | | | | | | | | | |
| | | | | | | | | | |
| | | | | | | | | | |
| ನೀಡಿದ ಸಲಹೆಗಳು | | | | | | | | | |

➢ ತರಗತಿಯಲ್ಲಿ ಪರಿಶೀಲಿಸಿದಂತೆ ಮಕ್ಕಳ ಕಲಿಕೆಯ ಮಟ್ಟ :

➢ ಅಧ್ಯಾಪಕರು ಮಾಡಿರುವ ಮೌಲ್ಯಮಾಪನ ಮತ್ತು ನೀಡಿರುವ ಹಿಮ್ಮಾಹಿತಿ :

➢ ವಿಷಯ ಶಿಕ್ಷಕರಾಗಿ ನಡೆಸಿರುವ ಸಹಪಠ್ಯ ಚಟುವಟಿಕೆ :

ಅಧ್ಯಾಪಕರೊಂದಿಗೆ

ದಿನಾಂಕ-18.03-2011
ಬೆಂಗಳೂರು





ನಮ್ಮ ತರಗತಿಗಳಲ್ಲಿ ನಡೆಯುವ ಕಲಿಕೆ-ಬೋಧನಾ ಕ್ರಿಯೆ ಶಿಶುಕೇಂದ್ರಿತವಾಗಬೇಕು. ಇದು ಶಿಕ್ಷಣ ಶಾಸ್ತ್ರ; ಎನ್.ಸಿ.ಎಫ್ 2005; ಅನೇಕ ಶಿಕ್ಷಣತಜ್ಞರ ಅಭಿಪ್ರಾಯ - ಆಶಯ. ಶಿಶುಕೇಂದ್ರಿತ ತರಗತಿಗಳು ಹೇಗೆ ಕಾಣುತ್ತವೆ? ಇದು ಸಾಮಾನ್ಯವಾಗಿ ನಮ್ಮನ್ನು ಕಾಡುವ ಪ್ರಶ್ನೆ. ಉತ್ತರ ಹಲವು ರೀತಿಯದಿರಬಹುದು; ಆದರೂ ಕೆಲವು ಸಾಮಾನ್ಯ ಲಕ್ಷಣಗಳನ್ನು ಪಟ್ಟಿಮಾಡಬಹುದು.

- ✓ ವಿದ್ಯಾರ್ಥಿಗಳ ಮುಖದಲ್ಲಿ ಮಂದಹಾಸವಿರುತ್ತದೆ-
- ✓ ಯಾವ ಪ್ರತಿಕ್ರಿಯೆಯನ್ನು ತಕ್ಷಣ ನೀಡುತ್ತಾರೆ - ಚರ್ಚೆಯಿಂದ ಇರುತ್ತದೆ.
- ✓ ಮಕ್ಕಳಲ್ಲಿ ಅಂಜಿಕೆ ಕಾಣುವುದಿಲ್ಲ - ಅಧ್ಯಾಪಕರನ್ನು ಪ್ರಶ್ನಿಸುತ್ತಾರೆ; ಧೈರ್ಯದಿಂದ ಚರ್ಚಿಸುತ್ತಾರೆ.
- ✓ ಅಧ್ಯಾಪಕರನ್ನು ಗೌರವದಿಂದ ಕಾಣುತ್ತಾರೆ - ಆದರೆ ಭಯದಿಂದಲ್ಲ.
- ✓ ಎಲ್ಲ ವಿದ್ಯಾರ್ಥಿಗಳನ್ನು ಅಧ್ಯಾಪಕರು ಗೌರವದಿಂದ ನಡೆಸಿಕೊಳ್ಳುತ್ತಾರೆ.
- ✓ ಎಲ್ಲ ವಿದ್ಯಾರ್ಥಿಗಳು ಕಲಿಕೆಯಲ್ಲಿ ಪಾಲ್ಗೊಂಡಿರುತ್ತಾರೆ.



ಬನ್ನಿ--- ನಮ್ಮ ತರಗತಿಗಳು ಹೀಗಿರುವಂತೆ ಮಾಡೋಣ.

18.03.11
(ಕೆ.ಜಿ. [illegible])
ನಿರ್ದೇಶಕರು (ಪ್ರೌಢ ಶಿಕ್ಷಣ)









ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು